ಸಂಪುಟ : ೧೭
ಸಂಚಿಕೆ : ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ

ಅಗಸ್ಟ ೧೯೮೪

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪು ಮಾಡಿರಬೇಕು. ಹಸ್ತ ಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು "ಕರ್ನಾಟಕ ಭಾರತಿ", ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ ನಿರ್ದೇಶಕರು ಪ್ರಸಾರಾಂಗ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ
೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ
೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦
(ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೪-೦೦ ಮಾತ್ರ. ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೇ ಪೋಸ್ಟಲ್ ಆರ್ಡರ ಮೂಲಕ ಫಾಯಿನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೫೮೦೦೦೩ ಇವರಿಗೆ ಕಳುಹಿಸಬೇಕು.)

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೧೭ ಸಂಚಿಕೆ : ೧

ಪ್ರಧಾನ ಸಂಪಾದಕರು :

ಡಾ. ಎಂ. ಎಂ. ಕಲಬುರ್ಗಿ

ಸಂಪಾದಕರು :

ಡಾ. ಎಂ. ಬಿ. ಕೊಟ್ರಶೆಟ್ಟಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೭ ಸಂಚಿಕೆ : ೧

ಸ್ವಾತಂತ್ರ್ಯೋತ್ಸವ ಸಂಚಿಕೆ

ಅಗಸ್ಟ, ೧೯೮೪

ಪ್ರಕಾಶಕರು :

ಎಸ್. ಬಿ. ನಾಯಕ
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಸಂಯುಕ್ತ ಕರ್ನಾಟಕ ಪ್ರೆಸ್
ಕೊಪ್ಪೀಕರ ರೋಡ, ಹುಬ್ಬಳ್ಳಿ-೨೦

ಪರಿವಿಡಿ

ಪುಟ

೧. ನಯಸೇನ ಕವಿಯ ಇತಿವೃತ್ತ ೧–೮

—ಡಾ. ಎಂ. ಬಿ. ಕೊಟ್ರಶೆಟ್ಟಿ

೨. ಅನುಭವ ಮಂಟಪದ ಪ್ರೇರಣೆಗಳು ೯–೨೩

—ಡಾ. ಬಿ. ವ್ಹಿ. ಮಲ್ಲಾಪುರ

೩. ತಂತ್ರದ ಮೂಲಕ ಅನುಭವ ಶೋಧನೆ ೨೪–೩೧

—ಬಸವರಾಜ ಸಾಯ್ಕರ

೪. ಭಾರತದಲ್ಲಿ ಶಿವಾಲಯಗಳು ೩೨–೪೩

—ಡಾ. ವ್ಹಿ. ವ್ಹಿ. ಹೆಬ್ಬಳ್ಳಿ

೫. ಇಂಡೋ–ಯುರೋಪಿಯನ್ ಭಾಷಾವಿಜ್ಞಾನದಲ್ಲಿ ಸಂಸ್ಕೃತದ ಸ್ಥಾನ ೪೪–೬೦

—ಎಚ್. ಎಸ್. ಅನಂತನಾರಾಯಣ

೬. ಬಸವಣ್ಣನವರ ವಿಕಸನ ಸಿದ್ಧಾಂತ ೬೧–೭೫

—ಡಾ. ವಸಂತ ಪಾಟೀಲ

೭. ಇಟಲಿ ದೇಶದ ಬಂಡೆ ಚಿತ್ರ ಸಂಶೋಧನೆ ಮತ್ತು ಸಂರಕ್ಷಣೆ ತರಬೇತಿಯ ಅನುಭವಗಳು ೭೬–೯೩

—ರು. ಮ. ಷಡಕ್ಷರಯ್ಯ

೮. ಯಶೋಧರ ಚರಿತೆ: ಧಾರ್ಮಿಕ ವಿಶ್ಲೇಷಣೆ ೯೪–೧೦೭

—ಡಾ. ಶಾಂತಿನಾಥ ದಿಬ್ಬದ

೯. ಶಿಕ್ಷಣ ಮಹಾವಿದ್ಯಾಲಯಗಳಲ್ಲಿಯ ಹಣದ ವೆಚ್ಚ: ಒಂದು ತುಲನಾತ್ಮಕ ಅಧ್ಯಯನ ೧೦೮–೧೧೯

—ಡಾ. ಹೆಚ್. ಎಮ್. ಕಾಶೀನಾಥ

ಪುಟ

೧೦. ಒಂದು ಸಿಸುಪ್ರಾಸದ ಸಮೀಕ್ಷೆ ಅತ್ತೆತ್ತಿಬಿದ್ದೆ ೧೨೦–೧೨೨

—ಕಂಚ್ಯಾಣಿ ಶರಣಪ್ಪ

೧೧. ಮಹಾದೇವಿ ಅಕ್ಕನಿಗೆ ಮದುವೆಯಾಗಿತ್ತೆ? : ಒಂದು ವಿವಾದ ೧೨೩–೧೨೯

—ಸಿ. ಎಂ. ವೀರಭದ್ರಯ್ಯ

೧೨. ಸಾಹಿತ್ಯದಲ್ಲಿ ನಿರೂಪಿತ ಕನ್ನಡಿಗರ ಶೋಷಣೆಯ ಸ್ವರೂಪ ೧೩೦–೧೩೮

—ಡಾ. ಸರೋಜಿನಿ ಪಾ. ಚವಲಾರ

೧೩. ಅಗ್ರಹಾರ ತುಂಬಿಗೆ ಹಾಗೂ ಅಲ್ಲಿನ ಮೂರು ಸ್ತಂಭಶಾಸನಗಳು ೧೩೯–೧೪೭

— ಎಸ್. ಕೆ. ಕೊಪ್ಪಾ

—ಎಚ್. ಎಸ್. ಬಿರಾದಾರ

೧೪. ಪಠಾಳ: ಒಂದು ವಿವೇಚನೆ ೧೪೮–೧೫೭

—ಸದಾನಂದ ಪಾಟೀಲ

೧೫. ಕಪ್ಪು ಅಧ್ಯಾಯದ ಕೆಂಪು ಅಕ್ಷರಗಳಿಗೆ ೧೫೮–೧೫೯

—ಬಸವಲಿಂಗ ಸೊಪ್ಪಿಮಠ

೧೬. ಕೋಗಿಲೆ ೧೬೦

—ಎಚ್. ಎಂ. ಪಟೇಲ, ರಂಗೇನಹಳ್ಳಿ

೧೭. ಸಖೀ ಗೀತ ೧೬೧

—ಜಯಪ್ರಕಾಶ ಮಾವಿನಕುಳಿ

೧೮. ಬಾದಂಬ್ಬೆ ೧೬೨–೧೬೭

—ಡಾ. ಎಂ. ಎಂ. ಕಲಬುರ್ಗಿ

ನಯಸೇನ ಕವಿಯ ಇತಿವೃತ್ತ

ಡಾ. ಎಂ. ಬಿ. ಕೊಟ್ರಶೆಟ್ಟಿ

೧೨ನೆಯ ಶತಮಾನದ ಪ್ರಾರಂಭದ ದಶಕದಲ್ಲಿ ಬಾಳಿ ಬೆಳಗಿದ ನಯಸೇನ ಕವಿಯು ಅಂದಿನ ಧಾರ್ಮಿಕ ಸಾಮಾಜಿಕ ಹಾಗೂ ರಾಜಕೀಯ ಕ್ರಿಯೆ ಪ್ರತಿಕ್ರಿಯೆ ಗಳಿಗೆ ಪ್ರತಿಸ್ಪಂದಿಸಿ ಅಭಿವ್ಯಕ್ತಿ ನೀಡಿರುವುದರಿಂದ ಆತನ ಕೃತಿ ಧರ್ಮಾಮೃತದಲ್ಲಿ ಕರ್ನಾಟಕದ ಸಾಂಸ್ಕೃತಿಕ ಜೀವನದ ಸ್ಪಷ್ಟಚಿತ್ರವನ್ನು ಕಾಣುತ್ತೇವೆ. ಒಂದು ಕೃತಿಯ ಜನನಕ್ಕೆ ಅದರ ಸುತ್ತಲಿನ ಸಾಂಸ್ಕೃತಿಕ ಒತ್ತಡವು ಪ್ರೇರಕವಾಗಿರು ವಂತೆಯೇ ಕರ್ತೃವಿನ ಆಲೋಚನೆ, ಸಂವೇದನೆ, ವೈಯಕ್ತಿಕ ದರ್ಶನಗಳೂ ಕಾರಣ ವಾಗುತ್ತವೆ. ಈ ದೃಷ್ಟಿಯಿಂದ ಕವಿಯ ಇತಿವೃತ್ತ ಎಂದರೆ ಜೀವನ ಚರಿತ್ರೆಯನ್ನು ಪರಿಶೀಲಿಸುವದು ಅನಿವಾರ್ಯವಾಗುತ್ತದೆ. ಐತಿಹಾಸಿಕ ಪ್ರಜ್ಞೆಯ ಕೊರತೆ ಯನ್ನು ಸಾಮಾನ್ಯವಾಗಿ ಎಲ್ಲ ಪ್ರಾಚೀನ ಭಾರತೀಯ ಲೇಖಕರಲ್ಲಿಯೂ ಕಾಣು ತ್ತೇವೆ. ಸಮಷ್ಟಿ ಜೀವನದ ಮೌಲ್ಯಕ್ಕೆ ತಮ್ಮನ್ನು ಸಮರ್ಪಿಸಿಕೊಂಡ ಅವರು ತಮ್ಮ ಕೃತಿಗಳಲ್ಲಿ ಸ್ವವಿಷಯಗಳನ್ನು ಹೇಳಿಕೊಳ್ಳುವುದರ ಬಗೆಗೆ ಹೆಚ್ಚಿನ ಆಸಕ್ತಿ ತೋರಿಸುವದಿಲ್ಲ. ಚಾಮರಸನಂತಹ ಕವಿಯು ತನ್ನ ಕಾವ್ಯದಲ್ಲಿ ಎಲ್ಲಿಯೂ ತನ್ನ ಹೆಸರನ್ನು ಸಹ ಉಲ್ಲೇಖಿಸಿಲ್ಲ ಎಂಬುದನ್ನು ಮನದಂದರೆ ಮೇಲಿನ ಮಾತಿನ ಸತ್ಯತೆ ಸ್ಪಷ್ಟವಾಗುತ್ತದೆ. ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಅನೇಕ ಕವಿಗಳ ಚರಿತ್ರೆ ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ಆದರೆ ಕೆಲವರು ಕೃತಿಯ ಹೆಸರು, ರಚನಾಕಾಲ ಮತ್ತು ಸ್ಥಳ, ಗುರುಪರಂಪರೆ ಇತ್ಯಾದಿ ಚರಿತ್ರೆಗೆ ಸಂಬಂಧಿಸಿದ ಅಂಶಗಳನ್ನು ತಮ್ಮ ಕೃತಿಗಳಲ್ಲಿ ಆನುಷಂಗಿಕವಾಗಿ ಹೇಳಿಕೊಂಡಿದ್ದಾರೆ. ಇಂತಹ ಕವಿಗಳ ವಿರಳ ಪಂಕ್ತಿಗಳಲ್ಲಿ ನಯಸೇನನೂ ಒಬ್ಬನಾಗಿರುವದು ಸುದೈವದ ಸಂಗತಿಯಾಗಿದೆ. ಅವನು ತನ್ನ 'ಧರ್ಮಾಮೃತ'ದಲ್ಲಿ ಗುರುಪರಂಪರೆ, ಕೃತಿ ರಚನಾಕಾಲ ಮತ್ತು ಕೃತಿಯ ಸ್ಥಲಗಳನ್ನು ತಿಳಿಸಿದ್ದಾನೆ. ನಯಸೇನನ ನಂತರ ಕೃತಿರಚನೆಗೈದ ಕೆಲ ವರು ಅವನ ಹೆಸರನ್ನು ಉಲ್ಲೇಖಿಸಿದ್ದಾರೆ. ಅಲ್ಲದೆ ನಯಸೇನನನ್ನು ಉಲ್ಲೇಖಿ ಸುವ ಶಾಸನಗಳು ಹಾಗೂ ಐತಿಹ್ಯಗಳಲ್ಲಿ ಕೆಲವು ಚಾರಿತ್ರಿಕ ಅಂಶಗಳು ತಿಳಿದುಬರು ತ್ತವೆ. ಈ ಎಲ್ಲ ಸಂಗತಿಗಳನ್ನು ಆಧರಿಸಿ ಅವನ ಜೀವನಚರಿತ್ರೆಯನ್ನು ಅರಿಯುವ ಪ್ರಯತ್ನವಿಲ್ಲಿದೆ.

"ನಯಸೇನ" ಹೆಸರಿನ ಉಲ್ಲೇಖ :

ಕನ್ನಡ ಸಾಹಿತ್ಯದಲ್ಲಿ ಐದು ಜನ ನಯಸೇನರ ಉಲ್ಲೇಖವಿದ್ದರೂ ಅದರಲ್ಲಿ ಕೇವಲ ಮೂವರೇ ಐತಿಹಾಸಿಕ ವ್ಯಕ್ತಿಗಳಾಗಿರುವ ಸಂಭವವಿದೆ. ಚಾವುಂಡರಾಯ ಪುರಾಣದಲ್ಲಿ ಉಲ್ಲೇಖಿತನಾದ ನಯಸೇನ, ಅಗ್ಗಳನ ಚಂದ್ರಪ್ರಭ ಪುರಾಣದ ನಯಸೇನ ಮುಮುಕ್ಷು, ಕರ್ನಾಟಕ ಭಾಷಾಭೂಷಣದ 'ದೀರ್ಘೋಕ್ತಿರ್ನಯ-ಸೇನಸ್ಯ' ಎಂಬ ಮಾತಿನಲ್ಲಿ ಸೂಚಿತನಾದ ವ್ಯಾಕರಣದ ನಯಸೇನ, ಪುಣ್ಯಾಸ್ರವ ಕಥಾಸಾರದ ಕರ್ತೃ ನಯಸೇನ ಹಾಗೂ ಧರ್ಮಾಮೃತದ ಕರ್ತೃ ನಯಸೇನ ಇವರೇ ಐದು ಜನ ನಯಸೇನರು. ಚಾವುಂಡರಾಯ ಪುರಾಣದಲ್ಲಿ ಉಲ್ಲೇಖಿತ ನಾದವರು ನಯಸೇನನಾಗಿರದೆ ಆರ್ಯನಂದಿ ಇಲ್ಲವೆ ಆರ್ಯಸೇನನಾಗಿರಬೇಕು ಎಂದು ಡಾ. ಮಲ್ಲಾಪುರ ಅಭಿಪ್ರಾಯಪಟ್ಟಿದ್ದಾರೆ.[೧] 'ಶ್ರೀ ಮಹಿತರ್ ನಯಸೇನ' ಎಂಬುದಕ್ಕೆ 'ಶ್ರೀಮಹಿತಾರ್ಯಸೇನ' ಎಂಬ ಭಿನ್ನಪಾಠವಿರುವುದರಿಂದಲೂ ನೇಮಿ ಚಂದ್ರ ಸಿದ್ಧಾಂತಿಯ ಗೊಮ್ಮಟಸಾರದಲ್ಲಿ ಅಜಿತಸೇನನ ಗುರು ಆರ್ಯಸೇನನೆಂದು ಸ್ಪಷ್ಟ ನಿದರ್ಶನವಿರುವುದನ್ನು ಆಧಾರವಾಗಿ ಸ್ವೀಕರಿಸಿದ್ದಾರೆ.

"ಮನ್ಮಥಂ ಮತಿಗಿಡುವಂ ಗೆಲಲ್ ಪಡೆಯದಾನಯಸೇನ ಮುಮುಕ್ಷು, ಮುಖ್ಯನಂ"[೨] ಎಂಬ ಚಂದ್ರಪ್ರಭ ಪುರಾಣದ ಮಾತಿನಲ್ಲಿ ನಯಸೇನ ಮುಮುಕ್ಷು ವಿನ ಮತಕಾಜಿತ್ವದ ವರ್ಣನೆಯಿದೆ. ಆದರೆ ಚಂದ್ರಪ್ರಭ ಪುರಾಣದಲ್ಲಿ ಅಗ್ಗಳನು ಸ್ಮರಿಸಿದ ಯತಿಗಳಲ್ಲಿ ನಯಕೀರ್ತಿ ಎಂಬ ಹೆಸರಿದೆಯೆ ಹೊರತು ನಯಸೇನ ಮುಮುಕ್ಷು ಎಂದಿಲ್ಲ. ಅಗ್ಗಳನು ಮೂಲಸಂಘದ ದೇಶೀಗಣ ಪುಸ್ತಕಗಚ್ಛ ಕೊಂಡಕುಂದಾನ್ವಯಕ್ಕೆ ಸೇರಿದವನು ಎಂಬುದು ಸ್ಪಷ್ಟವಿದೆ. "ನಯಚಂದ್ರ ಅಥವಾ ನಯಕೀರ್ತಿಯೆಂಬ ಯಾವನೊಬ್ಬ ನಂದಿಸಂಘದ ಯತಿಯ ಹೆಸರು ಸಂಪ್ರತಿಕಾರರ ಕೈತಪ್ಪಿನಿಂದ ನಯಸೇನ ಎಂದು ಆ ಕಾವ್ಯದಲ್ಲಿ ಬರೆದು ಹೋಗಿರ ಬೇಕು" ಎಂಬ ಶ್ರೀ ಗೋವಿಂದ ಪೈ ಅವರ ಮಾತು ಸಯುಕ್ತಿಕವಾಗಿದೆ. ನಂದಿ ಸಂಘದ ನಯಸೇನನು ಸ್ಮರಿಸಲ್ಪಟ್ಟಿರುವದು ಅಸಂಭವನೀಯ. ಆದ್ದರಿಂದ ಅಲ್ಲಿ ನಯಸೇನ ಮುಮುಕ್ಷು ಎಂಬ ಹೆಸರಿಗೆ ಬದಲಾಗಿ ನಯಕೀರ್ತಿ ಎಂದೇ ಇರಬೇಕು.

ದೇವಚಂದ್ರನ ರಾಜಾವಳೀ ಕತೆಯಲ್ಲಿ "ಚಾವುಂಡರಾಯ, ನಾಗಚಂದ್ರ ಮಾಘಣಂದಿ ಸಿದ್ಧಾಂತಿ, ಕುಮುದೇಂದು ನಯಸೇನಾದಿಗಳ ಪುರಾಣ ದೊಳಂ

---

೧. ನಯಸೇನ ಮತ್ತು ಅವನ ಕೃತಿಗಳು ಪು. ೪೪

೨ ಚಂದ್ರಪ್ರಭಪುರಾಣ: ಸಂ. ಎಸ್. ಜಿ. ನರಸಿಂಹಾಚಾರ್ ಮತ್ತು ರಾಮಾನುಜಯ್ಯಂಗಾರ್ ಆಶ್ವಾಸ ೧, ಪದ್ಯ ೨೬

ರಾಮಚರಿತ್ರದೊಳಂ ಕುಮುದೇಂದು ರಾಮಾಯಣದೊಳಂ ಪುಣ್ಯಾಸ್ರವ ಕಥಾಸಾರದೊಳಂ ಪೇಳ್ದರ್"[೩] ವೆಂಬ ಗದ್ಯಭಾಗವನ್ನು ಆಧರಿಸಿ ನಯಸೇನ-ನೆಂಬವನು "ಪುಣ್ಯಾಶ್ರವ ಕಥಾಸಾರ"ನೆಂಬ ಗ್ರಂಥ ರಚಿಸಿರುವುದಾಗಿ ಊಹಿಸಬಹುದಾಗಿದೆ. ಕನ್ನಡದಲ್ಲಿ ನಾಗರಾಜ (೧೩೩೧) ಕೃತಿ ಪುಣ್ಯಾಸ್ರವೆಂಬ ಕೃತಿಯಿದೆ. ಆದರೆ ದೇವಚಂದ್ರನು ನಯಸೇನನನೆಂದು ಹೇಳುವ 'ಪುಣ್ಯಾಸ್ರವ ಕಥಾಸಾರ' "ವು ಉಪಲಬ್ಧವಿಲ್ಲದಿರುವುದರಿಂದ ಧರ್ಮಾಮೃತದ ನಯಸೇನನಿಂದ ಭಿನ್ನವಾದ ಬೇರೊಬ್ಬ ನಯಸೇನನಾಗಿರಬೇಕು.

ಕರ್ಣಾಟಕ ಭಾಷಾಭೂಷಣದಲ್ಲಿ ಬರುವ 'ದೀರ್ಘೋಕ್ತಿರ್ನಯಸೇನಸ್ಯ' ಎಂಬ ಮಾತನ್ನು ಆಧರಿಸಿ ಧರ್ಮಾಮೃತ ಬರೆದ ನಯಸೇನನನೇ ಕನ್ನಡದಲ್ಲಿ ಒಂದು ವ್ಯಾಕರಣ ಗ್ರಂಥ ಬರೆದಿರಬೇಕೆಂದು ಕವಿಚರಿತೆಕಾರರು ಅಭಿಪ್ರಾಯ ಪಟ್ಟಿದ್ದರು. ಆದರೆ ಇತ್ತೀಚಿನ ಸಂಶೋಧನೆಯಿಂದ ಈ ವೈಯಾಕರಣಿ ನಯಸೇನನು ಬೇರೆ ವ್ಯಕ್ತಿಯೆಂದು ಪ್ರತಿಷ್ಠಾಪಿತವಾಗದೆ. ಧರ್ಮಾಮೃತದ ನಯಸೇನನ ಗುರುಪರಂಪರೆಯಲ್ಲಿ ನರೇಂದ್ರಸೇನ ಹಾಗೂ ನಯಸೇನನರ ಹೆಸರುಗಳಿದ್ದು ಇವೇ ಹೆಸರುಗಳು ೧೦೫೩ರ ಮುಳಗುಂದದ ಶಾಸನದಲ್ಲಿಯೂ ಬರುತ್ತವೆ.[೪] ಇದರಲ್ಲಿ "ಚಾಂದ್ರಂ ಕಾತಂತ್ರಂ ಜೈನೇಂದ್ರಂ" ಎಂಬ ಪದ್ಯ ನರೇಂದ್ರಸೇನನ ವ್ಯಾಕರಣ ಪಾಂಡಿತ್ಯವನ್ನು ಬಣ್ಣಿಸಿದರೆ, ಸಿನಗೇನೆಂಬೆನೋ ಶಾಕಚಾಯನ ಮುನೀಶಂ" ಎಂಬದು ನಯಸೇನ ಪಂಡಿತನ ವ್ಯಾಕರಣ ವೈದುಷ್ಯವನ್ನು ವರ್ಣಿಸಿದೆ. ಕ್ರಿ. ಶ. ೧೦೮೧ರ ಲಕ್ಷ್ಮೇಶ್ವರ ಶಾಸನ ಕೂಡ ಅದೇ ಪದ್ಯಗಳಿಂದ ಇವರಿಬ್ಬರನ್ನು ಬಣ್ಣಿಸಿದೆ.[೫] ಹೀಗೆ ಶಾಸನದಲ್ಲಿ ವರ್ಣಿಸಲ್ಪಟ್ಟಿರುವ ನಯನಸೇನು ವ್ಯಾಕರಣದಲ್ಲಿ ಅಪ್ರತಿಮ ಪಂಡಿತನಾಗಿದ್ದಾನೆಂದೂ "ಕ್ರಿ. ಶ. ೧೦೫೩ರ ಹೊತ್ತಿಗಾಗಲೇ ವೈಯಾಕರಣಿಯೆಂದು ಖ್ಯಾತಿವೆತ್ತ ಇವನು ಕನ್ನಡದಲ್ಲಿ ವ್ಯಾಕರಣವೊಂದನ್ನು ಬರೆದಿರುವ ಸಾಧ್ಯತೆ ಇದೆ. ಧರ್ಮಾಮೃತದ ಕರ್ತೃವಾದ ನಯಸೇನನ ಗುರುಪರಂಪರೆಯಲ್ಲಿ ಬರುವ ಇವನನ್ನು ಒಂದನೆಯ ನಯಸೇನನೆಂದು ಕರೆಯಲಡ್ಡಿಯಿಲ್ಲ"[೬] ಎಂಬ ಡಾ. ಮಲ್ಲಾಪುರವರ ಅಭಿಪ್ರಾಯವು ಸ್ವೀಕಾರಾರ್ಹವಾಗಿದೆ.

ಧರ್ಮಾಮೃತದ ಕರ್ತೃ ನಯಸೇನನ ಜೀವನ ಚರಿತ್ರೆ :

ಜೈನಧರ್ಮವು ಅಸ್ತಿತ್ವಕ್ಕಾಗಿ ಹೋರಾಡುತ್ತಿದ್ದ ವಿಷಮ ಸನ್ನಿವೇಶದಲ್ಲಿ ನಯ

---

೩. ಕ. ಕ. ಚ. ಭಾಗ-೧, ಪು. ೧೦೫

೪. ಸಂ. ೧೬ ಪು. ೫೩ ರಿಂದ ಮುಂದೆ

೫. ಸಂ. ೧೬ ಪು- ೫೮ ರಿಂದ ಮುಂದೆ

೬. ನಯಸೇನ ಹಾಗೂ ಅವನ ಕೃತಿಗಳು ಪು. ೪೭

ಸೇನನು ಅದನ್ನು ಉಳಿಸುವ ಕಠಿಣಕಾರ್ಯವನ್ನು ಕೈಗೆತ್ತಿಕೊಂಡು ಸಂಘರ್ಷ ನಡೆಸಿದ್ದಾನೆ. ಮುನಿಗಳಲ್ಲಿ ಕೂಡ ಸ್ವಾರ್ಥ ಹೆಚ್ಚಿ ಮತಶ್ರದ್ಧೆ ಕಡಿಮೆಯಾ ಗುತ್ತಿರುವುದನ್ನು ಕಂಡು ಸರಳ ಸುಂದರ ಭಾಷೆಯಲ್ಲಿ ಧರ್ಮದ ತಿರುಳನ್ನು ಪ್ರಸಾರಮಾಡುವ ಕಾರ್ಯಕ್ಕೆ ಕೈಹಾಕಿದ್ದಾನೆ. "ಜಿನಭವನಮೆಲ್ಲಮುಂ ಸಜ್ಜ ನಚೈತ್ಯಾವಳಿಗಳೆಲ್ಲಮುಂ ದಿವ್ಯ ತಪೋಧನರೆಲ್ಲರುಮುಂ ಸಮನಾಗೆ ಅನವರತಂ ಕಾಣ್ಬ ಮುನಿಯೆ ಮುನಿವರನೆನಿಕುಂ" ಎಂದು ಮುನಿತ್ವದ ಆದರ್ಶವನ್ನು ಸಾರಿದ ನಯಸೇನನು ತಾನು ಸ್ವತಃ ಅಂಥ ಆದರ್ಶ ಜೀವನವನ್ನು ಬಾಳಿದ್ದಾನೆ. ಧರ್ಮಾಮೃತದಲ್ಲಿ 'ಉದ್ಯಾತ್ ತಪೋಮೂರ್ತಿ', 'ನಯಸೇನ ಮುನೀಂದ್ರ' 'ಮುನೀಂದ್ರಾಂಬುರುಹಾರ್ಕ' ಮುಂತಾಗಿ ತನ್ನನ್ನು ಅತ್ಯಂತ ಅಭಿಮಾನದಿಂದ ಕರೆದುಕೊಂಡಿದ್ದಾನೆ. ಇದರಿಂದ ಅವನು ಸಂಸಾರದಿಂದ ವಿರಕ್ತ ತಾಳಿ ಮುನಿ ಜೀವನವನ್ನು ನಡೆಸಿರಬೇಕೆಂಬುದು ನಿರ್ವಿವಾದ ವಿಷಯವಾಗಿದೆ. ಮುನಿಗಳಾ-ದವರಿಗೆ ಪೂರ್ವಾಶ್ರಮದ ಸಾಂಸಾರಿಕ ಸಂಬಂಧಗಳೆಲ್ಲವೂ ಕಳಚಿಕೊಳ್ಳುವುದರಿಂದ ಅವನು ತನ್ನ ವೈಯಕ್ತಿಕ ವಿಷಯಗಳ ಬಗೆಗೆ ಸಂಪೂರ್ಣವಾಗಿ ಮೌನತಾಳಿದ್ದಾನೆ. ವಜ್ರಕುಮಾರ ಚರಿತ್ರೆಯ ಬ್ರಹ್ಮಕವಿ (ಕ್ರಿ. ಶ. ೧೬೦೦), ಹಾಗೂ ಚಂದ್ರಸಾಗರ ವರ್ಣಿ (೧೮೦೧) ಗಳು ನಯಸೇನನ್ನು 'ಕವಿ ನಯಸೇನ ಮುನಿ' ಎಂದು ಸ್ಮರಿಸಿದ್ದಾರೆ. ಇದರಿಂದ ನಯಸೇನನು ಸಮರ್ಥಕವಿಯೂ ಆದರ್ಶಜೀವನವನ್ನು ಬಾಳಿದ ಮುನಿಯೂ ಆಗಿದ್ದನೆಂದು ಸ್ಪಷ್ಟವಾಗುತ್ತದೆ.

ನಯಸೇನನು ತನ್ನನ್ನು 'ರಾಜಪೂಜ್ಯಂ' 'ನೃಪವಂದ್ಯಂ' 'ಊರ್ವೀಶ್ವರ ಪೂಜ್ಯಂ' ಎಂದು ಹೇಳಿಕೊಂಡಿದ್ದರೂ ಅವನಿಗೆ ರಾಜಾಶ್ರಯವಿದ್ದ ಬಗೆಗೆ ನಿಖರ ವಾಗಿ ಏನೂ ತಿಳಿದು ಬರುವುದಿಲ್ಲ. ಈತನ ಗುರುವಿನ ಗುರುವಾದ ೧ನೆಯ ನಯ ಸೇನನನ್ನುಬೆಳ್ದೇವಯ್ಯ, ಬಲದೇವಯ್ಯಗಳು ಪೂಜಿಸಿದ ಉಲ್ಲೇಖವಿರುವುದನ್ನು ಈಗಾಗಲೇ ಹೇಳಲಾಗಿದೆ. ಅದೇ ಪರಂಪರೆಗೆ ಸೇರಿದ ಈ ನಯಸೇನನನ್ನು ಅವರು ಪೂಜ್ಯ ಭಾವನೆಯಿಂದ ಕಂಡಿರಬಹುದು. ಅಲ್ಲದೇ ತನ್ನ ಗುರುವಾದ ನರೇಂದ್ರಸೇನ ತ್ರೈವಿದ್ಯನಿಗೆ ಚಾಲುಕ್ಯ ಭುವನೈಕಮಲ್ಲನಿಂದ ಪೂಜಿತನಾದ ಗುಣಚಂದ್ರ ಪಂಡಿತನು ತ್ರೈವಿದ್ಯಮಹಾಭಿಧಾನವನ್ನಿತ್ತ ಸಂಗತಿಯನ್ನು ಸ್ವತಃ ನಯಸೇನನೇ ಹೇಳಿಕೊಂಡಿದ್ದಾನೆ.[೧] ಆ ಚಕ್ರವರ್ತಿಯ ಮನೆತನದವರು ಈತನ ಗುರುವಿನಂತೆಯೇ ಈತನನ್ನು ಪೂಜ್ಯಭಾವದಿಂದ ಕಂಡಿರಬೇಕು.

ಗುರು ಪರಂಪರೆ :

ಧರ್ಮಾಮೃತದ ಪ್ರಾರಂಭದಲ್ಲಿ ಅರ್ಹದ್ಬಲಾಚಾರ್ಯರಿಂದ ಮೊದಲು ಗೊಂಡು ಅಕಳಂಕದೇವರವರೆಗೆ ಅನೇಕ ಯತಿಮುನಿಗಳನ್ನು ಸ್ಮರಿಸಿದ್ದಾನೆ.

ಇವರಲ್ಲಿ ನರೇಂದ್ರಸೇನ ಮುನಿಪ, ನಯಸೇನ ಮುನೀಂದ್ರ ಹಾಗೂ ತ್ರೈವಿದ್ಯ ಚಕ್ರೇಶ್ವರ ನರೇಂದ್ರಸೇನ ಮುನಿಪ ಈ ಹೆಸರುಗಳು ಮಹತ್ವದವಾಗಿವೆ. ಇಲ್ಲಿಯ ನಯಸೇನ ಮುನೀಂದ್ರನು ಧರ್ಮಾಮೃತದ ನಯಸೇನನ ಗುರು ನರೇಂದ್ರಸೇನ ತ್ರೈವಿದ್ಯನ ಗುರುವೂ ಪ್ರಖ್ಯಾತವೈಯಾಕರಣಿಯೂ ಆಗಿದ್ದನೆಂದು ಈ ಹಿಂದೆಯೇ ನೋಡಲಾಗಿದೆ. ನಯಸೇನನು ತನ್ನನ್ನು ತ್ರೈವಿದ್ಯ ಚಕ್ರೇಶ್ವರ ವಿಮಳ ಪದಾಂಭೋಜ, ಭೃಂಗಂ ಎಂದು ಕರೆದುಕೊಂಡಿರುವುದರಿಂದ ಚಕ್ರೇಶ್ವರ ಬಿರುದುಳ್ಳ ನರೇಂದ್ರಸೇನನೇ ಈತನ ಗುರುವೆಂದು ಸ್ಪಷ್ಟವಾಗಿದೆ. ಈ ತ್ರೈವಿದ್ಯಚಕ್ರೇಶ್ವರ ಬಿರುದನ್ನು ಭುವನೈಕಮಲ್ಲನಿಂದ ಪೂಜಿಸಲ್ಪಟ್ಟ ಗುಣ ಚಂದ್ರ ಪಂಡಿತನು ನರೇಂದ್ರಸೇನನಿಗೆ ಕೊಟ್ಟನೆಂದು ನಯಸೇನನು ಅಭಿಮಾನದಿಂದ ಹೇಳಿಕೊಂಡಿದ್ದಾನೆ.[೧]

> ನುತಸಿದ್ಧಾಂತದೊಳೊಪ್ಪವೆತ್ತ ಜಿನಸೇನಾಚಾರ್ಯರಿಂ ಶಾಸ್ತ್ರದು
> ನ್ನತಿಯೊಳ್ ಭಾವಿಸೆ ಪೂಜ್ಯಪಾದ ಮುನಿಯಿಂ ಷಟ್ತರ್ಕದೊಳ್ ಧಾರಿಣೀ
> ಸ್ತುತನಾಗಿರ್ದಸಮಂತಭದ್ರಮುನಿಯಿಂ ಮಿಕ್ಕಿರ್ದನುದ್ಧೃತ್ತಪ
> ಶ್ರುತವಾರಾಸಿ ನರೇಂದ್ರಸೇನ ಮುನಿಪಂ ತ್ರೈವಿದ್ಯ ಚಕ್ರೇಶ್ವರಂ

ಇದರಲ್ಲಿ ತ್ರೈವಿದ್ಯ ನರೇಂದ್ರಸೇನನು ಸಿದ್ಧಾಂತ, ಶಾಸ್ತ್ರದುನ್ನತಿ, ಷಟ್ತರ್ಕಗಳಲ್ಲಿ ಕ್ರಮವಾಗಿ ಜಿನಸೇನಾಚಾರ್ಯ, ಪೂಜ್ಯಪಾದ, ಸಮಂತಭದ್ರರನ್ನು ಮೀರಿಸಿದ್ದಾನೆಂದೂ ಆತನು ಉದ್ಧೃತ್ ತಪವಾರಾಸಿಯಾಗಿದ್ದನೆಂದೂ ಹೆಮ್ಮೆ ಪಟ್ಟಿದ್ದಾನೆ. ನಯಸೇನನು ಕರ್ನಾಟಕದ ಪ್ರಖ್ಯಾತ ಮುನಿಸಂಪ್ರದಾಯವಾದ ಸೇನಗಣಕ್ಕೆ ಸೇರಿದವನಾಗಿದ್ದಾನೆ. ಕರ್ನಾಟಕದ ಜೈನ ಯತಿಪರಂಪರೆಯಲ್ಲಿ ಪ್ರಚುರಗೊಂಡ ಇನ್ನೆರಡು ಗಣಗಳೆಂದರೆ ನಂದಿಗಣ ಹಾಗೂ ಬಲಾತ್ಕಾರಗಣ. ಇವೆಲ್ಲವೂ ಮೂಲ ಸಂಘಂದದಿಂದಲೇ ಹುಟ್ಟಿವೆ. ಕೊಂಡಕುಂದಾಚಾರ್ಯರಿಂದ ಪ್ರಣೀತವಾದ ಮುನಿಸಂಪ್ರದಾಯವೇ ಕೊಂಡಕುಂದಾನ್ವಯ ಇಲ್ಲವೆ ಮೂಲಸಂಘವೆಂದು ಪ್ರಖ್ಯಾತಿ ಪಡೆದಿದೆ. ಆತನ ನಂತರ ಈ ಮೂಲಸಂಘಂದದಲ್ಲಿ ಐದು ಪ್ರಭೇದಗಳು ಏರ್ಪಟ್ಟವೆಂದು ಇಂದ್ರ ನಂದಿಯ ನೀತಿಶಾಸ್ತ್ರದಿಂದ ತಿಳಿದುಬರುತ್ತದೆ.[೧] ಆದರೆ ಸಂಘಗಳಲ್ಲಿ ತಾತ್ವಿಕವೆನ್ನಿಸಿಕೊಳ್ಳಬಹುದಾದ ವ್ಯತ್ಯಾಸಗಳಾವವೂ ಇಲ್ಲದ್ದರಿಂದ ಇವುಗಳನ್ನು ಜೈನಾಭಾಸಗಳೆಂದು ಕರೆದದ್ದು ಗಮನಾರ್ಹವಾಗಿದೆ. ಪೂರ್ವಪುರಾಣದ ಕರ್ತೃವೂ ಪ್ರಖ್ಯಾತ ಜೈನಯತಿಯೂ ಆದ ೧ನೆಯ ಜಿನ ಸೇನನಿಂದ ಸೇನಸಂಪ್ರದಾಯವು ಪ್ರಚುರಗೊಂಡಿತೆಂದೂ ಜೈನಸಿದ್ಧಾಂತ

---

೧. ಧರ್ಮಾಮೃತ ಆಶ್ವಾಸ ೧ ಪದ್ಯ ೩೫.

ಭಾಸ್ಕರವು ಉಲ್ಲೇಖಿಸಿದೆ.[2] ಕ್ರಿ. ಶ. ೧೦೮೧ರ ಲಕ್ಷ್ಮೇಶ್ವರದ ಶಾಸನದಲ್ಲಿ ಪರಮ ಜಿನಸಮಯ ರತ್ನಾಕರ ಹಿಮಕರ ಮೂಲಸಂಘಸಂಭವಶೋಭಾಕರ ಸೇನಗಣ ನಭಸ್ಥಲ ಸರಸಿಜಬಾಂಧವ ಎಂದು ನಯಸೇನನ ಗುರು ನರೇಂದ್ರಸೇನ ತ್ರೈವಿದ್ಯ ರನ್ನು ವರ್ಣಿಸಲಾಗಿದೆ. ರಾಷ್ಟ್ರಕೂಟ ಎರಡನೇ ಕೃಷ್ಣನ ಆಳಿಕೆಗೆ ಸೇರಿದ. ಕ್ರಿ.ಶ. ೯೦೨–೯೦೩ರ ಮುಳುಗುಂದದ ಶಾಸನವು ಚಂದ್ರಿಕಾವಾಟಾನ್ವಯದ ಉಲ್ಲೇಖ ಮಾಡಿದೆ. ಇದನ್ನು ವಿಶ್ಲೇಷಿಸಿದ ಡಾ. ಪಿ. ಬಿ. ದೇಸಾಯರು ಸೇನಗಣಕ್ಕೆ ಸೇರಿದ ಚಂದ್ರಿಕಾವಾಟಾನ್ವಯ ಎಂಬ ಹೆಸರಿನ ಯತಿಪರಂಪರೆಯೊಂದು ಕರ್ನಾಟಕದಲ್ಲಿತ್ತೆಂದು ತಿಳಿಸಿ ಸುಮಾರು ಒಂಭತ್ತನೆಯ ಶತಮಾನದ ಪ್ರಥಮ ಭಾಗದಲ್ಲಿ ಧರ್ಮಸೇನನೆಂಬ ಯತಿ ಚಂದ್ರಕಾವಾಟ ಎಂಬ ಸ್ಥಳದಲ್ಲಿ ಒಂದು ನೆಲೆಸಿದನು. ಈತನು ಸೇನಗಣದವನಾಗಿದ್ದು ಯತಿ ಸಮಾಜದಲ್ಲಿ ಗಣ್ಯತೆ ಪಡೆದವನಾದುದರಿಂದ ಈತನ ಮೂಲಕ ಒಂದು ಸ್ವತಂತ್ರಯತಿಪರಂಪರೆ ಆ ಸ್ಥಳದಲ್ಲಿ ನಿರ್ಮಾಣವಾಯಿತು. ಅಲ್ಲಿಂದೀಚೆಗೆ ಈ ಮುನಿಸಂತಾನದವರಿಗೆ ಚಂದ್ರಿಕಾವಾಟದ ಸೇನ ವಂಶದವರು ಎಂಬ ವಿಶಿಷ್ಟ ಸಂಕೇತ ಉಂಟಾಯಿತು.[2] ಈ ಶಾಸನಗಳನ್ನು ಸಂಪಾದಿಸಿದ ಫ್ಲೀಟರು ಚಂದ್ರಿಕಾವಾಟವೆಂದರೆ ಒಂದು ಆವರಣ (Enclosure) ಎಂದು ಮಾತ್ರ ಹೇಳಿದರೆ ದೇಸಾಯಿಯವರು ವಿಜಾಪುರ ಜಿಲ್ಲೆಯ ಚಾಂದಕವಟೆ ಗ್ರಾಮವೆಂದು ಪ್ರತಿಪಾದಿಸಿದ್ದಾರೆ. ಆದರೆ ಚಾಂದಕವಟೆಯಲ್ಲಿ ಪುರಾತನ ಅವಶೇಷಗಳಾಗಲಿ, ಮಹತ್ವದ ಶಾಸನಗಳಾಗಲಿ ಸಿಗದೇ ಇರುವುದರಿಂದ ಈ ವಿಷಯವಾಗಿ ಕೊನೆಯ ಮಾತನ್ನು ಹೇಳಲಾಗದು. ಚಂದ್ರಿಕಾವಾಟಾನ್ವಯದ ಉಲ್ಲೇಖವು ಚಾವುಂಡರಾಯ ಪುರಾಣದಲ್ಲಿಯೂ ಬರುವು ದರಿಂದ ಆ ವಂಶದ ಯತಿಪರಂಪರೆಯೊಂದು ಕರ್ನಾಟಕದಲ್ಲಿತ್ತೆಂದೂ ಆ ಪರಂಪರೆಗೆ ನಯಸೇನನೂ ಸೇರಿದ್ದನೆಂದೂ ಮೇಲಿನ ವಿವೇಚನೆಯಿಂದ ಸ್ಪಷ್ಟವಾಗುತ್ತದೆ.

ನಯಸೇನನ ಕಾಲ :

ನಯಸೇನನು ಧರ್ಮಾಮೃತವು ಪೂರ್ಣಗೊಂಡ ಕಾಲವನ್ನು ಗ್ರಂಥದ ಕೊನೆಯಲ್ಲಿ ಸ್ಪಷ್ಟವಾಗಿ ಹೇಳಿಕೊಂಡಿದ್ದರೂ ಅದನ್ನು ಕುರಿತು ನಡೆದ ಚರ್ಚೆಗೆ ಇನ್ನೂ ಪೂರ್ಣವಿರಾಮ ಬಿದ್ದಂತಿಲ್ಲ. ಗಿರಿಶಿಖಿವಾಯುಮಾರ್ಗ ..... ಎಂಬ ಪದ್ಯದಲ್ಲಿ ಧರ್ಮಾಮೃತವು ರಚನೆಗೊಂಡ ಕಾಲವು ಶಾಲಿವಾಹನ ಶಕೆ ೧೦೩೭ ನೆಯ ನಂದನ ಸಂವತ್ಸರದ ಭಾದ್ರಪದಮಾಸ ಶುಕ್ಲಪಕ್ಷ ಪ್ರತಿಪದೆ ಹಸ್ತನಕ್ಷತ್ರ

೧. ಗೋಪುಚ್ಛಕಃ ಶ್ವೇತವಾಸಾ ದ್ರವಿಡೋ ಯಾಪನೀಯಕಃ
ನಿಃಪಿಚ್ಛಕಶ್ಚೇತಿ ಪಂಚೈತೆ ಜೈನಾಭಾಸಾ: ಕೀರ್ತಿತಾಃ

೨. ಚಂದ್ರಿಕಾವಾಟದ ಯತಿಗಳು ಪಿ. ಬಿ. ದೇಸಾಯಿ
ಕ. ಸಾ. ಪ. ಸಂ. ೩೫ ಸಂಚಿಕೆ ೨ ಪು ೪೧–೫೯

ರವಿವಾರವೆಂದು ಅರ್ಥವಾಗುತ್ತದೆ. ಇದರ ಪ್ರಕಾರ ಧರ್ಮಾಮೃತವು ಪೂರ್ಣಗೊಂಡ ಕಾಲವು ಕ್ರಿ. ಶ. ೧೧೧೫. ಆದರೆ ನಂದನ ಸಂವತ್ಸರವು ಶಕ ೧೦೩೭ ರಲ್ಲಿ ಬರುವುದಿಲ್ಲ, ಬರೆದಂತೆ ತಿಳಿಯುತ್ತದೆ. ೧೦೩೪ ರಲ್ಲಿ ಬರುತ್ತದೆ. ಗಿರಿ ಎಂಬುದರಿಂದ ಜೈನರು ನಾಲ್ಕು ಸಂಖ್ಯೆಯನ್ನು ಸೂಚಿಸುವಂತೆ ತೋರುತ್ತದೆ. ಹಾಗಿದ್ದರೆ ಕ್ರಿ. ಶ. ೧೧೧೨ ರಲ್ಲಿ ಈ ಗ್ರಂಥ ಹುಟ್ಟಿರಬೇಕು.[೧] ಎಂದು ಕವಿಚರಿತೆಕಾರರು ಅಭಿಪ್ರಾಯಪಟ್ಟಿದ್ದಾರೆ. ಜೈನ ಧರ್ಮದ ಪ್ರಕಾರ ಭರತಕ್ಷೇತ್ರದಲ್ಲಿ ಹಿಮವತ್ ಪರ್ವತ, ವಿಜಯಾರ್ಧ ಪರ್ವತ, ವೃಷಭಾದ್ರಿ ಮತ್ತು ಕೈಲಾಸ ಪರ್ವತ ಹೀಗೆ ನಾಲ್ಕು ಪರ್ವತಗಳಿಗತ್ತವೆ.[೨] ಇದನ್ನೇ ದೃಷ್ಟಿಯಲ್ಲಿರಿಸಿ ನಯಸೇನನು ಗಿರಿ ಶಬ್ದಕ್ಕೆ ನಾಲ್ಕು ಎಂಬರ್ಥವನ್ನು ಕಲ್ಪಿಸಿರಬೇಕೆಂದೂ ಇದರಿಂದ ಧರ್ಮಾಮೃತದ ರಚನಾಕಾಲ ಶಕೆ ೧೦೩೪ ಎಂದರೆ ೧೧೧೨ ಎಂದು ಇಟ್ಟುಕೊಳ್ಳುವುದರಲ್ಲಿ ತಪ್ಪಿಲ್ಲವೆಂಬ ಡಾ. ಬಿ. ವ್ಹಿ. ಮಲ್ಲಾಪೂರ ಅವರ ಅಭಿಪ್ರಾಯವು ಸ್ವೀಕಾರಾರ್ಹವಾಗಿದೆ.

ನಯಸೇನನ ವಾಸಸ್ಥಳ ಮತ್ತು ಕೃತಿಗಳು :

ತಾನು ಮುಳುಗುಂದದಲ್ಲಿದ್ದು ಧರ್ಮಾಮೃತವನ್ನು ಬರೆದದ್ದನ್ನು ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ.

ಮುಳಗುಂದದೊಳಿರ್ದು ಮಹೋ
ಜ್ವಳ ಧರ್ಮಾಮೃತ ಮನರ್ತಿಯಿಂದಂ ಭವ್ಯಾ
ಳಿಗೆ ಪಿದಂ ಧರಿತ್ರೀ
ತಳಪೂಜ್ಯಂ ಸುಕವಿನಿಕರ ಪಿಕಮಾಕಂದಂ (೧೪–೧೬೮)

ಧರ್ಮಾಮೃತವೊಂದೆ ನಯಸೇನನ ಕೃತಿಯಾಗಿದೆ. ಕವಿಚರಿತ್ರೆಕಾರರು ಊಹಿಸಿದಂತೆ ಇವನು ವ್ಯಾಕರಣ ಕೃತಿಯನ್ನು ರಚಿಸಿಲ್ಲ. ವ್ಯಾಕರಣದ ನಯಸೇನನು ಪ್ರತ್ಯೇಕ ವ್ಯಕ್ತಿಯಾಗಿದ್ದು ಅವನನ್ನು ೧ನೆಯ ನಯಸೇನನೆಂದು ಕರೆಯಬೇಕೆಂದು ಹಿಂದೆ ತೋರಿಸಲಾಗಿದೆ.

ನಯಸೇನನು ಬದುಕಿ ಬಾಳಿದ ಇಂದಿನ ಧಾರವಾಡ ಜಿಲ್ಲೆಯ ಮುಳಗುಂದಕ್ಕೆ ಅತ್ಯಂತ ಪ್ರಾಚೀನ ಅಂತೆಯೆ ಉಜ್ವಲವಾದ ಇತಿಹಾಸವಿದೆ. ಈ ಗ್ರಾಮದ ಸುತ್ತಲೂ ಹರಡಿಕೊಂಡ ಪ್ರಾಚೀನ ಬಸದಿ, ದೇವಾಲಯ ಹಾಗೂ ಶಿಲಾಶಾಸನಗಳನ್ನು ಪರಿಶೀಲಿಸಿದರೆ ಜೈನ ಶೈವ ದರ್ಮಗಳ ತೀವ್ರಚಟುವಟಿಕೆಯ

೧. ಕ. ಕ. ಚ. ಭಾಗ ೧ ಪು. ೫೫೮.
೨. ಎಲ್. ಗುಂಡಪ್ಪ ಆದಿಪುರಾಣ ಸಂಗ್ರಹ ಪೀಠಿಕೆ.

ಕೇಂದ್ರವಾಗಿತ್ತೆಂದು ತಿಳಿಯುತ್ತದೆ. ಅನೇಕ ಶಾಸನಗಳಲ್ಲಿ ಇದರ ಹೆಸರು ಮುಳುಗುಂದ, ಮುಳ್ಗುಂದ ಎಂಬ ರೂಪದಲ್ಲಿ ಸಿಗುತ್ತದೆ. ಮುಳುಗುಂದವು ಇತಿಹಾಸ ಪ್ರಸಿದ್ಧ ಬೆಳ್ವೊಲ ಮೂಸೂರರ ಒಂದು ಆಡಳಿತ ವಿಭಾಗವಾದ ಮುಳ್ಗುಂದ ಹನ್ನೆರಡರಮುಖ್ಯಸ್ಥಳವಾಗಿತ್ತೆಂದು ಕ್ರಿ. ಶ. ೮೬೬ರ ನೀಲಗುಂದದ ಶಾಸನದಿಂದ ತಿಳಿಯುತ್ತದೆ.೧ ಮುಳಗುಂದದಲ್ಲಿ ಸಿಂಧರ ಒಂದು ಚಿಕ್ಕ ರಾಜಮನೆತನವೂ ಆಗಿಹೋಗಿದೆ.

ಜೈನಧರ್ಮದ ದೃಷ್ಟಿಯಿಂದ ಮುಳಗುಂದದ ಸ್ಥಾನವು ಹಿರಿದಾಗಿದೆ. ಇಲ್ಲಿ ದೊರೆತ ಅನೇಕ ಪ್ರಾಚೀನ ಶಿಲಾಶಾಸನಗಳು ಹಾಗೂ ಬಸದಿಗಳು ಜೈನಧರ್ಮವು ಕರ್ನಾಟಕ ಸಂಸ್ಕೃತಿಗೆ ಇತ್ತ ಘನವಾದ ಕೊಡುಗೆಯನ್ನು ಸಾರುತ್ತವೆ. ಉತ್ತರ ಕರ್ನಾಟಕದ ಕೊಪಣನಗರ ಲಕ್ಷ್ಮೇಶ್ವರಗಳಂತೆ ಇದೂ ಒಂದು ಪ್ರಖ್ಯಾತ ಜೈನಕೇಂದ್ರವಾಗಿತ್ತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

೧. ನಯಸೇನ ಮತ್ತು ಅವರ ಕೃತಿಗಳು, ಪು. ೫೩.

ಅನುಭವ ಮಂಟಪದ ಪ್ರೇರಣೆಗಳು

ಡಾ. ಬಿ. ವ್ಹಿ. ಮಲ್ಲಾಪುರ

(೧)

ವೀರಶೈವ ಶರಣರು ಅನುಭಾವಕ್ಕಿತ್ತಿರುವ ಪ್ರಾಶಸ್ತ್ಯ, ಅವರ ಹಲವಾರು ವಚನಗಳಲ್ಲಿ ಪ್ರತಿಬಿಂಬಿಸಿರುವುದನ್ನು ಕಾಣುತ್ತೇವೆ. ಉದಾರಹಣೆಗಾಗಿ ಕೆಲವು ಪ್ರಮುಖ ವಚನಕಾರರ ವಚನಗಳನ್ನಿಲ್ಲಿ ಪರಿಶೀಲಿಸಬಹುದು:

೧. "ಅನುಭಾವವಿಲ್ಲದವನ ಭಕ್ತಿ ತಲೆಕೆಳಗಪ್ಪುದಯ್ಯ,
ಅನುಭಾವವೇ ಭಕ್ತಿಗಾಧಾರ. ಅನುಭಾವವೆ ಭಕ್ತಿಗೆ ನೆಲೆವನೆ,
ಅನುಭಾವವುಳ್ಳವರ ಕಂಡು ತೂರ್ಯಾತ್ತೂರ್ಯಸಂಭಾಷಣೆಯ ಮಾಡದಿರ್ದಡೆ,
ನರಕದಲ್ಲಿಕ್ಕಯ್ಯ ರಾಮನಾಥ"[೧]

—**ಜೇಡರದಾಸಿಮಯ್ಯ**

೨. "....... ಅನುಭಾವಿಗಳ ಅನುಭಾವ ಮನವಾರೆ ವೇಧಿಸಿದವಂಗೆ,
ಜನನವಿಲ್ಲ ಕಾಣಾ ರಾಮನಾಥ"[೨]

—**ಜೇಡರದಾಸಿಮಯ್ಯ**

೩. "ಗುರೂಪದೇಶ ಮಂತ್ರವೈದ್ಯ, ಜಂಗಮೋಪದೇಶ ಶಸ್ತ್ರವೈದ್ಯ ನೋಡಾ,
ಭವರೋಗವ ಕಳೆವ ಪರಿಯ ನೋಡಾ,
ಕೂಡಲಸಂಗನ ಶರಣರ ಅನುಭಾವ ಮಡಿವಾಳನ ಕಾಯಕಂತೆ"[೩]

—**ಬಸವಣ್ಣ**

೪. "ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ,
...... ಕೂಡಲಸಂಗನ ಶರಣರ ಅನುಭಾವದಿಂದ,
ಎನ್ನ ಭವದ ಕೇಡು ನೋಡಯ್ಯ"[೪]

—**ಬಸವಣ್ಣ**

೫. "ಭಕ್ತಿಗೆ ಅನುಭಾವವೇ ಬೀಜ ಕಾಣಿರೊ......
ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು
ಅನುಭಾವವ ಮಾಡುವಲ್ಲಿ ವಿನಯದಿಂದ ಕೇಳದಿರ್ದಡೆ
ಕೂಡಲ ಚನ್ನಸಂಗಮದೇವ ಅಘೋರನರಕದಲ್ಲಿಕ್ಕುವ"[೫]

—ಚೆನ್ನಬಸವಣ್ಣ

೬. "ಕೋಡುಗಳಲ್ಲಿನ ಮೇಲೆ ಮಾಡುವ ತಪವು, ಒಂದು ದಿನದ
ಗುರುಸೇವೆಗೆ ಸರಿಯಲ್ಲ,
ಅನಂತಕಾಲ ಮಾಡುವ ಗುರುಸೇವೆಯು, ಒಂದು ದಿನದ
ಲಿಂಗಪೂಜೆಗೆ ಸರಿಯಲ್ಲ,
ಅನಂತಕಾಲ ಮಾಡುವ ಲಿಂಗಪೂಜೆಯು, ಒಂದು ದಿನ ಬಡಿಸಿದ
ಜಂಗಮ ತೃಪ್ತಿಗೆ ಸರಿಯಲ್ಲ,
ಅನಂತಕಾಲ ಬಡಿಸಿದ ಜಂಗಮ ತೃಪ್ತಿಯು, ಒಂದು ಕ್ಷಣದ ನಿಮ್ಮ
ಶರಣರ ಅನುಭಾವಕ್ಕೆ ಸರಿಯಲ್ಲ ಕಾಣಾ,
ಕೂಡಲ ಚನ್ನಸಂಗಮದೇವ"[೬]

—ಚೆನ್ನಬಸವಣ್ಣ

೭. "ಮಂಡೆ ಮಾಸಿದಡೆ ಮಹಾಮಜ್ಜನವ ಮಾಡುವದು
ವಸ್ತ್ರ ಮಾಸಿದಡೆ ಮಡಿವಾಳಗಿಕ್ಕುವುದು,
ಮನದ ಮೈಲಿಗೆ ತೊಳೆಯಬೇಕಾದರೆ,
ಕೂಡಲಚನ್ನಸಂಗಯ್ಯನ ಶರಣರ ಅನುಭಾವವ ಮಾಡುವುದು"[೭]

—ಚೆನ್ನಬಸವಣ್ಣ

೮. "ಅನುಭಾವದಿಂದ ಹುಟ್ಟಿತ್ತು ಲಿಂಗ, ಅನುಭಾವದಿಂದ
ಹುಟ್ಟಿತ್ತು ಜಂಗಮ,
ಅನುಭಾವದಿಂದ ಹುಟ್ಟಿತ್ತು ಪ್ರಸಾದ,
ಅನುಭಾವದನುವಿನಲ್ಲಿ ಗುಹೇಶ್ವರಲಿಂಗವನುಪಮಸುಖಿ"[೮]

—ಪ್ರಭುದೇವ

೯. "ಬಸವಣ್ಣ ನಿನ್ನ ಕಂಡು ಎನ್ನ ತನು ಬಯಲಾಯಿತ್ತು...
"ಬಸವಣ್ಣ ನಿನ್ನ ಮಹಾನುಭಾವವ ಕೇಳಿ ಕೇಳಿ

ಎನ್ನ ಭವಂ ನಾಸ್ತಿಯಾಯಿತ್ತು...
ನಿನ್ನ ಸನ್ನಿಧಿಯಿಂದಾನು ಬದುಕಿದೆನು ಕಾಣಾ ಬಸವಣ್ಣ"೯

—ಪ್ರಭುದೇವ

೧೦. "ಮರ ಮರ ಮಥನಿಸಿ ಕಿಚ್ಚು ಹುಟ್ಟಿ ಸುತ್ತಣ ತರುಮರಾದಿಗಳ ಸುಡಲಾಯಿತ್ತು,
ಆತ್ಮ ಆತ್ಮ ಮಥನಿಸಿ ಅನುಭಾವ ಹುಟ್ಟಿ ಹೊತ್ತಿರ್ದ ತನುಗುಣಾಧಿಗಳ ಸುಡಲಾಯಿತ್ತು,
ಇಂತಪ್ಪ ಅನುಭಾವರ ಅನುಭಾವದ ತೋರಿ,
ಎನ್ನ ಒಡಲಸುಹಿಕೊಳ್ಳಾ ಚನ್ನಮಲ್ಲಿಕಾರ್ಜುನಾ"೧೦

—ಅಕ್ಕಮಹಾದೇವಿ

೧೧. "ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ತನು ಶುದ್ಧವಾಯ್ತು
ಅಯ್ಯಾ ನಿಮ್ಮ ಅನುಭಾವಿಗಳು ಎನ್ನ ಒರೆದೊರೆದು ಅಗುಮಾಡಿದ ಕಾರಣ,
ಚನ್ನಮಲ್ಲಿಕಾರ್ಜುನಯ್ಯಾ ನಿಮಗಾನು ತೊಡಿಗೆಯಾದೆನು"೧೧

—ಅಕ್ಕಮಹಾದೇವಿ

ಈ ಎಲ್ಲ ವಚನಗಳು ಅನುಭಾವದ ಮಹತಿ ಶರಣರ ಮನಕ್ಕೆ ಬಹುವಾಗಿ ವೇಧಿಸಿದುದರ ದ್ಯೋತಕಗಳಾಗಿವೆ. ವೀರಶೈವದ ಜೀವನಾಡಿಗಳೆನಿಸಿದ ಗುರು ಲಿಂಗ ಜಂಗಮ ಪ್ರಸಾದಗಳು ಸಾರ್ಥಕತೆ ಪಡೆಯುವುದು ಅನುಭಾವದಿಂದ. ಅವುಗಳ ಹುಟ್ಟೇ ಅನುಭಾವದಲ್ಲಿ ಶರಣರೊಡತಣ ಅನುಭಾವದಿಂದ ತನುಶುದ್ಧ ಮನಶುದ್ಧ ಭವಂ ನಾಸ್ತಿ. ಅನಂತಕಾಲದ ಜಪ, ಗುರುಸೇವೆ, ಲಿಂಗಪೂಜೆ, ಜಂಗಮತೃಪ್ತಿಗಳು ಒಂದು ಕ್ಷಣದ ಶರಣರ ಅನುಭವಕ್ಕೆ ಸರಿಯಲ್ಲ, ಹೀಗೆ ಅನುಭಾವದ ಹಿರಿಮೆಗರಿಮೆಗಳ ಕೊಂಡಾಟ ಈ ವಚನಗಳುದ್ದಕ್ಕೂ ಹರಿದು ಬಂದಿದೆ. ಜೊತೆಗೆ ಅನುಭಾವದ ಪ್ರಸಂಗಗಳು ಹೇಗೆ ನಡೆಯುತ್ತಿದ್ದವೆಂಬುದರ ಸೂಚನೆಯೂ ಇಲ್ಲಿದೆ, "ಅನುಭಾವವುಳ್ಳವರ ಕಂಡು ತೂರ್ಯಾತ್ತೂರ್ಯ ಸಂಭಾಷಣೆಯ ಮಾಡದಿರ್ದಡೆ", "ಅನುಭಾವವ ಮಾಡುವಲ್ಲಿ ವಿನಯದಿಂದ ಕೇಳದಿರ್ದಡೆ" ಎಂಬಂತಹ ಮಾತುಗಳು, ಅನುಭಾವ ಮಾಡುವಾಗ ವಿನಯಪೂರ್ವಕ ಕೇಳುವಿಕೆ ಮತ್ತು ತೂರ್ಯಾತ್ತೂರ್ಯ ಸಂಭಾಷಣೆ-ಸಂವಾದಗಳು ನಡೆಯುತ್ತಿದ್ದವೆಂಬುದನ್ನು ಸೂಚಿಸುತ್ತವೆ. ಆತ್ಮ ಆತ್ಮ ಮಥನಿಸಿದಾಗ ಅನುಭಾವ ಹುಟ್ಟುತ್ತದೆಂಬ ಮಹಾದೇವಿಯಕ್ಕನ ಮಾತು ಸಂಭಾಷಣೆಯ ಗುರುತತ್ವದತ್ತ ಬೆರಳು ತೋರಿಸುತ್ತದೆ.

"ಮಹಾನುಭಾವಿಗಳು ಮನದೆರೆದು ಮಾತನಾಡಿದರೆ ಅನುಭಾವದೊಳಗುಳ್ಳ ಪ್ರಯೋಗವನಾ ಕ್ಷಣವೆ ಪ್ರಯೋಗಿಸಬೇಕು"[೧೨] ಎಂದು ಚೆನ್ನಬಸವಣ್ಣ ಮತ್ತೊಂದೆಡೆ ಹೇಳಿರುವ ಮಾತನ್ನು ಗಮನಿಸಬೇಕು. ಮಹಾನುಭಾವಿಗಳು ಹೇಳಿದ ಅನುಭಾವಗಳನ್ನು ಪ್ರಯೋಗಿಸಿ ನೋಡಬೇಕೆಂಬುದು ಅತ್ಯಂತ ಮಹತ್ವ ಪೂರ್ಣವಾದುದು. ಹಾಗಾದಾಗಲೇ ಅವರ ಸತ್ಯತೆ ಮನದಟ್ಟಾಗುವುದು. ಅನುಭಾವ ನಡೆದಾಗ ಸಾಧಕನ ಮನವನ್ನು ಒರೆದೊರೆದು ನೋಡುತ್ತಿದ್ದರೆಂಬುದು "ಅಯ್ಯಾ ನಿಮ್ಮ ಅನುಭಾವಿಗಳು ಎನ್ನ ಒರೆದೊರೆದು ಆಗು ಮಾಡಿದ ಕಾರಣ...ನಿಮಗಾನು ತೊಡಿಗೆಯಾದೆನು" ಎಂಬ ಮಹಾದೇವಿಯಕ್ಕನ ಹೇಳಿಕೆಯಿಂದ ತಿಳಿದು ಬರುತ್ತದೆ. ಇದು ಅಂದಿನ ಶರಣರ ಅನುಭಾವ ಪ್ರಸಂಗಗಳ ಸ್ಥೂಲ ರೂಪ ರೇಖೆ, ಅನುಭಾವಗಳ ವಿನಿಮಯ, ಪ್ರಯೋಗಗಳ ಮೂಲಕ ಅವುಗಳ ಸತ್ಯಾಸತ್ಯತೆಯ ನಿಷ್ಕರ್ಷೆ, ತದನಂತರ ಅವುಗಳ ಪರಾಮರ್ಶೆ ಇವೆಲ್ಲಕ್ಕೂ ಅಲ್ಲಿ ಅಸ್ಪದವಿತ್ತು, ಮುಕ್ತಮನಸ್ಸಿನ ಚರ್ಚೆಯೂ ನಡೆಯುತ್ತಿತ್ತು.

ಹೀಗೆ ಶರಣರು ಒಂದೆಡೆ ಸೇರಿ ನಡೆಸುತ್ತಿದ್ದ ಅನುಭಾವದ ಪ್ರಸಂಗಗಳನ್ನೇ 'ಅನುಭಾವಗೋಷ್ಠಿ' 'ತತ್ವಗೋಷ್ಠಿ' 'ಶಿವತತ್ವಗೋಷ್ಠಿ' 'ಗೀತಗೋಷ್ಠಿ' 'ಧರ್ಮ ಗೋಷ್ಠಿ' ಮುಂತಾದ ಹೆಸರುಗಳಿಂದ ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ಕರೆಯಲಾಗಿದೆ. ಇಂತಹ ಗೋಷ್ಠಿಗಳು ನಡೆಯುತ್ತಿದ್ದ ಸ್ಥಳಗಳನ್ನೇ 'ಅನುಭವ ಮಂಟಪ' ಎಂದು ಕರೆಯುವುದು ಬಹುದಿನಗಳಿಂದ ರೂಢಿಯಲ್ಲಿದೆ.

ಅನುಭಾವದ ಮಾಹತಿಯನ್ನು ಮನಗಂಡ ಬಸವಣ್ಣನವರು ಮಹಾನು ಭಾವಿಗಳ ಅನುಭಾವಕ್ಕಾಗಿ 'ಅನುಭವ ಮಂಟಪ'ವನ್ನು ಸ್ಥಾಪಿಸಿದುದಕ್ಕೆ ನೀಲಮ್ಮನ ಒಂದು ವಚನ ಸಾಕ್ಷಿಯಾಗಿದೆ. "ಆದಿಯಾಧಾರವಿಲ್ಲದಂದು" ಎಂದು ಆರಂಭವಾಗುವ ಆ ಸುದೀರ್ಘ ವಚನದಲ್ಲಿ "......ಚನ್ನಬಸವನೆಂಬ ಪ್ರಸಾದಿಯ ಪಡೆದು ಅನುಭವಮಂಟಪವನನು ಮಾಡಿ ಅನುಭವಮೂರ್ತಿಯಾದ ನಮ್ಮ ಬಸವಯ್ಯನು...ಏಳು ನೂರೆಪ್ಪತ್ತು ಅಮರಗಣಂಗಳ ಅನುಭವಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು......ಸಂಗಯ್ಯನಲ್ಲಿ ಸ್ವಯಲಿಂಗಿಯಾದ ನಮ್ಮ ಬಸವಯ್ಯನು"[೧೩] ಎಂದು ಬರುತ್ತದೆ. ಈ ಮಹತ್ವಪೂರ್ಣ ವಚನ ನಾಲ್ಕು ತಾಳೆಗರಿ ಪ್ರತಿಗಳಲ್ಲಿ ಇರುವುದಾಗಿ ಅದರ ಸಂಪಾದಕರು ಸೂಚಿಸಿರು ವುದರಿಂದ ಇದನ್ನು ಪ್ರಕ್ಷಿಪ್ತವೆಂದು ಸುಲಭವಾಗಿ ತಳ್ಳಿಹಾಕಲು ಬರುವುದಿಲ್ಲ.

ಸಿಂಗಿರಾಜ ಪುರಾಣದಲ್ಲಿ ಬರುವ "...ಜಂಗಮಲಿಂಗವಾಕರುಪಣದ ಮಹಾ ಮಂಟಪಸ್ಥಳವ ಸ್ಥಳಗೊಳಿಸಿಪ್ಪನು...." ಹರಗಣಂಗಳು ಮರ್ತ್ಯಕವತರಿಸಿದಂತೆ ......ಬರತೊಡಗಿತಾ ಗಣ ಸಮೂಹ ಮಂಟಪಕೆ......ಮಹೇಶಕುಲವು"[೧೪] ಎಂಬಂತಹ ಮಾತುಗಳನ್ನು ನೋಡಿದಾಗ, ಅನುಭವಮಂಟಪವನ್ನೇ ಕವಿ ಇಲ್ಲಿ

'ಮಹಾಮಂಟಪಸ್ಥಳ' 'ಗಣಸಮೂಹಮಂಟಪ' ಎಂದು ಕರೆದಿರುವುದು ವಿದಿತವಾಗುತ್ತದೆ.

ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣದಲ್ಲಿ ಒಂದೆಡೆ "ಸದ್ಭಕ್ತಸಂತತಿ ನೆರೆಸಿ **ಶಿವತತ್ವಗೋಷ್ಠಿಯಿಂದೆ**"...."ಚೆನ್ನಬಸವಂ ಸುಖದೊಳಿರುತಿರ್ದನು"೧೫ ಎಂದು ಬಂದರೆ, ಇನ್ನೊಂದೆಡೆ ತಾನು ಕಂಡ ಕನಸನ್ನು ಬಸವಾದಿಗಳಿಗೆ ಸಾದ್ಯಂತವಾಗಿ ತಿಳಿಸಲು ನಾಗಲಾಂಬಿಕೆಯು "ಬೇಗಂ **ಅನುಭವ ಮಂಟಪಕೆ**" ಬಂದು "ಸವಿಸ್ತರವಾಗೆ ವಿರಚಿಸಿದಳು"೧೭ ಎಂದು ಸ್ಪಷ್ಟವಾಗಿ ಅನುಭವ ಮಂಟಪದ ಉಲ್ಲೇಖ ಬರುತ್ತದೆ. ಹರೀಶ್ವರನ ಪ್ರಭುದೇವರ ಪುರಾಣದಲ್ಲಿ ಕೂಡ "...... ಷಟ್ ತ್ರಿಂಶ ಪ್ರಣಮುದ ಬಸವರಾಜನನುಭವಮಂಟಪ"೧೬ ಎಂದು ಬರುತ್ತದೆ.

ಹರಿಹರದೇವನ ಬಸವರಾಜದೇವರ ರಗಳೆಯಲ್ಲಿ, ಬಸವಣ್ಣನವರು ದೂರ ದೂರದಿಂದ ಬಂದ ಮಾಹೇಶ್ವರರನ್ನು ಸಂಭ್ರಮದಿಂದ ಸ್ವಾಗತಿಸಿ, "ಚರಣಂಗಳಂ ತೊಳೆದು, ಸಂಗಡದೊಳು ಲಿಂಗಾರ್ಚನೆಯುಂ ಮಾಡಿ, ಪ್ರಸಾದಭರಿತ ಪ್ರಮೋದ ಹೃದಯರಾಗುತಂ, ಅಂದಿನದಿನದಲವರಂ ಪಿಂಗಲಾರದೆ ಪುರಾತನರ **ಗೀತಗೋಷ್ಠಿರಸ** ತರಂಗಿಣಿಯೊಳು ಪೆಳಗಪ್ಪನ್ನಂ" ಈಸಾಡಿದರೆಂದೂ ಅದೇ ರೀತಿ ''ನಿಚ್ಚಂ ಶಿವರಾತ್ರಿಯಂ ಮಾಳ್ಪ'' ನೇಮವನ್ನು ಕೈಕೊಂಡರೆಂದೂ ಹೇಳಿದೆ.೧೮ "ಶರಣರೊಳು **ಸದ್ಗೋಷ್ಠಿಯಿಂದಿರ್ದು**"೧೮(ಅ) ಎಂದು ಮತ್ತೊಂದೆಡೆ ಬಂದಿದೆ.

ತನ್ನನ್ನು ಕಾಣಲು ಬಂದ ಕಿನ್ನರಿಬೊಮ್ಮಯ್ಯನನ್ನು ಬಸವಣ್ಣನವರು ಉಚಿತ ಸತ್ಕ್ರಿಯಾದಿಗಳಿಂ ಪ್ರಯಂಬಡಿಸಿ......ಆ ಅಯ್ಯನ ಪಾದೋದಕಮಂ ಪ್ರಸಾದಮಂ ಅನುಭವಿಸುತುಂ" **ತತ್ವಗೋಷ್ಠಿಯೊಳು** ಇದ್ದರೆಂದು ಭೀಮಕವಿಯ ಬಸವಪುರಾಣ ತಿಳಿಸುತ್ತದೆ.೧೯ ಬಸವನ ಅರಮನೆಯಲ್ಲಿ **ಶಿವತತ್ವಗೋಷ್ಠಿ ನಿನದವೂ, ಸ್ವಾನುಭವಪ್ರಘೋಷಣವೂ** ಕೇಳಿಬರುತ್ತಿದ್ದರೆಂದು ಅದು ಹೇಳುತ್ತದೆ. **ಕೂಡಲಸಂಗಮೇಶನ ಭವನಮಂಟಪದೊಳಗೆ** ವಿವಿಧ ಭಕ್ತರುವೆರಸಿ ಬಸವಣ್ಣನವರು ಒಡ್ಡೋಲಗವಿತ್ತುದರ ಉಲ್ಲೇಖವೂ ಬಸವಪುರಾಣದಲ್ಲಿ ಬರುತ್ತದೆ.೨೦

ಹಡಪದ ರೇಚಣ್ಣನ ಸುದೀರ್ಘವಾದ ಕಾಲಜ್ಞಾನ ವಚನವೊಂದರಲ್ಲಿ, ಕಲ್ಯಾಣದಲ್ಲಿದ್ದ ಚರಮಂಟಪ, ಆರಾಧ್ಯಮಂಟಪ, ಪರಮಾನಂದಪ್ರಕಾಶ ಮಂಟಪ, ಇತ್ಯಾದಿ ಬೇರೆ ಬೇರೆ ಮಂಟಪಗಳ ಉಲ್ಲೇಖ ಬರುತ್ತಿದ್ದು ಅವುಗಳಲ್ಲಿ ಆಚಾರ ಸಂಪನ್ನರ **ಅನುಭವ ಮಂಟಪವೂ** ಒಂದು.೨೧

ಹೀಗೆ ನೀಲಮ್ಮನ ವಚನ, ಹಡಪದ ರೇಚಣ್ಣನ ಕಾಲಜ್ಞಾನವಚನ, ಚನ್ನಬಸವಪುರಾಣ, ಹರೀಶ್ವರನ ಪ್ರಭುದೇವರ ಪುರಾಣ ಮೊದಲಾದವುಗಳಲ್ಲಿ 'ಅನುಭವ ಮಂಟಪ' ಎಂದು ಸ್ಪಷ್ಟವಾಗಿ ಹೇಳಿದ್ದರೆ, ಉಳಿದ ಕೃತಿಗಳು ಅದನ್ನೇ

'ಮಹಾಮಂಟಪಸ್ಥಳ' 'ಗಣಸಮೂಹಮಂಟಪ' 'ಮಹಮನೆ' 'ಕೂಡಲಸಂಗಮೇಶನ ಭವನಮಂಟಪ' 'ಒಡ್ಡೋಲಗ' ಇತ್ಯಾದಿ ಬೇರೆ ಬೇರೆ ಹೆಸರುಗಳಿಂದ ಸೂಚ್ಯವಾಗಿ ತಿಳಿಸಿರುವುದನ್ನು ಕಾಣುತ್ತೇವೆ.

"ತನ್ನರಮನೆಯೊಳು........ಮಹಾಮಂಟಪಸ್ಥಳವ ಸ್ಥಳಗೊಳಿಸಿಪ್ಪ" ೨೨ "ಬಸವಣ್ಣನ ವರಗೃಹಾಂತಸ್ಥದನುಭವ ಮಂಟಪದೊಳು" ೨೩ ಇತ್ಯಾದಿ ಹೇಳಿಕೆಗಳನ್ನು ನೋಡಿದಾಗ, ಮತ್ತು ಪುರಾತನರ ಗೀತಗೋಷ್ಠಿರಸತರಂಗಿಣಿಯಲ್ಲಿ ಮುಳುಗಿ ಏಳುತ್ತಿದ್ದ ಸನ್ನಿವೇಶದ ವರ್ಣನೆಯನ್ನು ಹರಿಹರನ ಬಸವರಾಜದೇವರ ರಗಳೆಯಲ್ಲಿ ಓದಿದಾಗ, ಅನುಭವಮಂಟಪ ಬಸವಣ್ಣನವರ ಅರಮನೆ ಅಥವಾ ಮಹಾಮನೆಯಲ್ಲಿಯೆ ಇತ್ತೆಂಬ ಅಭಿಪ್ರಾಯ ಮೂಡುತ್ತದೆ. ಬೇರೆಡೆಯಲ್ಲಿರುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗುವುದಿಲ್ಲ. ಕಲ್ಯಾಣದಲ್ಲಿ ಈಗಲೂ ಜನರು ಅನುಭವಮಂಟಪವಿದ್ದ ಸ್ಥಳವನ್ನು ತೋರಿಸುತ್ತಾರೆ.

ಒಟ್ಟಿನಲ್ಲಿ, ಅನುಭಾವಕ್ಕೆ ಪ್ರಾಧಾನ್ಯವಿತ್ತ ಬಸವಣ್ಣನವರು, ಅಧ್ಯಾತ್ಮಿಕ ವಿಚಾರಗಳ ವಿನಿಮಯ, ಅವುಗಳ ಮಥನಕ್ಕಾಗಿ ಅನುಭಾವಗೋಷ್ಠಿಗಳನ್ನು ಏರ್ಪಡಿಸುತ್ತಿದ್ದು ಅವುಗಳಲ್ಲಿ ಉಳಿದ ಶರಣರ ಜೊತೆ ತಾವೂ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ತಾತ್ವಿಕ ಸಮಸ್ಯೆಗಳ ಜೊತೆಗೆ ಸಾಮಾಜಿಕ ಸಮಸ್ಯೆಗಳನ್ನೂ ಕುರಿತು ಬಿಚ್ಚು ಮನಸ್ಸಿನ ಚರ್ಚೆ ಅಲ್ಲಿ ನಡೆಯುತ್ತಿತ್ತು. ಇದೆಲ್ಲ ಸುವ್ಯವಸ್ಥಿತ ರೀತಿಯಲ್ಲಿ ನಡೆಯುವುದಕ್ಕಾಗಿ ಬಸವಣ್ಣನವರು ಕಲ್ಯಾಣದಲ್ಲಿ ಒಂದು ನಿರ್ದಿಷ್ಟ ಸ್ಥಳವನ್ನು ಗೊತ್ತುಪಡಿಸಿರಬೇಕು. ಅದೇ ಅನುಭವಮಂಟಪ. ಅದು ಬಹುಶಃ ಬಸವಣ್ಣನವರ ಮನೆಯಲ್ಲೇ ಇದ್ದಿರಬೇಕು.

ಕಲವರುಷಗಳ ಹಿಂದೆ ಅನುಭವ ಮಂಟಪದ ಅಸ್ತಿತ್ವ ಮತ್ತು ಐತಿಹಾಸಿಕತೆಯು ಬಗೆಗೆ ಪಂಡಿತರಲ್ಲಿ ವಾದವಿವಾದಗಳು ನಡೆದು ಸಂಶೋಧಕರ ಚಿತ್ತವನ್ನು ಕೆರಳಿಸಿದ್ದವು.೨೪ ಈಗ ಅದರ ಕಾವು ಬಹುಮಟ್ಟಿಗೆ ತಗ್ಗಿದೆ. ಬಸವಣ್ಣನವರು ಅನುಭಾವಗೋಷ್ಠಿಗಳನ್ನು ನಡೆಸುತ್ತಿದ್ದರೆಂದು ಒಪ್ಪುವವರು, ಅನುಭವಮಂಟಪದ ಅಸ್ತಿತ್ವವನ್ನು ಒಪ್ಪಿದಂತೆಯೇ ಎಂದು ನನ್ನ ಅನಿಸಿಕೆ.

(೨)

ಅನುಭಾವಗೋಷ್ಠಿಗಳು ಸುವ್ಯವಸ್ಥಿತ ರೀತಿಯಲ್ಲಿ ನಡೆಯುವ ಉದ್ದೇಶದಿಂದ ಅನುಭವಮಂಟಪದಂತಹ ಒಂದು ಸಂಸ್ಥೆಯನ್ನು ಸ್ಥಾಪಿಸಲು ಬಸವಣ್ಣನವರಿಗೆ ಒದಗಿರಬಹುದಾದ ಪ್ರೇರಣೆಗಳನ್ನು ಕುರಿತು ಇನ್ನು ಪರಿಶೀಲಿಸಬಹುದು.

ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಗ್ರೀಕರ ಕಾಲದ ಅರಿಸ್ಟಾಟಲ್‌ನ 'ಲಿಸಿಯಮ್' ಜನಕರಾಯನ ಕಾಲದ 'ಉಪನಿಷದಾರಾಮ', ಅಶೋಕನ ಧರ್ಮ

ಜಿಜ್ಞಾಸೆಯ ಸಭೆ, ಮತ್ತು ತಮಿಳರ ಸಂಘಮ್ ಇತ್ಯಾದಿಗಳಲ್ಲಿ ಧಾರ್ಮಿಕ ಚರ್ಚೆ ನಡೆಯುತ್ತಿತ್ತೆಂದು ತಿಳಿದುಬರುತ್ತದೆ. ಇವುಗಳಲ್ಲಿ ಅರಿಸ್ಟಾಟಲನ ಲಿಸಿಯುಮ್ ಬಗ್ಗೆ ಬಸವಣ್ಣನವರಿಗೆ ತಿಳಿದಿತ್ತೆಂದು ಹೇಳುವುದು ಸಾಧ್ಯವಿಲ್ಲ. ಭಾರತದಲ್ಲಿಯೆ ಇದ್ದ ಉಳಿದವುಗಳ ಬಗೆಗೆ ಅವರು ಓದಿ ಅಥವಾ ಕೇಳಿ ತಿಳಿದಿರಬಹುದಾದ ಸಾಧ್ಯತೆ ಇದೆ. ಆದರೆ ಅವುಗಳಿಂದಲೆ ಬಸವಣ್ಣನವರಿಗೆ ಪ್ರೇರಣೆ ದೊರೆಯಿತ್ತೆಂದು ಹೇಳುವುದು ಕಷ್ಟ. ಏಕೆಂದರೆ ಅವುಗಳಲ್ಲಿ ಜ್ಞಾನಕ್ಕೆ ಪ್ರಾಧಾನ್ಯವಿದ್ದುದಾಗಿ ತಿಳಿದುಬರುತ್ತದೆ. ಅನುಭವಮಂಟಪದಲ್ಲಿ ಶರಣರು ಕ್ರಿಯೆಜ್ಞಾನಗಳ ಸಮನ್ವಯಕ್ಕೆ ಒತ್ತು ಕೊಟ್ಟಿರುವುದು ವಿದಿತ. ಅಲ್ಲದೆ ಅಲ್ಲಿ ನಡೆಯುತ್ತಿದ್ದ ಚರ್ಚೆಗಳು ಹೆಚ್ಚಾಗಿ ಒಬ್ಬ ವ್ಯಕ್ತಿಯನ್ನೆ ಅವಲಂಬಿಸಿರುತ್ತಿದ್ದವು. ಅನುಭವಮಂಟಪದಲ್ಲಾದರೊ ಜೀವನದ ವಿವಿಧ ರಂಗಗಳಿಂದ ಸಮಾಜದ ವಿವಿಧ ಸ್ತರಗಳಿಂದ ಬಂದ ಹಲವಾರು ವ್ಯಕ್ತಿಗಳ ಅನುಭವಗಳನ್ನವಲಂಬಿಸಿ ಆ ಬಗ್ಗೆ ಚರ್ಚೆಗಳು ನಡೆಯುತ್ತಿದ್ದವು. ಇದನ್ನು ಗಮನಿಸಿದಾಗ, ಬಸವಣ್ಣನವರಿಗೆ ಅವುಗಳಿಂದ ಪ್ರೇರಣೆ ದೊರೆತಿರಬಹುದೆಂಬುವಾದವನ್ನು ಕೆಲಮಟ್ಟಿಗೆ ಒಪ್ಪಬಹುದಾದರೂ, ಅದು ಅತ್ಯಲ್ಪವೆಂದು ತಿಳಿಯಬೇಕಾಗುತ್ತದೆ.

ಇನ್ನು ಬಸವಣ್ಣನವರ ಕಾರ್ಯಕ್ಷೇತ್ರವಾದ ಕನ್ನಡನಾಡಿನಲ್ಲಿಯೆ ಅವರ ಕಾರ್ಯಕ್ಕೆ ಪ್ರೇರಣೆಗಳು ದೊರೆತವೆ? ಎಂಬುದು ವಿಚಾರಣೀಯ ಅಂಶ. ಕೊಂಡಗುಳಿಕೇಶಿರಾಜ—ತೆಲುಗು ಜೊಮ್ಮಯ್ಯ, ಶಂಕರದಾಸಿಮಯ್ಯ—ಜೇಡರದಾಸಿಮಯ್ಯ ಇವರು ಶಿವಗೋಷ್ಠಿಗಳನ್ನು ನಡೆಸುತ್ತಿದ್ದ ಬಗ್ಗೆ ಅವರನ್ನು ಕುರಿತು ರಚಿಸಿರುವ ಹರಿಹರದೇವನ ರಗಳೆಗಳಿಂದ ತಿಳಿದುಬರುತ್ತದೆ.

ಕೇಶಿರಾಜದಣ್ಣಾಯಕನಿಗೆ ಶರಣರೊಡತಣ ಸುಖ ಶರಣರೊಡತಣ ಲೀಲೆ ಮತ್ತು ಅವರೊಡನೆ ಬೆರೆತು ಶಿವಗೋಷ್ಠಿ ಮಾಡುವುದೆಂದರೆ ಬಲುಹಿಗ್ಗು. ಆಗ ಅವನಿಗೆ ಹೊರಗಣ ಪ್ರಜ್ಞೆಯೇ ಇರುತ್ತಿರಲಿಲ್ಲ. ಅಂತಹ ಒಂದು ಸಂದರ್ಭದಲ್ಲಿ ಪೆರ್ಮಾಡಿದೊರೆ ಕಾರ್ಯನಿಮಿತ್ತ ಕೇಶಿರಾಜನಿಗೆ ಹೇಳಿಕಳಿಸಿದಾಗ "**ಶರಣರೊಡತಣಗೋಷ್ಠಿಗೆ**" ಭಂಗಬಂದುದಕ್ಕೆ ಅವನು ಪರಿತಪಿಸಿದ ಚಿತ್ರಣ ಹರಿಹರನ 'ಕೇಶಿರಾಜ ದಣ್ಣಾಯಕರ ರಗಳೆ'ಯಲ್ಲಿ ಬಂದಿದೆ.[೨೫] ಮುಂದೆ ಅವನು ಕೀಳುಕುಲದ ತೆಲಗು ಜೊಮ್ಮಯ್ಯನೊಡನೆ "ಮನಪ್ರಕ್ಕಿ **ಶಿವಗೋಷ್ಠಿಯೊಳಗಿರ್ದು** ಪರಮಸುಖಮುಂದಾಳ್ದಂತೆ"[೨೬] ಅದೇ ರಗಳೆಯಲ್ಲಿ ಹೇಳಿದೆ. ತೆಲುಗು ಜೊಮ್ಮಯ್ಯನ ರಗಳೆಯಲ್ಲಿ ಈ ವಿಷಯ ಬರುತ್ತದೆ.[೨೭]

ಶಂಕರದಾಸಿಮಯ್ಯ ಮುದನೂರಿಗೆ ಬಂದು ಅಲ್ಲಿಯ ರಾಮನಾಥ ದೇವಾಲಯದಲ್ಲಿ ತಂಗಿದ್ದಾಗ ಅವನನ್ನು ಕಾಣಲು ಜೇಡರದಾಸಿಮಯ್ಯ ಬಂದು

"ಶಿವಕಥಾಗೋಷ್ಠಿಯಿಂಕಿರಿದು ಪೊಳ್ತಂ ಕಳಿದು" ಹರ್ಷಚಿತ್ತನಾದಂತೆ ಶಂಕರದಾಸಿಮಯ್ಯನ ರಗಳೆಯಲ್ಲಿ ಬಂದಿದೆ.[೨೮]

ಬಾಹೂರು ಬೊಮ್ಮಯ್ಯನನ್ನು ಹರಿಹರದೇವ **"ಜಂಗಮಪ್ರಕರದ ಸಂಗಡ ಸುಖಂ ಪಿಂಗದ ಲಿಂಗಸ್ನೇಹಿ"** ಎಂದು ಬಣ್ಣಿಸಿರುವನಲ್ಲದೆ, **"ಸತ್ಯಶರಣರ ಸೂಳ್ನುಡಿ"**[೨೯] ಅವನ ಕಿವಿಯ ಸವಿಯೆಂದು ಅವನನ್ನು ಕುರಿತ ರಗಳೆಯಲ್ಲಿ ಹೇಳಿದ್ದಾನೆ. ಹರಿಹರನ ಪ್ರಕಾರ, ಸಿದ್ಧಕುಲ ಚಕ್ರವರ್ತಿ ಲಾಕುಳದ ಲಾಕ್ಷಣಿಕನಾದ ರೇವಣಸಿದ್ಧನೂ ಅಗಸ್ತ್ಯನ ಕೂಡೆ **"ಶಿವಭಕ್ತಿಗೋಷ್ಠಿಯೊಳು"** ನಿಂದವ.[೩೦]

ಏಕಾಂತದ ರಾಮಯ್ಯನನ್ನು ಕುರಿತ ಅಬ್ಬಲೂರು "ಒಂದು ದೆವಸಂ **ಧರ್ಮಗೋಷ್ಠಿಯೊಳಿರ್ದು** ಪುರಾತನನೂತನರಪ್ಪ ಶಿವಭಕ್ತರ ಗುಣಸ್ತವನಂ ಮಾಡುತ್ತಮಿರ್ದೇಕಾನ್ತದ ರಾಮಯ್ಯಂಗಳಬಲೂರಲಿದ್ದಲ್ಲಿ"[೩೧] ಎಂಬ ಮಾತು ಬರುತ್ತದೆ. ಇಲ್ಲಿ ಬರುವ 'ಧರ್ಮಗೋಷ್ಠಿ' ಪದವನ್ನು ಗಮನಿಸಬೇಕು. ಏಕಾಂತದ ರಾಮಯ್ಯನೂ ಧರ್ಮಗೋಷ್ಠಿ ನಡೆಸುತ್ತಿದ್ದುದನ್ನು ಇದು ಸೂಚಿಸುತ್ತದೆ. ಈ ಶಾಸನದ ಕಾಲ ಸು.ಕ್ರಿ.ಶ. ೧೨೦೦ ಎಂದು ಅದರ ಸಂಪಾದಕರು ತಿಳಿಸಿದ್ದಾರೆ.

ಬಸವಣ್ಣನವರಿಗಿಂತ ಈಚಿನವನಾಗಿರಬಹುದಾದ ಏಕಾಂತದ ರಾಮಯ್ಯನನ್ನು ಬಿಟ್ಟರೂ ಕೇಶಿರಾಜ–ಜೋಮ್ಮಯ್ಯ, ರೇವಣಸಿದ್ಧ, ಶಂಕರದಾಸಿಮಯ್ಯ ಜೇಡರದಾಸಿಮಯ್ಯ ಇವರೆಲ್ಲ ಶಿವಗೋಷ್ಠಿತತ್ಪರರಾಗಿರುತ್ತಿದ್ದರೆಂದು ಹರಿಹರನು ಹೇಳಿರುವುದು ವಿಚಾರಣೀಯವಾಗಿವೆ. ಇವರಲ್ಲಿ ಕೆಲವರು ಬಸವನಗಿಂತ ಪೂರ್ವದವರು, ಕೆಲವರು ಬಹುಶಃ ಅವರ ಹಿರಿಯ ಸಮಕಾಲೀನರು. ತೆಲುಗು ಬೊಮ್ಮಯ್ಯ ಜೇಡರದಾಸಿಮಯ್ಯ ಇವರನ್ನು ಬಸವಣ್ಣನವರು ತಮ್ಮ ವಚನಗಳಲ್ಲಿ ಉಲ್ಲೇಖಿಸಿಯೂ ಇದ್ದಾರೆ.[೩೨] ಬಸವಣ್ಣನವರ ಅನಂತರ ಬಂದ ಹರಿಹರನ ಈ ಹೇಳಿಕೆಗಳನ್ನು ನಂಬಬೇಕೆ? ಎಂಬ ಪ್ರಶ್ನೆ ಕೆಲವರಲ್ಲಿ ತಲೆದೋರಬಹುದು. ತನ್ನ ಪುರಾತನರ ರಗಳೆಗಳಲ್ಲಿ ಶಿವಗೋಷ್ಠಿಗಳ ಮಾತನ್ನೆತ್ತದ ಹರಿಹರದೇವ ಈ ರಗಳೆಗಳಲ್ಲಿ ಅವುಗಳ ಬಗಗೆ ಹೇಳಿರುವುದು ಗಮನಿಸಬೇಕಾದ ಅಂಶ. ಶರಣರು ಅಂತಹ ಗೋಷ್ಠಿಗಳನ್ನು ನಡೆಸುತ್ತಿದ್ದುದು ಅವನಿಗೆ ಖಚಿತವಾದ ಮೇಲೆಯೇ ಅವರ ಚರಿತ್ರೆಯನ್ನು ನಿರೂಪಿಸುವ ತನ್ನ ರಗಳೆಗಳಲ್ಲಿ ಆ ಗೋಷ್ಠಿಗಳ ಬಗ್ಗೆ ಉಲ್ಲೇಖಿಸಿರಬೇಕು. ಆದುದರಿಂದ ಶರಣರು ನಡೆಸುತ್ತಿದ್ದ ಶಿವಗೋಷ್ಠಿಗಳ ಬಗೆಗಿನ ಹರಿಹರನ ಹೇಳಿಕೆಗಳನ್ನು ನಂಬಬೇಕಾಗುತ್ತದೆ.

ಮೇಲಂಕುಲದವರಾಗಿದ್ದ ಕೊಂಡಗುಳಿ ಕೇಶಿರಾಜ, ಶಂಕರದಾಸಿಮಯ್ಯ ಇವರು ಕೆಳಗಿನಕುಲದವರಾದ ತೆಲುಗು ಜೊಮ್ಮಯ್ಯ ಜೇಡರದಾಸಿಮಯ್ಯಗಳೊಡನೆ ಶಿವಗೋಷ್ಠಿ ನಡೆಸುತ್ತಿದ್ದುದನ್ನು ಓದಿದಾಗ, ಇಂತಹಗೋಷ್ಠಿಗಳಲ್ಲಿ ಕುಲ–ಜಾತಿ–ವೃತ್ತಿ–ಅಧಿಕಾರಗಳು ಗೌಣವಾಗಿದ್ದು ಅನುಭಾವಗಳ ವಿನಿಮಯ

ವಿಮರ್ಶೆಗಳೇ ಪ್ರಧಾನವಾಗಿದ್ದುದಾಗಿ ತಿಳಿದುಬರುತ್ತದೆ. ಹೀಗೆ ಕುಲ-ವೃತ್ತಿ ಅಧಿಕಾರಿಗಳ ಕಟ್ಟುಹರಿದು ಒಬ್ಬ ಭಕ್ತ ಉಳಿದ ಭಕ್ತರ ಜೊತೆ ಸೇರಿ ನಡೆಸುತ್ತಿದ್ದ ಶಿವಗೋಷ್ಠಿಗಳು ಬಸವಣ್ಣನವರ ಅನುಭಾವಗೋಷ್ಠಿಗೆ ತನ್ಮೂಲಕ ಅನುಭವ ಮಂಟಪಕ್ಕೆ ಪ್ರೇರಣೆ ನೀಡಿರುವ ಸಾಧ್ಯತೆಯಿದೆ. ಈ ಹಿರಿಯ ಶರಣರ ಗೋಷ್ಠಿಗಳ ವ್ಯಾಪ್ತಿ ಕಿರಿದಾಗಿರಬಹುದು; ಆತ್ಮ-ಪರಮಾತ್ಮರನ್ನು ಕುರಿತ ಚರ್ಚೆಗೆ ಪ್ರಾಧಾನ್ಯವಿರಬಹುದು, ಇಬ್ಬರು ಇಲ್ಲವೆ ಕೆಲವೇ ಆಸಕ್ತಶರಣರು ಅವುಗಳಲ್ಲಿ ಭಾಗವಹಿಸುತ್ತಿರಬಹುದು. ಆದರೆ ಅವುಗಳ ಪ್ರಭಾವವನ್ನು ಬಸವಣ್ಣನವರು ಗ್ರಹಿಸಿದ್ದರೆಂದು ಹೇಳಬಹುದಾಗಿದೆ. ಅವುಗಳಿಂದ ಪ್ರೇರಣೆ ಪಡೆದಿರಬಹುದಾದ ಬಸವಣ್ಣನವರು ತಮ್ಮ ಕರ್ತೃತ್ವಶಕ್ತಿ, ಸಂಘಟನಾ ಸಾಮರ್ಥ್ಯ, ಪ್ರಾಮಾಣಿಕ ಪ್ರಯತ್ನ, ಪರಿಶುದ್ಧ ಚಾರಿತ್ರ್ಯ, ಹಾಗೂ ಸ್ಥಾನಬಲದಿಂದ ಆ ಗೋಷ್ಠಿಗಳ ವ್ಯಾಪ್ತಿಯನ್ನು ಹಿಗ್ಗಲಿಸಿ, ಅವುಗಳಿಗೊಂದು ಹೊಸ ಆಯಾಮವನ್ನು ಕಲ್ಪಿಸಿ, ಬಹು ಜನರು ಅವುಗಳಲ್ಲಿ ಪಾಲ್ಗೊಂಡು ವ್ಯಷ್ಟಿ-ಸಮಷ್ಟಿಗಳ ಸಮಸ್ಯೆಗಳನ್ನು ಚರ್ಚಿಸಲು ಅವಕಾಶ ಮಾಡಿಕೊಡುವ ಅನುಭವಮಂಟಪದಂತಹ ಸಂಸ್ಥೆಯನ್ನು ರೂಪಿಸಿದುದು ಒಂದು ಪವಾಡವೇ ಸರಿ-"

ಕೆಲವು ಸಂದರ್ಭಗಳಲ್ಲಿ ಸಮಕಾಲಿನ ಸಾಮಾಜಿಕ-ಧಾರ್ಮಿಕ ಪರಿಸರಗಳ ಒತ್ತಡ ಮತ್ತು ಅಗತ್ಯಗಳು ಮಹಾಸಂಸ್ಥೆಯೊಂದರ ಸ್ಥಾಪನೆಗೆ ಕಾರಣವಾಗಬಲ್ಲವು. ಪರಿಸರ ಎಂಥದೇ ಇರಲಿ, ಅಗತ್ಯಗಳು ಏನೇ ಇರಲಿ ಅವುಗಳ ಬಗ್ಗೆ ನಿರಾಸಕ್ತರಾಗಿದ್ದು ಪ್ರವಾಹದಗುಂಟ ತೇಲಿ ಹೋಗುವವರ ಸಂಖ್ಯೆಯೆ ಸಮಾಜದಲ್ಲಿ ಹೆಚ್ಚು. ಆದರೆ ಬಸವಣ್ಣನವರು ಅಂತಹ ಧಾತುವಿನಿಂದ ನಿರ್ಮಾಣಗೊಂಡ ವ್ಯಕ್ತಿಯಾಗಿರಲಿಲ್ಲ. ಮೂಲತಃ ಸಂವೇದನಾಶೀಲರಾದ ಬಸವಣ್ಣನವರಲ್ಲಿ ನ್ಯಾಯ ನಿಷ್ಠುರತೆ ವೈಚಾರಿಕತೆ ನಿರ್ದಾಕ್ಷಿಣ್ಯ ಮನೋಭಾವ ಮತ್ತು ಪ್ರತಿಭಟನಾಗುಣಗಳು ರಕ್ತಗತವಾಗಿಯೇ ಬಂದುದಕ್ಕೆ ಅವರ ಜೀವನ ಚರಿತ್ರೆಯೆ ಸಾಕ್ಷಿಯಾಗಿದೆ. ಸಕಲ ಜೀವಾತ್ಮರಿಗೆ ಲೇಸನ್ನು ಮಾಡುವ ಹಂಬಲವೂ ಅವರಲ್ಲಿ ತೀವ್ರತರವಾಗಿತ್ತು. ಅಂದಿನ ಪರಿಸರವನ್ನು ಸರಿಯಾಗಿ ಅಭ್ಯಸಿಸಿ ಅಂದಿನ ಸಮಾಜದ ಅಗತ್ಯಗಳನ್ನು ಅವರು ಚೆನ್ನಾಗಿ ಮನದಟ್ಟು ಮಾಡಿಕೊಂಡಿದ್ದರು. ಆ ಅಗತ್ಯಗಳ ಪೂರೈಕೆಗಾಗಿ, ಆಗ ಏಳಬಹುದಾದ ಸಮಸ್ಯೆಗಳ ಪರಿಹಾರಕ್ಕಾಗಿ ಸಮಾನ ಅಭಿಪ್ರಾಯದ, ಸಮಾನ ಮನೋಧರ್ಮದ ವ್ಯಕ್ತಿಗಳ ಸಂಘಟನೆ ಅವಶ್ಯಕವೆಂದು ಅವರ ಅಂತರಂಗ ಒತ್ತಿ ಒತ್ತಿ ಹೇಳುತ್ತಿರಬೇಕು. ಇಂತಹ ಅದಮ್ಯ ಆಂತರಿಕ ಒತ್ತಡ ಕೂಡ ಅನುಭವಮಂಟಪದಂತಹ ವಿಶಾಲವ್ಯಾಪ್ತಿಯ ಸಂಸ್ಥೆಯೊಂದರ ಸ್ಥಾಪನೆಗೆ ಪ್ರೇರಣೆಯೊದಗಿಸಿರಬೇಕೆಂದು ಊಹಿಸಿದರೆ ತಪ್ಪಾಗಲಾರದು.

ಬಸವಣ್ಣನವರ ಕಾಲದಲ್ಲಿ ಧಾರ್ಮಿಕ ಪರಿಸ್ಥಿತಿ ಗೊಂದಲಮಯವಾಗಿ

ತ್ತೆಂಬುದು, ಶಾಸನ ಮತ್ತು ಸಾಹಿತ್ಯಕೃತಿಗಳ ಅಧ್ಯಯನದಿಂದ ತಿಳಿದುಬರುತ್ತದೆ. ಬಳ್ಳಿಗಾವಿಯ ಪಂಚಲಿಂಗೇಶ್ವರ ಮಠದ ಶೈವ ಆಚಾರ್ಯ ವಾದಿರುದ್ರಗಣ ಲಕುಲೇಶ್ವರ ಪಂಡಿತನು, ವಾದಿರಾಜನೆಂಬ ಸುಪ್ರಸಿದ್ಧ ಜೈನ ಆಚಾರ್ಯನನ್ನು ವಾದದಲ್ಲಿ ಸೋಲಿಸಿದನೆಂದು ಚಾಲುಕ್ಯ ಜಯಸಿಂಹನ ಕಾಲದ ಹನ್ನೊಂದನೆಯ ಶತಮಾನದ ಒಂದು ಶಾಸನ ಹೇಳುತ್ತದೆ.[೩೨] ಜೈನ ಶೈವಗಳ ಮಧ್ಯದ ಈ ಘರ್ಷಣೆ ಬಸವಣ್ಣನವರ ಕಾಲದಲ್ಲೂ ಮುಂದುವರಿದುದಕ್ಕೆ ಸಾಹಿತ್ಯ ಆಧಾರ ಗಳಿವೆ. ರಾಜಾಶ್ರಯವನ್ನು ಕಳೆದುಕೊಂಡ ಜೈನಧರ್ಮ ಆಂತರಿಕವಾಗಿಯೂ ಶಿಥಿಲವಾಗುತ್ತ ತನ್ನ ಪ್ರಭಾವವನ್ನು ಕಳೆದುಕೊಳ್ಳಲಾರಂಭಿಸಿದ್ದರೂ, ಬ್ರಹ್ಮಶಿವ, ನಯಸೇನರಂತಹ ಜೈನಕವಿಗಳು ತಮ್ಮ ಧರ್ಮಕ್ಕೆ ಜೀವದುಂಬಲು ವಿಡಂಬನಾ ಮಾಧ್ಯಮದ ಮೂಲಕ ಪ್ರಯತ್ನಿಸುತ್ತಿದ್ದುದು ಅವರ ಕೃತಿಗಳಿಂದಲೇ ಸ್ಪಷ್ಟ ವಾಗುತ್ತದೆ. ಅಂದು ಕರ್ನಾಟಕದಲ್ಲಿ ಪ್ರಚಲಿತವಿದ್ದ ಮತ್ತೊಂದು ಧರ್ಮ ವೈಷ್ಣವಧರ್ಮ. ಶೈವ-ವೈಷ್ಣವರ ಮಧ್ಯೆ ಘರ್ಷಣೆಗಳು ನಡೆಯುತ್ತಿದ್ದುದರ ಸೂಚನೆ ಹರಿಹರನ ತೆಲುಗು ಜೋಮ್ಮಯ್ಯ ಮತ್ತು ಶಂಕರದಾಸಿಮಯ್ಯ ಅವರ ಕತೆಗಳಲ್ಲಿದೆ. ಕರ್ನಾಟಕದ ಈ ಮೂರು ಪ್ರಮುಖ ಧರ್ಮಗಳಲ್ಲಿ ಪರಸ್ಪರ ವೈಷ-ಮ್ಯದ ಹೊಗೆಯಾಡುತ್ತಿದ್ದುದು ಇದರಿಂದ ವಿದಿತವಾಗುತ್ತದೆ.

ಬಸವಣ್ಣನವರ ಕಾಲದಲ್ಲಿ ಹೆಚ್ಚು ಪ್ರಚಾರದಲ್ಲಿದ್ದ ಶೈವಧರ್ಮದಲ್ಲೂ ಹಲವಾರು ಪಂಥ ಪಂಗಡಗಳಿದ್ದವು. "ಶೈವ ಸೈವೆರೆಗಾದ, ಪಾಶುಪತಿ ಪಥನ ನರಿಯ, ಕಾಳಾಮುಖಿ ಕಂಗೆಟ್ಟ, ಮಹಾವ್ರತಿ ಮದವೇರಿದ ಸನ್ಯಾಸಿ ಪಾಷಂಡಿ ಯಾದ, ಕಾಪಾಲಿ ಮರುಳಾಗಿ ತಿರುಗಿದ, ಈ ಆರು ಭಕ್ತಿಪಥಕ್ಕೆ ಸಲ್ಲವು ಕೇಳಿ ರಣ್ಣಾ.........[೩೪] ಎಂಬ ಚನ್ನಬಸವಣ್ಣನ ವಚನ ಅಂದಿನ ವಿವಿಧ ಶೈವ ಪಂಥ-ಪಂಗಡಗಳನ್ನು ಸೂಚಿಸುವ ಜೊತೆಗೆ ಅವುಗಳ ಟೊಳ್ಳುತನವನ್ನೂ ವಿವರಿಸುತ್ತದೆ. ಲಕುಲೀಶ ಪಾಶುಪತ ಅಥವಾ ಕಾಳಾಮುಖ ಆಚಾರ್ಯರು ಸ್ಥಾವರಲಿಂಗ ಪೂಜಕರಾಗಿದ್ದು, ಅನೇಕ ಮಠ-ದೇವಸ್ಥಾನಗಳ ಸ್ಥಾನಪತಿಗಳಾಗಿ ಅವುಗಳ ವ್ಯವಸ್ಥೆ ನೋಡಿಕೊಳ್ಳುತ್ತ ಸಮಾಜದ ಕೆಳವರ್ಗದಿಂದ ಮೊದಲುಗೊಂಡು ಮೇಲಿನ ರಾಜವರ್ಗದವರೆಗೆ ಎಲ್ಲರ ಗೌರವಕ್ಕೆ ಪಾತ್ರರಾಗಿ, ಅವರ ಮೇಲೆ ತಮ್ಮ ಪ್ರಭಾವ ಬೀರಿದ್ದರೆಂಬುದಕ್ಕೆ ಹಲವಾರು ಶಾಸನಾಧಾರಗಳಿವೆ. ಬಳ್ಳಿಗಾವಿ, ಹೂಲಿ, ಸೂಡಿ ಮೊದಲಾದ ಸ್ಥಳಗಳು ಕಾಳಾಮುಖರ ಕೇಂದ್ರಗಳಾಗಿದ್ದವು. ಕಾಪಾಲಿಕ ಕಾಳ ಗಳಂತೂ ವಿಚಿತ್ರ ತಾಂತ್ರಿಕ ಆಚರಣೆಯ ಶೈವ ಪಂಥಗಳು. ಕಾಶ್ಮೀರ ಶೈವವೂ ಆಗ ಕರ್ನಾಟಕದಲ್ಲಿದ್ದ ಬಗ್ಗೆ ಶಾಸನಗಳು ಆಧಾರ ಒದಗಿಸುತ್ತವೆ. ಬಸವಾದಿ ಗಳು ತಮ್ಮ ವಚನಗಳಲ್ಲಿ ತಮಿಳನಾಡಿನ ಅರವತ್ತು ಮೂವರು ಪುರಾತನರಲ್ಲಿ ಕೆಲ ವರನ್ನು ಸ್ಮರಿಸಿರುವುದನ್ನು ನೋಡಿದರೆ ತಮಿಳು ಶೈವದ ಪ್ರಭಾವವೂ ಕರ್ನಾಟಕದ

ಮೇಲಾಗಿತ್ತೆಂದು ಊಹಿಸಬಹುದು. ಈ ಶೈವ ಪಂಗಡಗಳಲ್ಲಿ ಕೆಲವು ದ್ವೈತ ಪರವಾಗಿದ್ದರೆ ಇನ್ನು ಕೆಲವು ಅದ್ವೈತಪರ.

ಹೀಗೆ ಹಲವಾರು ಧರ್ಮಗಳ, ಪಂಥ ಪಂಗಡಗಳ ಏರಾಟ ಜಗ್ಗಾಟಗಳಲ್ಲಿ ಸಾಮಾನ್ಯ ಜನತೆಗೆ ದಿಕ್ಕೇ ತೋಚದಾಗಿತ್ತು. ತತ್ವ ಆತ್ಮವಿಕಾಸಾದಿಗಳು ಅವರಿಗೆ ನುಂಗದ ತುತ್ತುಗಳಾಗಿದ್ದವು. ಅವರನ್ನು ಅವರ ಪಾಡಿಗೆ ಬಿಟ್ಟು, ತಾವು "ಹಾಳು ಮೊರಡಿಗಲ್ಲಿ, ಉರದಾರಿಗಳಲ್ಲ ಚೌಪದಪಟ್ಟಣ ಪ್ರದೇಶಗಳಲ್ಲಿ........ಹಿರಿಯಾಲದ ಮರದಲ್ಲಿ ಮನೆಯಮಾಡಿ....ಹಿಡಿದು ತಿಂಬ ತಿರಿದುಂಬ, ಮಾರಯ್ಯ ಬೀರಯ್ಯ........ಕಾಳಯ್ಯ ದೂಳಯ್ಯಗಳೆಂಬ"[೩೬] ಹಲವಾರು ದೇವರನ್ನೂ ಮಾರಕವ್ವೆ ಕಾಳಿವ್ವೆಯವರಂತಹ ದೇವತೆಗಳನ್ನೂ ಪೂಜಿಸುವಲ್ಲಿ ನಿರತರಾಗಿದ್ದರು. ಆ ಹೇಸಿದೈವಂಗಳೇ ತಮ್ಮ ಕಾಡಾಟವನ್ನು ಕಳೆಯುತ್ತವೆ, ಮನಸ್ಸಿನ ಬಯಕೆಗಳನ್ನು ಪೂರೈಸುತ್ತವೆಂದು ನಂಬಿ ಅವುಗಳಿಗೆ ಬಲಿಕೊಡುತ್ತಿದ್ದರು. "ಮಡಕೆ ದೈವವೊರದೈವ ಬೀದಿಯಕಲ್ಲು ದೈವ....ಕೊಳಗದೈವಗಿಣ್ಣಿಲು ದೈವವೆಂದು"[೩೭] ಕಾಲಿಡಲಿಂಬಿಲ್ಲದಷ್ಟು ದೈವಗಳನ್ನು ನಿರ್ಮಿಸಿಕೊಂಡು ಪೂಜಿಸುತ್ತಿದ್ದ ಸಾಮನ್ಯ ಜನತೆಯನ್ನು ಕಂಡು ಬಸವಣ್ಣನವರು ಮಮ್ಮಲ ಮರುಗಿದ್ದಾರೆ.

ಹೀಗೆ ಎಲ್ಲರನ್ನೂ ದಿಕ್ಕು ತಪ್ಪಿಸಬಹುದಾದಂಥ ಪರಿಸ್ಥಿಯನ್ನು ಮುಖ್ಯ ಧರ್ಮಗಳು ನಿರ್ಮಿಸಿದ್ದರೆ, ಸಾಮನ್ಯ ಜನತೆ ಹಿಂಡುದೈವಗಳ ಬೆನ್ನುಹತ್ತಿ ಅಜ್ಞಾನದ ಕತ್ತಲೆಯಲ್ಲಿ ಅಂಡಲೆಯುತ್ತಿತ್ತು. ಇದೆಲ್ಲವನ್ನು ಅರಿತ ಬಸವಣ್ಣನವರು, ತತ್ವಗಳ ಮಧ್ಯೆ ಸಮನ್ವಯ ಸಾಧಿಸುವುದನ್ನು ಕುರಿತು, ಮುಗ್ಧ ಸಾಮಾನ್ಯ ಜನತೆಯ ಅಜ್ಞಾನವನ್ನು ದೂರಮಾಡಿ ಅವರಿಗೆ ತಿಳಿಯುವ ಭಾಷೆಯಲ್ಲಿಯೆ ತಿಳಿವನ್ನು ನೀಡುವ ಕುರಿತು ಆಳವಾಗಿ ಆಲೋಚಿಸಿರಬೇಕು, ಯೋಜಿಸಿರಬೇಕು. ಅಂಥ ಆಲೋಚನೆ ಮತ್ತು ಯೋಜನೆಯ ಫಲವೇ ಅನುಭವಮಂಟಪ. ಹೀಗೆ ಒಂದು ದೃಷ್ಟಿಯಿಂದ ಅಂದಿನ ಅತಂತ್ರ ಧಾರ್ಮಿಕ ಪರಿಸ್ಥಿತಿಯೇ ಅನುಭವಮಂಟಪದ ಸ್ಥಾಪನೆಗೆ ಪ್ರೇರಣೆ ಒದಗಿಸಿತೆಂದು ಹೇಳಬಹುದು.

ಇನ್ನು ಸಾಮಾಜಿಕ ಪರಿಸ್ಥಿತಿ. ಜಾತಿಗೆ ಪ್ರಾಧಾನ್ಯವಿದ್ದ ಅಂದಿನ ಸಮಾಜದಲ್ಲಿ ಬ್ರಾಹ್ಮಣರು, ದೊರೆಗಳು, ಮತ್ತು ವರ್ತಕರು ತಮ್ಮ ತಮ್ಮ ವಿದ್ವತ್ತು ಅಧಿಕಾರ ಹಾಗೂ ಹಣದ ಬಲದಿಂದ ಶಿಷ್ಟರೆನಿಸಿಕೊಂಡು ಮೆರೆಯುತ್ತಿದ್ದರು. ತಮ್ಮ ತಮ್ಮ ಸ್ಥಾನಮಾನಗಳ ಭದ್ರತೆಗಾಗಿ ಈ ಮೂರೂ ವರ್ಗದವರಲ್ಲಿ ಒಂದು ಬಗೆಯ ಒಪ್ಪಂದವೇ ಏರ್ಪಟ್ಟಂತಿತ್ತು. ಇಂಥಪಟ್ಟಭದ್ರ ಹಿತಾಸಕ್ತಿಗಳ ಶೋಷಣೆಗೆ ಒಳಗಾದವರು ಸಾಮಾನ್ಯಜನರು. ವಿದ್ಯೆ, ಅಧಿಕಾರ, ಐಶ್ವರ್ಯಗಳಿಂದ ದೂರವಾಗಿದ್ದ ಈ ಸಾಮನ್ಯ ಜನತೆ, ಶಿಷ್ಟವರ್ಗದವರಿಗಾಗಿ ದುಡಿಯುವುದೇ ತನ್ನ ಧರ್ಮ,

ಅವರನ್ನು ನೇಮಿಸುವುದೇ ತನ್ನ ಕರ್ತವ್ಯವೆಂದು ನಂಬಿ, ಅವರ ಸುಖ ಸೌಲಭ್ಯಗಳಿಗಾಗಿ ತನ್ನ ಜೀವನವನ್ನು ತೇಯುತ್ತಿತ್ತು. ಅವರಲ್ಲಿದ್ದ ಆ ನಂಬಿಕೆ ಮುಖ್ಯಾಗದಂತೆ ಶಿಷ್ಟವರ್ಗ ಸುವ್ಯವಸ್ಥಿತ ರೀತಿಯಲ್ಲಿ ನೋಡಿಕೊಂಡು ಬರುತ್ತಿತ್ತು ಜಾತಿ ಕಾರಣವಾಗಿ, ಆಲೋಚನೆ ವೈಚಾರಿಕತೆಗಳಿಗೆ ನೆರವು ನೀಡುವ ದ್ವಾರಗಳೆಲ್ಲ ಅವರಿಗಾಗಿ ಮುಚ್ಚಿಹೋಗಿದ್ದವೆಂದು ಹೇಳುವುದಕ್ಕಿಂತ ಶಾಸ್ತ್ರದ ಹೆಸರಿನಲ್ಲಿ ಶಿಷ್ಟವರ್ಗದವರು ಮುಚ್ಚಿಸಿದ್ದರೆಂದು ಹೇಳುವುದೇ ಹೆಚ್ಚು ಸೂಕ್ತ.

ಅಂದಿನ ಸಾಮಾನ್ಯವರ್ಗದಲ್ಲಿಯೇ ಮತ್ತೆ ಹಲಕೆಲವು ಜಾತಿ ಉಪಜಾತಿಗಳು ಅವರವರ ವೃತ್ತಿಯನ್ನವಲಂಬಿಸಿ ಹುಟ್ಟಿಕೊಂಡಿದ್ದವು. ತಮ್ಮ ಜಾತಿಗಿದ್ದ ಸಾಮಾಜಿಕ ಸ್ಥಾನಮಾನದ ಬಗ್ಗೆ ಪ್ರಶ್ನಿಸುವ ಇಲ್ಲವೆ ಪ್ರತಿಭಟಿಸುವ ಧೈರ್ಯ ಯಾರಿಗೂ ಇರಲಿಲ್ಲ. ಹಾಗೆ ಮಾಡಿದವರಿಗೆ ಅವರ ಜಾತಿಯವರೆ ಬಹಿಷ್ಕಾರ ಹಾಕಲು ಹಿಂದುಮುಂದೆ ನೋಡುತ್ತಿರಲಿಲ್ಲ. ಹೀಗೆ ಒಂದು ಕಡೆ ಶಿಷ್ಟವರ್ಗದವರ ಶಾಸ್ತ್ರ ಭೀತಿ, ಇನ್ನೊಂದೆಡೆ ಜಾತಿಯ ಕಟ್ಟು ಪಾಡುಗಳು ಅವರ ವ್ಯಕ್ತಿತ್ವವನ್ನು ಹಸನ ಮಾಡಿಬಿಟ್ಟಿದ್ದವು. ಕುರುವಿನ ಮೇಲೆ ಬೊಕ್ಕೆ ಎಂಬಂತೆ, ಈ ಸಾಮಾನ್ಯರಲ್ಲಿ ಮತ್ತೆ ಎರಡು ಗುಂಪುಗಳು, ಸ್ಪೃಶ್ಯ ಅಸ್ಪೃಶ್ಯ ಅಸ್ಪೃಶ್ಯರ ಸ್ಥಿತಿಯಂತೂ ತೀರಾ ಚಿಂತಾಜನಕ ಶಿಷ್ಟವರ್ಗದವರಿರಲಿ, ಸಾಮಾನ್ಯ ಸ್ಪೃಶ್ಯರು ಕೂಡ ಇವರನ್ನು ದೂರವಿಟ್ಟಿದ್ದರು. ಅವರ ವಾಸ ಊರ ಹೊರಗಿನ ಹೊಲಗೇರಿಗಳಲ್ಲಿ. ಕುಡಿಯುವ ನೀರಿಗಾಗಿ ಕೂಡ ಇವರು ಶಿಷ್ಟರೆದರು, ಸ್ಪೃಶ್ಯರೆದರು ಕೈಯೊಡ್ಡಿ ನಿಲ್ಲಬೇಕಿತ್ತು. ಮಾರದ್ದ ದೇಹವನ್ನು ಗೇಣುದ್ದ ಮಾಡಿಕೊಂಡು ಊರಿನಲ್ಲಿ ತಲೆ ತಗ್ಗಿಸಿ ಅಡ್ಡಾಡುತ್ತಿದ್ದ ಇವರನ್ನು ಕಂಡು ಮೃದುಹೃದಯಿಯಾದ ಬಸವಣ್ಣ ಪರಿತಪಿಸಿರುವುದು ಸಹಜ. ಮಾನವ ಮಾನವರಲ್ಲಿ ವೃತ್ತಿಗಳಲ್ಲಿ ಮೇಲುಕೀಳುಗಳನ್ನು ಕಲ್ಪಿಸುವುದು ಯಾವ ಧರ್ಮ? ಎಂತಹ ಶಾಸ್ತ್ರ? ಧರ್ಮ ಶಾಸ್ತ್ರಗಳ ಕಟ್ಟುಕಟ್ಟಳೆಗಳಿಂದಾಗಿ ಅಸಹ್ಯ ಜೀವನ ಸಾಗಿಸುತ್ತಿರುವ, ಇಂತಹ ಅವಕಾಶಹೀನರ ಬಾಳಿನಲ್ಲಿ ಬೆಳಕುಮೂಡುವಂತಾಗುವುದು ಹೇಗೆ? ಇವರಲ್ಲಿ ಧೈರ್ಯ ತುಂಬುವ ವಿಧಾನವಾವುದು? ಮುಂತಾಗಿ ಬಸವಣ್ಣನವರು ಆಲೋಚಿಸಲು ತೊಡಗಿರಬೇಕು. ಅವರ ಈ ಸಾಮಜಿಕ ಚಿಂತನೆ ಪ್ರೇರಕವಾಗಿದೆ.

ಹೀಗೆ ಅಂದಿನ ಧಾರ್ಮಿಕ ಮತ್ತು ಸಾಮಾಜಿಕ ವೈಪರೀತ್ಯಗಳು ಒಟ್ಟಾಗಿ ಬಸವಣ್ಣನವರ ಮನಸ್ಸನ್ನು ಕಲಕಿದಾಗ, ಅವೆಲ್ಲವುಗಳ ನಿವಾರಣೆಗೆ ಕಾರ್ಯಕ್ರಮವನ್ನು ರೂಪಿಸುವ, ಅವುಗಳನ್ನು ಧೈರ್ಯದಿಂದ ಕಾರ್ಯರೂಪಕ್ಕಿಳಿಸುವ ಸಂಘಟನೆಯೊಂದರ ಅವಶ್ಯಕತೆ ಅವರಿಗೆ ಹೊಳೆದಿರಬೇಕು. ತಮಗಿಂತ ಸ್ವಲ್ಪ ಪೂರ್ವದ ಮತ್ತು ತಮ್ಮ ಕಾಲದ ಕೆಲವು ಜನ ಹಿರಿಯ ಶರಣರ ಆದರ್ಶ ಜೀವನ ವಿಧಾನವನ್ನು ಬಸವಣ್ಣ ಕೇಳಿ ಕಂಡು ತಿಳಿದವನಾಗಿದ್ದ. ಜಾತಿಮತ ಪಂಥ-ಶಾಸ್ತ್ರಗಳ ಕೋಟಲೆಗಳನ್ನು ಕಿತ್ತೆಸೆದು ಅನುಭಾವಗೊಷ್ಠಿಗಳನ್ನು ನಡೆತ್ತಸ,

ಪುರೋಹಿತ ಸತ್ತೆಯಂತಿರಲಿ, ರಾಜಸತ್ತೆಯನ್ನು ಕೂಡ ಧಿಕ್ಕರಿಸಿ ಹಿಂಡನಗಲಿದ ಗಜದಂತೆ, ಸಾರ್ಥಕಬಾಳನ್ನು ಸಾಗಿಸುತ್ತಿದ್ದ ಅವರ ಧೀಮಂತ ರೀತಿ, ತಮ್ಮ ಪ್ರಯತ್ನ ಮತ್ತು ಯೋಜನೆಗಳು ಸಫಲವಾಗಬಹುದು ಆಸೆಯನ್ನು ಬಸವಣ್ಣನವ ರಲ್ಲಿ ಚಿಗುರಿಸಿರಬೇಕು.

ಶಿಷ್ಟವರ್ಗಕ್ಕೆ ಸೇರಿದ ಅಪ್ಪಟ ಶಿವಭಕ್ತನಾದ ಕೊಂಡುಗುಳಿ ಕೇಶಿರಾಜ, ಸಿರಿಯಸಂಗ ಶರಣಸಂಗಕ್ಕೆ ಅಡ್ಡಿಯಾದಾಗ, ರಾಜಸತ್ತೆಯನ್ನು ಧಿಕ್ಕರಿಸಿ, ಸೇವಕ ವೃತ್ತಿಯನ್ನು ಮನದ ಕಾಲಿನಿಂದೊಡೆದು, ಕೀಳು ಕುಲದವನಾದರೂ ಶಿವಭಕ್ತನಾಗಿದ್ದ ತೆಲುಗು ಜೋಮ್ಮಯ್ಯನೊಡನೆ ಶಿವಗೋಷ್ಠಿ ನಡೆಸಿದುದನ್ನು ಹಿಂದೆಯೇ ನೋಡಿದ್ದೇನೆ. ಬಿದಿರಕಾಯಕದ ಅರ್ಥಾತ್ ಮೇದಾರಕುಲದ ವಂಶವರ್ಧನನ ಮನೆಯಲ್ಲಿ ಅವನ ವಿನಂತಿಯ ಮೇರೆಗೆ, ಅಖಂಡ ಏಳುದಿನಗಳವರೆಗೆ ಲಿಂಗಪೂಜಾನಿರತನಾದವನೂ ಇದೇ ಕೇಶಿರಾಜನೆ. ಜೋಮ್ಮಯ್ಯನಾದರೂ ಸಾಮಾನ್ಯಶರಣನಲ್ಲ. ತಾನು ನಂಬಿದ ದೈವಕ್ಕೆ ಅಪಚಾರವಾದಾಗ, ಹಾಗೆ ಅಪಚಾರ ಮಾಡಿದವರನ್ನೆ ಮುಗಿಸಿ ಬಿಡಬಲ್ಲ ಉಗ್ರ ಶಿವಭಕ್ತ, ತನ್ನ ಅಧಿದೈವ ಭೀಮನಾಥನಿಗೆ ಪಾತ್ರ ವೇಳೆವಾಳಿಯಾಗಿದ್ದವ. "ಶರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೇ?" ಸರ್ವಜ್ಞ ನಿಮ್ಮ ಕೆರವಿಂಗನ್ನ ಶಿರ ಸರಿಯೆ?೩೮ ಎಂದು ಚೋಳನೃಪನಿಂದ ಕೀರ್ತಿತನಾದವ ಮಾದಾರ ಚನ್ನಯ್ಯ. ಕುಲದಿಂದ ಹೊಲೆಯನಾಗಿದ್ದರೂ ಶಿವಭಕ್ತನಾಗಿದ್ದ ಶರಣನೊಬ್ಬನ ಪಾದೋದಕವನ್ನು ಸ್ವಿಕರಿಸಿ ತತ್ಫಲವಾಗಿ ಒದಗಿದ್ದ ಗಡೀಪಾರಿನ ಶಿಕ್ಷೆಯನ್ನು ಸಂತೋಷದಿಂದ ಒಪ್ಪಿಕೊಂಡ ಧೈರ್ಯಶಾಲಿ ಕೆಂಭಾವಿಯ ಭೋಗಣ್ಣ. ಜಂಗಮರೂಪಿ ಶಿವನಿಗೆ ತಾನು ನೆಯ್ದ ಬೆಲೆಯುಳ್ಳ ಬಟ್ಟೆಯನ್ನು ಕೊಟ್ಟು, ಅವನು ಅದನ್ನು ಹರಿದು ಹಾಕಿದಾಗ ಸ್ವಲ್ಪವೂ ಸಿಟ್ಟಿಗೇಳದೆ ಶಿವನನ್ನು ಮೆಚ್ಚಿಸಿ ಅವನಿಂದ ತವನಿಧಿಯನ್ನು ಪಡೆದ ನಿಸ್ಸೀಮಭಕ್ತ ಜೇಡರ ದಾಸಿಮಯ್ಯ. ಇವರೆಲ್ಲರ ಜೀವನ, ತಮ್ಮ ಯೋಜನೆಗಳಿಗೆ ಮೂರ್ತಸ್ವರೂಪ ಕೊಡಬಲ್ಲ ಅನುಭವಮಂಟಪದಂತಹ ಒಂದು ಸಂಸ್ಥೆಯನ್ನು ಸ್ಥಾಪಿಸಲು ಬಸವಣ್ಣನವರಿಗೆ ಧೈರ್ಯವಿತ್ತಿರಬೇಕು.

ಒಟ್ಟಿನಲ್ಲಿ ವ್ಯಷ್ಟಿ ಮತ್ತು ಸಮಷ್ಟಿಯ ಉದ್ಧಾರದ ಕಮ್ಮಟವೆನಿಸಿದ ಅನುಭವ ಮಂಟಪದ ಸ್ಥಾಪನೆಗೆ, ಮೊದಲೇ ಅಲ್ಲಲ್ಲಿ ನಡೆಯುತ್ತಿದ್ದ ಶಿವಗೋಷ್ಠಿಗಳು, ಅವುಗಳಲ್ಲಿ ಭಾಗವಹಿಸುತ್ತಿದ್ದ ಶರಣರ ವೀರನಿಷ್ಠೆ ಜಾತಿ–ಕುಲಗಳಣಿಸದೆ ಎಲ್ಲ ಶಿವಭಕ್ತರನ್ನು ಸಮಾನವಾಗಿಕಾಣುವ ಅವರ ಉದಾರ ದೃಷ್ಟಿ, ಆದರ್ಶಗಳಿಗೆ ಅಡ್ಡಿಯುಂಟಾದಾಗ ರಾಜಸತ್ತೆಯನ್ನು ಕೂಡ ಧಿಕ್ಕರಿಸಬಲ್ಲ ದಿಟ್ಟ ಮನೋಭಾವ ಇತ್ಯಾದಿಗಳು ಬಸವಣ್ಣನವರಿಗೆ ಬಾಹ್ಯ ಪ್ರೇರಣೆಗಳಾದರೆ; ಅಂದಿನ ಧಾರ್ಮಿಕ ಮತ್ತು ಸಾಮಾಜಿಕ ವೈಪರೀತ್ಯಗಳ ಫಲವಾಗಿ ತಬ್ಬಲಿಗಳಾಗಿದ್ದ ಸಾಮಾನ್ಯರ, ಎಲ್ಲರ ತುಳಿತ ಶೋಷಣೆಗಳಿಗೆ ಒಳಗಾಗಿ ನಡೆಮೆಣರಾಗಿದ್ದ ದಲಿತರ, ಮತ್ತು

ಸ್ತ್ರೀಯರ—ಉದ್ಧಾರ ಉನ್ನತಿಗಳ ತೀವ್ರತರ ಹಂಬಲ ಹಾಗೂ ತುಡಿತಗಳು ಅವರಿಗೆ ಆಂತರಿಕ ಪ್ರೇರಣೆಗಳಾದವೆಂದು ಹೇಳಬಹುದು.

ಅಡಿಟಿಪ್ಪಣಿಗಳು :

೧. ದೇವರ ದಾಸಮಯ್ಯನ ವಚನಗಳು: ದೇವರದಾಸಿಮಾರ್ಯಪ್ರಶಸ್ತಿ ವಸಂ೧೨೪.
೨. ಅದೇ, ವ. ಸಂ-೧೨೫
೩. ಬಸವಣ್ಣನವರ ವಚನಗಳು(೧೯೬೮) ಃಸಂ. ಡಾ. ಆರ್. ಸಿ. ಹಿರೇಮಠ, ವ.ಸಂ-೬೫೩.
೪. ಅದೇ. ವ. ಸಂ. ೮೪೧
೫. ಚೆನ್ನಬಸವಣ್ಣನವರ ವಚನಗಳು(೧೯೭೧)ಃಸಂ ಡಾ. ಆರ್.ಸಿ ಹಿರೇಮಠ, ವ. ಸಂ೧೬೨
೬. ಅದೇ, ವ. ಸಂ. ೧೧೧೧.
೭. ಅದೇ ವ. ಸಂ. ೯೯.
೮. ಅಲ್ಲಮನ ವಚನಚಂದ್ರಿಕೆ (೧೯೬೦)ಃ ಸಂ. ಎಲ್. ಬಸವರಾಜು. ವ. ಸಂ. ೧೭೦.
೯. ಅದೇ, ವ. ಸಂ. ೯೦೮.
೧೦. ಮಹಾದೇವಿಯಕ್ಕನ ವಚನಗಳು (೧೯೭೩) ಃ ಸಂ.ಡಾ. ಆರ್. ಸಿ. ಹಿರೇಮಠ ವ. ಸಂ. ೨೮೭.
೧೧. ಅದೇ, ವ. ಸಂ. ೧೭೮.
೧೨. ಚನ್ನಬಸವಣ್ಣವರ ವಚನಗಳುಃ ಸಂ. ಡಾ. ಆರ್. ಸಿ. ಹಿರೇಮಠ ವ. ಸಂ೧೨೧೯.
೧೩. ಶಿವಶರಣೆಯರು ವಚನಗಳು: ನೀಲಮ್ಮನ ವಚನಗಳು ಃ ಸಂ ಡಾ. ಆರ್. ಸಿ. ಹಿರೇಮಠ ಪುಟ. ೧೯೧. ವ. ಸಂ ೯ (೧೯೬೮). ಶ್ರೀ.ಪರಶುರಾಮಯ್ಯ ಎಂ.ಎ ಅವರು ಸಂಪಾದಿಸಿರುವ 'ನೀಲಲೋಚನೆಯ ವಚನಗಳು' ಎಂಬ ಮುದ್ರಿತ ಪ್ರತಿಯಲ್ಲಿಯೂ ಈ ವಚನವಿದೆ.
೧೪. ಸಿಂಗಿರಾಜ ಪುರಾಣ(೧೯೫೧) ಃ ಸಂ. ಎಚ್.ದೇವೀರಪ್ಪ. ಸಂಧಿ-೪೮. ಪದ್ಯ ೩.೭.೧೨
೧೫. ಚೆನ್ನಬಸವ ಪುರಾಣ (೧೯೩೮)ಃ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಧಾರವಾಡ ಪ್ರಕಟನೆ, ಸಂಧಿ ೫. ಪದ್ಯ ೬೫.
೧೬. ಅದೇ ಸಂಧಿ ೪. ಪದ್ಯ ೮.
೧೭. ಷಟಸ್ಥಲಪ್ರಭೆಯಲ್ಲಿ ಉದ್ಧೃತ ಪುಟ ೪೬.
೧೮. ಬಸವರಾಜ ದೇವರ ರಗಳೆ (ನಾಲ್ಕನೆಯ ಮುದ್ರಣ)ಃ ಸಂ.ಟಿ.ಎಸ್. ವೆಂಕಣ್ಣಯ್ಯ, ಸ್ಥಲ—೬ ಪುಟ—೩೬
೧೮. ಅ) ಅದೇ ಸ್ಥಲ ೮. ಪುಟ೫೦.
೧೯. ಬಸವಪುರಾಣ(೧೯೭೧)ಃ ಸಂ. ಡಾ. ಆರ್.ಸಿ. ಹಿರೇಮಠ. ಸಂಧಿ ೨೭ ಪದ್ಯ ೮
೨೦. ಷಟ್‌ಸ್ಥಲಪ್ರಭೆ(೧೯೬೬) ಃ ಡಾ. ಆರ್. ಸಿ. ಹಿರೇಮಠ, ಪುಟ—೯೫
೨೧. ಅದೇ, ಪುಟ ೪೬, ೪೭. ಉತ್ತಂಗಿ ಚನ್ನಪ್ಪನವರು ತಮ್ಮ '. ಅನುಭವಮಂಟಪದ ಐತಿಹಾಸಿಕತೆ' ಎಂಬ ಗ್ರಂಥದಲ್ಲಿ ಕಾಲಜ್ಞಾನ ವಚನಗಳಲ್ಲಿ ಬರುವ ಮಂಟಪಗಳ ಪಟ್ಟಿ ಕೊಟ್ಟಿದ್ದಾರೆ.
೨೨. ಸಿಂಗಿರಾಜ ಪುರಾಣ ಃ ಸಂಧಿ ೪೮, ಪದ್ಯ ೩

೨೩. ಚೆನ್ನಬಸವ ಪುರಾಣ : ಸಂಧಿ ೪. ಪದ್ಯ ೧೮.

೨೪. ಅನುಭವ ಮಂಟಪದ ಐತಿಹಾಸಿಕತೆಯ ಬಗೆಗೆ ಸಂಶಯ ತಾಳಿದ, ಕಪಟರಾಳ ಕೃಷ್ಣರಾಯರು "ಅನುಭವ ಮಂಟಪವು ಐತಿಹಾಸಿಕವೆ?" ಎಂಬ ಲೇಖನವನ್ನು ಜಯಂತಿ ಸಂಪುಟ—೬, ಸಂಚಿಕೆ—೮ರಲ್ಲಿ ೧೯೪೪ ರಲ್ಲಿ ಪ್ರಕಟಿಸಿದರು. ಅವರ ವಾದವನ್ನು ಉತ್ತಂಗಿ-ಚನ್ನಪ್ಪನವರು ಖಂಡಿಸಿ 'ಅನುಭವಮಂಟಪದ ಐತಿಹಾಸಿಕತೆ 'ಗ್ರಂಥವನ್ನೇ ಬರೆದಿದ್ದಾರೆ. ಅದು ಧಾರವಾಡದ ಶ್ರೀ ಮುರುಘಾಮಠದಿಂದ ೧೯೫೧ ರಲ್ಲಿ ಪ್ರಕಟವಾಗಿದ್ದು, ೧೯೭೬ ರಲ್ಲಿ ಅದರ ಎರಡನೆಯ ಮುದ್ರಣ ಬಂದಿದೆ. ಡಾ. ಚಿದಾನಂದಮೂರ್ತಿ ಅವರ ' ಶೂನ್ಯಸಂಪಾದನೆಯನ್ನು ಕುರಿತು, ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರ ಶೂನ್ಯ ತತ್ವ ವಿಕಾಸ ಮತ್ತು ಶೂನ್ಯ ಸಂಪಾದನೆ. ಹಾಗೂ ಡಾ. ಆರ್. ಸಿ. ಹಿರೇಮಠ ಅವರ ಷಟಸ್ಥಲಪ್ರಭೆ" ಇತ್ಯಾದಿ ಗ್ರಂಥಗಳಲ್ಲಿ ಕೂಡ ಅನುಭವಮಂಟಪದ ಅಸ್ತಿತ್ವವನ್ನು ಕುರಿತು ಕೆಲವು ವಿಚಾರಗಳು ಬಂದಿವೆ.

೨೫. ಹರಿಹರನ ರಗಳೆಗಳು (ಸಮಗ್ರ ಸಂಪುಟ): ಸಂ. ಫ. ಗು. ಹಳಕಟ್ಟಿ, ಸಮಾಜ ಪುಸ್ತಕಾಲಯ ಧಾರವಾಡ ಪ್ರಕಟನೆ (೧೯೬೮): 'ಕೇಶಿರಾಜ ದಣ್ಣಾಯಕ ರಗಳೆ' ಪುಟ ೨೯೮, ೯೮.

೨೬. ಅದೇ, ಪುಟ. ೩೦೬

೨೭. ಅದೇ, 'ತೆಲುಗು ಜೊಮ್ಮಯ್ಯನ ರಗಳೆ' ಪುಟ ೩೪೫. ಇದೇ ರಗಳೆಯ ಪುಟ೩೩೯ ರಲ್ಲಿ ತೆಲುಗು ಜೊಮ್ಮಯ್ಯನು "ಶಿವಗೋಷ್ಠಿಯೊಳ್ ಬೆಳೆಯುತಂ" ಒಪ್ಪಿದ್ದನೆಂದು ಹೇಳಿದೆ.

೨೮. ಅದೇ' ಶಂಕರದಾಸಿಮಯ್ಯನ ರಗಳೆ' : ಪುಟ ೪೧೦.

೨೯. ಅದೇ' ಬಾಹೂರು ಬೊಮ್ಮಯ್ಯನ ರಗಳೆ' ಪುಟ ೩೧೮.

೩೦. ಅದೇ ' ರೇವಣಸಿದ್ಧೇಶ್ವರನ ರಗಳೆ" ಪುಟ ೩೬೨.

೩೧. ' ಕನ್ನಡ ಶಾಸನಸಂಪದ" (೧೯೭೫) : ಸಂ. ಡಾ. ಆರ್.ಸಿ. ಹಿರೇಮಠ ಮತ್ತು ಡಾ. ಎಂ. ಎಂ. ಕಲಬುರ್ಗಿ, ಅಬ್ಬಲೂರು ಶಾಸನ ಸಾಲು ೭೦. ೭೧, ಪುಟ-೯೦.

೩೨. ಬಸವಣ್ಣನವರ ವಚನಗಳು (೧೯೬೮) : ಸಂ. ಡಾ. ಆರ್.ಸಿ. ಹಿರೇಮಠ, ವ. ಸಂ. ೪೭೫ ೫೧೭, ಮತ್ತು ೧೪೭, ೩೨೦, ೪೭೫ ಇತ್ಯಾದಿ.

೩೩. Mediaeval Jainism (1938) :B.A. Saletore Page 48, 49

೩೪. ಚನ್ನಬಸವಣ್ಣನವರ ವಚನಗಳು : ಸಂ. ಡಾ. ಆರ್. ಸಿ. ಹಿರೇಮಠ, ನಂ ಸಂ. ೫೨೮

೩೫. ಇಂಥ ತಾಂತ್ರಿಕ ಪಂಥಗಳ : ವಿವರಕ್ಕೆ, ಚಿದಾನಂದಮೂರ್ತಿ ಅವರ 'ಸಂಶೋಧನ ತರಂಗ' ದಲ್ಲಿ ಬರುವ ಮಧ್ಯಕಾಲೀನ ಕರ್ನಾಟಕದ ಕೆಲವು ರಹಸ್ಯ ತಾಂತ್ರಿಕ ಪಂಥಗಳು ಎಂಬ ಲೇಖನ ನೋಡಿ.

೩೬. ಬಸವಣ್ಣನವರ ವಚನಗಳು : ಸಂ ಡಾ. ಆರ್. ಸಿ. ಹಿರೇಮಠ, ವ. ಸಂ ೫೫೫.

೩೭. ಅದೇ ವ. ಸಂ. ೫೬೧.

೩೮. ಹರಿಹರನ ರಗಳೆ (ಸಮಗ್ರ ಸಂಪುಟ) : ಮಾದಾರ ಚೆನ್ನಯ್ಯನ, ಪುಟ ೩೫೭.

ತಂತ್ರದ ಮೂಲಕ ಅನುಭವ ಶೋಧನೆ

ಬಸವರಾಜ ನಾಯ್ಕರ

ಆಂಗ್ಲ ಸಾಹಿತ್ಯದಲ್ಲಿ ಮಾರ್ಕ್ ಶೋರರ್ ಅವರು ತಂತ್ರವನ್ನು ಕುರಿತು ಮಂಡಿಸಿದ ವಿಚಾರಗಳನ್ನು ಕೇಳಿರದ ವಿದ್ಯಾರ್ಥಿಗಳೆಲ್ಲಿಯೂ ಇರಲಿಕ್ಕಿಲ್ಲ. ಅವರ ವಿಚಾರಗಳು ಆಂಗ್ಲ ಸಾಹಿತ್ಯ ಲೋಕದಲ್ಲಿ ಅತ್ಯಂತ ಜನಪ್ರಿಯವೂ ಪ್ರಭಾವಪೂರ್ಣವೂ ಆಗಿರುವುದರಿಂದ ಪ್ರತಿಯೊಬ್ಬ ವಿಮರ್ಶಕನು ಅವರ ವಿಚಾರಗಳನ್ನು ಒಂದಲ್ಲ ಒಂದು ರೀತಿಯಿಂದ ಬಳಸಿಕೊಳ್ಳಲೇ ಬೇಕಾಗುತ್ತದೆ. ಮಾರ್ಕ್‌ಶೋರರ್ ಅವರ ವಿಚಾರಗಳು ಸೈದ್ಧಾಂತಿಕ ವಿಮರ್ಶೆಯಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆಯುತ್ತವೆ. ಆಧುನಿಕ ಜಗತ್ತಿನಲ್ಲಿ ಯಾವುದೋ ಒಂದು ಮೂಲೆಯಲ್ಲಿ ಪಂಡಿತನೊಬ್ಬ ಮಂಡಿಸಿದ ಹೊಸ ವಿಚಾರಗಳು ಪ್ರಸಾರ ಮಾಧ್ಯಮಗಳ ಮೂಲಕ ಜಗತ್ತಿನ ಎಲ್ಲೆಡೆಗೂ ಹರಡಿ ಇತರ ವಿಚಾರಗಳಿಗೆ ಪ್ರೇರಣೆಯನ್ನೊದಗಿಸುವುದು ಈಗ ಸಾಮಾನ್ಯವಾಗಿ ಬಿಟ್ಟಿದೆ. ಅದೇ ತತ್ವದ ಪ್ರಕಾರ ಮಾರ್ಕ್‌ಶೋರರ್ ಅವರ ವಿಚಾರಗಳು ಕನ್ನಡ ವಿಮರ್ಶಾ ಕ್ಷೇತ್ರದಲ್ಲಿಯೂ ಪ್ರವೇಶಿಸಿದ್ದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ಕನ್ನಡನಾಡಿನಲ್ಲಿ ಇತ್ತಿತ್ತಲಾಗಿ ಹುಲುಸಾಗಿ ಬೆಳೆಯುತ್ತಿರುವ ನವ್ಯ ವಿಮರ್ಶೆಯಲ್ಲಿ ಪಾಶ್ಚಾತ್ಯ ವಿಮರ್ಶೆಯ ವಿಚಾರಗಳು ಎಷ್ಟೊಂದು ವ್ಯಕ್ತವಾಗಿವೆಯೆಂದರೆ ಕೊನೆಗೆ ಯಾರಾದರೂ ಪ್ರಾಮಾಣಿಕವಾಗಿ ಪರೀಕ್ಷಿಸಿ ಈ ನವ್ಯ ವಿಮರ್ಶೆಯಲ್ಲಿ ಕನ್ನಡ ವಿಮರ್ಶಕರ ಮೂಲಭಂಡವಾಳವೆಷ್ಟು ಮತ್ತು ಎರವಲು ತಂದದ್ದು ಎಷ್ಟು ಅಥವಾ ಕನ್ನ ಹೊಡೆದದ್ದು ಎಷ್ಟು ಅಥವಾ ಪಾಶ್ಚಾತ್ಯ ವಿಚಾರಗಳನ್ನು ಮೂಲ ಲೇಖಕರ ಹೆಸರನ್ನು ಉದ್ಧರಿಸದೆ ಅನಾಮತ್ತಾಗಿ ಎತ್ತಿಕೊಂಡದ್ದೆಷ್ಟು ಎಂದು ಮುಂತಾಗಿ ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ನಮಗೆ ತಿಳಿಯುವ ಸಂಗತಿಯೇನೆಂದರೆ ಕನ್ನಡ ನವ್ಯ ವಿಮರ್ಶಕನ ಮೂಲ ಭಂಡವಾಳ ಎಳ್ಳಷ್ಟೂ ಇಲ್ಲವೆಂಬುದು. ಹಾಗಿದ್ದರೆ ಏನೂ ಇಲ್ಲದ ಈ ಮನುಷ್ಯ ಮಹಾವಿಮರ್ಶಕನಾಗುವ ಬಗೆ ಹೇಗೆ ಎಂದು ಸರಳವಾಗಿ ಕೇಳಬಹುದು. ನವ್ಯವಿಮರ್ಶಕನೊಬ್ಬ ಪಡಪೋಶಿಯಾದ ವ್ಯಾಪಾರಿಯಿದ್ದ ಹಾಗೆ. ಬಡವ್ಯಾಪಾರಿಯೊಬ್ಬ ಯಾರಿಂದಲೋ ನೂರು ರೂಪಾಯಿ ಸಾಲ ತಂದು ಸಣ್ಣಪ್ರಮಾಣದಲ್ಲಿ ಅಂಗಡಿತೆಗೆದು ಯಾರಿಂದಲೋ ಸಾಮಾನುತಂದು ಯಾರಿಗೋಮಾರಿ ಕೊನೆಗೆ ಸಾಕಷ್ಟು ಹಣಗಳಿಸಿ ಪ್ರತಿಷ್ಠಿತ ವ್ಯಕ್ತಿಯಾಗುವಂತೆ ನವ್ಯವಿಮರ್ಶಕ ಯಾವದೋ ಪಾಶ್ಚಾತ್ಯ ವಿಮರ್ಶಕರ

ವಿಚಾರಗಳನ್ನು ಕನ್ನಡ ಭಾಷೆಗೆ ಅನುವಾದಿಸುವ ಸಾಹಸಕ್ಕೆ ಕೈ ಹಾಕದೆ ಸರಳ ಭಾಷೆಯಲ್ಲಿ ತನಗೆ ತಿಳಿದಮಟ್ಟದಲ್ಲಿಯೆ ಸಂಗ್ರಹವಾಗಿ ಬರೆದು, ಸಾಧ್ಯವಾದರೆ ಮೂಲಲೇಖಕರ ಹೆಸರನ್ನು ಬಹಿರಂಗ ಪಡಿಸುವ ಗೋಜಿಗೆ ಹೋಗದೆ, ಸ್ವತಂತ್ರ ವಿಮರ್ಶಕನೆಂದು ಅಗ್ಗ ಪ್ರಚಾರವನ್ನು ಪಡೆದು ಅದರ ಬಲದಿಂದಲೆ ಬಹುಮಾನ, ಪ್ರಶಸ್ತಿಗಳನ್ನು ಪಡೆಯುವ ಗತ್ತಿನಲ್ಲಿಯೆ ಇರುತ್ತಿರುತ್ತಾನೆ. ಪಾಶ್ಚಾತ್ಯ ಭಾಷೆಯು, ಅಂದರೆ ಇಂಗ್ಲಿಷ್ ಭಾಷೆಯ ಜ್ಞಾನವಿಲ್ಲದಂಥ ಕೂಪಮಂಡೂಕ ಕನ್ನಡ ಪಂಡಿತರು ಮತ್ತು ಅವರ ವಿದ್ಯಾರ್ಥಿಗಳು ಇಂಥ ನವ್ಯವಿಮರ್ಶಕರು ಬರೆದಿರುವ ವಿಚಾರಗಳು ಪಾಶ್ಚಾತ್ಯ ಲೋಕದ ಯಾವ ಮೂಲೆಯಿಂದ ಕೊಳ್ಳೆ ಹೊಡೆದವುಗಳಾಗಿವೆಯೆಂಬುದನ್ನು ತಿಳಿಯಲು ಅಸಮರ್ಥರಾಗಿರುವುದರಿಂದ ಅವೆಲ್ಲ ನವ್ಯ-ವಿಮರ್ಶಕರ ತಲೆಯಲ್ಲಿಯೆ ಹೊಸದಾಗಿ ಉದ್ಭವಿಸಿದ ವಿಚಾರಗಳೆಂದು ಭ್ರಮಿಸಿ ಅವುಗಳನ್ನು ವೇದವಾಕ್ಯವೆಂದು ಪರಿಗಣಿಸಿ ಅವರನ್ನು ತಲೆಯ ಮೇಲೆ ಹೊತ್ತುಕೊಂಡು ಕುಣಿಯುವ ಹಾಸ್ಯಾಸ್ಪದ ಪ್ರವೃತ್ತಿಯನ್ನು ಪ್ರದರ್ಶಿಸುತ್ತಾರೆ. ಹೀಗೆ ಕನ್ನಡ ಪಂಡಿತರ ಅಜ್ಞಾನದ ಆಧಾರದ ಮೇಲೆಯೇ ಉತ್ತರೋತ್ತರ-ವಾಗಿ ಬೆಳೆಯುತ್ತಿರುವ ನವ್ಯವಿಮರ್ಶಕರ ಗತ್ತು ಮತ್ತು ಧಿಮಾಕುಗಳನ್ನು ನೋಡಿದಾಗ ಕನ್ನಡ ಪಂಡಿತರ ಬಗೆಗೆ ಕನಿಕರವೂ, ನವ್ಯವಿಮರ್ಶಕರ ಬಗೆಗೆ ಸಿಟ್ಟು ಮತ್ತು ತಿರಸ್ಕಾರವೂ ಅನಿಸಿದರೆ ಆಶ್ಚರ್ಯವೇನಿಲ್ಲ. ಇಂಥ ಆಂಗ್ಲ ಪ್ರಾಧ್ಯಾಪಕರಾದ ನವ್ಯವಿಮರ್ಶಕರು ಎಲ್ಲೆಲ್ಲಿಂದ ಯಾವಯಾವ ವಿಚಾರಗಳನ್ನು ಕದ್ದಿದ್ದಾರೆಂದು ತೋರಿಸಬೇಕೆಂದರೆ ಅದೇ ಹತ್ತು ಮಹಾಪ್ರಬಂಧಗಳಷ್ಟು ಕೆಲಸವಾಗುವುದು. ಅಲ್ಲದೆ ವಿನಾಕಾರಣ ವೈರತ್ವವೂ ಬೆಳೆಯುತ್ತ ಹೋಗುವುದು. ಅಂಥ ಮಾನ ಹಾನಿಯಂಥ ಅಪಪ್ರಚಾರ ಮಾಡುವದರ ಬದಲು ಕೆಲವು ಪಾಶ್ಚಾತ್ಯ ವಿಮರ್ಶಕರ ವಿಚಾರಗಳನ್ನು ಅವರ ಹೆಸರಿನಲ್ಲಿಯೆ ಮತ್ತು ಅವರ ಭಾಷೆಯಲ್ಲಿಯೆ ಸಂಗ್ರಹಿಸಿದರೆ ಕನ್ನಡ ಪಂಡಿತರಿಗೆ ಉಪಕಾರ ಮಾಡಿದಂತಾಗುತ್ತದೆ. ಅಲ್ಲದೆ ನವ್ಯವಿಮರ್ಶಕರು ತಮ್ಮ ಬೆನ್ನುಗಳನ್ನು ಮುಟ್ಟಿ ನೋಡಿಕೊಳ್ಳುವಂತೆಯೂ ಆಗುತ್ತದೆ. ಆಗ ನವ್ಯವಿಮರ್ಶೆಯ ಹೊಸತನ ಮತ್ತು ಮೂಲವಿಚಾರಗಳಾವವು ಮತ್ತು ಅವರಿಂದ ಎಷ್ಟರ ಮಟ್ಟಿನ ಉಪಕಾರ ಸಾಹಿತ್ಯಕ್ಕಾಗಿದೆ ಎಂಬಿವೆ ಮುಂತಾದ ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ಉತ್ತರ ಹುಡುಕುವದು ಆದರ್ಶವಾದ್ದರಿಂದ ಪ್ರಾಮಾಣಿಕ ಕನ್ನಡ ವಿಮರ್ಶಕನ ಹೊಣೆಯಾಗಿದೆ. ನವ್ಯ ಸಾಹಿತ್ಯದಲ್ಲಿ ಮಾರ್ಕ್ ಶೋರರ್‌ನು ತಂತ್ರದ ವಿಷಯವಾಗಿ ಬರೆದ ವಿಚಾರಗಳನ್ನು ಅನೇಕ ವಿಮರ್ಶಕರು ಎತ್ತಿಕೊಂಡು ಅವನ ಹೆಸರನ್ನು ಹೆಚ್ಚಾಗಿ ಪ್ರಚಾರಪಡಿಸದೆ ಕಾದಂಬರಿಗೆ ಅನ್ವಯಿಸಿ ಬರೆದಿದ್ದಾರೆ. ಇಂಥ ದಳ್ಳಾಳಿಗಳ ಮೂಲ ಸಾಮಗ್ರಿ ಎಲ್ಲಿಂದ ಬಂದುದೆಂಬುದನ್ನು ತೋರಿಸುವುದರ ದಿಶೆಯಿಂದಲೆ ಈ ಲೇಖನದಲ್ಲಿ ಮಾರ್ಕ ಶೋರರ್ ಅವರ ವಿಚಾರಗಳನ್ನು ಚರ್ಚಿಸಲಾಗಿದೆ. ಇದನ್ನೋದಿದ ನಂತರ ಓದುಗರು ತಾವೆ ಮುಂದಿನ ಕೆಲಸವನ್ನು ಕೈಕೊಳ್ಳಬಹುದು.

ಮಾರ್ಕ್‌ಶ್ರೋರರ್ ಅವರು ಅಮೇರಿಕೆಯವರಾಗಿದ್ದು ವಿಸ್ಕಾನ್ಸಿನ್ ಮತ್ತು ಹಾರವರ್ಡ್ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದ ನಂತರ ಈಗ ಸದ್ಯಕ್ಕೆ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಆಂಗ್ಲ ಭಾಷಾ ಪ್ರಾಧ್ಯಾಪಕರೆಂದು ಕೆಲಸ ಮಾಡುತ್ತಿದ್ದಾರೆ. ಅವರು ಜಗತ್ಪ್ರಸಿದ್ಧರಾಗಿದ್ದುದು ವಿಮರ್ಶಾ ಕ್ಷೇತ್ರ ದಲ್ಲಿಯೇ ಎನ್ನಬಹುದು. *William Blake : the politics of vision* ಮತ್ತು *Sinclair Lewis : an American life* ಎಂಬ ಅವರ ವಿಮರ್ಶಾ ಗ್ರಂಥಗಳು ಸುಪ್ರಸಿದ್ಧವಾಗಿವೆ. ಈ ಲೇಖನದಲ್ಲಿ ಅವರ *Technique as Discovery* ಎಂಬ ಪ್ರಬಂಧದಲ್ಲಿರುವ ವಿಚಾರಗಳನ್ನು ಚರ್ಚಿಸಲಾಗಿದೆ. ಅವರ ಈ ವಿಚಾರಗಳು ಅಮೇರಿಕೆಯಲ್ಲಿ ಪ್ರಾರಂಭವಾದ ನವ್ಯ ವಿಮರ್ಶೆ (New Criticism) ಗೆ ಋಣಿ ಯಾಗಿವೆಯೆಂಬುದನ್ನು ಮರೆಯುವಹಾಗಿಲ್ಲ.

ಮಾರ್ಕ್ ಶ್ರೋರರ್ ಅವರು ಕೀಟ್ಸನ ಸುಪ್ರಸಿದ್ಧವಾದ ಸತ್ಯ ಮತ್ತು ಸೌಂದರ್ಯವೆಂಬ ವಿಚಾರಗಳನ್ನೆ ಬಳಸಿಕೊಂಡು ಅನಂತರ ಅವುಗಳನ್ನು ಬದಲಾ ಯಿಸಿಕೊಂಡು ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ. ಸಾಹಿತ್ಯ ವಿಮರ್ಶೆಯಲ್ಲಿ ಒಂದು ಸಾಹಿತ್ಯಕೃತಿಯ ಕಥಾವಸ್ತು ಮತ್ತು ತಂತ್ರವನ್ನು ಕುರಿತು ಚರ್ಚಿ-ಸುವುದು ಸಾಮಾನ್ಯವಾಗಿದೆ. ಕೀಟ್ಸನ ಭಾಷೆಯಲ್ಲಿ ಸತ್ಯ ಮತ್ತು ಸೌಂದರ್ಯ ಗಳೆರಡೂ ಅನ್ಯೋನ್ಯವಾಗಿವೆ ಅಥವಾ ಒಂದೆಯೆ ಆಗಿರುತ್ತವೆ. ಆಧುನಿಕ ಭಾಷೆಯಲ್ಲಿ ಅದನ್ನು ಅರ್ಥಮಾಡಿಕೊಳ್ಳಬೇಕೆಂದರೆ ಸತ್ಯಕ್ಕೆ ಬದಲಾಗಿ 'ಕಥಾವಸ್ತು' (content) ವೆಂದೂ ಸೌಂದರ್ಯಕ್ಕೆ ಬದಲಾಗಿ 'ರೂಪ' ಅಥವಾ 'ಆಕಾರ' (Form) ವೆಂದೂ, ಕರೆಯಬಹುದು. ಅಂದರೆ ಕಥಾವಸ್ತು ಮತ್ತು ರೂಪ ಇವೆರಡೂ ಭಿನ್ನವಸ್ತುಗಳಾಗಿರದೆ ಒಂದೇ ಆಗಿರುವುವೆಂಬುದನ್ನು ನಾವು ವಿಶೇಷವಾಗಿ ಗಮನಿಸಬೇಕು. ಆಧುನಿಕ ವಿಮರ್ಶೆಯಲ್ಲಿ ಕಥಾವಸ್ತುವಿನ ಬಗೆಗೆ ಚರ್ಚಿಸುವುದೆಂದರೆ ಅನುಭವದ ಬಗೆಗೆ ಚರ್ಚಿಸಿದಂತೆಯೆ ಹೊರತು ಸಾಹಿತ್ಯದ ಬಗೆಗೆ ಚರ್ಚಿಸಿದಂತಾಗಲಿಲ್ಲವೆಂಬ ವಿಚಾರಸರಣಿ ಎಲ್ಲರಿಂದಲೂ ಸ್ವೀಕೃತವಾಗಿದೆ. ಹಾಗಾದರೆ ನಾವು ಸಾಹಿತ್ಯವಿಮರ್ಶೆಯ ಕ್ಷೇತ್ರದಲ್ಲಿ ಚರ್ಚಿಸಬೇಕಾದ ಸಮ-ಸ್ಯೆಗಳಾವವು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅದಕ್ಕೆ ಉತ್ತರವಾಗಿ ಮಾರ್ಕ್ ಶ್ರೋರರ್ ಅವರು ಹೇಳುವುದೇನೆಂದರೆ ಸಾಹಿತ್ಯವಿಮರ್ಶಕನಾದವ ಸಾಹಿತ್ಯ ಕೃತಿಯಲ್ಲಿ ಸಾಧಿಸಲ್ಪಟ್ಟ ವಸ್ತುವನ್ನು ಕುರಿತು ಚರ್ಚಿಸುವುನಲ್ಲದೆ ಜೀವನದ ನೇರವಾದ ಅನುಭವವನ್ನಲ್ಲ ಎಂಬುದು. 'ಸಾಧಿಸಿದ' ಅನುಭವವೆಂದರೆ ಸಾಹಿತ್ಯದ ರೂಪವೆ ಆಗಿದೆ. ಹಾಗಿದ್ದರೆ ಜೀವನದ ನೇರವಾದ ಅನುಭವ ಮತ್ತು ಸಾಹಿತ್ಯ ಕೃತಿಯಲ್ಲಿ ಸಾಧಿಸಿದ ಅನುಭವ ಇವೆರಡರ ಮಧ್ಯದಲ್ಲಿರುವ ಅಂತರವೇನು ಮತ್ತು ಯಾವ ತರಹದ್ದು ಎಂದು ಕೇಳಬಹುದು. ನೇರವಾದ ಅನುಭವ ಮತ್ತು

ಸಾಹಿತ್ಯಕೃತಿಯಲ್ಲಿ ಸಾಧಿಸಿದ ಅನುಭವ ಅಥವಾ ವಸ್ತುವಿನ ಮಧ್ಯದಲ್ಲಿರುವ ಅಂತರವನ್ನೆ ಮಾರ್ಕ್ ಶ್ಲೋರರ್ ಅವರು ತಂತ್ರವೆಂದು ಪರಿಗಣಿಸುತ್ತಾರೆ.

ತಂತ್ರದ ಬಗೆಗೆ ಚರ್ಚಿಸುವುದೆಂದರೆ ಸರ್ವಸ್ವವನ್ನು ಚರ್ಚಿಸಿದಂತೆಯೆ ಎಂದು ಅವರು ಹೇಳುತ್ತಾರೆ. ಏಕೆಂದರೆ ಸಾಹಿತಿಯು ತನ್ನ ಜೀವನಾನುಭವವನ್ನೂ ಸಾಹಿತ್ಯವನ್ನಾಗಿ ಮಾರ್ಪಡಿಸುವದು ಅಥವಾ ಕಥಾವಸ್ತುವನ್ನಾಗಿ ಮಾಡಿ- ಕೊಳ್ಳುವುದು ಮೂಲತಃ ತಂತ್ರದಿಂದಲೆ ಎಂದು ಹೇಳಬಹುದು. ಆತ ತಂತ್ರದ ಮೂಲಕವೆ ತನ್ನ ಅನುಭವವನ್ನು ಶೋಧಿಸಿಕೊಂಡು, ಬಹಿರಂಗಗೊಳಿಸಿಕೊಂಡು ಮತ್ತು ವರ್ಧಿಸಿಕೊಂಡು ಸಾಹಿತ್ಯಕೃತಿಯನ್ನು ರಚಿಸಬೇಕಾಗುತ್ತದೆ. ತಂತ್ರದ ಮೂಲಕವೆ ಆತ ಅರ್ಥಸಂವಹನವನ್ನು ಸಾಧಿಸಿ ಕೊನೆಗೆ ಅದರ ಮೌಲ್ಯ ಮಾಪನವನ್ನು ಮಾಡಬೇಕಾಗುತ್ತದೆ. ಅಂದರೆ ಸಾಹಿತಿ ತನ್ನ ಸಾಹಿತ್ಯಕೃತಿಯಲ್ಲಿ ಏನೆಲ್ಲ ಸಾಧಿಸುವುದು ತಂತ್ರಮಾಧ್ಯಮದ ಮೂಲಕವೆ ಎಂಬುದು ಸ್ಪಷ್ಟವಾಯಿತು. ಈ ಕಾರಣಕ್ಕಾಗಿಯೆ ಕೆಲವು ತಂತ್ರಗಳು ಇನ್ನು ಹಲವು ತಂತ್ರಗಳಿಗಿಂತ ಉತ್ತಮ ವಾಗಿಯೂ ಪ್ರಭಾವಪೂರ್ಣವಾಗಿಯೂ ಪರಿಣಮಿಸುತ್ತವೆ. ಆದ್ದರಿಂದ ಅವು ಅನುಭವದ ಶೋಧನೆಯನ್ನು ಹೆಚ್ಚು ಯಶಸ್ವಿಯಾಗಿ ಮಾಡಲಿಕ್ಕೆ ಉಪಯುಕ್ತ ವಾಗಿರುತ್ತವೆ. ಯಾವತಂತ್ರವನ್ನುಪಯೋಗಿಸಿಕೊಂಡರೆ ತನ್ನ ಅನುಭವವನ್ನು ಹೆಚ್ಚು ಸೂಕ್ಷ್ಮವಾಗಿ ಶೋಧಿಸಿ, ಓದುಗರ ಮನಸೆಳೆಯುವಂತೆ ದಟ್ಟವಾಗಿ, ಸೂಚ್ಯವಾಗಿ, ಅರ್ಥಗರ್ಭಿತವಾಗಿ ಚಿತ್ರಿಸಲಿಕ್ಕೆ ಸಾಧ್ಯವಿದೆ ಅಥವಾ ಸಾಧ್ಯವಾಗ ಬಹುದು ಎಂಬ ಅರಿವು ಸಾಹಿತಿಗಿದ್ದರೆ ಆತ ಅತ್ಯುತ್ತಮ ದರ್ಜೆಯ ಸಾಹಿತ್ಯವನ್ನು ನಿರ್ಮಿಸುವುದರಲ್ಲಿ ಸಂದೇಹವೆ ಇಲ್ಲ.

ಮಾರ್ಕ್ ಶ್ಲೋರರ್ ಅವರು ಈ ವಿಚಾರಗಳನ್ನು ಮೂಲತಃ ಕಾದಂಬರಿ ಸಾಹಿತ್ಯಪ್ರಕಾರಕ್ಕೆ ಅನ್ವಯಿಸಿ ಹೇಳುತ್ತಾರೆ ಏಕೆಂದರೆ ಜನರಲ್ಲಿ ಕಾವ್ಯ ತಂತ್ರದ ಬಗೆಗೆ ಇದ್ದಷ್ಟು ಅರಿವು ಕಾದಂಬರಿ ತಂತ್ರದ ಬಗೆಗೆ ಇರುವುದಿಲ್ಲ. ಸಾಮಾನ್ಯವಾಗಿ ನಾವು ಕಾದಂಬರಿಯನ್ನೋದುವಾಗ ಅದರಲ್ಲಿ ಕಥಾವಸ್ತುವೆ ಮುಖ್ಯವೆಂದೂ, ತಂತ್ರವು ಅಮುಖ್ಯವಾದುದೂ ಪೂರಕವಾದುದೆಂದೂ ಭ್ರಮಿಸುತ್ತೇವೆ. ತಂತ್ರ ವೆಂದರೆ ಮೂಲಕಥಾವಸ್ತುವಿನ ಮೇಲೆ ಹಾಕಿದ ಅಲಂಕಾರವೆಂದೂ ತಿಳಿಯುತ್ತೇವೆ. ಅಥವಾ ಇನ್ನೂ ಒರಟಾಗಿ ಹೇಳಬೇಕೆಂದರೆ ತಂತ್ರವೆಂಬುದು ಕಣ್ಣಿಗೆ ಹೊಡೆಯು ವಂಥ ಅಂಶಗಳಾದ ಕಥಾಹಂದರವನ್ನುಂಟು ಮಾಡಲು ಬೇಕಾಗಿರುವ ಘಟನಾ ವಳಿಯ ವ್ಯವಸ್ಥೆ, ಅಥವಾ ಕಥಾಹಂದರದ ಪರಿಧಿಯಲ್ಲಿಯೆ ಬರುವಂಥ ಕುತೂಹಲ ಮತ್ತು ಶಿಖರ, ಅಥವಾ ಪಾತ್ರಗಳ ಆಶಯ, ಸಂಬಂಧ ಮತ್ತು ಬೆಳವಣಿಗೆ ಅಥವಾ ದೃಷ್ಟಿಕೋನ ಮುಂತಾದ ಬಹಿರಂಗ ಅಂಶಗಳೆಂದೆ ಭ್ರಮಿಸುತ್ತೇವೆ. ಮಾರ್ಕ್ ಶ್ಲೋರರ್ ಅವರು ಒತ್ತಿಹೇಳುವ ಮಾತೇನೆಂದರೆ ತಂತ್ರವು ಕಾದಂಬರಿಯ ಶರೀರ

ವಾಗಿರದೆ ಅದು ಕಾದಂಬರಿಯ ಜೀವಾಳವೆ ಆಗಿದೆ ಎಂಬುದು. ಪ್ರಾಣವಿಲ್ಲದ ಶರೀರ ಹೇಗೆ ನಿರುಪಯುಕ್ತವೊ ಹಾಗೆ ತಾಂತ್ರಿಕ ನಿಯಂತ್ರಣವಿಲ್ಲದ ಅಭಿವ್ಯಕ್ತಿಯೂ ಅಸಾಹಿತ್ಯಿಕವಾಗಿರುತ್ತದೆ. ಅದರಂತೆ ಓದುಗರಲ್ಲಿ ಇನ್ನೂ ಒಂದು ತಪ್ಪು ಕಲ್ಪನೆ-ಯಿರುತ್ತದೆ. ಅದೇನೆಂದರೆ ಕಾದಂಬರಿಯ ಭಾಷೆಯು ಕಾದಂಬರಿಯ ತಂತ್ರಕ್ಕಿಂತ ಭಿನ್ನವಾಗಿದ್ದು ತಂತ್ರದ ಪರಿಧಿಯ ಹೊರಗಿರುತ್ತದೆ ಎಂಬುದು. ಮತ್ತೆ ಮಾರ್ಕ ಶೋರರ್ ಅವರು ನೆನಪಿಸುವುದೇನೆಂದರೆ ಭಾಷೆಯೂ ತಂತ್ರದ ಅಂಗವಾಗಿಯೆ ಇರುತ್ತದೆ ಎಂಬುದು. ಏಕೆಂದರೆ ಕಾದಂಬರಿಯಲ್ಲಿ ಭಾಷೆಯೂ ಅತ್ಯಂತ ಪ್ರಮುಖವಾದ ಮತ್ತು ಖಂಡಿತವಾದ ಕಾರ್ಯಮಾಡುತ್ತದೆ. ಭಾಷೆಯು ಕಾದಂಬರಿಕಾರನ ಜೀವನದರ್ಶನವನ್ನು ಸಂವಹಿಸಲಿಕ್ಕೆ ಬೇಕಾದ ಹೆಣಿಕೆಯನ್ನು ಧ್ವನಿಯನ್ನು ಉಂಟುಮಾಡಿ ಕಥಾವಸ್ತುವನ್ನು ನಿರ್ದಿಷ್ಟಗೊಳಿಸಿ ಅದರ ಅರ್ಥವನ್ನು ನಿಗದಿಪಡಿಸುತ್ತದೆಯಲ್ಲದೆ ನಾವು ಲೋಕರೂಢಿಯಲ್ಲಿ ಬಳಸುವ ಸಾಮನ್ಯ ಭಾಷೆಗೆ ಇರುವಂಥ ಅರ್ಥಗಳಿಗಿಂತ ಹೆಚ್ಚಿಗೆ ವಿಸ್ತಾರವಾದ ಮತ್ತು ಆಳವಾದ ಆಯಾಮ-ಗಳನ್ನು ತಂದುಕೊಡುತ್ತದೆ. ಜನಸಾಮನ್ಯರು ಭಾವಿಸುವುದೇನೆಂದರೆ ತಂತ್ರವೆನ್ನು ವುದು ಸಿದ್ಧವಾಗಿಟ್ಟದ್ದ ವಸ್ತುವೊಂದನ್ನು ಚೆನ್ನಾಗಿ ಹೊಂದಿಸಿಡುವ ಜಾಣ್ಮೆಯೆಂದು. ಆದರೆ ಅದು ಸರಿಯಾದ ತಿಳುವಳಿಕೆಯಲ್ಲ. ಮಾರ್ಕ ಶೋರರ್ ಮತ್ತೆ ಸ್ಪಷ್ಟಪಡಿಸು ತ್ತಾರೆ. ಅವರ ಪ್ರಕಾರ ತಂತ್ರವೆಂಬುದು ಅನುಭವದ ಶೋಧನೆಯಲ್ಲಿ ಮತ್ತು ಅನುಭವದಲ್ಲಿರುವ ಮೌಲ್ಯಗಳ ನಿರ್ಣಯದಲ್ಲಿ ಅಡಗಿರುತ್ತದೆ.

ಕಾದಂಬರಿಯ ಸರ್ವಸ್ವವೆಲ್ಲವೂ ತಂತ್ರದಿಂದಲೆ ನಿಯಂತ್ರಿತವಾಗಿರುತ್ತದೆ. ಹೀಗಿರುವುದರಿಂದ ತಂತ್ರವಿಲ್ಲದೆಯೆ ಕಾದಂಬರಿಯನ್ನು ಬರೆಯುವುದು ಅಸಾಧ್ಯ. ಕಾದಂಬರಿಯ ಭಾಷೆಯು ಅನುಭವದ ಗುಣಮಟ್ಟವನ್ನು ಎಷ್ಟರಮಟ್ಟಿಗೆ ಹಿಡಿದಿಡು ತ್ತದೆಯೆಂಬುದು ಒಂದು ಅತ್ಯಂತ ಮುಖ್ಯವಾದ ತಾಂತ್ರಿಕ ಪ್ರಶ್ನೆಯಾಗಿದೆ. ಅದರಂತೆಯು ಅನುಭವವನ್ನು ಹೇಗೆ ಮತ್ತು ಎಷ್ಟು ಆಯ್ದುಕೊಳ್ಳಬೇಕು, ಆಯ್ದು ಕೊಂಡ ಅನುಭವದ ಶಿಲ್ಪವನ್ನು ಹೇಗೆ ರಚಿಸಬೇಕು, ಕಾದಂಬರಿಯಲ್ಲಿ ನಡೆಯುವ ಕ್ರಿಯೆಯಲ್ಲಿ ಹೇಗೆ ಒಂದು ಆಕಾರವನ್ನು' ಸಾಮರಸ್ಯ ಅಥವಾ ಲಯವನ್ನು ಉಂಟುಮಾಡಿ ಅದರ ರಸಾಸ್ವಾದವನ್ನು ವರ್ಧಿಸಬೇಕು ಅಥವಾ ನವೀಕರಿಸಬೇಕೆಂಬುದು ಇವೆ ಮುಂತಾದ ಸಮಸ್ಯೆಗಳೆಲ್ಲ ತಾಂತ್ರಿಕ ಸಮಸ್ಯೆಗಳೆ ಆಗಿರುತ್ತವೆ. ತಾಂತ್ರಿಕ ಪರಿಜ್ಞಾನ ಅಥವಾ ಅಜ್ಞಾನದಿಂದುಂಟಾಗುವ ಲಾಭಹಾನಿ ಗಳೇನೆಂಬುದನ್ನು ತೋರಿಸುವುದರ ಸಲುವಾಗಿ ಮಾರ್ಕ್ ಶೋರರ್ ಅವರು ಐದು ಕಾದಂಬರಿಕಾರರನ್ನು ಆರಿಸಿಕೊಂಡು ಚರ್ಚಿಸುತ್ತಾರೆ. ಕೆಲವು ಕಾದಂಬರಿಕಾರರು ತಂತ್ರದ ಬಗೆಗೆ ಅಷ್ಟೊಂದು ಗಂಭೀರವಾಗಿ ಯೋಚಿಸ ಬಯಸುವುದಿಲ್ಲ. ಉದಾಹ-ರಣೆಗೆ ಡ್ಯಾನಿಯಲ್ ಡಿಫೊನ ಮಾಲ್ **ಮೊಲ್ ಫ್ಲ್ಯಾಂಡರ್ಸ** ಮತ್ತು ಎಮಿಲಿ

ಬ್ರಾಂಟಿ ಅವಳ **ಊದರಿಂಗ ಹೈಟ್ಸ** ಕಾದಂಬರಿಗಳು ಇದಕ್ಕೆ ನಿದರ್ಶನವಾವೆಗಿ. ಎಚ್. ಜಿ. ವೆಲ್ಸ್‌ನು ತಂತ್ರವನ್ನು ಬುದ್ಧಿಪೂರ್ವಕವಾಗಿ ತ್ಯಜಿಸಿದ. ಅವನ **ಟೊನೊಬಂಗೇ** ಇದಕ್ಕೆ ಉದಾಹರಣೆ. ಅದರಂತೆ ಡಿ. ಎಚ್. ಲಾರೆನ್ಸ್‌ನೂ ಕಥಾ-ವಸ್ತುವಿನ ಪ್ರಾಮುಖ್ಯತೆಯಿಂದಲೆ ಪ್ರೇರಿತನಾಗಿ ತಂತ್ರವನ್ನು ತಿರಸ್ಕರಿಸಿದ. ಇದಕ್ಕೆ ಉದಾಹರಣೆಯಾಗಿ **ದ ಸನ್ಸ್ ಆ್ಯಂಡ ಲವ್ಹರ್ಸ್** ಕಾದಂಬರಿಯನ್ನು ನೋಡ ಬಹುದು. ಇವರೆಲ್ಲರಿಗೆ ಲೇಖಕನೊಬ್ಬ, ಅಂದರೆ ಜೇಮ್ಸ ಜಾಯ್ಸನನ್ನೂ ನೋಡಬ ಹುದು. ಈತ ಸಾಹಿತ್ಯದಲ್ಲಿ ತಂತ್ರವೆಂದರೆ ಅತ್ಯಂತ ಮುಖ್ಯವಾದ ಅಂಶವೆಂದು ನಂಬಿ ಅದರಲ್ಲಿ ಈವರೆಗೆ ಯಾರೂ ಮಾಡಿರದಷ್ಟು ವಿಪರೀತ ಪ್ರಯೋಗ ಮಾಡಿದ. ಆತನ **ಪೊರ್ಟ್ರೇಟ್ ಆಫ್ ದಿ ಆರ್ಟಿಸ್ಟ್ ಆ್ಯಸ್ ಯಂಗಮ್ಯಾನ್** ಎಂಬ ಕಾದಂಬರಿಯನ್ನು ನಿದರ್ಶನವಾಗಿ ತೆಗೆದುಕೊಳ್ಳಬಹುದು.

ಎಚ್. ಜಿ. ವೆಲ್ಸ್‌ನು ತನ್ನ ಕಾದಂಬರಿಗಳನ್ನು ಬರೆಯುವಾಗ ತಂತ್ರಕ್ಕೆ ಅಷ್ಟೊಂದು ಮಹತ್ವ ಕೊಡಬಯಸಲಿಲ್ಲ. ಆದ್ದರಿಂದಲೆ ಆತ ಜೇಮ್ಸ ಜಾಯ್ಸ ಮತ್ತು ಜೋಸೆಫ್ ಕಾನ್ರಾಡ್ ಅವರ ನಿಕಟವರ್ತಿಯಾಗಿದ್ದರೂ ಅವರ ಪ್ರಭಾವಕ್ಕೆ ಒಳಗಾಗ ಬಯಸಲಿಲ್ಲ. ತಾನೊಬ್ಬ ಪತ್ರಕರ್ತನೆಂದು ಹೇಳಿಕೊಂಡು ತಂತ್ರವನ್ನು ನಿರ್ಲಕ್ಷಿಸಿದ. ಆತನಿಗೆ ತಂತ್ರದ ಬದಲು ಅನುಭವವೆ ಮುಖ್ಯವಾದುದರಿಂದ ತನ್ನ ಕಾದಂಬರಿಗಳಲ್ಲಿ ಅದನ್ನೆ ತನಗೆ ತಿಳಿದಂತೆ ಅಭಿವ್ಯಕ್ತಿಸುತ್ತ ಹೋದ. ಹೀಗಾಗಿ ಅವನ ಕಾದಂಬರಿಗಳು ಉಪದೇಶಪರವಾಗುತ್ತವೆ ಹೊರತು ಕಲಾತ್ಮಕವಾಗುವುದಿಲ್ಲ. ಅದೇ ಕಾರಣಕ್ಕಾಗಿ ಆತನ ಸ್ಥಾನ ಸಾಹಿತ್ಯ ಕ್ಷೇತ್ರದಲ್ಲಿ ಅಷ್ಟೊಂದು ಚಿರಸ್ಥಾಯಿಯಾಗಿ ನಿಲ್ಲುವುದಿಲ್ಲ.

ಎಮಿಲಿ ಬ್ರಾಂಟೆಯೂ ಇದೇ ತೆರನಾದ ತಪ್ಪನ್ನು ಮಾಡುತ್ತಾಳೆ. ಅವಳಿಗೂ ತಂತ್ರದ ಜ್ಞಾನವಾಗಲಿ ಅಥವಾ ತಂತ್ರವನ್ನು ನಿಯಂತ್ರಿಸಬೇಕೆಂಬ ಬಯಕೆಯಾಗಲಿ ಇರುವುದಿಲ್ಲ. ಆದರೆ ಅವಳು ತನ್ನ ಕಥಾವಸ್ತುವಿನ ತೀವ್ರತೆಯಿಂದಾಗಿಯೆ ಕೆಲವೊಂದು ಸರಳ ಸಾಮಾನ್ಯವಾದ ರೀತಿಯನ್ನನುಸರಿಸಿ ಕಾದಂಬರಿಗಳನ್ನು ರಚಿಸಿದಳು. ಅವಳು ತನ್ನ ಕಾದಂಬರಿಯಲ್ಲಿ ತೋರಿಸಬಯಸಿದುದೇನೆಂದರೆ ಅನೈತಿಕ ಭಾವನೆಯ ನೈತಿಕ ಘನತೆಯನ್ನು. ಇಂಥ ವಿರುದ್ಧಾತ್ಮಕ ಕಥಾವಸ್ತುವನ್ನು ಚಿತ್ರಿಸುವುದು ಅಷ್ಟೊಂದು ಸರಳವಾದ ಕಾರ್ಯವಲ್ಲ. ಎಮಿಲಿ ಬ್ರಾಂಟೆಯು ತಂತ್ರದ ಮೇಲೆ ಬುದ್ಧಿಪೂರ್ವಕವಾದ ಹತೋಟಿಯನ್ನು ಸಾಧಿಸದೇ ಇದ್ದುದರಿಂದ ಅವಳು ತನ್ನ ಪಾತ್ರಗಳನ್ನು ಅರ್ಥೈಸದೆ ಹೋಗುತ್ತಾಳೆ. ಆ ಪಾತ್ರಗಳು ತಮ್ಮನ್ನು ತಾವೆ ಅರ್ಥೈಸುತ್ತವೆಯೆ ಹೊರತು ಕಾದಂಬರಿಕಾರಳು ಆ ಕಾರ್ಯವನ್ನು ಮಾಡಲಾಗುವುದಿಲ್ಲ. ಇದಕ್ಕೆ ಕಾರಣವೆಂದರೆ ತಂತ್ರದ ಬಗೆಗೆ ಅವಳಗಿರುವ ನಿರ್ಲಕ್ಷ್ಯವೆ ಆಗಿದೆ. ಡಿ. ಎಚ್. ಲಾರೆನ್ಸ್‌ನೂ ಇದೇ ತೆರನಾದ ತಪ್ಪನ್ನು ಮಾಡುತ್ತಾನೆ. ಆತನೂ

ತಂತ್ರವನ್ನು ನಿರ್ಲಕ್ಷಿಸುವುದರಿಂದ ಅವನ ಬಹುಚರ್ಚಿತ **ಸನ್ಸ್ ಆ್ಯಂಡ ಲವ್ಹರ್ಸ** ಕಾದಂಬರಿಯಲ್ಲಿ ಅರ್ಥಗಳ ಸಾಮರಸ್ಯವುಂಟಾಗದೆ ಗೊಂದಲವಾಗಿಬಿಟ್ಟಿದೆ. ಈ ಕಾದಂಬರಿಯಲ್ಲಿ ಮುಖ್ಯವಾಗಿ ಎರಡು ವಿಷಯಗಳು ಚಿತ್ರಿತವಾಗಿವೆ. ಒಂದು ತಾಯಿಯ ಪ್ರಭಾವದಿಂದಾಗಿ ಮಗನ ಬೆಳವಣಿಗೆ ಕುಂಠಿತವಾಗುವುದು; ಎರಡು ಮಗನ ಮನಸ್ಸಿನಲ್ಲಿ ನಡೆಯುವ ಭೌತಿಕ ಮತ್ತು ಆಧ್ಯಾತ್ಮಿಕ ಪ್ರೇಮಗಳ ನಡುವಿನ ದ್ವಂದ್ವ (ಈ ದ್ವಂದ್ವ ಅವನು ಪ್ರೀತಿಸಿರುವ ಕ್ಲಾರಾ ಮತ್ತು ಮಿರಿಯಮ್ ಎಂಬಿಬ್ಬರು ಹುಡುಗಿಯರಿಂದ ಸೂಚಿತವಾಗಿದೆ.) ಇವೆರಡರಲ್ಲಿ ಎರಡನೆಯ ವಿಷಯ ಮೊದಲನೆಯದರ ಪರಿಣಾಮವಾಗಿ ಬರುವುದರಿಂದ, ಮೊದಲನೆಯ ವಿಷಯ ಅಂದರೆ ವ್ಯಕ್ತಿತ್ವದಬೆಳವಣಿಗೆಯ ಅಡ್ಡಿಯೆ ಕಾದಂಬರಿಯ ಮೂಲ ಕಥಾವಸ್ತುವಾಗುತ್ತದೆ. ಇವೆರಡು ವಿಷಯಗಳೂ ಹಾಸುಹೊಕ್ಕಾಗಿ ಚಿತ್ರಿತವಾಗಿರಬೇಕು. ಆದರೆ ಡಿ. ಎಚ್. ಲಾರೆನ್ಸನು ಈ ವಿಷಯಗಳ ಸಾವಯುವ ಹೆಣಿಕೆಯಲ್ಲಿ ಯಶಸ್ವಿಯಾಗಿಲ್ಲ. ಲಾರೆನ್ಸನು ಎಡ್‌ವರ್ಡ್ ಗಾರ್ನೆಟ್‌ನಿಗೆ ಬರೆದ ಪತ್ರದ ಪ್ರಕಾರ ಮಾರೆಲ್‌ನು ಸಾವಿನೆಡೆಗೆ ತಿರುಗುತ್ತಿದ್ದಾನೆ. ಆದರೆ ಕಾದಂಬರಿಕಾರನ ಈ ಉದ್ದೇಶವಾಗಲಿ ಅಥವಾ ಅರ್ಥವಾಗಲಿ ಕಾದಂಬರಿಯಲ್ಲಿ ಚಿತ್ರಿತವಾಗಿಲ್ಲ. ಕಾದಂಬರಿಯಲ್ಲಿ ಚಿತ್ರಿತವಾದ ಮಾರೆಲ್‌ನು ಜೀವನದೆಡೆಗೆಯೆ ಹೊರಳುತ್ತಾನೆ ಹೊರತು ಸಾವಿನೆಡೆಗೆ ಅಲ್ಲ. ಅಂದರೆ ಲಾರೆನ್ಸ ತನ್ನ ಕಾದಂಬರಿಯಲ್ಲಿ ಚಿತ್ರಿಸಿದ ಅರ್ಥವೂ ಆತ ಚಿತ್ರಿಸಿದ್ದೇನೆಂದು ಭ್ರಮಿಸಿದ ಅರ್ಥವೂ ಒಂದೆ ಆಗಿರದೆ ಭಿನ್ನಭಿನ್ನವಾಗಿರುತ್ತದೆ. ಹೀಗಾಗಲಿಕ್ಕೆ ಮೂಲಕಾರಣವೆಂದರೆ ತಂತ್ರದ ಬಗೆಗೆ ಆತ ಲಕ್ಷ್ಯಕೊಟ್ಟಿರಲಿಲ್ಲ.

ಮಾರ್ಕ್ ಶೋರರ್ ಹೇಳುವಂತೆ ಇವರೆಲ್ಲರಿಗಿಂತ ಜೇಮ್ಸ ಜಾಯ್ಸ ಹೆಚ್ಚು ಯಶಸ್ವಿಯಾದ ಕಾದಂಬರಿಕಾರನಾಗಿದ್ದಾನೆ. ಅದಕ್ಕೆ ಕಾರಣವೇನೆಂದರೆ ಆತ ತಂತ್ರದ ಬಗೆಗೆ ಅತ್ಯಂತ ತೀವ್ರವಾದ ಕಾಳಜಿ ವಹಿಸುತ್ತಾನೆ. ಆತನಿಗೆ ತಾನೇನು ಹೇಳಬೇಕೆಂಬುದೂ ಮತ್ತು ಅದನ್ನು ಹೇಗೆ ಹೇಳಬೇಕೆಂಬುದೂ ಗೊತ್ತಿರುವುದರಿಂದ, ಕಥಾವಸ್ತುವನ್ನು ಯಶಸ್ವಿಯಾಗಿ ತಾಂತ್ರಿಕ ನಿರ್ವಹಣೆಯ ಮೂಲಕ ಅಭಿವ್ಯಕ್ತಿಸುತ್ತಾನೆ. ಆತನ **ದ ಪೋಟ್ರೇಟ್ ಆಫ಼್ ದಿ ಆರ್ಟಿಸ್ಟ್ ಆ್ಯಸ್ ಯಂಗ ಮ್ಯಾನ್** ಕಾದಂಬರಿಯಲ್ಲಿ ಕಥಾನಾಯಕನಾದ ಸ್ಟೀಫನ್ ತನ್ನ ಪರಿಸರದಿಂದ ದೂರವಾಗಿ ಏಕಾಕಿತನವನ್ನನುಭವಿಸುವುದೆ ಮುಖ್ಯ ವಸ್ತುವಾಗಿದೆ. ಕಥಾನಾಯಕನ ಜೀವನದಲ್ಲಿ ಕಾದಂಬರಿಕಾರ ಮೂರು ಹಂತಗಳನ್ನು ಗುರುತಿಸಿ ಆ ಹಂತಗಳಿಗೆ ಸ್ವಾಭಾವಿಕವಾದ ಭಾಷಾಶೈಲಿಯನ್ನೂ ಮನೋಭೂಮಿಕೆಯನ್ನೂ ಸೃಷ್ಟಿಸುತ್ತಾನೆ. ಕಥಾ ನಾಯಕ ಬಾಲಕನಾಗಿದ್ದಾಗ ತನ್ನ ಸುತ್ತಲಿನ ಪರಿಸರವನ್ನು ಶೋಧಿಸ ತೊಡಗುತ್ತಾನೆಯಾದ್ದರಿಂದ ಆತ ಸರಳವಾದ ಭಾಷೆಯನ್ನುಪಯೋಗಿಸುತ್ತಾನೆ. ಮುಂದೆ ಯೌವನಾವಸ್ಥೆಗೆ ಬಂದಾಗ ಆತನ ಅನುಭವ ಹೆಚ್ಚು ಭಾವನಾಮಯ

ವಾಗಿದ್ದು ಆತ ಪ್ರಶ್ನಿಸುವ, ಆಯ್ದುಕೊಳ್ಳುವ, ನಿರಾಕರಿಸುವ ಮತ್ತು ನಿರ್ಣಯಿಸುವ ಸಾಮರ್ಥ್ಯವನ್ನು ಹೊಂದಿದವನಾಗಿದ್ದುದರಿಂದ ಆತನ ಭಾಷೆಯೂ ವೈವಿಧ್ಯಪೂರ್ಣವೂ ತೀವ್ರವೂ ಆಗಿರುತ್ತದೆ. ಆತ ತನ್ನ ಹೆಚ್ಚು ರಮ್ಯ ಲೋಕದ ಶಿಖರವನ್ನು ಮುಟ್ಟಿದಾಗ ಕೌಟುಂಬಿಕ ಹಾಗೂ ಧಾರ್ಮಿಕ ಮೌಲ್ಯಗಳನ್ನು ನಿರಾಕರಿಸುತ್ತಾನೆ. ಆನಂತರ ಆತ ಕೊನೆಯಹಂತವನ್ನು ಮುಟ್ಟಿದಾಗ ಆತನ ಅನುಭವ ಹೆಚ್ಚು ಹೆಚ್ಚು ಪಕ್ವವಾಗುತ್ತದೆ. ಆತನ ಕಲಾಪ್ರಜ್ಞೆ ಮತ್ತು ಉದ್ದೇಶಗಳು ಹೆಚ್ಚು ಹೆಚ್ಚು ಪ್ರಖರವಾಗುತ್ತವೆ. ಹೀಗೆ ಅನುಭವದ ವಿವಿಧ ಹಂತಗಳನ್ನು ಚಿತ್ರಿಸುವುದರ ದಿಶೆಯಿಂದ ಆ ಹಂತಗಳಿಗೆ ಯೋಗ್ಯವಾದ ವಾತಾವರಣವನ್ನು ಭಾಷಾಶೈಲಿಯನ್ನು ಉಪಯೋಗಿಸಿ ತನ್ನ ಜೀವನ ಯಶಸ್ವಿಯಾಗಿ ಚಿತ್ರಿಸಬಲ್ಲ ಕಾಂಬರಿಕಾರನಾಗಿದ್ದಾನೆ. ಜೇಮ್ಸ್‌ಜಾಯ್ಸ್, ಯುಲಿಸ್ ಮಹಾಕಾದಂಬರಿಯಲ್ಲಿಯೂ ಆತ ಇದೇ ತೆರನಾದ ತಾಂತ್ರಿಕ ನಿರ್ವಹಣೆಯಿಂದ ಅತ್ಯುಚ್ಚವಾದ ಜಯವನ್ನು ಗಳಿಸಿದ್ದಾನೆಂದು ಹೇಳಬಹುದು. ಜೇಮ್ಸ್ ಜಾಯ್ಸನು ತನ್ನ ಪಾತ್ರಗಳಿಗೆ ಕೇವಲ ಅರ್ಥದ ಅಥವಾ ಉದ್ದೇಶದ ತಲೆಚೀಟಿಗಳನ್ನು ಹಚ್ಚದೆ ಅವುಗಳನ್ನು ಪಾತ್ರಗಳ ಮೂಲಕ ನಿರ್ವಹಿಸಿ ತೋರಿಸುವುದರಿಂದ ಆತ ಉತ್ತಮ ದರ್ಜೆಯ ಕಲಾಕಾರ ಅಥಾವಾ ಸಾಹಿತಿಯಾಗುತ್ತಾನೆ.

ಮಾರ್ಕ ಶ್ರೋರರ್ ಅವರು ಅಮೇರಿಕೆಯ ಸಾಹಿತಿಗಳನ್ನೂ ಉದ್ಧರಿಸುತ್ತಾರೆ. ಅವರ ಪ್ರಕಾರ ಹೆಮಿಂಗ್ವೇನ ಕಾದಂಬರಿಗಳು ಕಥಾವಸ್ತುವಿನ ದೃಷ್ಟಿಯಿಂದ 'ಹೆಮಿಂಗ್ವೆ ಶೈಲಿ' ಯೆಂದೆ ಈ ಕಾದಂಬರಿಕಾರನ ಭಾಷೆ ಸುಪರಿಚಿತವಾಗಿದ್ದರೂ, ಆತನ ಕಾದಂಬರಿಯಲ್ಲಿ ತಂತ್ರದ ಕೌಶಲ್ಯ ಮತ್ತು ನಿರ್ವಹಣೆ ಅಷ್ಟೊಂದು ಹೇಳಿಕೊಳ್ಳುವಷ್ಟು ಪ್ರಮಾಣದಲ್ಲಿ ಯಶಸ್ವಿಯಾಗಿಲ್ಲವೆಂದು ಶ್ರೋರರ್ ಅವರು ಸ್ಪಷ್ಟೀಕರಿಸುತ್ತಾರೆ. ತಂತ್ರದ ದೃಷ್ಟಿಯಿಂದ ನೋಡಿದಾಗ ಹೆಮಿಂಗ್ವೇನ ಮೊದಲಿನ ಕಾದಂಬರಿಗಳು ಆತನ ಕೊನೆಯ ಕಾದಂಬರಿಗಳಿಗಿಂತ ಹೆಚ್ಚು ಮನಸ್ಸಿಗೆ ಹಿಡಿಸುತ್ತವೆ.

ಮೇಲೆ ಚರ್ಚಿಸಿದ ಉದಾಹರಣೆಗಳಿಂದ ತಿಳಿದುಬರುವ ಮುಖ್ಯಾಂಶವೆಂದರೆ ಜೇಮ್ಸ್ ಜಾಯ್ಸ್‌ನನ್ನು ಹೊರತುಪಡಿಸಿ ಉಳಿದೆಲ್ಲ ಕಾದಂಬರಿಕಾರರು ತಂತ್ರದ ದೃಷ್ಟಿಯಿಂದ ಮಹಾನ್ ಕಲಾಕಾರರಾಗಿರದಿದ್ದರೂ ಅವರೆಲ್ಲ ತಮ್ಮ ತಮ್ಮ ವಿಭಿನ್ನ ಜಾಣ್ಮೆ, ಕಾಣ್ಕೆ. ಅನುಭಾವ, ದೃಷ್ಟಿಕೋನ ಮುಂತಾದ ಗುಣಗಳಿಂದ ಓದುಗರ ಮನಸ್ಸನ್ನು ಆಕರ್ಷಿಸುತ್ತಾರೆ. ತಂತ್ರದ ಬಲವಿಲ್ಲದಿದ್ದರೂ ತಮ್ಮ ದರ್ಶನದ ವೈಶಿಷ್ಟ್ಯದಿಂದ ಜಗತ್ಪ್ರಸಿದ್ಧರಾಗಿದ್ದಾರೆ. ಆದರೆ ಕಲಾಕಾರರಾಗಿ ಅವರು ಯಶಸ್ಸನ್ನು ಸಾಧಿಸಿದ್ದಾರೆಯೆ ಎಂಬ ಪ್ರಶ್ನೆಗೆ ಪ್ರಾಮಾಣಿಕವಾಗಿ ಉತ್ತರ ಪಡೆಯುವಾಗ ಮಾರ್ಕ್ ಶ್ರೋರರ್ ಅವರು ವಿವರಿಸಿದ ತೊಂದರೆಗಳುದ್ಭವಿಸುತ್ತವೆ.

ಭಾರತದಲ್ಲಿ ಶಿವಾಲಯಗಳು

ಡಾ. ವ್ಹಿ. ವ್ಹಿ. ಹೆಬ್ಬಳ್ಳಿ

ಭಾರತೀಯ ಅತೀ ಪ್ರಾಚೀನ ಧರ್ಮಶಾಖೆಗಳಲ್ಲಿ ಶೈವ ಧರ್ಮವೂ ಒಂದು 'ವೀರಶೈವ' ಧರ್ಮವೂ ಇದರಿಂದ ಕವಲೊಡೆದು ಮುಂದೆ ಸ್ವತಂತ್ರ ಅಸ್ತಿತ್ವವನ್ನು ಪಡೆದ ಧರ್ಮವಾಗಿದೆ. ಶೈವ-ವೀರಶೈವ ಧರ್ಮಾವಲಂಭಿಗಳು ಶಿವನ ಆರಾಧಕರು. ಪ್ರಾಚೀನ ಕಾಲದಿಂದಲೂ ಈಶ್ವರ ಮಂದಿರ ಹಾಗೂ ಮಂಟಪಗಳನ್ನು ಭಾರತದ [ವಿದೇಶಿಗಳ ಕೆಲ ಭಾಗಗಳಲ್ಲಿ ಸಹ] ಅನೇಕ ಭಾಗಗಳಲ್ಲಿ ನಾವು ಕಾಣುತ್ತೇವೆ.

ಭಾರತೀಯ ಮಂದಿರಗಳಲ್ಲಿ ಶಿಲ್ಪ ಕಲೆಯ ಮೂರು ಪದ್ಧತಿ ಇಲ್ಲವೇ ಸಂಪ್ರದಾಯಗಳು ಕಂಡು ಬರುತ್ತವೆ. ದ್ರವಿಡ ಪದ್ಧತಿ, ಚಾಲುಕ್ಯ ಪದ್ಧತಿ ಹಾಗು ಆರ್ಯ ಪದ್ಧತಿ ಇವೇ ಆ ಮೂರು ಪದ್ಧತಿಗಳು. ದ್ರವಿಡ ಪದ್ಧತಿಯಲ್ಲಿ ಮಂದಿರದ ಆಕಾರವು ಸಾಮಾನ್ಯವಾಗಿ ಚೌಕೋನವಾಗಿದ್ದು ಶಿರೋಭಾಗವು ಪರ್ವತಾಕಾರ ಶಿಖರದಂತೆ ಇರುತ್ತದೆ. ಆರ್ಯ ಪದ್ಧತಿಯಲ್ಲಿ ಮಂದಿರವು ವರ್ಗಾಕೃತಿಯಲ್ಲಿದ್ದು ಶಿಖರವು ಉತ್ತುಂಗ ಪರ್ವತದ ಚೂಪಾದ ಶಿಖರದಂತಿರುತ್ತದೆ. ಚಾಲುಕ್ಯ ಪದ್ಧತಿಯಲ್ಲಿ ಮಂದಿರವು ನಕ್ಷತ್ರಾಕಾರದಿಂದೊಡಗೂಡಿದ್ದು ಶಿರೋಭಾಗವೂ ಸಹ ದ್ರವಿಡ ಪದ್ಧತಿಯಂತೆ ಪರ್ವತಾಕಾರದ್ದಾಗಿರುತ್ತದೆ. ಉತ್ತರ ಭಾರತದಲ್ಲಿ ಆರ್ಯ (Indo Aryan) ಪದ್ಧತಿ ಕಂಡು ಬಂದರೆ ದಕ್ಷಿಣದಲ್ಲಿ ದ್ರವಿಡ ಹಾಗೂ ಚಾಲುಕ್ಯ ಶಿಲ್ಪ ಪದ್ಧತಿ ಕಾಣುತ್ತೇವೆ.

ಪ್ರಾಚೀನ ಕಾಲದಲ್ಲಿ ಮಂದಿರಗಳನ್ನು ಸಾಮಾನ್ಯವಾಗಿ ಕಟ್ಟಿಗೆಯಿಂದ ಕಟ್ಟುತ್ತಿದ್ದರೆಂದು ಐಹಿತ್ಯವಿದೆ. ನೇಪಾಳ, ತಿಬೇಟ, ಚೀನ ಹಾಗೂ ಜಪಾನಗಳಲ್ಲಿ ಇಂದಿಗೂ ಸಹ ಕಾಷ್ಠ ಮಂದಿರ ಮಂಟಪಗಳನ್ನು ಕಾಣಬಹುದು. ಆದರೆ ಭಾರತದಲ್ಲಿಯ ಕಾಷ್ಠಮಂದಿರಗಳು ಕಾಲದ ಗರ್ಭದಲ್ಲಿ ಅಡಗಿ ಹೋಗಿವೆ. ಈ ಕಾಷ್ಠ ಮಂದಿರಗಳ ನಂತರ ಕಲ್ಲಿನಿಂದ ನಿರ್ಮಿಸಲಾದ ಮಂದಿರಗಳ ಅಸ್ತಿತ್ವವನ್ನು ಕಾಣುತ್ತೇವೆ. ಭಾರತದಲ್ಲಿ ಶಿವ ಶಕ್ತಿಯ ಮಂದಿರ ಮಂಟಪಗಳ ಸಂಖ್ಯೆಯೇ ಹೆಚ್ಚು. ಶಿವಶಕ್ತಿಯ ಉಪಾಸನಾ ಭಾವವು ಈಜಿಪ್ತ, ಫಿನಿಸಿಯಾ, ಗ್ರೀಸ್ ಮೊದಲಾದ ದೇಶಗಳ ಪ್ರಾಚೀನ ಗ್ರಂಥಗಳಲ್ಲಿ ಕಂಡು ಬರುತ್ತದೆಂದು ವಿದ್ವಾಂಸರು

ಅಭಿಪ್ರಾಯ ಪಟ್ಟಿದ್ದಾರೆ. ಭಾರತದಲ್ಲಿ ಶಿವೋಪಾಸನೆಯು ಅತೀ ಪ್ರಾಚೀನ ಕಾಲದಿಂದಲೂ ಪ್ರಚಲಿತವಾಗಿದೆ.

ಭಾರತದಲ್ಲಿ ಕಾಣಸಿಗುವ ಶಿವಮಂದಿರ ಮಂಟಪಗಳು ಸಾಮಾನ್ಯವಾಗಿ ರಾಜರಿಂದಲೂ ಹಾಗೂ ಶಿವಭಕ್ತರಿಂದಲೂ ನಿರ್ಮಿತವಾಗಿವೆ. ಇವುಗಳ ನಿರ್ಮಾಣ ಮತ್ತು ರೂಪದರ್ಶನದಲ್ಲಿ ಸಾಮ್ಯವು ಕಂಡು ಬರುತ್ತದೆ. ಶ್ರೀ ಗೋಪಿನಾಥರಾವ ಅವರು Hindu menography ಎಂಬ ಗ್ರಂಥದಲ್ಲಿ ಈ ವಿಷಯವನ್ನು ವಿಶದವಾಗಿ ಚರ್ಚಿಸಿದ್ದಾರೆ. ಶಿವ ಶಕ್ತಿಯ ವೈವಿಧ್ಯಮಯ ವರ್ಣನೆಯನ್ನು ಅದರಲ್ಲಿ ಕಾಣಬಹುದು. ಆಗಿನ ಮೈಸೂರ ಸರಕಾರದಿಂದ ಪ್ರಕಾಶಿತವಾದ ಶ್ರೀ ತತ್ವನಿಧಿ ಎಂಬ ಸಂಸ್ಕೃತ ಗ್ರಂಥದಲ್ಲಿ ವಿಭಿನ್ನ ಭಾವ ಭಂಗಿಗಳಲ್ಲಿರುವ ಶಿವಶಕ್ತಿಯ ಸುಂದರ ಚಿತ್ರಗಳನ್ನು ಕಾಣಬಹುದು. ಪ್ರಾಚೀನ ಕಾಲದಲ್ಲಿ ಮಂದಿರ, ಮಂಟಪಗಳು, ನದಿ-ಜಲಾಶಯ ಕೆರೆ, ಬಾವಿಗಳ ಸಮೀಪದಲ್ಲಿಯೇ ನಿರ್ಮಾಣವಾಗುತ್ತಿದ್ದವು. ಇಂದು ಸ್ಥಾನಾಭಾವದಿಂದ ಈ ಸಂಪ್ರದಾಯದ ಪಾಲನೆ ಸಾಧ್ಯವಾಗುತ್ತಿಲ್ಲ. ಶಿವಮಂದಿರಗಳ ಹೊರ-ಭಾಗದಲ್ಲಿ ಗಣೇಶ ಕಾರ್ತಿಕೇಯ ಮೊದಲಾದ ದೇವತೆಗಳ ಮೂರ್ತಿಗಳ ನಿರ್ಮಾಣವನ್ನು ಕಾಣುತ್ತೇವೆ. ಮುಖ್ಯಮಂದಿರದ ಅಕ್ಕಪಕ್ಕಗಳಲ್ಲಿ ಉಪದೇವತೆಗಳಾಗಿ ಸಣ್ಣ ಸಣ್ಣ ಮಂದಿರ ಮಂಟಪಗಳು ಇರುವುದನ್ನು ಅನೇಕ ಕಡೆಗಳಲ್ಲಿ ಕಾಣುತ್ತೇವೆ.

ಶಿವಮಂದಿರಗಳನ್ನು ಹಾಗೂ ಮಂಟಪಗಳನ್ನು ನಿರ್ಮಿಸುವ ಮೂಲಕಾರಣವಾದರೂ ಏನು? ಎಂದು ಪ್ರಶ್ನಿಸಿದಾಗ ಭಕ್ತರ ಭಾವಾಭಿವ್ಯಕ್ತಿ ಸ್ವಾಂತಃಸುಖಾಯ ಅಂತಃಕರಣಶುದ್ಧಿ ಇವುಗಳ ನಿರ್ಮಾಣದ ರಹಸ್ಯವೆಂದು ಹೇಳಬಹುದು. ತಮ್ಮ ಇಷ್ಟದೇವತೆಯಾದ ಶಿವ-ಶಕ್ತಿಯ ಮುಂದೆ ಭಕ್ತರು ನೃತ್ಯ ಗೀತ ಭಜನೆಗಳಿಂದ ಭಕ್ತಿ-ಭಾವ ಅಭಿವ್ಯಕ್ತಗೊಳಿಸುತ್ತಿದ್ದರು. ಶಿವಾನುಭವ ಚರ್ಚೆ ಮಾಡುತ್ತಿದ್ದರು ಈ ಕಾರಣದಿಂದ ಮಂಟಪಗಳ ಅವಶ್ಯಕತೆ ಉಂಟಾಯಿತು.

ತಂತ್ರ ಚೂಡಾಮಣಿ', 'ಶಿವ-ಚರಿತ್ರ' ಮತ್ತು 'ದ್ರಾಕ್ಷಾಯಣಿ-ತಂತ್ರ' ಗ್ರಂಥಗಳಲ್ಲಿ ೫೧ ರಿಂದ ೫೩ ಶಕ್ತಿ ಪೀಠಗಳ ಉಲ್ಲೇಖವಿದೆ. ಪ್ರಜಾಪತಿ ದಕ್ಷನು ಬೃಹಸ್ಪತಿ ಎಂಬ ಯಜ್ಞ ಮಾಡುವಾಗ ತನ್ನ ಅಳಿಯ ಶಿವನನ್ನು ಆಮಂತ್ರಿಸಲಿಲ್ಲವೆಂದು ತಿಳಿದು ಅವನ ಮಗಳಾದ ಸತಿಯು ಪ್ರಾಣಾರ್ಪಣ ಮಾಡಿದಳೆಂದು ಶಿವನು ಅವಳ ಶರೀರವನ್ನು ಹೊತ್ತು ತಾಂಡವ ನೃತ್ಯ ಮಾಡಿದನೆಂದು ಹಾಗೂ ವಿಶ್ವವಿನಾಶವನ್ನು ತಪ್ಪಿಸಲು ವಿಷ್ಣುವು ತನ್ನ ಚಕ್ರದಿಂದ ಸತಿಯ ಶರಿರವನ್ನು ಛೇದಿಸಿದನೆಂದು ಇದರಿಂದ ಅವಳ ಶರೀರದ ಅಂಗಗಳು ೫೧ ಸ್ಥಾನಗಳಲ್ಲಿ ಬಿದ್ದುದರಿಂದ ಅಲ್ಲಿ ಶಕ್ತಿ–ಪೀಠಗಳು ನಿರ್ಮಾಣವಾದುವೆಂದು ಪುರಾಣದ ಕಥೆಯೊಂದರಿಂದ ತಿಳಿದುಬರುತ್ತದೆ ಇವುಗಳಿಗೆ ಮಹಾಪೀಠಗಳೆಂದು ಸಹ ಕರೆಯುತ್ತಾರೆ. ಪ್ರಸ್ತುತ ಲೇಖದಲ್ಲಿ 'ಶಿವ–ಮಂದಿರಗಳ' ಬಗ್ಗೆ ಚರ್ಚಿಸಲು ಉದ್ದೇಶಿಸಲಾಗಿದೆ. ಶಿವನ

ಆರಾಧನೆಗಾಗಿ ಹನ್ನೆರಡು ಸ್ಥಾನಗಳಲ್ಲಿ 'ಜ್ಯೋತಿರ್ಲಿಂಗಗಳನ್ನು' ಭಾರತದ ವಿವಿಧ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವದನ್ನು ಕಾಣುತ್ತೇವೆ. ಸೋಮನಾಥ, ಮಲ್ಲಿಕಾರ್ಜುನ, ಮಹಾಕಾಲೇಶ್ವರ, ವೈದ್ಯನಾಥ, ಓಂಕಾರೇಶ್ವರ, ಭೀಮಶಂಕರ, ನಾಗೇಶ್ವರ, ಕಾಶೀವಿಶ್ವನಾಥ, ರಾಮೇಶ್ವರ, ತ್ರ್ಯಂಬಕೇಶ್ವರ, ಕೇದಾರನಾಥ ಮತ್ತು ಘೃಷ್ಣೇ-ಶ್ವರ ಇವೇ ಆ ಜ್ಯೋತಿರ್ಲಿಂಗಗಳು.

ಸೋಮನಾಥ ಮಂದಿರವು ಪ್ರಾಚೀನ ತೀರ್ಥಸ್ಥಾನಗಳಲ್ಲಿ ಒಂದಾಗಿದೆ. ಋಗ್ವೇದ ಸ್ಕಂದಪುರಾಣ ಮಹಾಭಾರತಗಳಲ್ಲಿ ಇದರ ಉಲ್ಲೇಖವಿದೆ. ಭಾರತೀಯ ಸಂಸ್ಕೃತಿಯ ಏಕತೆಯ ಕುರುಹು ಆದ ಈ ಮಂದಿರವು ವಿದೇಶಿಯರ ದಾಳಿಗೆ ತುತ್ತಾದರೂ ಇಂದಿಗೂ ಭಕ್ತರನ್ನು ಆಕರ್ಷಿಸುತ್ತದೆ. ಮೋಹಂಜೋದಾರೊ ಹರಪ್ಪದ ಅವಶೇಷಗಳು ಈ ಮಂದಿರದ ಪ್ರಾಚೀನತೆಯ ಬಗ್ಗೆ ಪುಷ್ಟಿಯನ್ನೀಯುತ್ತವೆಂದು ಇತಿಹಾಸಕಾರರ ಅಭಿಪ್ರಾಯವಾಗಿದೆ. ೫ ನೆಯ ಶತಮಾನದ ಆರಂಭದಲ್ಲಿ ಇದು ಸ್ಥಾಪಿತವಾಗಿದೆ. ಎಂದು ಐತಿಹಾಸಿಕ ದಾಖಲೆಗಳಿಂದ ತಿಳಿದು ಬರುತ್ತದೆ. ೫೬ ರತ್ನ ಜಟಿತ ಖಂಬಗಳ ಮೇಲೆ ಮಂದಿರವು ನಿರ್ಮಿಸಲ್ಪಟ್ಟಿದೆ. ಮಂದಿರದ ಗರ್ಭಗ್ರುಹದಲ್ಲಿ ೭' × ೩' ಆಕಾರದ ಶಿವಲಿಂಗವು ಸ್ಥಾತವಾಗಿದೆ. ಮಂದಿರದ ಆವರಣದಲ್ಲಿ ದೀರ್ಘಾಕಾರದ ಮಹಾಮಂಟಪವಿತ್ತೆಂದು ಪ್ರತೀತಿ.

ಹಿಮಾಚಲ ಪ್ರದೇಶದ ಕೇದಾರನಾಥ ಶಿವ-ಮಂದಿರವು ಸಾಧಾರಣವಾದರೂ ಪ್ರಾಚೀನವಾಗಿದೆ. ಮಂದಿರದ ಅನೇಕ ಜಲ-ಕುಂಡಗಳಿವೆ. ಶಂಕರನ ವಿಭಿನ್ನ ಅಂಗಗಳು ಐದು ಸ್ಥಾನಗಳ ಪ್ರತಿಷ್ಠಾಪಿಸಲ್ಪಟ್ಟಿದೆ. ಆದ್ದರಿಂದ ಇದಕ್ಕೆ 'ಪಂಚ ಕೇದಾರ' ಎಂದು ಹೆಸರು, ಪಾವಿತ್ರ್ಯ ಜ್ಞಾನ, ಧರ್ಮದ ಕೇಂದ್ರುವಾದ ವಾರಣಾಸಿಯಲ್ಲಿ ವಿಶ್ವನಾಥ ಮಂದಿರವು ಐತಿಹಾಸಿಕ ಮತ್ತು ಧಾರ್ಮಿಕ ಮಹತ್ವವನ್ನು ಪಡೆದಿದೆ. ಇಲ್ಲಿ ಲಿಂಗಾಯತರನ್ನೊಳಗೊಂಡು ಬೇರೆ ಬೇರೆ ಸಂಪ್ರದಾಯಗಳ ಪೀಠಗಳಿವೆ. ಪಾಚೀನ ಮಂದಿಗದ ಮೇಲೆ ಬಂಗಾರದ ಧ್ವಜವಿದೆ. ವೀರಶೈವ ಧರ್ಮದ ಜಂಗಮವಾಡಿ ಮಠವೂ ವಾರಣಾಸಿಯಲ್ಲಿ ಇದೆ. ಮಧ್ಯಭಾರತದ ಉಜ್ಜೈನದ ಮಹಾಕಾಲೇಶ್ವರ ಮಂದಿರದ ಉಲ್ಲೇಖವನ್ನು ಸ್ಕಂದ ಪುರಾಣ ಅಗ್ನಿಪುರಾಣದಲ್ಲಿ ಕಾಣುತ್ತೇವೆ ಶಿವಲಿಂಗಕ್ಕೆ ಅರ್ಪಿಸಿದ ಪ್ರಸಾದ ಬಿಲ್ವಪತ್ರಿಯನ್ನು ಪುನಃ ಅರ್ಪಿಸಬಹುದೆಂದು ಇಲ್ಲಿಯ ಪದ್ಧತಿಯಾಗಿದೆ. ಮಂದಿರದ ಮೇಲ್ಭಾಗವು ಪರ್ವತಾಕಾರದ ಶಿಖರದಂತಿದ್ದು ಸುತ್ತಲೂ ಮಂಟಪಗಳಿವೆ. ಮಂದಿರದ ಪಕ್ಕದಲ್ಲಿಯೇ ಸರೋವರವಿದೆ. ಗರ್ಭ ಮಂದಿರವು ಸದಾ ತಿಮಿರಾವೃತ್ತವಾದುದರಿಂದ ನಿರಂತರ ದೀಪಗಳು ಪ್ರಜ್ವಲಿಸುತ್ತಿರುತ್ತವೆ.

ಮಧ್ಯ ಪ್ರದೇಶದ ಮನೋರಮ ತೀರ್ಥಸ್ಥಾನ ಓಂಕಾರೇಶ್ವರ ಮಂದಿರವು ನರ್ಮದಾ ನದಿ ತೀರದ ಮೇಲೆ ಪ್ರಕೃತಿ ಸೌಂದರ್ಯದ ಮಧ್ಯದಲ್ಲಿ ಭಕ್ತರನ್ನು

ಸದಾ ಆಕರ್ಷಿಸುತ್ತದೆ. ಪ್ರತಿ ವರ್ಷ ಕಾರ್ತಿಕ ಹುಣ್ಣಿಮೆಯಂದು ದೊಡ್ಡ ಜಾತ್ರೆ ನಡೆಯುತ್ತದೆ. ಮಂದಿರದ ರಚನೆಯಲ್ಲಿ ಶಿಲ್ಪಕಾರರು ತಮ್ಮ ಶಿಲ್ಪ-ಕೌಶಲವನ್ನು ಚೆನ್ನಾಗಿ ಪ್ರದರ್ಶಿಸಿದ್ದಾರೆ. ಕರಿಯ ಕಲ್ಲಿನಿಂದ ತಯಾರಿಸಿದ ಮಹಾದೇವನ ವಿಗ್ರಹದ ವ್ಯಾಸ ಒಂದು ಫೂಟು ಇದ್ದು ಎತ್ತರ ಆರು ಇಂಚು ಇದೆ. ಈ ಶಿಲಾ.ಲಿಂಗದ ಹಿಂದೆ ಶ್ವೇತ ಶಿಲೆಯ ಪಾರ್ವತಿ ಮೂರ್ತಿಯೂ ವಿರಾಜಿಸುತ್ತದೆ.

ವೈದ್ಯನಾಥ ಧಾಮದ ಜೋಡು ಮಂಧಿರವು ದೂರದಿಂದಲೇ ಭಕ್ತರನ್ನು ಆಕರ್ಷಿಸುತ್ತದೆ. ರಾವಣನು-ಕೈಲಾಸದಿಂದ ಈ ಶಿವಲಿಂಗ ತಂದು ಇಲ್ಲಿ ಸ್ಥಾಪಿಸಿದನೆಂದು ಐತಿಹ್ಯವಿದೆ.

ಶಿವಲಿಂಗ ಮೂರ್ತಿ

ಆಧಾರ ಪೀಠದಿಂದ ಸ್ವಲ್ಪ ಎತ್ತರದಲ್ಲಿದೆ. ಮುಖ್ಯ ಮಂದಿರದ ಸುತ್ತಲೂ ೨೧ ಸಣ್ಣ ಮಂದಿರಗಳಿವೆ. ಗೌರಿ ಮಂದಿರ, ಕಾರ್ತಿಕೇಯ ಗಣೇಶ ಮಂದಿರಗಳು ಅವುಗಳಲ್ಲಿ ಮುಖ್ಯ. ಸಮೀಪದಲ್ಲಿಯೇ ಶಿವಗಂಗಾ ಎಂಬ ಸರೋವರವಿದೆ.

ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಭೀಮಶಂಕರ ಮಂದಿರವು ಭೀಮಾನದಿಯ ಉಗಮಸ್ಥಾನ ಸಹ್ಯಾದ್ರಿ ಪರ್ವತದಲ್ಲಿ ನಿರ್ಮಿತವಾಗಿದೆ. ಶಿವಲಿಂಗದಿಂದ ಜಲವು ಸಣ್ಣ ಪ್ರಮಾಣದಲ್ಲಿ ಅವ್ಯಾಹತವಾಗಿ ಹರಿಯುವದು. ಈ ಮಂದಿರದ ವೈಶಿಷ್ಟ್ಯ. ಮಂದಿರದ ಎದುರು ಭಾಗದಲ್ಲಿ ಎರಡು ಜಲಕುಂಡಗಳಿವೆ. ಮಂದಿರವು ಜೀರ್ಣ ಶೀರ್ಣವಾದರೂ ಅದರ ಕಲಾಸೌಂದರ್ಯ ಇನ್ನೂ ತನ್ನ ತನವನ್ನು ಉಳಿಸಿಕೊಂಡಿದೆ. ಮಂದಿರದ ಮುಂದಿನ ಭಾಗವು ಬಿದ್ದು ಹೋಗಿದೆ. ಪರ್ವತಾಕಾರ ಗೋಪುರವು ತನ್ನ ಕಲಾತ್ಮಕ ಸೌಂದರ್ಯದಿಂದ ಎಲ್ಲರನ್ನು ಬೆರಗುಗೊಳಿಸುತ್ತದೆ. ಆಸಾಮದ ಗೌಹಾತಿಯ ಸಮೀಪದ ಬ್ರಹ್ಮಪುತ್ರ ಪರ್ವತದ ಮೇಲೊಂದು ಭೀಮಶಂಕರ ಮಂದಿರವಿದೆ.

ಎಂಟನೆಯ ಶತಾಬ್ದಿಯ ವೆರೂಲ (ಎಲ್ಲೋರಾ)ದ ಘೃಷ್ಮೇಶ್ವರ(ಘೃಷ್ಣೇಶ್ವರ) ಶಿವ ಮಂದಿರವು ಸರೋವರದ ಪಕ್ಕದಲ್ಲಿಯೇ ಇದೆ. ಬ್ರಾಹ್ಮಣ ಮಂದಿರದ ಒಂದು ಮಂಟಪದಲ್ಲಿ ಶಿವ-ಶಕ್ತಿಯರ ಸುಂದರ ಮೂರ್ತಿಗಳಿವೆ. ರಾವಣನು ಕೈಲಾಸ ಪರ್ವತ ಎತ್ತುವುದನ್ನು ನೋಡಿ ಭೀತಿಗೊಂಡ ಪಾರ್ವತಿ ಶಿವನ ವಿಶಾಲ ಬಾಹುಗಳಲ್ಲಿ ಆಶ್ರಯ ಪಡೆಯುತ್ತಿರುವಳು. ಸ್ಥಿರಚಿತ್ತನಾದ ಶಿವನು ತನ್ನ ಚರಣಗಳಿಂದ ಕೈಲಾಸವನ್ನು ಒತ್ತಿ ಹಿಡಿದು ರಾವಣನ ಪ್ರಯತ್ನ (ಅಹಂ) ನಿಷ್ಫಲಗೊಳಿಸುವ ದೃಶ್ಯವಂತೂ ಮನೋಹರವಾಗಿದೆ. ಹೀಗೆಯೆ ಶಿವ-ಪಾರ್ವತಿಯರ ವಿವಾಹ ದೃಶ್ಯ ದರ್ಶಕರನ್ನು ಆಕರ್ಷಿಸದೆ ಬಿಡದು. ಎಲಿಫಂಟಾ ಗುಹೆಗಳಲ್ಲಿ ಶಿವ-ಪಾರ್ವತಿ ವಿವಾಹ ದೃಶ್ಯ, ಪಾರ್ವತಿಯ ಆತ್ಮ ಸಮರ್ಪಣ ಭಾವ ಹಾಗು ಶಿವನು ಅವಳನ್ನು

ಆದರಪೂರ್ವಕವಾಗಿ ಸ್ವೀಕರಿಸುವ ದೃಶ್ಯವನ್ನಂತೂ ಶಿಲ್ಪಿ ತನ್ನ ಕಲಾ ಚಾತುರ್ಯವನ್ನು ಪೂರ್ಣ ವಿನಿಯೋಗಿಸಿಯೆ ಚಿತ್ರಿಸಿದ್ದಾನೆ.

ಮಹಾರಾಷ್ಟ್ರದ ನಾಶಿಕ ಜಿಲ್ಲೆಯಲ್ಲಿ ತ್ರ್ಯಂಬಕೇಶ್ವರ ಜ್ಯೋತಿರ್ಲಿಂಗವು ಗೋದಾವರಿ ನದಿಯ ಒಂದು ಜಲಾಶಯದ ದಡದಲ್ಲಿ ಸ್ಥಾಪಿತವಾಗಿದೆ. ಮಂದಿರದ ಒಂದು ಊರ್ಧ್ವ ಭಾಗವು ಅಗಲವಾಗಿ ಹಬ್ಬಿದ ಪರ್ವತದಂತೆ ಗೋಚರಿಸುತ್ತದೆ. ಇನ್ನೊಂದು ಭಾಗವು ಶಿಖರದಂತೆ ಉದ್ದವಾಗಿ ಕಾಣುತ್ತದೆ. ಮಂದಿರದ ಒಳ ಭಾಗದಲ್ಲಿ ಮಹೇಶ (ಶಿವ) ಲಿಂಗವಿದೆ. ಇದಲ್ಲದೆ ಬ್ರಹ್ಮ ಹಾಗು ವಿಷ್ಣುವಿನ ವಿಗ್ರಹಗಳೂ ಇವೆ. ಶಿವ ಪುರಾಣಗಳಲ್ಲಿ ತ್ರ್ಯಂಬಕೇಶ್ವರನ ದರ್ಶನ–ಪೂಜೆಯಿಂದ ಸದಾ ಆನಂದ ಪ್ರಾಪ್ತವಾಗುತ್ತದೆಂದು ವರ್ಣಿಸಲಾಗಿದೆ. ಮಂದಿರದ ಹಿಂದುಗಡೆ 'ಅಮೃತ ಕುಂಡ' ಎಂಬ ಹೆಸರಿನ ಕುಂಡವಿದೆ.

ದ್ವಾರಕಾದಿಂದ ಸುಮಾರು ೨೫ ಕಿ.ಮೀ ದೂರದ ಪೂರ್ವ ಉತ್ತರಭಾಗದಲ್ಲಿ ನಾಗೇಶ್ವರ ಜ್ಯೋತಿರ್ಲಿಂಗವಿದೆ. ದ್ವಾರಕಾ ಯಾತ್ರಿಕರು ಇಲ್ಲಿ ದರ್ಶನವೀಯದೆ ಬರುವದು ವಿರಳ. ಸುಪ್ರಿಯ ಎಂಬ ಶಿವ–ಭಕ್ತನು ರಾಕ್ಷಸರಿಂದ ಪೀಡಿತನಾದಾಗ ಕಾರಾಗೃಹದಲ್ಲಿಯೇ ಶಂಕರನನ್ನು ರಕ್ಷಣೆಗಾಗಿ ಕರೆದನೆಂದು, ಜ್ಯೋತಿರ್ಲಿಂಗ ರೂಪದಲ್ಲಿ ಪ್ರತ್ಯಕ್ಷನಾದ ಶಿವನು ಭಕ್ತನಿಗೆ ಪಾಶುಪತ ಅಸ್ತ್ರ ಕೊಟ್ಟು ರಕ್ಷಿಸಿದನೆಂದೂ, ಈ ನಾಗೇಶ ಜ್ಯೋತಿರ್ಲಿಂಗ ಮಂದಿರವು ಅಂದಿನಿಂದ ಅಸ್ತಿತ್ವದಲ್ಲಿ ಬಂದಿತೆಂದು ಪುರಾಣಕತೆಯೊಂದರಿಂದ ತಿಳಿದು ಬರುತ್ತದೆ.

ಹರಿದ್ವಾರದ ಸಮೀಪ 'ಭೀಮಗೋಪಾ' ಎಂಬ ಸ್ಥಾನವಿದೆ. ಅಲ್ಲಿಯ ಜಲಾಶಯದ ಹತ್ತಿರ ಒಂದು ಶಿವಲಿಂಗವಿದೆ. ಗಂಗಾಮಾತೆ ಈ ಶಿವಲಿಂಗವನ್ನು ಆವರಿಸಿರುವಳು. ಭಾಗೀರಥ ಮಹಾರಾಜನು ಬ್ರಹ್ಮನನ್ನು ಮೆಚ್ಚಿಸಿ ಇಲ್ಲಿಯೆ ಬ್ರಹ್ಮ, ವಿಷ್ಣು, ಮಹೇಶ್ವರರು ವಾಸವಾಗಿರಬೇಕೆಂದು, ವರ ಕೇಳಿದನಂತೆ. ಅದು ಕಾರಣ ಹರಿದ್ವಾರದಲ್ಲಿ ಮೂವರು ದೇವತೆಯ ಮಂದಿರಗಳಿವೆ. ಎಂದು ಜನಶೃತಿ ಇದೆ. ಹರಿದ್ವಾರ ಸಮೀಪ ಬಿಲ್ವ ಪರ್ವತದ ಮೇಲೆ ಬಿಲ್ವಕೇಶ್ವರ ಮಹಾದೇವ ಮಂದಿರವಿದೆ ಇದು ವೀರಶೈವರಿಗೆ ಪವಿತ್ರ ಸ್ಥಾನವಾಗಿದೆ. ಈ ಪರ್ವತದಲ್ಲಿ ಬಿಲ್ವಪತ್ರಿ ಗಿಡಗಳು ಕೆಳಗೆ ಈ ಮಂದಿರವಿದ್ದುದರಿಂದ ಈ ಹೆಸರು ಬಂದಿದೆ. ಇಲ್ಲಿಯೇ 'ಗೌರಿಕುಂಡ' ವಿದೆ. ಈ ಎರಡು ಮಂದಿರಗಳ ಮಧ್ಯ 'ಶಿವಧಾರಾ' ಎಂಬ ಪುಟ್ಟ ನದಿ ಇದೆ.

ಬಿಲ್ವಕೇಶ್ವರ ಮಂದಿರದ ಸ್ವಲ್ಪ ದೂರದಲ್ಲಿ ಕನಖಲ ಸ್ಥಾನದಲ್ಲಿ ದಕ್ಷೇಶ್ವರ (ಶಿವನ ಮಾವ) ಮಂದಿರವಿದೆ. ಅದರಿಂದ ಸುಮಾರು ಒಂದು ಕಿ.ಮೀ ಅಂತರದಲ್ಲಿ ಸತೀ ಕುಂಡವಿದೆ.

ಕೆಲವು ಮಹತ್ವಪೂರ್ಣ ತೀರ್ಥ-ಸ್ಥಾಗಳಲ್ಲಿ ಶಿವನ ಮಂದಿಗಳು ಇರುವದನ್ನು ನಾವು ಕಾಣಬಹುದು. ಮಾನಸ ಸರೋವರ-ಕೈಲಾಸದಲ್ಲಿ ಶಿವನು ಭಕ್ತರಿಗೆ ಸಾಕ್ಷಾತ್ಕಾರ ನಿಡುತ್ತಾನೆಂದು ಪ್ರತೀತ ಇದೆ. ಕೈಲಾಸ ಶಿಖರವು ಸಮುದ್ರ ಪಾತಳಿಯಿಂದ ಹತ್ತೊಂಬತ್ತು ಸಾವಿರ ಫೂಟ ಎತ್ತರದಲ್ಲಿದೆ. ಕೈಲಾಸ ದರ್ಶನದಿಂದ ಭಕ್ತರು ಶಾಂತಿ ಹಾಗೂ ಅಂತಃ ಶುದ್ಧಿಯ ಅನುಭವ ಪಡೆಯುತ್ತಾರೆ. ಕಾಶ್ಮೀರ—ಶ್ರೀನಗರದ ಉತ್ತರ ಪೂರ್ವದಲ್ಲಿ ಸುಮಾರು೧೩೫ ಕಿ.ಮಿ. ದೂರದಲ್ಲಿ ಅಮರನಾಥ ಗುಹೆಯಲ್ಲಿ 'ಶಿವಲಿಂಗ' ನು ಆಸೀನನಾಗಿದ್ದಾನೆ. ಆಶ್ಚರ್ಯವೆಂದರೆ ಬರ್ಫದಿಂದ ಆಚ್ಛಾದಿತವಾದ ಈ ಶಿವಲಿಂಗ, ಈ ಗುಹೆ ಮಾನವ ನಿರ್ಮಿತವಾಗಿದೆಂದು ಪ್ರಕೃತಿದತ್ತವಾಗಿದೆ. ಚಾತುರ್ಮಾಸದ ಪ್ರತಿಪದಿಯೆಂದು ಬರ್ಫದ ಲಿಂಗವು ತಾನೇ ತಯಾರಾಗುತ್ತದೆ. ಅಮವಾಸ್ಯೆ ಇಲ್ಲವೆ ಶುಕ್ಲ ಪಕ್ಷದ ಪ್ರತಿಪದೆಯದು ಪೂರ್ಣ ಅದೃಶ್ಯವಾಗುತ್ತದೆ. ಶ್ರಾವಣ ಮಾಸದಲ್ಲಿ ಭಕ್ತರು ಇಲ್ಲಿಗೆ ಬರುತ್ತಾರೆ.

ಉತ್ತರಕಾಶಿಯ ವಿಶ್ವನಾಥ ಮಂದಿರದ ದಕ್ಷಿಣ ಭಾಗದಲ್ಲಿ 'ಶಿವ–ದುರ್ಗಾ' ಮಂದಿರವಿದೆ. ಇಲ್ಲಿಯೂ ಅನೇಕ ಭಕ್ತರು 'ಶಿವಲಿಂಗ' ದರ್ಶನ ಪಡೆಯುತ್ತಾರೆ.

ಪ್ರಯಾಗದ ಸಮೀಪ ತ್ರಿವೇಣಿ ಸಂಗಮದ ಹತ್ತಿರ ಝೂಂಸಿ ಎಂಬ ಸ್ಥಾನದಲ್ಲಿ 'ಶಿವಾಲಯ' ವಿದೆ. 'ಹಂಸಕೂಪ' ಎಂಬ ಒಂದು ಪ್ರಸಿದ್ಧ ಬಾವಿ ಇಲ್ಲಿಯೆ ಇದೆ. ಈ ಶಿವಾಲಯದ ಉರ್ಧ್ವಭಾಗವು ಪರ್ವತ ಶಿಖರದಂತಿದೆ. ಶಿಲ್ಪ ಕಲೆಯ ಸುಂದರ ರೂಪವನ್ನು ಇಲ್ಲಿ ಕಾಣಬಹುದು. ಅಲ್ಲಿಯೆ 'ಭಾರದ್ವಾಜ ಆಶ್ರಮ' ಎಂಬ ಸ್ಥಾನದಲ್ಲಿ 'ಭಾರದ್ವಾಜೇಶ್ವರ ಶಿವಲಿಂಗ'ವಿದ್ದು ಆ ಮಂದಿರದಲ್ಲಿ ಸಾವಿರ ಹೆಡೆಗಳುಳ್ಳ ಆದಿಶೇಷನ ಮೂರ್ತಿ ಇದೆ. ವಾರಣಾಸಿಯಂತೆ ಭುವನೇಶ್ವರ (ಓರಿಸ್ಸಾ) ಶಿವಮಂದಿರಗಳ ಪಟ್ಟಣ. ಶಂಕರನು ಈ ಕ್ಷೇತ್ರದಲ್ಲಿ ಅವತರಿಸಿದ್ದಾನೆಂದೂ, ಆದ ಕಾರಣ ಇದಕ್ಕೆ 'ಶಾಂಭವ–ಕ್ಷೇತ್ರ' ಹೆಸರು ಪ್ರಾಪ್ತವಾಯಿತೆಂದು ಜನಶ್ರುತಿ ಇದೆ. ಇಲ್ಲಿ ನೃತ್ಯ ಮಂಟಪ ಬಹಳ ಪ್ರಸಿದ್ಧವಿದೆ.

ನರ್ಮದಾ ನದಿ ದಡದಲ್ಲಿರುವ ಅಮರಕಂಟಕವು ತಪೋಭೂಮಿಗಳಲ್ಲಿ ಪ್ರಸಿದ್ಧಿ ಪಡೆದಿದೆ. ನರ್ಮದಾ ಜಲಾಶಯದಲ್ಲಿ 'ನರ್ಮದೇಶ್ವರ ಮಹಾದೇವ' ಎಂಬ ಮಂದಿರವಿದೆ. ಅಮರ ಕಂಟಕದಲ್ಲಿ ಇನ್ನೂ ಒಂದು 'ಓಂಕಾರೇಶ್ವರ ಮಹಾದೇವ' ಮಂದಿರವಿದೆ. ಅರಾವಲಿ ಪರ್ವತಶ್ರೇಣಿಯ ದಕ್ಷಿಣ–ಪಶ್ಚಿಮ ಭಾಗ (ಗುಜರಾತ ಉತ್ತರಭಾಗ) ದಲ್ಲಿ 'ಅಂಬಿಕೆ–ಮಂದಿರ' ಪ್ರಸಿದ್ಧವಿದೆ. ಸ್ವಲ್ಪ ದೂರದಲ್ಲಿ ಸರಸ್ವತಿ ನದಿಯ ಉದ್‍ಗಮ ಸ್ಥಾನದ ಸಮೀಪ 'ಕೋಟೇಶ್ವರ ಮಹಾದೇವ' ಮಂದಿರವಿದೆ. ಇದು ಪವಿತ್ರ ತೀರ್ಥಸ್ಥಾನವಿದ್ದು ಸವಿರಾರು ಯಾತ್ರಿಕರು ಪ್ರತಿವರ್ಷ ಇಲ್ಲಿಗೆ ಬರುತ್ತಾರೆ. ಗುಜರಾತದಲ್ಲಿ ಶಿವ–ಪೂಜೆಯ ಮುಖ್ಯ ಕೇಂದ್ರ ನರ್ಮದಾ ನದಿಯ ದಂಡೆಯ ಮೇಲಿರುವ ಕೆಲ ಮಂದಿರ ಹಾಗೂ

'ಸೋಮನಾಥ' ಮಂದಿರ. ಲಾಟ ಪ್ರದೇಶದ ಪಾಶುಪತಿ ಪಂಥದವರು ಪಾಶುಪತಿ ಮಠದ ಸ್ಥಾಪನೆಯನ್ನು ಸೋಮನಾಥದಲ್ಲಿ ಮಾಡಿದರೆಂದು ತಿಳಿದು ಬರುತ್ತದೆ ಅದೇ 'ಸೋಮನಾಥ' ಮಂದಿರವು ಮುಂದೆ ಬಹಳ ಪ್ರಸಿದ್ಧಿಯನ್ನು ಪಡೆಯಿತು. ಸೋಮ ಅಂದರೆ ಸ+ಉಮಾ ಅರ್ಥಾತ್ ಪಾರ್ವತಿ ಯೊಡನೆ ಶಿವನು.

ಪಶ್ಚಿಮ ರೇಲ್ವೆಯ ಅಹಮದಬಾದ, ದಿಲ್ಲಿ ನಡುವೆ ಸಿದ್ಧಪುರ ಪ್ರದೇಶದ ಸಮೀಪ ಸರಸ್ವತಿ ನದಿಯ ದಡದ ಮೇಲೆ ಬ್ರಹ್ಮಾಂಡೇಶ್ವರ ಶಿವ ಮಂದಿರವಿದೆ. ಯಾತ್ರಿಕರು ಇಲ್ಲಿ ಮಾತ್ರ-ಶ್ರದ್ಧೆಗಾಗಿ ಬರುತ್ತಾರೆ. 'ಭೂತನಾಥ ಮಹಾದೇವ' ಮಂದಿರವು ಸಿದ್ಧಪುರದಲ್ಲಿದೆ.

ಓರಿಸ್ಸಾದ 'ಭಾಸ್ಕರೇಶ್ವರ' ಮಂದಿರವು ಶಿವ ಸಾಂಪ್ರದಾಯದಂತೆ ನಿರ್ಮಿಸಲ್ಪಟ್ಟಿದೆ. ಇಲ್ಲಿಯ ಶಿವಲಿಂಗವು ಒಂಬತ್ತು ಫೂಟ ಎತ್ತರದಲ್ಲಿದೆ. ವ್ಯಾಸ ಹನ್ನೆರಡು ಫೂಟು ಇದೆ. ಖುಜಿರಾಹೋ (ಮಧ್ಯ ಪ್ರದೇಶ) ಮಂದಿರಗಳು ಬುಂದೇಲಖಂಡದ ಶಿಲ್ಪ ಕಲೆಯನ್ನು ಪ್ರತಿನಿಧಿಸುತ್ತವೆ. ಚಂದೇಲರಾಜರ ಕಾಲದಲ್ಲಿ ಎಲ್ಲ ಧರ್ಮಾವಲಂಬಿಗಳು ತಮ್ಮ ಧರ್ಮದ ವಿಕಾಸಕ್ಕಾಗಿ ಮಂದಿರಗಳನ್ನು ನಿರ್ಮಿಸಿದರು. ಖುಜರಾಹೋದಲ್ಲಿ 'ಶಿವ-ಸಾಗರ' ಜಲಾಶಯದ ದಡದಲ್ಲಿ ವಿಶಾಲ ಮಹಾದೇವ ಮಂದಿರವಿದೆ. ಅದರ ಆಯತಾಕಾರ ೧೨೦' × ೬೦' ಇದೆ ಪ್ರವೇಶದ್ವಾರವಂತೂ ಅದ್ಭುತವಾಗಿದೆ. ಇದರ ಮೇಲೆ ಅನೇಕ ದೇವತೆಗಳ ಗಂಧರ್ವರ ಮೂರ್ತಿ ಕಂಗೊಳಿಸುತ್ತವೆ. ಇಲ್ಲಿ ಅರ್ಧ ಮಂಟಪ ಮಹಾಮಂಟಪಗಳ ಮೇಲ್ಛಾವಣಿಗಳ ಕಲಾ-ಕುಸುರಿನ ಸೌಂದರ್ಯ ವರ್ಣನಾತೀತವಾದುದು. ಮಹಾಮಂಟಪವು ಚೆಕೋರಾಕೃತಿಯಲ್ಲಿದ್ದು ಮಧ್ಯದಲ್ಲಿ ಒಂದುವೃತ್ತವಿದೆ. ಮಹಾಮಂಟಪದ ನಂತರ ಗರ್ಭಗ್ರಹ ಕಾಣಸಿಗುತ್ತದೆ.

ಉದಯಪುರದಲ್ಲಿ ಉದಯಾದಿತ್ಯ ಪರಮಾರರು ನಿರ್ಮಿಸಿದ ಉದಯೇಶ್ವರ ಮಹಾದೇವ ಮಂದಿರವು ಕೆಂಪು ಶಿಲೆಗಳಿಂದ ನಿರ್ಮಿತವಾಗಿದೆ. ಆರು ಅಟ್ಟಗಳಿಂದ ನಿರ್ಮಿತವಾದ ಈ ಮಂದಿರದ ಶಿಖರದ ಮೇಲೆ ಉಮೆಯವಾಹನ ವಿಶಾಲಕಾಯ ಸಿಂಹಮೂರ್ತಿಯೊಂದು ಕಂಗೊಳಿಸುತ್ತದೆ. ಉದಯಪುರದಿಂದ ಹನ್ನೆರಡು ಮೈಲು ದೂರದಲ್ಲಿ ಶ್ವೇತಸಂಗಮದ ಶಿಲೆಯಿಂದ ನಿರ್ಮಿತವಾದ 'ಏಕ-ಲಿಂಗ' ಮಹಾ-ಮಂದಿರವುಬಹಳ ವಿಶಾಲವಾದದ್ದು ಮೇವಾಡದ ರಾಣಾ ಬಪ್ಪಾ ರಾವಳನ ಕಾಲದಲ್ಲಿ ಇದನ್ನು ನಿರ್ಮಿಸಲಾಯಿತೆಂದು ಹೇಳಲಾಗುತ್ತದೆ.

ನೇಪಾಳದ ಜನರಲ್ಲಿ ಧಾರ್ಮಿಕ ಭಾವನೆ ಅಧಿಕವಾಗಿರುವುದರಿಂದ ಸಾಮಾನ್ಯವಾಗಿ ಅವರ ಮನೆಗಳ ಆವರಣದಲ್ಲಿ ಮಂದಿರಗಳನ್ನು ಕಾಣಬಹುದು. ಇಲ್ಲಿ ಶಿವ ಮಂದಿರಗಳು ಅಧಿಕ. ಇಲ್ಲಿಯ ಈ ಮಂದಿರಗಳು ಚೀನ, ಜಪಾನ ಮಂದಿರಗಳ ಆಕಾರವನ್ನು ಹೋಲುತ್ತವೆ. ಅನೇಕ ಅಟ್ಟಗಳುಳ್ಳ ಚೌಕೋನಾಕಾರದ ಅಧೋಮುಖ

ಮಂದಿರಗಳು ಇಲ್ಲಿ ಕಾಣಸಿಗುತ್ತವೆ. ಕಾಠಮಾಂಡುವಿನ ನಾಲ್ಕು ಕಿ.ಮೀ. ದೂರದಲ್ಲಿ 'ಪಶುಪತಿನಾಥ' ಶಿವಮಂದಿರವಿದೆ. ಇದು ವಿಷ್ಣುಮತಿ ನದಿ ತೀರದಲ್ಲಿದೆ. ಪಶುಪತಿನಾಥ ಮೂರ್ತಿಯು ಲಿಂಗರೂಪದಲ್ಲಿರದೇ ಮನುಷ್ಯವಿಗ್ರಹ ರೂಪದಲ್ಲಿದೆ. ಇದರ ಸಮೀಪದಲ್ಲಿ ನಂದಿಮೂರ್ತಿ ಇದ್ದು, ಇನ್ನೊಂದು ಬದಿಯಲ್ಲಿ 'ದೇವಿ' ಮಂದಿರವಿದೆ.

ದಕ್ಷಿಣ ಭಾರತದಲ್ಲಿ ದ್ರವಿಡ[ಶೈವ-ವೀರಶೈವ] ಸಂಪ್ರದಾಯದ ಮಂದಿರಗಳು ಅಧಿಕ ಸಂಖ್ಯೆಯಲ್ಲಿವೆ ಭೌದ್ದ ಧರ್ಮದ ಅವನತಿ ಆರಂಭವಾದಂತೆ ಈ ಭಾಗದಲ್ಲಿ ಶಿವ—ಮಂದಿರಗಳು ಹೆಚ್ಚು ಹೆಚ್ಚಾಗಿ ಬೆಳೆದು ಬಂದುವು. ನದಿ—ಜಲಾಶಯ ಐತಿಹಾಸಿಕ ಸ್ಥಳಗಳಲ್ಲಿ ಮಂದಿರಗಳ ಸ್ಥಾಪನೆ ಭಾರತೀಯ ಮಂದಿರಗಳ ಒಂದು ವೈಶಿಷ್ಟ್ಯ. ದಕ್ಷಿಣದ ಶಿವಮಂದಿರಗಳು ಈ ನಿಯಮಕ್ಕೆ ಹೊರತಾಗಿಲ್ಲ. ಉತ್ತರ ಭಾರತನ ಶಿವಮಂದಿರಗಳಿಗಿಂತ ದಕ್ಷಿಣದ ಶಿವಮಂದಿರಗಳ ಮಂಟಪಗಳ ನಿರ್ಮಾಣ ಕಲೆ ಹಾಗೂ ರೂಪದರ್ಶನದಲ್ಲಿ ಸ್ವಲ್ಪ ವ್ಯತ್ಯಾಸವನ್ನು ಕಾಣುತ್ತೇವೆ. ದಕ್ಷಿಣದ ಶಿವ ಮಂದಿರಗಳ ನಿರ್ಮಾಣ ಶೈಲಿಯಲ್ಲಿ ಅಧಿಕ ಸಾಮ್ಯವಿದೆ. ಈ ಮಂದಿರ ಮಂಟಪಗಳಲ್ಲಿ ನಾಲ್ಕು ವಿಭಾಗಗಳಿರುತ್ತವೆ. ಮೊದಲನೆಯದು ಚತುಷ್ಕೋಣದಾಕಾರವಾಗಿರುತ್ತದೆ. ಇದರ ಶಿಖರಗಳು ಪಿರಾಮಿಡ್[pyramid] ಅರ್ಥಾತ್ ಪರ್ವತಾಕರವಾಗಿರುತ್ತವೆ. ಎರಡನೇ ಭಾಗವು ದರ್ಶನಾರ್ಥಿಗಳ ಆಂತರಿಕ ಪ್ರವೇಶಕ್ಕಾಗಿ, ಮೂರನೆಯದು ಪರ್ವತಾಕಾರವಿದ್ದು, ನಾಲ್ಕನೇಯದು ಅನೇಕ ಕಂಬಗಳಿಂದ ಒಳಗೂಡಿದ್ದು ಮಂಟಪಾಕಾರವಾಗಿರುತ್ತದೆ. ಇದು ಭಕ್ತರ ವಿಶ್ರಾಂತಿಗಾಗಿ ಉಪಯೋಗಿಸಲ್ಪಡತ್ತದೆ.

ಮಿಶ್ರ [ಇಜಪ್ತ] ದೇಶದ ಪರ್ವತಾಕಾರದ [pyramidial]ವಿಶಾಲ ಮಂದಿರಗಳು ದಕ್ಷಿಣ ಭಾರತದ ಮಂದಿರಗಳ ಶೈಲಿಯನ್ನು ಅನುಸರಿಸಿದಂತೆ ಕಾಣುತ್ತದೆ. ದ್ವಾರಗಳಂತೂ ಇಲ್ಲಿಯ ಮಂದಿರಗಳ ಅನುಕರಣೆಯಾಗಿದೆ. ಕಾಂಬೋಡಿಯಾದಲ್ಲಿ ಸಹ ಭಾರತದ ಶೈವ, ವೈಷ್ಣವರು ಅಲ್ಲಿ ನೆಲೆಸಿ ಇಲ್ಲಿಯ ಮಂದಿರಗಳ ಶೈಲಿಯನ್ನು ಅನುಸರಿಸಿ ಮಂದಿರ ನಿರ್ಮಿಸಿದ್ದರೆಂದು ಪ್ರತೀತ ಇದೆ. "ಅಂಕುರವಟ" ಮಂದಿರದ ಉದಾಹರಣೆ ಇಲ್ಲಿ ಕೊಡಬಹುದು. ಇದು ದಕ್ಷಿಣದ ಮಂದಿರ ಶಿಲ್ಪ—ಶೈಲಿಯನ್ನೇ ಅನುಸರಿಸಿದೆ.

ಆಂಧ್ರಪ್ರದೇಶದ ಒರಂಗಲ್ಲನಲ್ಲಿರುವ ಶಿವ-ಮಂದಿರವು ಇಂದಿಗೂ ಶಿಲ್ಪ ವಿನ್ಯಾಸದ ದೃಷ್ಟಿಯಿಂದ ಬೆರಗುಗೊಳಿಸುತ್ತದೆ.೧೨೩೫ರಲ್ಲಿ ಕಾಕತೀಯ ಮಹಾರಾಜನು ಇದನ್ನು ಕಟ್ಟಿಸಿದ್ದಾನೆ. ಭಾರತದ ಶಿವ-ದೇವಾಲಯಗಳಲ್ಲಿಯೇ ಇದು ಅದ್ಭುತವಾಗಿದೆ. ಸರೋವರದ ದಡದ ಮೇಲೆ ನಿರ್ಮಿತವಾದ ಈ ಮಂದಿರದ ತಳಪಾಯಕ್ಕೆ ನೀರು ಸದಾ ಇರುವದರಿಂದ ತೇಲುವ ಇಟ್ಟಂಗಿಗಳನ್ನು ಉಪಯೋಗಿಸಲಾಗಿದೆ. ಸುಮಾರು ೩೫೦ ವರ್ಷಗಳ ಹಿಂದೆಯೇ ಭಾರತೀಯರು ತೇಲುವ ಇಟ್ಟಂಗಿಗಳನ್ನು

ನಿರ್ಮಿಸಿದ್ದರೆಂದು ನೆನೆದರೆ ಆಧುನಿಕ ಮಾನವನು ಅಚ್ಚರಿ ಪಡುವುದರಲ್ಲಿ ಸಂದೇಹ ವಿಲ್ಲ. ತೇಲುವ ಶಿವಾಲಯವೆಂದೇ ಇದು ಪ್ರಸಿದ್ಧಿ ಪಡೆದಿದೆ.

ದ್ರವಿಡ ಶಿಲ್ಪಕಲೆಯ ಉತ್ಕೃಷ್ಟ ರೂಪವನ್ನು ೧೧ನೇ ಶತಮಾನದಲ್ಲಿ ನಿರ್ಮಿತವಾದ ರಾಮೇಶ್ವರಮ್ 'ಶಿವಮಂದಿರ' ದಲ್ಲಿ ಕಾಣಬಹುದು. ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಈ "ಶಿವಲಿಂಗ"ವನ್ನೂ ರಾಮಚಂದ್ರನು ಶಂಕರಪೂಜೆಗಾಗಿ ಸ್ಥಾಪಿಸಿದ್ದರಿಂದ 'ರಾಮೇಶ್ವರಮ್' ಎಂದು ಹೆಸರು ಬಂದಿದೆ ಎಂದು ಪ್ರತೀತ ಇದೆ. ಪುರಾಣದಲ್ಲಿ "ಗಧಮಾರ್ಧನ" ಎಂಬ ಹೆಸರಿನಿಂದ ಇದು ವರ್ಣಿಸಲ್ಪಟ್ಟಿದೆ. ಮೂವತ್ತೊಂದು ಮೈಲು ಉದ್ದ ಹಾಗೂ ಏಳು ಮೈಲು ಅಗಲವಾದ ಈ ದ್ವೀಪವು ಮದ್ರಾಸ ರಾಜ್ಯದ ರಾಮನಾದ ಜಿಲ್ಲೆಯಸಮೀಪವಿದೆ. ರಾಮೇಶ್ವರ ಮಂದಿರವು ೨೦ ಫೂಟು ಎತ್ತರವಾದ ಗೋಡೆಗಳಿಂದ ಸುತ್ತುವರಿದಿದೆ. ಸಂಪೂರ್ಣ ಮಂದಿರವು ಪೂರ್ವ ಪಶ್ಚಿಮವಾಗಿ ೮೬೫ ಫೂಟು ಹಾಗೂ ಉತ್ತರ-ದಕ್ಷಿಣವಾಗಿ ೬೫೭ ಫೂಟು ವಿಸ್ತಾರ ಹೊಂದಿದೆ. ಪಶ್ಚಿಮದ ಕಡೆಗಿನ ಗೋಪುರವು ಪೂರ್ಣವಿದ್ದು ಅದರ ಎತ್ತರ ೭೮ ಫೂಟು ಇದೆ. ಗರ್ಭಗ್ರಹದಲ್ಲಿ ದೇವರು ವಿರಾಜಮಾನವಾಗಿದ್ದಾನೆ. ಮಂದಿರದ ನಾಲ್ಕು ದಿಕ್ಕಿನಲ್ಲಿ ೧೨ ಫೂಟು ಉದ್ದ, ೮ ಫೂಟು ಅಗಲ ಹಾಗೂ ೯ ಫೂಟು ಎತ್ತರವಾದ ನಂದಿಯ ವಿಗ್ರಹಗಳಿವೆ. ಮಂದಿರದ ಸ್ತಂಭಗಳು ೩೦' ವರಗೆ ವಿಶಾಲವಾಗಿದ್ದು ಮಂದಿರದ ವಳಾಂಗಣವು ಸುಮಾರು ೪೦೦೦' ಉದ್ದ, ೧೭'-೨೧' ಅಗಲವಿದೆ.

ಶ್ರೀ ಶೈಲ [ಆಂಧ್ರಪ್ರದೇಶ] ಮಲ್ಲಿಕಾರ್ಜುನ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದು ೫೧ ಶಕ್ತಿ ಪೀಠಗಳಲ್ಲಿ ಇದು ಒಂದು. ಶ್ರೀಶೈಲವು ದಟ್ಟವಾದ ಅರಣ್ಯದಿಂದ ಒಡಗೂಡಿದ್ದರಿಂದ ಶಿವರಾತ್ರಿ, ಆಶ್ವಿನ ನವರಾತ್ರಿ ಸಮಯದಲ್ಲಿ ಭಕ್ತರು ಇಲ್ಲಿಗೆ ಬರುತ್ತಾರೆ. ವೀರಶೈವ ಪಂಚಾಚಾರ್ಯರ ಉಗಮಸ್ಥಾನ ಇದೇ ಎಂದು ಐಹಿತ್ಯವಿದೆ. ಫಾಲ್ಗುಣ ಕೃಷ್ಣಪಕ್ಷ ಏಕಾದಶಿ ಎಂದು ಭಕ್ತರು ಶ್ರೀಶೈಲ ತಲಪುತ್ತಾರೆ. ಮಂದಿರದ ಸುತ್ತಲೂ ಕಲ್ಲಿನ ಗೋಡೆ ಇದೆ. ಇದರ ಮೇಲೆ ಅಶ್ವ-ಗಜಗಳ ಚಿತ್ರಗಳಿವೆ. ನಾಲ್ಕು ದಿಕ್ಕಿನಲ್ಲಿ ದ್ವಾರಗಳಿದ್ದು ಅವುಗಳಿಗೆ ಗೋಪುರಗಳಿವೆ. ಮಂದಿರವು ಚಿಕ್ಕದಿದ್ದರೂ ರಾಮೇಶ್ವರನ ಮಂದಿರದ ಆಕಾರವನ್ನು ಸ್ವಲ್ಪ ಮಟ್ಟಿಗೆ ಹೋಲುತ್ತದೆ. ಶಿಲ್ಪದಿಂದ ತಯಾರಿಸಿದ ಮಲ್ಲಿಕಾರ್ಜುನ ಮೂರ್ತಿ ಸುಮಾರು ಎಂಟು ಅಂಗುಲ ಎತ್ತರವಿದೆ. ಮಲ್ಲಿಕಾರ್ಜುನ ಮಂದಿರದ ದ್ವಾರವು ಪೂರ್ವ ದಿಕ್ಕಿಗೆ ಇದ್ದು ಎದುರಿನಲ್ಲಿ ಸಭಾ ಮಂಟಪವಿದೆ. ಅಲ್ಲಿ ನಂದಿಯ ವಿಶಾಲ ಮೂರ್ತಿ ಇದೆ. ಶಿವರಾತ್ರಿಯಂದು ಶಿವ ಪಾರ್ವತಿಯ ವಿವಾಹ-ಮಹೋತ್ಸವ ವೈಭವದಿಂದ ನೆರವೇರುತ್ತದೆ. ಶಿವಶರಣೆ ಅಕ್ಕಮಹಾದೇವಿ ಐಕ್ಯವಾದುದು ಶ್ರೀಶೈಲ ಮಲ್ಲಿಕಾರ್ಜುನನಲ್ಲಿ.

ಹರಿ ಹರಾತ್ಮಕ ಪುರಿ ಕಾಂಚಿಯು ಶಿವಕಾಂಚಿ, ವಿಷ್ಣುಕಾಂಚಿ ಎಂದು ಎರಡು ವಿಧಗಳಲ್ಲಿ ಹೆಸರು ಪಡೆದಿದೆ. 'ಶಿವಕಾಂಚಿ' ಮಂದಿರದ ಸಮೀಪ 'ಸರ್ವತೀರ್ಥ' ಸರೋವರವಿದೆ. ಸರೋವರ ಮಧ್ಯದಲ್ಲಿಯೂ ಒಂದು ಚಿಕ್ಕ ಮಂದಿರವಿದೆ. ದ್ರವಿಡ ಶಿಲ್ಪರೂಪದಲ್ಲಿ ಶಿವಕಾಂಚಿ ಮಂದಿರದ ಮುಂದಿನ ದ್ವಾರದ ಮೇಲೆ ಮಂದಿರದ ತರಹ ಗೋಪುರ ನಿರ್ಮಿಸಲ್ಪಟ್ಟಿದೆ.

ಭಾರತದ ಪುಣ್ಯಕ್ಷೇತ್ರಗಳಲ್ಲಿ ಚಿದಂಬರವು [ಮದ್ರಾಸ ರಾಜ್ಯ] ಮಹತ್ವಪೂರ್ಣವಾಗಿದೆ. ಇಲ್ಲಿ 'ನಟರಾಜ ಶಿವನ' ಮಂದಿರವು ಪ್ರಧಾನವಾಗಿದೆ. ಮಂದಿರದ ಕ್ಷೇತ್ರ ವಿಸ್ತಾರವು ಸುಮಾರು ಒಂಭತ್ತು ಗುಂಟೆ ಇಲ್ಲಿ ಅನೇಕ ಗೋಪುರಗಳಿವೆ. ಎರಡನೇ ಗೋಪುರವು ಒಂಭತ್ತು ಅಟ್ಟಗಳಿಂದೊಡಗೂಡಿದೆ. ಇವುಗಳ ಮೇಲೆ ನಾಟ್ಯಶಾಸ್ತ್ರಾನುಸಾರ ವಿಭಿನ್ನ ನೃತ್ಯ-ಮುದ್ರೆಗಳನ್ನು ಕಾಣಬಹುದು. ಒಳಗೆ ಪ್ರವೇಶಿಸಿದರ ಗಣೇಶ ಮಂದಿರದ ದರ್ಶನವಾಗುತ್ತದೆ. ಅದರ ನಂತರ ನಟರಾಜನ ಮಂದಿರ ದೃಷ್ಟಿ ಗೋಚರವಾಗುತ್ತದೆ. ನಟರಾಜ ಸಭಾ-ಮಂಟಪದ ಎದುರಿಗೆ ಒಂದು ಸ್ವರ್ಣಮಯವಾದ ಸ್ತಂಭವಿದೆ. ಮಂದಿರದ ದ್ವಾರ ದಕ್ಷಿಣಕ್ಕೆ ಇವೆ. ಮಂದಿರದಲ್ಲಿ ನೃತ್ಯ ಮಾಡುವ ಭಂಗಿಯಲ್ಲಿ ಶಿವನ ಸುಂದರ ಮೂರ್ತಿ ಇದೆ. ನಟರಾಜ ಮಂದಿರದ ಸ್ವಲ್ಪ ದೂರದಲ್ಲಿ ಪಾರ್ವತಿ-ಪರಮೇಶ್ವರರ ವಿಗ್ರಹಗಳಿವೆ.

ತಂಜಾವೂರದಲ್ಲಿ ಚೋಳರಾಜರಿಂದ ನಿರ್ಮಿತವಾದ-'ಬೃಹದೀಶ್ವರ' ಶಿವ ಮಂದಿರವಿದೆ. ಇಲ್ಲಿಯೂ ೯೦' ಎತ್ತರದ ಗೋಪುರಗಳನ್ನು ಕಾಣಬಹುದು.

ಮಹಾಬಲಿಪುರ [ಮದ್ರಾಸ] ನಾಲ್ಕು ವರೆ ಫೂಟು ಎತ್ತರದ ಶಿವಲಿಂಗವಿದೆ. ಅದರ ಮೇಲೆ ಚಿತ್ರಾವಳಿಯನ್ನು ಕಾಣಬಹುದು ಸ್ವಲ್ಪ ದೂರದಲ್ಲಿ ನಂದಿಯ ವಿಗ್ರಹವು ಇದೆ. ಮಹಾಬಲಿಪುರವು ಸಮುದ್ರದಡಿಯಲ್ಲಿದೆ. ಈ ಪುರದ ಸ್ವಲ್ಪ ದೂರದಲ್ಲಿ ಶಿವ-ಪಾರ್ವತಿಯ ಯುಗಲ ಮೂರ್ತಿ ಇದೆ. ಮಂದಿರದ ದ್ವಾರ ಸಮುದ್ರದ ಕಡೆಗೆ ಇದೆ. ಮಂದಿರದ ಪಶ್ಚಿಮದ್ವಾರದತ್ತ ವಿಷ್ಣು ವಿಗ್ರಹವಿದೆ. ಕಾರಣ 'ಶಿವ-ವಿಷ್ಣು' ಮಂದಿರನೆಂಬೇ ಪ್ರಸಿದ್ಧಿ ಪಡೆದಿದೆ.

ದಕ್ಷಿಣ ಭಾರತದ ಪಂಚತತ್ವ ಲಿಂಗಗಳಲ್ಲಿ 'ಜಂಬು ಕೇಶ್ವರ'ವೂ ಒಂದು. ಈ ಮಂದಿರವು ಶ್ರೀರಂಗ ಮಂದಿರಕ್ಕಿಂತಲೂ ಹಳೆಯದಾಗಿದೆ. ಈ ಜಂಬುಕೇಶ್ವರ ಮಂದಿರದ ವಿಸ್ತಾರ ಸುಮಾರು ೧೦೦ ಗುಂಟೆಗಿಂತಲೂ ಹೆಚ್ಚು. ಈ ಮಂದಿರದ ಮಂಟಪವು ೪೦೦ ಸ್ತಂಭಗಳಿಂದೊಡಗೂಡಿದೆ- 'ತೆಪ್ಪಾಕುಲಮ್' ಹೆಸರಿನ ಸರೋವರವು ಇದರ ಸಮೀಪದಲ್ಲಿದೆ. ಲಿಂಗಮೂರ್ತಿಯ ಕೆಳಗಿನಿಂದ ಜಲವು ಊರ್ಧ್ವಮುಖವಾಗಿ ಬರುತ್ತಿರುತ್ತದೆ. ದಕ್ಷಿಣ ಶಿಲ್ಪಕಲೆಯನ್ನು ಪೂರ್ಣವಾಗಿ ಈ ಮಂದಿರದಲ್ಲಿ ಅಳವಡಿಸಿದುದನ್ನು ಕಾಣಬಹುದು. ಈ ಮಂದಿರದಲ್ಲಿದ್ದ

ಮಂಟಪಗಳು. ಅನೇಕ, ಝೂಲನ ಮಂಟಪ, ಶತಸ್ತಂಭ ಮಂಟಪ, ಸಹಸ್ರಸ್ತಂಭ ಮಂಟಪ, ನವರಾತ್ರಿ ಮಂಟಪ, ವಸಂತ ಮಂಟಪ, ಧ್ವಜಸ್ತಂಭ ಮಂಟಪ, ಸೋಮಸ್ಕಂದ ಮಂಟಪ, ನಟರಾಜ ಮಂಟಪ, ತ್ರಿಮೂರ್ತಿ ಮಂಟಪ ಪ್ರಮುಖವಾದವುಗಳು. ಮಂದಿರದ ಅನತಿ ದೂರದಲ್ಲಿ ರಾಜರಾಜೇಶ್ವರ ಮಂದಿರವಿದೆ. ಅಲ್ಲಿ 'ಪಂಚಮುಖಿ ಶಿವಲಿಂಗ' ಪ್ರತಿಷ್ಠಾಪಿಸಲ್ಪಟ್ಟಿದೆ.

ಪಂಚತತ್ವ ಲಿಂಗಗಳಲ್ಲಿ ಕಾಳಹಸ್ತಿಯು[ಮದ್ರಾಸ]ಒಂದು ಇಲ್ಲಿ ವಾಯುತತ್ವ ಶಿವಲಿಂಗವಿದೆ ಸ್ವರ್ಣಮುಖಿ ನದಿಯ ದಂಡೆಯ ಮೇಲೆ ಶ್ರೀಕಾಳಹಸ್ತಿ ಮಂದಿರವಿದೆ, 'ಶಿವಲಿಂಗ'ವಿಗ್ರಹದ ಮುಂದೆ ಬಂಗಾರದ ಪಾತ್ರೆ ಇದ್ದು ಫಲ-ಪುಷ್ಪಗಳನ್ನು ಇದರಲ್ಲಿಯೇ ಇಟ್ಟು ಲಿಂಗಪೂಜೆ ಮಾಡುತ್ತಾರೆ. ಈ ಶಿವಲಿಂಗ ವಿಗ್ರಹದಲ್ಲಿ ಜೇಡರಹುಳ, ಸರ್ಪದ ಹೆಡೆ, ಗಜದಂತಗಳ ಚಿನ್ಹೆಗಳಿವೆ. ಈ ಶಿವಲಿಂಗಮೂರ್ತಿಯ ಆರಾಧಕರಲ್ಲಿ ಶ್ರೀ[ಜೇಡರ ಹುಳ] ಕಾಳ[ಕರಿಯ ಸರ್ಪ] ಹಸ್ತಿ[ಆನೆ] ಇದ್ದುದರಿಂದ ಇದಕ್ಕೆ 'ಶ್ರೀ ಕಾಳಹಸ್ತಿ' ಎಂದು ಹೆಸರು ಬಂದಿತೆಂದು ಭಕ್ತರ ವಿಶ್ವಾಸ. ಮಂದಿರದಲ್ಲಿ ಗೌರಿಯ ಮೂರ್ತಿಯೂ ಇದೆ. ಕಾಳಹಸ್ತಿಯ ಗುಡ್ಡದ ಮೇಲೆ ಒಂದು ಶಿವಲಿಂಗವಿದೆ. ಅರ್ಜುನನು ಶಿವನಪೂಜೆಗೈದು ಪಾಶುಪತಾಸ್ತ್ರ ಇಲ್ಲಿಯೇ ಪಡೆದಿದ್ದನೆಂದೂ, ಮುಂದೆ ಬೇಡರ ಕಣ್ಣಪ್ಪನೂ ಈ ಲಿಂಗ ಪೂಜಿಸಿದನೆಂದು ಜನಶೃತಿ.

ಕರ್ನಾಟಕದ ಪ್ರಸಿದ್ಧ ಐತಿಹಾಸಿಕ ಸ್ಥಳವಾದ ಪಟ್ಟದಕಲ್ಲಿನಲ್ಲಿ ವಿರೂಪಾಕ್ಷ ಮಂದಿರವು ವಿಧರ್ಮಿಯರ ದಾಳಿಗೆ ತುತ್ತಾದರೂ ಪುನಃ ಇದನ್ನು ಅಖಂಡಶಿಲೆಗಳ ಆಧಾರದ ಮೇಲೆ ಕಟ್ಟಲಾಯಿತು. ಇಲ್ಲಿಯ ಸಭಾಮಂಟಪವು ೧೬ ಕಂಬಗಳಿಂದ ನಿರ್ಮಿತವಾಗಿದೆ. ಮಂದಿರವು ಜೀರ್ಣ ಸ್ಥಿಯಲ್ಲಿದ್ದರೂ ವಾಸ್ತುಕಲೆ ಅತ್ಯಂತ ರಮಣೀಯವಾಗಿದೆ. ಮಂಟಪದ ಎದುರಿನಲ್ಲಿ ಬ್ರಹ್ಮ-ನಂದಿಯ ಮೂರ್ತಿಗಳಿವೆ.

ಗೋಕರ್ಣದ 'ಮಹಾಬಳೇಶ್ವರ'ಮಂದಿರ ಬಹಳ ಸುಂದರವಿದೆ. ಇಲ್ಲಿ 'ಶಂಕರದೇವರ' ಆತ್ಮತತ್ವಲಿಂಗವಿದೆ. ಪ್ರತಿ ಇಪ್ಪತ್ತು ವರ್ಷಗಳಿಗೊಮ್ಮೆ ಅಷ್ಟ-ಬಂಧ ಮಹೋತ್ಸವ ನಡೆಯುತ್ತದೆ ಆಗ ಈ ಆತ್ಮತತ್ವಲಿಂಗ ಅರ್ಥಾತ್ ಮಹಾಬಲ ಲಿಂಗದ ಸಪ್ತಪೀಠಗಳನ್ನು ಹೊರ ತೆಗೆದು ಅಷ್ಟಬಂಧವನ್ನು ತಯಾರಿಸಿರುತ್ತಾರೆ. ಮಂದಿರದ ಮೂರ್ತಿ ಮೃಗಶೃಂಗದ ತರಹವಿರುವುದರಿಂದ [ರಾವಣನು ಈ ಲಿಂಗವನ್ನು ಕೀಳಲು ಪ್ರಯತ್ನಿಸಿದ್ದರಿಂದ ಅದು ಮೃಗಶೃಂಗದ ಆಕಾರ ತಾಳಿತೆಂದು ಪುರಾಣಕತೆ] ಮಹಾಬಳೇಶ್ವರ ಹೆಸರು ಬಂದಿದೆ. ಆದ್ದರಿಂದ ಗೋಕರ್ಣಕ್ಕೆ ಮಹಾಬಳೇಶ್ವರ ಎಂದೂ ಕರೆಯುತ್ತಾರೆ. ಈ ಮಂದಿರದ ಸಭಾಮಂಟಪದಲ್ಲಿ ಗಣೇಶ-ಪಾರ್ವತಿ ವಿಗ್ರಹಗಳಿವೆ. ಮಧ್ಯದಲ್ಲಿ ನಂದಿಯೂ ಇದೆ. ಮಹಾಬಳೇಶ್ವರನ ಚಂದ್ರಶಾಲೆಯ ಮಧ್ಯ ಶಾಸ್ತ್ರೇಶ್ವರ ಲಿಂಗವಿದ್ದು ಪೂರ್ವದತ್ತ ವೀರಭದ್ರ ಮೂರ್ತಿ ಇದೆ. ಮಂದಿರದ ಸಮೀಪ ೪ಂಫೂಟ ಎತ್ತರದ ಸಿದ್ಧ ಗಣಪತಿ ಮೂರ್ತಿ ಇದೆ. ಕೋಟಿತೀರ್ಥದ

ಹತ್ತಿರ ಕೋಟೇಶ್ವರ ಲಿಂಗ, ನಂದಿ ಮೂರ್ತಿಗಳಿವೆ ಈ ತೀರ್ಥದ ಪಶ್ಚಿಮಭಾಗದಲ್ಲಿ ಕಾಳ-ಭೈರವ ಮಂದಿರ, ಶಂಕರ-ನಾರಾಯಣ ಮಂದಿರಗಳಿವೆ. ಇಲ್ಲಿ ಸಮೀಪದಲ್ಲಿ ವೈತರಣಿ ತೀರ್ಥಸ್ಥಾನವು ಇದೆ. ಅಗಸ್ತ್ಯ ಮುನಿಗಳ ಗವಿ, ತಾಮ್ರಪಣಿತನಾದಿ, ತಾಮ್ರಗೇರಿ ಮಂದಿರ, ರುದ್ರಭೂಲ ಸ್ಮಶಾನ[ಇಲ್ಲಿ ಶಿವನು ಸಾಕ್ಷಾತ್ಕಾರ ತಾಳಿದ್ದಾನೆಂದು ಪ್ರತೀತ]ನೋಡುವ ಇನ್ನಿತರ ಸ್ಥಳಗಳಾಗಿವೆ.

ಶಿಲ್ಪಕಾರರು ತಮ್ಮ ತೀಕ್ಷ್ಣ ಛಾನಿಯಿಂದ ಶಿಲೆಗಳನ್ನು ಮೃದು ಮೇಣದ ಹಾಗೆ ಕೊರೆದು ಅವುಗಳಲ್ಲಿ ವೀರಶೈವ ವಿಚಾರ ಪದ್ಧತಿ, ವೇಷಭೂಷಣ, ವಾತಾವರಣ ಜೀವನದ ವಿವಿಧ ಹಂತಗಳನ್ನು ವಿಹಂಗಮ ಹಾಗೂ ಸೂಕ್ಷ್ಮಚಿತ್ರಗಳನ್ನು ವೀರಶಿವಮಂದಿರಗಳಲ್ಲಿ ಚಿತ್ರಿಸಿದ್ದಾರೆ. ಸುಂದರ ಮಂಟಪಗಳಲ್ಲಿ ತಮ್ಮ ಧರ್ಮದ ಸಂಸ್ಕೃತಿಯ ಸಂಕೇತಗಳನ್ನು ಪ್ರಸ್ತಾಪಿಸಿದ್ದಾರೆ. ಕರ್ನಾಟಕದ ವೀರಶೈವ ಮಂದಿರಗಳಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದು.

ಇಂಡೋ-ಯುರೋಪಿಯನ್ ಭಾಷಾವಿಜ್ಞಾನದಲ್ಲಿ ಸಂಸ್ಕೃತದ ಸ್ಥಾನ

—ಎಚ್. ಎಸ್. ಅನಂತನಾರಾಯಣ

ಭಾರತ ದೇಶದಲ್ಲಿ ಇಂದು ಉಪಯೋಗದಲ್ಲಿರುವ ಭಾಷೆಗಳೆಲ್ಲಾ ದೇಶ ಭಾಷೆಯಾದ ಸಂಸ್ಕೃತದಿಂದ ಬೆಳೆದು ಬಂದಿವೆಯೆಂದು ನಂಬುವವರು ನಮ್ಮಲ್ಲಿ ಅನೇಕರಿದ್ದಾರೆ. ಇವೇ ಅಲ್ಲದೆ, ಪ್ರಪಂಚದ ಇನ್ನೂ ಕೆಲವು ಭಾಷೆಗಳು ಸಂಸ್ಕೃತ ಜನ್ಯವೆಂದು ನಂಬಿದ್ದವರನೇಕರು. ಹಿಬ್ರೂ ಭಾಷೆಯೇ ಎಲ್ಲ ಭಾಷೆಗಳಿಗೆ ಮೂಲವೆಂದು ತಿಳಿದಿದ್ದವರು ಇನ್ನು ಕೆಲವರು. ಫೆಬ್ರವರಿ ೨, ೧೭೮೬ ರಂದು ಏಷ್ಯಾಟಿಕ್ ಸೊಸೈಟಿಯು ಮೂರನೆಯ ವಾರ್ಷಿಕ ಸಮಾರಂಭದಂದು ಸೊಸೈಟಿಯ ಅಧ್ಯಕ್ಷರಾಗಿದ್ದ ಸರ್ ವಿಲಿಯಂ ಜೋನ್ಸರವರ ಭಾಷಣದ ಪ್ರಭಾವದಿಂದಾಗಿ ಅಲ್ಲಿಯವರೆಗೆ ಜನರಲ್ಲಿ ಮೂಡಿದ್ದ ಭಾಷಾ ವಿಷಯದ ತಪ್ಪು ಕಲ್ಪನೆ ದೂರವಾಯಿತು. ಸಂಸ್ಕೃತವು ಯುರೋಪಿನ ಭಾಷೆಗಳ ತಾಯಿಯಲ್ಲ, ಅವುಗಳ ಸೋದರಿ ಭಾಷೆ, ಇವೆಲ್ಲದರ ಮೂಲ ಭಾಷೆ ಬೇರೊಂದಾಗಿದ್ದಿರಬೇಕು ಹಾಗೂ ಆ ಭಾಷೆ ಜೀವಿಸಿರಲಾರದೇನೋ ಎಂದು ಈ ವಿದ್ವಾಂಸ ಅಭಿಪ್ರಾಯಪಟ್ಟನು. ಗಾಥಿಕ್, ಕೆಲ್ಟಿಕ್ ಮತ್ತು ಪ್ರಾಚೀನ ಪರ್ಷಿಯನ್ ಕೂಡ ಅದೇ ಮೂಲ ಭಾಷೆಯಿಂದ ಬೆಳೆದು ಬಂದಿರಬೇಕೆಂದು ಇವನು ಸಾರಿದನು.

"The sanskrit language .. bears to both of them (i.e. Greek and Latin) a stronger affinity .. that no philologer could examine them all three, without believing them to have sprung from *some common source*, which, perhaps *no longer exists ....*"

ಅಂದರೆ, ೧೮ ನೆಯ ಶತಮಾನದ ಅಂತ್ಯದ ವೇಳೆಗೆ ಸಂಸ್ಕೃತ, ಗ್ರೀಕ್ ಲ್ಯಾಟಿನ್, ಗಾಥಿಕ್, ಕೆಲ್ಟಿಕ್ ಮತ್ತು ಪರ್ಷಿಯನ್ ಭಾಷೆಗಳು ಒಂದು ಭಾಷಾ ಕುಟುಂಬಕ್ಕೆ ಸೇರಿದವುಗಳೆಂಬ ತಿಳುವಳಿಕೆ ಉಂಟಾಯಿತೆನ್ನಬಹುದು. ಹೀಗೆ ಭಾಷೆಗಳು ಒಂದು ಕುಟುಂಬಕ್ಕೆ ಸೇರಿದವೆಂದು ನಿಶ್ಚಯಿಸಲು ಆ ಭಾಷೆಗಳಲ್ಲಿನ ಧಾತುಗಳ ನಡುವೆ ಹಾಗೂ ವ್ಯಾಕರಣದ ಪ್ರತಿಕ್ರಿಯೆಗಳಲ್ಲಿ ಸಾಮ್ಯವಿರಬೇಕೆಂಬುದು ತಿಳಿಯಿತು.

(affinity' both in the roots of verbs and in the forms of grammer) ಶಬ್ದ ಕೋಶದಲ್ಲಿ ಪೂರ್ಣ ರೀತಿಯ ಸಾಮ್ಯವಿರದಿದ್ದರೂ ಭಾಷೆಗಳ ನಡುವಣ ಸಾಮ್ಯವನ್ನು ಗುರುತಿಸಲು ಕಷ್ಟವಾಗದೆಂದು ತಿಳಿದಂತಾಯಿತು. ಈ ಕಾರಣದಿಂದಾಗಿ ಜೋನ್ಸರವರನ್ನು ತೌಲನಿಕ ಭಾಷಾ ಶಾಸ್ತ್ರದ ಜನಕನೆಂದು ಕರೆದಿದ್ದಾರೆ. ಭಾಷೆ ಸತತವಾಗಿ ಬದಲಾವಣೆ ಹೊಂದುತ್ತಿರುವುದೆಂದು, ಅದಕ್ಕೊಂದು ಇತಿಹಾಸ ಉಂಟೆಂದು, ಅದರ ಹುಟ್ಟು ಮತ್ತು ವಿಕಾಸವನ್ನು ಚಾರಿತ್ರಿಕ ದೃಷ್ಟಿಯಿಂದ ಸಾಧ್ಯವಿದೆಯೆಂದು ವಿದ್ವಾಂಸರ ಗಮನಕ್ಕೆ ಬಂದಂತಾಯಿತು.

ಮೇಲೆ ಸೂಚಿಸಿದ ಭಾಷಾ ಕುಟುಂಬಕ್ಕೆ 'ಇಂಡೋ-ಯೂರೋಪಿಯನ್' ಎಂದು ಹೆಸರಿಡಲಾಯಿತು. ಇದು ಕೇವಲ ಭಾಷೆಯ ಹೆಸರೇ ಹೊರತು ಜನಾಂಗದ ಹೆಸರಲ್ಲ. ಈ ಪದವನ್ನು ಮೊಟ್ಟಮೊದಲಿಗೆ ಥಾಮಸ್ ಯಂಗ್ ಎಂಬ ವಿದ್ವಾಂಸನು ೧೮೧೩ರಲ್ಲಿ Quarterly Review ಬರೆದ ತನ್ನ ಲೇಖನದಲ್ಲಿ ಬಳಸಿದನು. **ಬಾಸ್ಕ ಅರೇಬಿಕ್ ಮತ್ತು ಎತ್ರುಸ್ಕನ್** ಭಾಷೆಗಳನ್ನೂ ಸಹ ಈ ಗುಂಪಿನಲ್ಲಿ ಇವನು ಸೇರಿಸಪವನಾಗಿ ಇಂಡೋ-ಯೂರೋಪಿಯನ್ ಪದಕ್ಕಿರುವ ಇಂದಿನ ಅರ್ಥದಲ್ಲಿ ಲಾದಮ್ ಎಂಬುವನು ೧೮೫೧ ರಲ್ಲಿ ಬಳಸಿದನೆಂದು ತಿಳಿದುಬಂದಿದೆ. ಇದಕ್ಕೆ ಸಮರ್ಥನಾದ ಇಂಡೋ ಜರ್ಮನಿಸ್ ಎಂಬ ಪದ ಜರ್ಮನಿಯಲ್ಲಿ ಬಳಕೆಯಾಯಿತು. ವಾನ್ ಕ್ಲಪ್ರೋತ್ (J. von klaproth) ಎಂಬವನು ೧೮೨೩ ರಲ್ಲಿ ಮೊದಲಬಾರಿಗೆ ಈ ಪದವನ್ನು ಉಪಯೋಗಿಸಿದನೆಂದು ಹೇಳಬಹುದು. Franz Bopp ಈ ಪದವನ್ನು ಬಳಸಲಿಲ್ಲ, ಅಷ್ಟೇ ಅಲ್ಲ ಅದನ್ನು ವಿರೋಧಿಸಿದನು.

ಒಂದು ಭಾಷಾ ಕುಟುಂಬಕ್ಕೆ ಬಳಸುವ ಹೆಸರಿನ ವ್ಯಾಪ್ತಿ ಕೇವಲ ಆ ಭಾಷಾ ಕುಟುಂಬಕ್ಕೆ ಸೇರಿದ, ಸೇರಲರ್ಹವಾದ ಭಾಷೆಗಳ ಮಟ್ಟಕ್ಕಿರಬೇಕು. ಈ ದೃಷ್ಟಿಯಿಂದ ಪರಿಶೀಲಿಸಿದಲ್ಲಿ ಇಂಡೋ-ಯೂರೋಪಿಯನ್ ಅಂದರೆ ಪೂರ್ವಕ್ಕೆ ಭಾರತ ಹಾಗೂ ಪಶ್ಚಿಮಕ್ಕೆ ಯುರೋಪ್, ಈ ಗಡಿಗಳ ಮಧ್ಯದಲ್ಲಿ ವ್ಯವಹರಿಸಲ್ಪಡುವ ಭಾಷೆಗಳಿಂದ ಕೂಡಿದ್ದಾಗಿರಬೇಕು. ಇಂಡಿಯಾದಲ್ಲಿ ಬಳಕೆಯಾಗುತ್ತಿರುವ ದ್ರಾವಿಡ, ಮುಂಡಭಾಷೆಗಳು, ಯುರೋಪಿನಲ್ಲಿನ ಎಡ್ರುಸ್ಕನ್, ಟರ್ಕಿಷ್ ಹಂಗೇರಿಯನ್ ಭಾಷೆಗಳು ಈ ಕುಟುಂಬಕ್ಕೆ ಸೇರಿದವುಗಳಲ್ಲ. ಈ ನ್ಯೂನತೆಯನ್ನು ನಿವಾರಿಸಲೋಸುಗ ಆರ್ಯನ್, ಇಂಡೋಕೆಲ್ಟಿಕ್ ಇತ್ಯಾದಿ ಬೇರೆ ಬೇರೆ ನಾಮಧೇಯಗಳೂ ಬಳಸಲ್ಪಟ್ಟವು. ಹೀಗೆ ಬಳಸಿದ ಪ್ರತಿಯೊಂದು ಹೆಸರಿನಲ್ಲೂ ನ್ಯೂನಾತಿರೇಕಗಳು ಕಂಡುಬಂದದ್ದರಿಂದ, ಆ ವೇಳೆಗಾಗಲೇ ಇಂಡೋ-ಯೂರೋಪಿಯನ್ ಪದ ಹೆಚ್ಚು ಅಭ್ಯಾಸವಾಗಿ ಹೋಗಿದ್ದ ಕಾರಣ, ಅದನ್ನೇ ಮುಂದುವರಿಸಲಾಯಿತು. ಈ ಪದದ ವ್ಯಾಖ್ಯೆಯನ್ನು ಭೌಗೋಳಿಕ ಪರಿಮಿತಿಗನ್ವಯಿಸದಿದ್ದರೆ, ಹಾಗೂ ಕೆಲವು ವಿಶಿಷ್ಟ ಲಕ್ಷಣಗಳಿಂದ ಕೂಡಿದ ಭಾಷೆಗಳಿಗೆ

ಮಾತ್ರ ಅನ್ವಯಿಸುವಂತಾದರೆ, ಆಗ ಈ ಪದದ ಉಪಯೋಗದಲ್ಲಿ ದೋಷಗಳಿರುವದಿಲ್ಲ.

ಯಾವುದೇ ಭಾಷೆಯನ್ನು ಈ ಕುಟುಂಬಕ್ಕೆ ಸೇರಿದ್ದೆಂದು ಅಥವಾ ಸೇರಲರ್ಹವಲ್ಲವೆಂದು ಹೇಳಲು ಕೆಲವು ಲಕ್ಷಣಗಳನ್ನು ಗುರುತಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದ ಲಕ್ಷಣಗಳು ಹೀಗಿವೆ :

೧. 'ಇರು' ಧಾತುವಿನ ರೂಪಗಳು
೨. 'ಬಂಧುತ್ವ' ವಾಚಕ ಪದಗಳು
೩. ಸಂಖ್ಯಾ ವಾಚಕಗಳು
೪. ಕ್ರಿಯಾಪದ ರೂಪಗಳಲ್ಲಿ ಪುರುಷವಾಚಕ ಪ್ರತ್ಯಯಗಳು (ಉದಾ: ಸಂಸ್ಕೃತ, ಭರಂತಿ, ಗ್ರೀಕ್, ಫೆರೊಂತಿ)
೫. ಸರ್ವನಾಮ ರೂಪಗಳು
೬. ನಾಮಪದ ರೂಪಗಳಲ್ಲಿ ಲಿಂಗ, ವಚನ, ವಿಭಕ್ತಿ ಸೂಚನೆ
೭. ವಿಶೇಷಣವು ಲಿಂಗ, ವಚನ, ವಿಭಕ್ತಿಗಳಲ್ಲಿ ನಾಮಪದವನ್ನನುಸರಿಸಿರುವುದು
೮. ವಾಕ್ಯದಲ್ಲಿ ಕಾರಕ ಪ್ರಯೋಗಗಳು
೯. ಪ್ರಾಣಿಗಳನ್ನು, ಗಿಡಮರ ಬಳ್ಳಿಗಳನ್ನು, ಫಲಪುಷ್ಪಗಳನ್ನು ಬೋಧಿಸುವ ಪದಗಳಲ್ಲಿ ಸಾದೃಶ್ಯವಿರುವದು
(ಉದಾ: ಸಂಸ್ಕೃತ **ವೃಕ** = ಗ್ರೀಕ್ **ಲೂಕೋಸ್** = ಲ್ಯಾಟಿನ್ **ಲುಪುಸ್** = ಸಂಸ್ಕೃತ **ಅಶ್ವ** = ಗ್ರೀಕ್ **ಹಿಪ್ಪೊಸ್** = ಲ್ಯಾಟಿನ್ **ಈಕ್ವುಉಸ್**)

ಇಪ್ಪತ್ತನೆಯ ಶತಮಾನದ ಪ್ರಾರಂಭದ ವೇಳೆಗೆ ಇಂಡೋ-ಯೂರೋಪಿಯನ್ ಕುಟುಂಬಕ್ಕೆ ಸೇರಿದವೆಂದು ಎಂಟು ಭಾಷೆಗಳನ್ನು ಗುರುತಿಸಲಾಗಿತ್ತು. ಅವು ಹೀಗಿವೆ:

೧. ಆರ್ಯ ಭಾರತೀಯ ವೇದ ಭಾಷೆ ಸಂಸ್ಕೃತ, ಪಾಳೀ, ಪ್ರಾಕೃತ, ಹಿಂದೀ, ಬೆಂಗಾಲಿ, ಇತ್ಯಾದಿ ಇರಾನಿಯನ್ ಆವೆಸ್ತ, ಪೆಹ್ಲವಿ, ಬೆಲೂಚಿ, ಪರ್ಷಿಯನ್, ಇತ್ಯಾದಿ.

೨. ಆರ್ಮೇನಿಯನ್ ಕ್ರಿ.ಶ. ೫ನೆಯ ಶತಮಾನದಿಂದ ಸಾಹಿತ್ಯ ದೊರೆತಿದೆ. ಪರ್ಷಿಯನ್ ಭಾಷೆಯಿಂದ ಹೆಚ್ಚು ಸಂಖ್ಯೆಯಲ್ಲಿ ಪದಗಳು ಎರವಲಾಗಿ ಬಂದು ಸೇರಿರುವುದರಿಂದಾಗಿ ಇದನ್ನೂ ಇರಾನಿಯನ್ ಭಾಷೆಯೆಂದು ತಿಳಿಯಲಾಗಿತ್ತು. ಈ ಭಾಷೆಗೆ ಸಂಬಧಿಸಿದ ಅತಿ ಮುಖ್ಯ ಧ್ವನಿ ಸೂತ್ರವನ್ನು (ಇಂ. ಯು. ಪ. ಆರ್ಯೆ, ಹ ಆರ್ಮೇ, **ಹಯರ್** ಸಂಸ್ಕೃತ **ಪಿತಾ** 'ತಂದೆ') ಗುರತಿಸಿದ ರಾಸ್ಕ್ಎಂಬ ವಿದ್ವಾಂಸನು ಕೂಡ ಈ ಭ್ರಮೆಯಲ್ಲಿ ಮುಳುಗಿದ್ದನು. ೧೯ ನೆಯ ಶತಮಾನದ

ಕೊನೆಯ ಭಾಗದಲ್ಲಿ ಹುಬ್ಸ್‌ಮನ್ (Hubschmann) ಎಂಬವನು ಈ ಭಾಷೆಯ ಶಬ್ದ ಕೋಶದಲ್ಲಿ ಪರಭಾಷೆಯ ಪದಗಳನ್ನು ಗುರುತಿಸಿ ಪ್ರತ್ಯೇಕಿಸಿದ ಮೇಲೆ ಇದು ಇಂಡೋ-ಯೂರೋಪಿಯನ್ ಕುಟುಂಬದ ಒಂದು ಸ್ವತಂತ್ರ ಭಾಷೆ ಎನ್ನುವದು ಸಿದ್ಧವಾಯಿತು.

೩. ಗ್ರೀಕ್ - ಮೊದಲಿಗೆ ಇಂಡಿಕ್ ಭಾಷೆಯ ಋಗ್ವೇದ ಇಂಡೋ-ಯೂರೋಪಿಯನ್ ಕುಟುಂಬದ ಅತಿಪ್ರಾಚೀನ ಗ್ರಂಥವೆಂದು ತಿಳಿಯಲಾಗಿತ್ತು. ಇತ್ತೀಚಿನ ಶೋಧನೆಗಳಿಂದಾಗಿ **ಲಿನಿಯರ್** 'ಎ' ಮತ್ತು **ಲಿನಿಯರ್** 'ಬಿ' ಎಂಬೆರಡು ಭಾಷೆಗಳು ಬೆಳಕಿಗೆ ಬಂದವಲ್ಲದೆ, ಅವು ಗ್ರೀಕ್ ಶಾಖೆಗೆ ಸೇರಿದವು ಗಳೆಂದು ತೋರಿಸಿ ಕೊಟ್ಟದ್ದರಿಂದ ಇಂಡೋ-ಯೂರೋಪಿಯನ್ ಸಾಹಿತ್ಯದಲ್ಲಿ ಋಗ್ವೇದದ ಸ್ಥಾನ ಎರಡನೆಯದಾಯಿತು. ಗ್ರೀಕ್ ಪ್ರಥಮ ಸ್ಥಾನಕ್ಕೇರಿತು.

೪. ಆಲ್ಬೇನಿಯನ್ - ಬಹಳ ಕಾಲದವರೆಗೆ ಇದನ್ನು ಕೂಡ ಇಂಡೋ-ಯೂರೋಪಿಯನ್ ಕುಟುಂಬಕ್ಕೆ ಸೇರಿದ ಭಾಷೆಯಲ್ಲವೆಂದು ತಿಳಿಯಲಾಗಿತ್ತು. ರಾಸ್ಕ್ ಮತ್ತು ಪಾಟ್ ಕೂಡ ಈ ಅಭಿಪ್ರಾಯವನ್ನು ತಳೆದಿದ್ದರು. ಆದರೆ, ತನ್ನ ಕಡೆಯ ಲೇಖನವೊಂದರಲ್ಲಿ ರಾಸ್ಕ್‌ನು ಈ ಭಾಷೆಯಲ್ಲಿ ಇಂಡೋ-ಯೂರೋಪಿಯನ್ ಭಾಷೆಗಳ ಲಕ್ಷಣವಾದ ಮೂರು ಬಗೆಯ ಲಿಂಗಭೇದವಿರುವಿಕೆಯನ್ನು ಗುರುತಿಸಿದನು. ೧೮೫೦ ರ ವೇಳೆಗೆ ಶ್ಲೈಖರ (Schleicher) ಎಂಬವನು ಇದನ್ನು ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಹತ್ತಿರ ಸಂಬಂಧಿಯೆಂದು ತೋರಿಸಿ ಕೊಟ್ಟನು. ನಂತರ ಬಾಪ್ ಎಂಬ ವಿದ್ವಾಂಸನು ಇದನ್ನು ಸ್ವತಂತ್ರವಾದ ಭಾಷೆಯೆಂದೂ ಈ ಕುಟುಂಬಕ್ಕೆ ಸೇರಿದ್ದೆಂದೂ ಯುಕ್ತಿ ಯುಕ್ತವಾಗಿ ತೋರಿಸಿದನು. ೧೮೮೩ ರಲ್ಲಿ ಗುಸ್ಟಾವ ಮೇಯರ ಎಂಬವನು ಆಲ್ಬೇನಿಯನ್ ಭಾಷೆಯಲ್ಲಿ ತೋರಿ ಬಂದಿರುವ ಧ್ವನಿ ನಿಯಮಗಳನ್ನು ಪ್ರತಿಪಾದಿಸಿದನು.

೫. ಇಟಾಲಿಕ್ (ಲ್ಯಾಟಿನ್, ಫ್ರೆಂಚ, ಇಟಾಲಿಯನ್, ಇತ್ಯಾದಿ) (ಕ್ರಿ.ಪೂ ೨೦೦ ರಿಂದ),

೬. ಕೆಲ್ಟಿಕ (ಐರಿಷ, ವೆಲ್ಸ್)

೭. ಜರ್ಮಾನಿಕ್(ಕ್ರಿ. ಶ. ೪೦೦ ರಿಂದ) –(ಗಾಥಿಕ್, ಜರ್ಮನ್, ಇಂಗ್ಲಿಷ ಮುಂತಾದ ಭಾಷೆಗಳು)

೮. ಬಾಲ್ಟೋ-ಸ್ಲಾವಿಕ್ (ಲಿಥುಯೇನಿಯನ್, ರಷ್ಯನ್ ಇತ್ಯಾದಿ)

೯. ಟೊಖಾರಿಯನ್–೧೯೦೪ ರಲ್ಲಿ ಚೈನೀಸ್ ತುರ್ಕಸ್ತಾನ್ ಎಂಬಲ್ಲಿ ಈ ಭಾಷೆ ಬೆಳಕಿಗೆ ಬಂದಿತು. **ಅಗ್ನಿಯನ್** ಮತ್ತು **ಕುಚಿಯನ್** ಎಂದು ಎರಡು

ಉಪಭಾಷೆಗಳು ಇದರಲ್ಲಿ ಕಂಡು ಬಂದಿವೆ. ಈ ಭಾಷೆ ಅಲ್ಲಿ ಕ್ರಿ. ಶ. ೭೦೦ ರ ವೇಳೆಗೆ ಉಪಯೋಗದಲ್ಲಿದ್ದಿರಬೇಕೆಂದು ನಂಬಲಾಗಿದೆ.

೧೦. ಹಿಟ್ಟೈಟ್–೧೯೧೨ರಲ್ಲಿ ಹ್ಯೂಗೋ ವಿಂಕ್ಲರ್ ಎಂಬ ಬರ್ಲಿನ್ನಿನ ವಿದ್ವಾಂಸನು ಕೀಲಕ ಲಿಪಿಯಲ್ಲಿ ಬರೆಯಲಾಗಿದ್ದ ಸಾವಿರಾರು ಲೇಖನಗಳನ್ನು ದೊರಕಿಸಿಕೊಂಡನು. ಅವನ ಮರಣಾನಂತರ ಜೆಕ್ ವಿದ್ವಾಂಸನಾದ ಹ್ರೋಜ್ನಿ ಎಂಬವನಿಗೆ ಈ ಲೇಖನಗಳನ್ನು ಒಪ್ಪಿಸಲಾಯಿತು. ೧೯೧೭ರಲ್ಲಿ ಇವನು ಆ ಲೇಖನಗಳಲ್ಲಿನ ಭಾಷೆ ಇಂಡೋ ಯೂರೋಪಿಯನ್ ಭಾಷೆಯೆಂದು ನಿರೂಪಿಸಿದನು. ಈ ಭಾಷೆಗೆ **ಹಿಟ್ಟೈಟ್** ಎಂದು ಹೆಸರಾಯಿತು. ಸಂಸ್ಕೃತ, ಗ್ರೀಕ್, ಲ್ಯಾಟಿನ್ ಭಾಷೆಗಳಂತೆ ಇದೂ ಒಂದು ಇಂಡೋ ಯೂರೋಪಿನ್ ಭಾಷೆಯೆಂದು ಕೆಲವರೂ ಇಂಡೋ–ಯೂರೋಪಿನ್ ಸೋದರಿ ಭಾಷೆಯೆಂದು ಇನ್ನು ಕೆಲವರೂ ನಂಬಿದ್ದಾರೆ. ಇಂಡೋ–ಯೂರೋಪಿಯನ್ ಭಾಷೆಗಳಾವುದರಲ್ಲೂ ಉಳಿದುಬರದ 'ಲ್ಯಾರಂಜಲ್' ಎಂಬ ಧ್ವನಿ ಹಿಟ್ಟೈಟ್‌ನಲ್ಲಿ ಕಂಡು ಬರುತ್ತದೆ. ಇದು ಇಂಡೋ-ಯೂರೋಪಿಯನ್ ಭಾಷೆಯಲ್ಲವೆಂದು ನಿರೂಪಿಸಲು ಲ್ಯಾರಿಂಜಲ್ ಧ್ವನಿಗಳು ಮುಖ್ಯ ಕಾರಣವಾಯಿತು.

ಅನತೋಲಿಯ ಎಂಬ ಪ್ರದೇಶದಲ್ಲಿ ಎರಡನೇ ಮಿಲೆನಿಯಂ ಸಮಯಕ್ಕೇ ಉಪಯೋಗದಲ್ಲಿದ್ದ ಭಾಷೆ ಹಿಟ್ಟೈಟ್. ಇದರ ಜೊತೆಗೆ, ಲುವಿಯನ್ ಮತ್ತು ಪಲೇಯಿಕ್ ಭಾಷೆಗಳೂ ಸೇರಿವೆ. ಟರ್ಕಿಯ ರಾಜಧಾನಿ ಅಂಕಾರ ಬಳಿಯ ಬೋಗಜ್ ಕೋಯ್‌ನಲ್ಲಿ ದೊರೆತ ಅಪೂರ್ಣ ಲೇಖನಗಳಲ್ಲಿ **ಲುವಿಯನ್** ಮತ್ತು **ಪಲೇಯಿಕ್** ಉಪಯೋಗವಾಗಿವೆ. ಉತ್ತರ ಸಿರಿಯ, ದಕ್ಷಿಣ ಕಪ್ಪಡೋಷಿಯ ಪ್ರದೇಶದಲ್ಲಿ ದೊರೆತ ಚಿತ್ರಲಿಪಿಯಲ್ಲಿನ **ಹಿಟ್ಟೈಟ್** ಕೂಡ ಇದೇ ಗುಂಪಿಗೆ ಸೇರಿದ ಭಾಷೆ. ಕ್ರಿ.ಪೂ. ನಾಲ್ಕು ಮತ್ತು ಐದನೆಯ ಶತಮಾನಗಳ ಶಿಲಾ ಲೇಖನಗಳಲ್ಲಿ ಕಂಡು ಬಂದಿರುವ **ಲಿಸಿಯನ್** ಎಂಬ ಭಾಷೆ **ಲುವಿಯನ್** ಭಾಷೆಗೆ ಹತ್ತಿರವಾಗಿದೆ. ಇವೆಲ್ಲವನ್ನೂ ಒಟ್ಟಾಗಿ **ಅನತೋಲಿಯನ್** ಭಾಷೆಗಳು ಎಂದು ವ್ಯವಹರಿಸುತ್ತಾರೆ. ಇಂಡೋ–ಯೂರೋಪಿಯನ್ ಶಾಖೆಯಲ್ಲಿ 'ಲ್ಯಾರಿಂಜಲ್' ಧ್ವನಿಗಳು ನಷ್ಟವಾಗುವ ಮೊದಲೇ ಅನತೋಲಿಯನ್ ಶಾಖೆ ಬೇರೆಯಾಗಿದ್ದಿರಬೇಕೆಂದೂ, ಆದ್ದರಿಂದಲೇ ಆ ಧ್ವನಿಗಳು ಆ ಶಾಖೆಯಲ್ಲಿ ಉಳಿದು ಬಂದವೆಂದೂ ಹೇಳಬಹುದು.

ಇವೇ ಅಲ್ಲದೆ, ಪ್ರಾಚೀನ ಕಾಲದಲ್ಲಿ ಉಪಯೋಗದಲ್ಲಿದ್ದವೆಂದು ಶಿಲಾಲೇಖನಗಳಿಂದ ತಿಳಿದು ಬಂದಿರುವ ಇಂಡೊ–ಯೂರೋಪಿಯನ್ ಭಾಷೆಗಳೂ ಇವೆ. ಇವುಗಳಲ್ಲಿ ಹಿಟ್ಟೈಟ್ ಸಾಮ್ರಾಜ್ಯ ಪತನವಾದ ಮೇಲೆ ಮಧ್ಯ ಅನತೋಲಿಯದಲ್ಲಿ ಉಪಯೋಗದಲ್ಲಿದ್ದ **ಫ್ರಿಜಿಯನ್** ಭಾಷೆ, **ವೆನೇಜಿಯ**ದಲ್ಲಿ ಬಳಕೆಯಲ್ಲಿದ್ದ **ವೆನೆಟಿಕ್**, ಇಟಲಿಯ ಆಗ್ನೇಯಭಾಗದಲ್ಲಿ ಬಳಕೆಯಲ್ಲಿದ್ದ **ಮೆಸ್ಸಪಿಕ್** ಮುಖ್ಯ

ವಾದವು. ಫ್ರಿಜಿಯನ್ ಭಾಷೆಯ ಹತ್ತಿರ ಸಂಬಂಧಿಗಳಿಂದ **ಥ್ರೇಷಿಯನ್** ಮತ್ತು **ಇಲ್ಲಿರಿಯನ್** ಕೇವಲ ಭಾಷಾಂಶ (gloss) ಗಳಿಂದ ತಿಳಿದು ಬಂದಿವೆ. ಇವು ಇಂಡೋ-ಯುರೋಪಿಯನ್ ಭಾಷೆಗಳೇ.

ಹೀಗೆ ಇಂಡೋ-ಯೂರೋಪಿಯನ್ ಚರಿತ್ರೆಯಲ್ಲಿ ಮೊದಲಿಗೆ ಕೆಲವು ಭಾಷೆಗಳನ್ನು ಗುರುತಿಸಿದನಂತರ ಆ ಕುಟುಂಬದ ಭಾಷೆಗಳ ಲಕ್ಷಣವೇನೆಂಬುದರ ಪರಿಚಯವಾಗಿ ಹೊಸ ಹೊಸ ಭಾಷೆಗಳು ಬೆಳಕಿಗೆ ಬಂದಾಗ ಅವು ಈ ಕುಟುಂಬಕ್ಕೆ ಸೇರಿದವೇ, ಅಲ್ಲವೇ ಎಂಬುದನ್ನು ಈ ಲಕ್ಷಣಗಳ ಇರುವಿಕೆ ಅಥವಾ ಇಲ್ಲದಿರುವಿಕೆಯಿಂದ ನಿಶ್ಚಯಿಸಲು ಸಾಧ್ಯವಾಯಿತು.

ಈ ಕುಟುಂಬಕ್ಕೆ ಸೇರಿದ ಭಾಷೆಗಳನ್ನು **ಸತಮ್** ಮತ್ತು **ಕೆಂಟುಮ್** ಎಂದು ಎರಡು ಗುಂಪುಗಳಲ್ಲಿ ವಿಂಗಡಿಸಿ ಕೊಳ್ಳುತ್ತಾರೆ. ಮೂಲ ಭಾಷೆಯ ಒಂದು ಬಗೆಯ ಕಂಠ್ಯವರ್ಣ ಕೆಂಟುಮ್ ವರ್ಗದಲ್ಲಿ ಸ್ಪರ್ಶವರ್ಣವಾಗಿ ಉಳಿದಿದೆಯಾದರೆ, ಸತಮ್ ವರ್ಗದಲ್ಲಿ ಅದು ಪ|ಶ ರೂಪದಲ್ಲಿ ಉಳಿದಿದೆ. ಇಂಡಿಕ್, ಇರಾನಿಯನ್, ಅಲ್ಬೇನಿಯನ್, ಅರ್ಮೇನಿಯನ್ ಬಾಲ್ಟಿಕ್, ಮತ್ತು ಸ್ಲಾವಿಕ್ ಭಾಷೆಗಳು ಸತಮ್ ಗುಂಪಿನಲ್ಲಿಯೂ, ಉಳಿದ ಗ್ರೀಕ್, ಇಟಾಲಿಕ್, ಕೆಲ್ಟಿಕ್, ಜರ್ಮಾನಿಕ್, ಮತ್ತು ಟೊಖಾರಿಯನ್ ಭಾಷೆಗಳು ಕೆಂಟುಮ್ ಗುಂಪಿನಲ್ಲಿಯೂ ಸೇರಿವೆ.

ಉದಾ: ಸಂಸ್ಕೃತ **ಶತಂ** '೧೦೦'= ಅವೆಸ್ತ **ಸತಂ** = ಲಿಥುಯೇನಿಯನ್ **ಶಿಂತಸ್** = ಗ್ರೀಕ್ **ಹೆಕತೊ಼ನ್** = ಲ್ಯಾಟಿನ್ **ಕೆಂಟುಮ್**, ಗಾಥಿಕ್ **ಹುಂಡ್**

ಕೆಂಟುಮ್ ಭಾಷೆಗಳಲ್ಲಿ ಮೂಲಭಾಷೆಯ ಇನ್ನೊಂದು ರೀತಿಯ ಕಂಠ್ಯ ವರ್ಣ (Labio-Velar) ಉಳಿದಿದೆಯಾದರೆ ಸತಮ್ ಭಾಷೆಗಳಲ್ಲಿ ಅದು ತಾಲವ್ಯ ವಾಗಿ ಮಾರ್ಪಾಡಾಗಿವೆ. ಉದಾ: ಸಂಸ್ಕೃತ **ಪಂಚ**:ಲಿಥುನಿಯನ್ **ಪೆಂಕಿ** ಗ್ರೀಕ್ **ಪೆಂತೆ** ಲ್ಯಾಟಿನ್ **ಕ್ವಿಂಕೆ**

ಮೂಲ ಭಾಷೆಯ ಕಲ್ಪನೆ ಇಲ್ಲದೆಯೇ ಮೊಟ್ಟಮೊದಲಿಗೆ ಎಡ್ವರ್ಡ್ ಲ್ವಿಡ್ ಎಂಬಾತನು ೧೭೦೭ ರ ವೇಳೆಗೇ ಜರ್ಮಾನಿಕ್ ಕೆಲ್ಟಿಕ್, ಗ್ರೀಕ್, ಮತ್ತು ಲ್ಯಾಟಿನ್ ಭಾಷೆಗಳ ಪದಗಳನ್ನು ಹೋಲಿಸಿದನು. ತೌಲನಿಕ ಭಾಷಾಶಾಸ್ತ್ರದ ಮುಖ್ಯಸಾಧನ ವಾದ ತುಲನಾ ವಿಧಾನವನ್ನು ಬೆಳೆದದ್ದು ಜೋನ್ಸರವರು ೧೭೮೬ ರ ಭಾಷಣದಲ್ಲಿ ಮಾಡಿದ ಸೂಚನೆಯ ನಂತರ ಈ ವಿಧಾನವನ್ನು ಬೆಳೆಯಿಸಿದವರಲ್ಲಿ ರಾಸ್ಕ್, ಗ್ರಿಮ್, ಮತ್ತು ಬಾಪ್ ಮುಖ್ಯರಾದವರು. ನಂತರ ಇದನ್ನುಪಯೋಗಿಸಿಕೊಂಡು ಶ್ಲೈಖರ್ ಮುಂತಾದವರು ಮೂಲ ಭಾಷೆಯ ಕಲ್ಪನೆ ಮಾಡಿದರು. ಹೀಗೆ ಕಲ್ಪಿಸಿಕೊಂಡ

ಮೂಲ ಭಾಷೆಯಲ್ಲಿ ಸ್ಪರ್ಶವರ್ಣಗಳು ಕಡಿಮೆ ಘರ್ಷವರ್ಣಗಳಲ್ಲಿ ಸಕಾರವೊಂದೇ. ವ, ಯ ರ, ಲ, ಮ್, ನ ಗಳ ಕೆಲವೊಮ್ಮೆ ಸ್ವರಗಳಂತೆಯೂ, ಕೆಲವೊಮ್ಮೆ ವ್ಯಂಜನ ಗಳಂತೆಯೂ ಉಪಯೋಗವಾಗುತ್ತಿದ್ದವು. ಉದಾ: ಸಂಸ್ಕೃತ **ಪಿತರಃ** (ಪ್ರವಿ)ಆದರೆ **ಪಿರ್ತ್ಸ್** (ದ್ವಿವಿ),

ಮೂಲ ಭಾಷೆಯ ವಾಕ್ಯ ರಚನೆಯಲ್ಲಿ, ನಿರ್ದಿಷ್ಟ ಕ್ರಮದಲ್ಲಿ ನಾಮಪದಗಳು ಹಾಗೂ ಕ್ರಿಯಾಪದ ಬರಬೇಕೆಂಬ ನಿಯಮವಿರಲಿಲ್ಲ ಸ್ವರಾಘಾತವಿಲ್ಲದ ಪದವಾಕ್ಯ ದಲ್ಲಿ ಎರಡನೆಯ ಸ್ಥಾನದಲ್ಲಿರಬೇಕೆಂಬ ನಿಯಮವಿತ್ತು. ಉದಾ: ಇಮಂ **ಮೇ** ವರುಣ ಶ್ರುಧೀಹಮಂ.

ನಾಮಪದಗಳು ಲಿಂಗ, ವಚನ, ವಿಭಕ್ತಿಸೂಚಕ ಪ್ರತ್ಯಯಗಳಿಂದಲೂ, ಕ್ರಿಯಾಪದಗಳು ಪುರುಷ, ವಚನ, ಕಾಲಸೂಚಕ ಪ್ರತ್ಯಯಗಳಿಂದಲೂ ಕೂಡಿದವು ಗಳಾಗಿದ್ದವು. ಕೆಲವೊಂದು ನಾಮಪದಗಳ ವಿಭಿನ್ನ ರೂಪಗಳಲ್ಲಿ ರ/ನ ಗಳ ವ್ಯತ್ಯಯ ಕಂಡು ಬರುತ್ತದೆ. ಉದಾ: ಹಿಟ್ಟೈಟ್ **ವತರ್** 'ನೀರು' ಪ್ರಥಮಾ; **ವೆತೆನಸ್** ಷಷ್ಠೀ; ಸಂಸ್ಕೃತ **ಅಹರ್** 'ಹಗಲು' **ಅಹ್ನ**; ಬಹುವ್ರೀಹಿ ಸಮಾಸಪದ ಇಂಡೋ-ಯುರೋಪಿಯನ್ ಭಾಷೆಗಳ ಪ್ರತ್ಯೇಕತೆ. ಉದಾ: ಗ್ರೀಕ್, **ಲೆವ್‌ಸೊಲೆಮೋಸ್** 'ಬಿಳಿಯ ತೋಳಿನವ' ಲ್ಯಾಟಿನ್ **ಮಾಗ್ನಾನಿಮುಸ್** 'ಮಹಾತ್ಮ', ಗಾಥಿಕ್ **ಹ್ರೈನ್ಸಹೈರ್‌ರ್‌ಸ್**'ಶುದ್ಧಾತ್ಮ'

ಭಾಷಾಕುಟುಂಬವನ್ನು ನಿಶ್ಚಯಿಸಿಕೊಳ್ಳುವುದು ಹೇಗೆಂಬುದನ್ನು ಗಮನಿಸೋಣ ಭಾಷಾಶಾಸ್ತ್ರ ತಿಳಿಯದವನೂ ಕೂಡ ಹಿಂದೀ, ಮರಾಠಿ, ಬೆಂಗಾಲೀ, ಮೊದಲಾದ ಭಾಷೆಗಳು ಒಂದು ಕುಟುಂಬಕ್ಕೆ ಸೇರಿದವೆಂದೂ ಕನ್ನಡ, ತಮಿಳು, ತೆಲಗು ಮೊದಲಾದ ಭಾಷೆಗಳು ಬೇರೊಂದು ಕುಟುಂಬಕ್ಕೆ ಸೇರಿದವೆಂದೂ ಹೇಳಬಲ್ಲನು. ಭಾಷಾ ಶಾಸ್ತ್ರಜ್ಞನು ಈ ಸಂದರ್ಭದಲ್ಲಿ ಮೇಲಿನ ನಿಶ್ಚಯಕ್ಕೆ ಬರಲು ಉಪಯೋಗಿಸುವ ವಿಧಾನವನ್ನು 'comparative method' ಅನ್ನುತ್ತಾರೆ. ಇದರ ಪ್ರಕಾರ, ಎರಡು ಅಥವಾ ಹೆಚ್ಚಿನ ಭಾಷೆಗಳ ನಡುವೆ ಮುಖ್ಯವಾಗಿ ಧ್ವನಿಗಳಲ್ಲಿ ಮತ್ತು ವ್ಯಾಕರಣ ಪ್ರಕ್ರಿಯೆಗಳಲ್ಲಿ ಸಾದೃಶ್ಯ ಕಂಡು ಬಂದರೆ ಆ ಭಾಷೆಗಳನ್ನು ಚಾರಿತ್ರಕವಾಗಿ ಒಂದೇ ಕುಟುಂಬಕ್ಕೆ ಸೇರಿದ ಭಾಷೆಗಳೆಂದು ಹೇಳಬಹುದು. ಉದಾ: ಸಂಸ್ಕೃತ **ಅಸ್ತಿ** = ಲಿಥುಯೇನಿಯನ್ **ಎಸ್ತಿ** = ಗ್ರೀಕ್ **ಎಸ್ತಿ** = ಗಾಥಿಕ್ **ಇಸ್ತ್** = ಹಾಗೆಯೇ, ಸಂಸ್ಕೃತ **ಪಿತಾ** = ಗ್ರೀಕ್ **ಪತೇರ್** = ಲ್ಯಾಟಿನ್ **ಪತೇರ್** ಇಲ್ಲಿ ಕಂಡುಬರುವ ಸಂಸ್ಕೃತ ಅ = ಲಿಥುಯೇನಿಯನ್ ಎ = ಗ್ರೀಕ್ ಎ; ಸಂಸ್ಕೃತ **ಪ** = ಗ್ರೀಕ್ **ಪ** = ಲ್ಯಾಟಿನ್ **ಪ** ಎಂಬ ಧ್ವನಿ ಸಮೀಕರಣಗಳು ಕೇವಲ ಇಲ್ಲಿ ಕೊಟ್ಟಿರುವ ಉದಾಹರಣೆಯಲ್ಲಿ ಮಾತ್ರವಲ್ಲದೆ ಇನ್ನೂ ಹಲವಾರು

ಪದಗಳಲ್ಲಿ ಕಂಡು ಬರುತ್ತವೆ. ಈ ರೀತಿಯ ಸಾದೃಶ್ಯ ಕಾಣ ಬರಬೇಕಾದರೆ ಆ ಭಾಷೆಗಳೆಲ್ಲಾ ಒಂದೇ ಮೂಲಭಾಷೆಯಿಂದ ಬೆಳೆದು ಬಂದವುಗಳಾಗಿದ್ದರೆ ಮಾತ್ರ ಸಾಧ್ಯ. ಮೇಲಿನ ಎರಡನೆಯ ಉದಾಹರಣೆಯಲ್ಲ ಕಂಡು ಬರುವಂತೆ ಎಲ್ಲಾ ಭಾಷೆಗಳಲ್ಲೂ ಒಂದೇ ಪ್ರಕಾರದ (ಇಲ್ಲಿ ಓಷ್ಠ್ಯ ಅಘೋಷ ವರ್ಣ) ಧ್ವನಿ ಇರ ಬೇಕೆಂದಿಲ್ಲ. ಬೇರೆಯಾಗಿರಲೂ ಸಾಧ್ಯ. ಉದಾ: ಸಂಸ್ಕೃತ **ಪಿತಾ** = ಗಾಥಿಕ್ **ಫದರ್** 'ತಂದೆ' ಆದರೆ, ಇಲ್ಲಿ ತೋರಿಬರುವ ಸಂಸ್ಕೃತ **ಪ** = ಗಾಥಿಕ್ **ಫ** ಎಂಬ ಧ್ವನಿ ಸಮೀಕರಣ ನಿಯತವಾಗಿ ಈ ರೀತಿಯ ಪರಿಸರವಿರುವೆಡೆಯಲ್ಲೆಲ್ಲಾ ಕಂಡು ಬರಬೇಕು. ಆಗ, ಹೀಗೆ ವ್ಯತ್ಯಾಸವಿದ್ದರೂ ಆ ಭಾಷೆಗಳು ಪರಸ್ಪರ ಸೋದರಿ ಭಾಷೆಗಳೆನ್ನಲು ಸಾಧ್ಯವಾಗುತ್ತದೆ. ಪರಿಸರ ಭೇದವಿರುವೆಡೆ ಬೇರೆ ನಿಯಮವಿರ ಬಹುದು. ಉದಾ: ಸಂಸ್ಕೃತ **ಭ್ರಾತಾ** 'ಸಹೋದರ' = ಗಾಥಿಕ್ **ಭ್ರೊಥರ್**, ಆದರೆ, ಸಂಸ್ಕೃತ **ಪಿತಾ** = ಗಾಥಿಕ್ **ಫದರ್**

ಭಾಷೆಗಳ ನಡುವೆ ಈ ರೀತಿಯ ಸಾದೃಶ್ಯ ಕಾಣಬರಲು ಹಲವಾರು ಕಾರಣ ಗಳಿರಬಹುದಾದರೂ, ಯಾವುದೇ ಒಂದು ಪರಿಸರದಲ್ಲಿ ಕಾಣಬರುವ ಧ್ವನಿಸಮೀಕರಣ ನಿಯತರೂಪದಲ್ಲಿ **ಮತ್ತೆ ಮತ್ತೆ** ತೋರಿ ಬಂದರೆ ಹಾಗೆ ತೋರಿ ಬರಲು ಆ ಭಾಷೆ ಗಳು ಒಂದೇ ಕುಟುಂಬಕ್ಕೆ ಸೇರಿದವುಗಳಾದ್ದರೆ ಮಾತ್ರ ಸಾಧ್ಯ. ಉದಾಹರಣೆಗೆ, ಗ್ರೀಕ್ ಭಾಷೆಯ **ಮತಿ** 'ಕಣ್ಣು' ಮತ್ತು ಮಲಯ ಭಾಷೆಯ **ಮತಿ** 'ಕಣ್ಣು" ಎಂಬ ಪದಗಳ ಹಾಗೂ ಇಂಗ್ಲಿಷನ bad ಮತ್ತು ಪರ್ಷಿಯನ್ ಭಾಷೆಯ **ಬದ**' ಎಂಬ ಪದಗಳ ನಡುವಣ ಧ್ವನಿ ಸಮೀಕರಣ ಕೇವಲ ಆಕಸ್ಮಿಕ, ಅಂದರೆ ಕೇವಲ ಪದದಲ್ಲಿ ಕಾಣಬರುವ ಸಾದೃಶ್ಯ.

ವ್ಯಾಕರಣ ಪ್ರಕ್ರಿಯೆಲ್ಲಿಯ ಒಂದು ಸಾದೃಶ್ಯವನ್ನು ನೋಡೋಣ ಸಂಖ್ಯಾ ವಾಚಕ ೧೦ ರಿಂದ ಮುಂದಿನ ಪದಗಳನ್ನು ಪಡೆಯಲು ೧, ೨, ೩, ಇತ್ಯಾದಿ ಸಂಖ್ಯಾ ವಾಚಕ ಪದಗಳನ್ನು ೧೦ ರ ವಾಚಕ ಶಬ್ದದ ಮುಂದೆ ಅಥವಾ ಹಿಂದೆ (೧೦+೧, ೧೦+೨ ಇತ್ಯಾದಿ, ೧ + ೧೦ ೨+೧೦) ಇತ್ಯಾದಿ ಸೇರಿಸಿದರಾಯಿತು. ಹೀಗೆ ಐಚ್ಛಿಕ ಪ್ರತಿಕ್ರಿಯೆ ಸಾಧ್ಯವಿರುವಾಗ ಕೆಲವು ಭಾಷೆಗಳು ಒಂದು ಕ್ರಮವನ್ನು, ಇನ್ನು ಕೆಲವು ಭಾಷೆಗಳು ಬೇರೊಂದು ಕ್ರಮವನ್ನೂ ಉಪಯೋಗಿಸಿಕೊಂಡಿದ್ದಾರೆ. ಅವು ಗಳನ್ನು ಬೇರೆ ಬೇರೆ ಕುಟುಂಬಕ್ಕೆ ಸೇರಿದವುಗಳೆಂದೂ, ಭಿನ್ನ ಮೂಲ ಭಾಷೆಗಳಿಂದ ಬೆಳೆದು ಬಂದವೆಂದೂ ನಿಶ್ಚಯಿಸಿಕೊಳ್ಳಬಹುದು. ಇಂಡೋ ಯೂರೋಪಿಯನ್ ಭಾಷೆಗಳು ೧+೧೦, ೨+೧೦ ಎಂಬ ಕ್ರಮವನ್ನು ಉಪಯೋಗಿಸಿಕೊಂಡಿವೆ (ಸಂಸ್ಕೃತ ಏಕಾದಶ ದ್ವಾದಶ) ದ್ರಾವಿಡ ಭಾಷೆಗಳು ೧೦+೧ ೧೦+೨ ಎಂಬ ಕ್ರಮವನ್ನು ಉಪಯೋಗಿಸಿಕೊಂಡಿವೆ. (ಕನ್ನಡ ಹನ್ನೊಂದು, ಹನ್ನೆರಡು).

ಹೀಗೆ ಸಾದೃಶ್ಯ ಹೊಂದಿರುವ ಎರಡು ಅಥವಾ ಹೆಚ್ಚಿನ ಭಾಷೆಗಳು ಒಂದೇ

ಮೂಲ ಭಾಷೆಯಿಂದ ಬಂದವೆನ್ನುವುದಕ್ಕೆ, ಮೂಲ ಭಾಷೆಯಲ್ಲಿದ್ದಿರ ಬೇಕಾದ ರೂಪ ವೊಂದರ ಕಲ್ಪನೆಯನ್ನು ಮಾಡಿಕೊಳ್ಳುತ್ತೇವೆ. ಅದು ಕಲ್ಪಿಸಿಕೊಂಡ ರೂಪ, ನಿಜ ವಾದ ಮೂಲ ಭಾಷೆಯ ಲೇಖನದಲ್ಲಿ ದೊರೆತ ರೂಪವಲ್ಲವೆಂಬುದನ್ನು ಸೂಚಿಸಲು ಆ ರೂಪದ ಹಿಂದೆ ನಕ್ಷತ್ರ ಚಿಹ್ನೆಯನ್ನು ಬಳಸುತ್ತೇವೆ(ಉದಾ: *ಎಸ್ತಿ, *ಪತೇರ್). ಕಲ್ಪಿಸಿಕೊಂಡ ಮೂಲ ರೂಪಗಳಿಂದ ಆ ಕುಟುಂಬದ ಪ್ರತಿ ಭಾಷೆಯಲ್ಲಿ ಕಂಡು ಬರುವ ರೂಪಗಳನ್ನು ವಿವರಿಸಲು ಧ್ವನಿ ನಿಯಮಗಳನ್ನು ಬಳಸುತ್ತೇವೆ.(ಉದಾ: * ಪ್ < ಗಾಥಿಕ್ ಫ್, * ಎ> ಸಂಸ್ಕೃತ, ಅ). ಮೊದಲಿಗೆ ಒಂದೇ ಆಗಿದ್ದ ಭಾಷೆ ಕ್ರಮೇಣ ಬೇರೆ ಬೇರೆ ಭಾಷೆಗಳಾಗಿ (ಉದಾ: ಸಂಸ್ಕೃತ, ಗ್ರೀಕ್, ಇತ್ಯಾದಿ) ರೂಪೊಂದಲು ಪ್ರತಿ ಭಾಷೆಯ ವಿಕಾಸದಲ್ಲಿ ಕಂಡು ಬರುವ ಭಿನ್ನ ಧ್ವನಿ ನಿಯಮ ಗಳೇ ಕಾರಣವೆನ್ನಬಹುದು.

ಇಂಡೋ-ಯೂರೋಪಿಯನ್ ಕೂಡ ಹೀಗೆ ಕಲ್ಪಿಸಿಕೊಂಡ ಮೂಲ ಭಾಷೆ. ಚರಿತ್ರೆಯಲ್ಲಿ ಈ ಮೂಲ ಭಾಷೆಯ ಉಲ್ಲೇಖವಿಲ್ಲ. ಈ ಭಾಷೆಯದೆನ್ನ ಬಹುದಾದ ಯಾವ ಗ್ರಂಥಗಳೂ, ಲೇಖನಗಳೂ ದೊರೆತಿಲ್ಲ. ಹೊಸ ಹೊಸ ಭಾಷೆಗಳು ಬೆಳಕಿಗೆ ಬಂದಾಗ ಮೊದಲಿನ ಭಾಷೆಗಳ ಆಧಾರದ ಮೇಲೆ ಕಲ್ಪಿಸಿ ಕೊಂಡಿದ್ದ ಮೂಲಭಾಷೆಯ ಸ್ವರೂಪದಲ್ಲಿ ವ್ಯತ್ಯಾಸವಾಗಬಹುದು. ಭಾಷಾ ಶಾಸ್ತ್ರದ ಸಿದ್ಧಾಂತವು ಬದಲಾಯಿಸಿದಂತೆ, ಮೂಲ ಭಾಷೆಯ ಕಲ್ಪನೆಯಲ್ಲಿ ಕೂಡ ಬದಲಾವಣೆ ಕಂಡು ಬರುತ್ತದೆ. ಉದಾಹರಣೆಗೆ, ಬ್ರುಗ್‌ಮನ್ ಕಲ್ಪಿಸಿ ಕೊಂಡ ಮೂಲ ಭಾಷೆಯ ಧ್ವನಿಗಳಲ್ಲಿ ಫ, ಥ, ಖ, ಜ,ಜ, ಗಳು ಸೇರಿದ್ದವು. ಹಿಟ್ಟೈಟ್ ಭಾಷೆಯನ್ನು ಇಂಡೋ-ಯೂರೋಪಿಯನ್ ಭಾಷೆಯ ಸಂಬಂಧಿ ಎಂದು ನಿರ್ಣಯಿಸಿದ ಮೇಲೆ ಅದರಲ್ಲಿ ಉಳಿದು ಬಂದಿದ್ದ Laryngeal (ಗಲಕುಹರ ಧ್ವನಿ) ಎಂಬ ವರ್ಣಗಳು ಇಂಡೋ-ಯೂರೋಪಿಯನ್ ಭಾಷೆಯಲ್ಲಿ ಲುಪ್ತವಾಗಿ ವೆಯೆಂದು ನಿಶ್ಚಯವಾಯಿತು. ಈ ಧ್ವನಿಗಳನ್ನು ಮೂಲಭಾಷೆಯ ಧ್ವನಿಗಳೆಂದು ಪರಿಗಣಿಸಿದ ಮೇಲೆ, ಗ್ರೀಕ್ ಭಾಷೆಯ ಎಸ್ತಿ ಮತ್ತು ಸಂಸ್ಕೃತದ ಅಸ್ತಿ ಜ್ಞಾತಿ ರೂಪಗಳೆಂದು ತಿಳಿದಿದ್ದರೂ, ಇಲ್ಲಿನ ಮೊದಲ ಸ್ವರ ವ್ಯತ್ಯಾಸಕ್ಕೆ ಈಗ ಉತ್ತರ ಸಿಕ್ಕಿದಂತಾಯಿತು. ಈ ಧಾತುಗಳ ಪ್ರಾರಂಭದಲ್ಲಿ Laryngeal ಧ್ವನಿಯಿತ್ತೆಂದೂ, ನಂತರ ಇದು ಲುಪ್ತವಾಯಿತೆಂದೂ ಕಲ್ಪಿಸಿಕೊಂಡರು. ಹಾಗೆಯೇ, ಖ, ಥ, ಫ ಗಳನ್ನು ವಿವರಿಸಲು (ಗಲಕುಹರ) Laryngeal ಧ್ವನಿಗಳನ್ನು ಉಪಯೋಗಿಸಿ ಕೊಳ್ಳಲಾಯಿತು. ಮೊದಲಿಗೆ ಇವನ್ನು ಕಲ್ಪಿಸಿಕೊಳ್ಳಲು ದೃಢವಾದ ಧ್ವನಿ ಸಮೀ ಕರಣ ದೊರೆತಿರಲಿಲ್ಲ.

ಬ್ರುಗ್‌ಮನ್‌ನ ಕಾಲಕ್ಕೆ ಧ್ವನಿಗಳ ಭೇದ ತಿಳಿದಿರಲಿಲ್ಲ. ಹಾಗಾಗಿ, ಜ ಮತ್ತು ಜ ಎರಡನ್ನೂ ಮೂಲ ಭಾಷೆಯಲ್ಲಿ ಕಲ್ಪಿಸಿಕೊಂಡಿದ್ದರು. ಧ್ವನಿಮಾ

ಶಾಸ್ತ್ರ ಬೆಳೆದ ಮೇಲೆ ನಿಯಮಿತ ಪರಿಸರಗಳಲ್ಲಿ **ಮಾತ್ರ** ಕಂಡು ಬಂದ ಜ ಧ್ವನಿಯನ್ನು ಸ-ಧ್ವನಿಮಾದಲ್ಲಿ ಅಂತರ್ಗತ ಮಾಡಿಕೊಳ್ಳಲಾಯಿತು.

ತೌಲನಿಕ ಪದ್ಧತಿ (compartive method) ಯ ಪರಿಚಯ ವಿದ್ವಾಂಸರಿಗೆ ಆಗುವ ಮೊದಲಿಗೇ ಸಸ್ಸೂರ್ ಎಂಬಾತನು ಆಂತರಿಕ ರಚನೆಯ ಆಧಾರದ ಮೇಲೆ ಕೆಲವು ಪರಿಸರಗಳಲ್ಲಿ ವ್ಯಂಜನಗಳು ಲುಪ್ತವಾಗಿವೆಯೆಂಬುದನ್ನು ತೋರಿಸಿ ಕೊಟ್ಟಿದ್ದನು ಮೂಲಭಾಷೆಯ ಧಾತು ರಚನೆಯನ್ನು ಅಭ್ಯಸಿಸುತ್ತಾ ಅವುಗಳ ವಿಹಿತರೂಪ (canonical form) C V C ಆಗಿದೆಯೆಂದೂ (ಉದಾ: ಸಂಸ್ಕೃತ **ಪತ್, ಚರ್**) ಕೆಲವು ಧಾತುಗಳಲ್ಲಿಕೇವಲ V C ರೂಪವು (ಉದಾ: ಸಂಸ್ಕೃತ **ಅಸ್-ಅದ್**) ಇನ್ನು ಕೆಲವು ಧಾತುಗಳಲ್ಲಿ ರೂಪವೂ (ಉದಾ ಸಂಸ್ಕೃತ **ನೀ,ಧಾ**) ಕಂಡು ಬರುವುದೆಂದು ತೋರಿಸಿದನು. C V ಹಾಗೂ V C ರಚನೆಯಲ್ಲಿ ಮೊದಲಿಗೆ ವ್ಯಂಜನವೊಂದಿತ್ತೆಂದೂ, C V ರಚನೆಯಲ್ಲಿ ಕೊನೆಯಲ್ಲೊಂದು ವ್ಯಂಜನ ವಿತ್ತೆಂದೂ ಕಲ್ಪಿಸಿಕೊಂಡನು. ಈ ಕೊನೆಯ ವ್ಯಂಜನಲೋಪವಾದ್ದರಿಂದ ಸಂಸ್ಕೃತ ದಲ್ಲಿ **ಧಾ ನೀ,** ಇತ್ಯಾದಿ ಧಾತುಗಳಲ್ಲಿ ದೀರ್ಘಸ್ವರವಾಯಿತೆಂದೂ ಅಭಿಪ್ರಾಯ ಪಟ್ಟನು. ಸಸ್ಸೂರನ ಈ ಕಲ್ಪನೆ ಸರಿಯೆಂದು ಮುಂದೆ ಹಿಟ್ಟೈಟ್ ಆಧಾರದಿಂದ Kurylowicz ಎಂಬ ವಿದ್ವಾಂಸನು ಸಾಧಿಸಿದನು.

ಇಂಡೋ-ಯೂರೋಪಿನ್ ಮೂಲ ಭಾಷೆಯನ್ನಾಡುತ್ತಿದ್ದ ಜನಾಂಗದ ಸಂಸ್ಕೃತಿ, ಸಮಾಜ ಹೇಗಿದ್ದರಬೇಕೆಂಬುದನ್ನು ಸ್ವಲ್ಪ ವಿಚಾರಿಸೋಣ. ಶಬ್ದಕೋಶದ ಆಧಾರದಿಂದ ಹೇಳಬಹುದಾದರೆ, ಈ ಜನರು ಪಶುಪಾಲನೆ ತಿಳಿದವರಾಗಿದ್ದರು. ಹಸು, ಕುರಿ, ಹಾಗೂ ಹಂದಿ ಮೊದಲಾದ ಸಾಕು ಪ್ರಾಣಿಗಳ ಪರಿಚಯವಿತ್ತು. ಕನಿಷ್ಟ, ಒಂದು ಲೋಹದ (ತಾಮ್ರ ಅಥವಾ ಕಂಚು)ಪರಿಚಯವಿತ್ತು. (ಲಾಟಿನ್ **ಅಯೆಸ್** ಗಾಥಿಕ್ **ಐಜ್** ಕಂಚು ಸಂಸ್ಕೃತ **ಅಯಸ್** ಕಬ್ಬಿಣ, ಗಂಡಸು ಪ್ರಧಾನ ವಾಗಿದ್ದ ಸಮಾಜವಾಗಿತ್ತೆನ್ನಬಹುದು. ಒಂದು ರೀತಿಯ ಪ್ರಾಣಿಗಳಿಂದೆಳೆಯಲ್ಪಟ್ಟ ಗಾಡಿಯ ಪರಿಚಯವಿತ್ತು. (ಸಂಸ್ಕೃತ, **ಚಕ್ರಂ,** ಹಳೆಯ ಇಂಗ್ಲಿಷ್ **ಹ್ವೆಒಹ್ಲ** ಗ್ರೀಕ್ **ಕುಕ್ಲೋಸ್**; ಲ್ಯಾಟಿನ್ **ಅಕ್ಸಿಸ್**, ಗ್ರೀಕ್ **ಆಕ್ಸೋನ್**, ಸಂಸ್ಕೃತ **ಅಕ್ಷಸ್**) ಕುದರೆಯನ್ನು ತಿಳಿದವರಾಗಿದ್ದರೂ, ಅದನ್ನು ಸಾಕಿ ಅದರಿಂದ ಪ್ರಯೋಜನ ಪಡೆದಿದ್ದರೆನ್ನುವುದಕ್ಕೆ ಆಧಾರ ಸಾಲದು. ಲಿನಿಯರ್ 'ಬಿ' ಲೇಖನಗಳಲ್ಲಿ ರಥದ ಉಲ್ಲೇಖ ವಿದೆ. ಹದಿನಾಲ್ಕನೆಯ ಶತಮಾನದಲ್ಲಿ ಏಷ್ಯಾ ಮೈನರ್‌ನಲ್ಲಿ ವಾಸಿಸುತ್ತಿದ್ದ ಹಿಟ್ಟೈಟ್ ಜನರಿಗೆ ರಥದ ಪರಿಚಯವಿತ್ತು. ಆದರೂ ಕುದುರೆಗಳನ್ನು ಪಳಗಿಸಲು ಉತ್ತರ ಮೆಸೆಪೊಟೇಮಿಯ ಮತ್ತು ಸಿರಿಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಹುರಿಯನ್‌ರ ಶರಣು ಹೊಂದಬೇಕಾಗಿತ್ತು ಅಲ್ಲಿ ದೊರೆತ, ಕಿಕ್ಕುಲಿ ಎಂಬವನು ರಚಿಸಿದ, ರಥಕ್ಕೆ ಉಪಯೋಗಿಸುವ ಕುದುರೆಗಳ ಶಿಕ್ಷಣವನ್ನು ಕುರಿತು ಗ್ರಂಥದಲ್ಲಿ **ಐಕ** ಒಂದು

ಪಂಜ (ಐದು) ಎಂದು ಆರ್ಯ ಭಾಷೆಯ ಸಂಖ್ಯಾವಾಚಕ ಪದಗಳು ಕಂಡು ಬಂದಿವೆ.

ಇಂಡೋ-ಯೂರೋಪಿಯನ್ನರಿಗೆ ವ್ಯವಸಾಯದ ಪರಿಚಯವಿತ್ತು. ಕೆಲವು ಧಾನ್ಯಗಳ ಹೆಸರುಗಳು, ವ್ಯವಸಾಯದಲ್ಲಿ ಉಪಯೋಗಿಸುವ ಸಾಧನಗಳ ಹೆಸರುಗಳು ಈ ಕುಟುಂಬದ ಅನೇಕ ಭಾಷೆಗಳಲ್ಲಿ ಕಂಡು ಬಂದಿವೆ (ಸಂಸ್ಕೃತ **ಯವಃ**, ಗ್ರೀಕ್ **ಜೆಯ್**ಐ Zeiai)

ಏಷ್ಯದಲ್ಲಿ ಬಳಕೆಯಲ್ಲಿರುವ ಇಂಡೋ ಆರ್ಯನ್ ಬಾಷೆಗಳೂ ಯೂರೋಪಿನ ಹಲವು ಭಾಷೆಗಳೂ ಒಂದೇ ಕುಟುಂಬಕ್ಕೆ ಸೇರಿದವೆಂದು ನಿರ್ಣಯಿಸಿದ್ದು ೧೯ ನೇ ಶತಮಾನದ ಮುಖ್ಯ ಕೊಡುಗೆ. ಈ ಸಂಬಂಧವನ್ನು ತಿಳಿಯಪಡಿಸಲೋಸುಗವೆಂಬಂತೆ ವಿದ್ವಾಂಸರು ಈ ಕುಟುಂಬಕ್ಕೆ ಸೇರಿದ, ಮೊದಲಿಗೆ ಒಂದೇ ಕಡೆ ಇದ್ದ, ಜನರು ಕ್ರಮೇಣ ಏಷ್ಯ, ಯೂರೋಪ್ ಮೊದಲಾದ ಕಡೆಗಳಿಗೆ ಬಂದು ಹರಡಿಕೊಂಡರೆಂದು ವಿವರಿಸಿದರು.

೧೯೦೬ರಲ್ಲಿ ಹಿಟ್ಟೈಟ್ ಭಾಷೆಯ ಪರಿಚಯವಾಗುವವರೆಗೆ, ಇಂಡೋ ಯೂರೋಪಿಯನ್ ಮೂಲಭಾಷೆಯನ್ನಾಡುತ್ತಿದ್ದವರು ಎರಡನೇ ಸಹಸ್ರ (2nd millennium) ವರ್ಷದ ಪ್ರಾರಂಭದ ವೇಳೆಗೆ ಚದರಿ ಹೋಗಲು ಪ್ರಾರಂಭವಾಯಿತೆಂಬ ತಿಳುವಳಿಕೆ ಇತ್ತು. ಆದರೆ, ಕ್ರಿ. ಪೂ. ೧೯೫೦ ರ ವೇಳೆಗೇ ಏಷ್ಯಾ ಮೈನರ್ ಪ್ರದೇಶದಲ್ಲಿ ಹಿಟ್ಟೈಟ್ ಭಾಷೆಯನ್ನಾಡುವವರು ಕಾಣಿಸಿಕೊಂಡರೆಂದಾದ ಮೇಲೆ ಮೂಲ ಜನಾಂಗದ ತಾರೀಖನ್ನು ಕ್ರಿ. ಪೂ. ೩೦೦೦ ಕ್ಕೆ ನೂಕಲಾಯಿತು. ಕ್ರಿ.ಪೂ. ೧೪೫೦ ರ ಸುಮಾರಿಗೆ ವಾಡಿಕೆಯಲ್ಲಿದ್ದ ಲಿನಿಯರ್'ಬಿ' ಲೇಖನಗಳು ಗ್ರೀಕ್ ಭಾಷೆಗೆ ಸೇರಿದವೆಂದು ತಿಳಿದು ಬಂದಿದೆ. ಅಷ್ಟರ ವೇಳೆಗೆ ಅಲ್ಲಿ ಕಂಡ ಬಂದ ಭಾಷೆ ಮೂಲಭಾಷೆಯ ಸ್ವರೂಪಕ್ಕಿಂತ ಸುಮಾರು ಬದಲಾವಣೆ ಹೊಂದಿದೆಯಾದ್ದರಿಂದ ಹೀಗಾಗಲು ಸುಮಾರು ಒಂದುವರೆ ಸಾವಿರ ವರ್ಷಗಳಾದರೂ ಬೇಕಾದೀತೆನ್ನಬಹುದು. ಆದ್ದರಿಂದ, ಇಂಡೋ-ಯೂರೋಪಿಯನ್ನರು ಕ್ರಿ. ಪೂ. ೩೦೦೦ ಕ್ಕೂ ಹಿಂದೆ ಇದ್ದರೆನ್ನಲು ಸಾಧ್ಯವಾಗಿದೆ.

ಈ ಜನರು ಮೊದಲಿಗೆ ಎಲ್ಲಿದ್ದರೆನ್ನುವುದು ವಿವಾದಾಸ್ಪದವಾಗಿದೆ. ಪ್ರಾರಂಭದಲ್ಲಿ, ವಿದ್ವಾಂಸರು ಇಂಡೋ-ಯೂರೋಪಿಯನ್ ಮೂಲಭಾಷೆಗೆ ಕಲ್ಪಿಸಿಕೊಂಡ ಶಬ್ದಕೋಶದ ಆಧಾರದ ಮೇಲೆ (ಉದಾ: birch, mead, salmon) ೫೦೦೦ ವರ್ಷಗಳ ಹಿಂದೆ ಈ ವಸ್ತುಗಳು ಇದ್ದಿರಬಹುದಾದ ಸ್ಥಳ ಅವರ ಮೂಲ ನಿವಾಸವಾಗಿತ್ತೆಂದು ವಾದಿಸಿದ್ದಾರೆ. ಈ ಕಾರಣದಿಂದ ಏಷ್ಯದಲ್ಲಿ ಇವರು ಇದ್ದಿರಲಾರರೆಂದು ನಿಶ್ಚಯವಾಯಿತು. ಇದಕ್ಕೆ ಸರಿ ಹೊಂದುವ ಎರಡು ಪ್ರದೇಶಗಳೆಂದರೆ, ಜರ್ಮನಿಯ ಉತ್ತರ ಭಾಗ ಇಲ್ಲವೆ, ಕಪ್ಪು ಸಮುದ್ರದ ಉತ್ತರಕ್ಕಿರುವ ರಷ್ಯಾ

ದೇಶ ಮೊದಲಿಗೆ, ಹೆಚ್ಚು ವಿದ್ವಾಂಸರು ಜರ್ಮನಿಯ ಉತ್ತರ ಭಾಗವನ್ನು ಅನುಮೋದಿಸಿದರಾದರೂ, ಇತ್ತೀಚಿನ ಪುರಾವೆಗಳಿಂದ ಅವರ ಮೂಲನಿವಾಸ ದಕ್ಷಿಣ ರಷ್ಯಾ ಆಗಿದ್ದಿತೆಂದು ನಿಶ್ಚಯವಾಗಿದೆ.

ಅಕ್ಕಪಕ್ಕದಲ್ಲಿ ಬಳಕೆಯಲ್ಲಿರುವ ಭಾಷೆಗಳು ಪರಸ್ಪರ ಪ್ರಭಾವ ಬೀರುತ್ತವೆನ್ನುವುದು ಎಲ್ಲರಿಗೂ ತಿಳಿದ ವಿಚಾರ. ಉದಾಹರಣೆಗೆ, ಟರ್ಕಿಷ್ ಭಾಷೆ ರುಮೇನಿಯನ್ ಭಾಷೆಯ ಸಂಬಂಧಿಯಲ್ಲದಿದ್ದರೂ ಅವೆರಡು ಭಾಷೆಗಳಿಗೂ ಸಮಾನವಾದ ಕೆಲವು ಅಂಶಗಳಿವೆ. ಇದೇ ರೀತಿ, ದಕ್ಷಿಣ ಕಾರೇಷಿಯನ್ ಭಾಷಾ ಪರಿವಾರಕ್ಕೆ ಸೇರಿದ ಕಾರ್ತ್‌ವೇಲಿಯನ್ ಭಾಷೆಯ ವರ್ಣ ವ್ಯವಸ್ಥೆಯಲ್ಲಿ, ಕಲ್ಪಿತ ಇಂಡೋ-ಯೂರೋಪಿಯನ್ ಮೂಲ ಭಾಷೆಯ ಕೆಲವು ವೈಶಿಷ್ಟ್ಯಗಳು ಕಾಣಬರುತ್ತವೆ. ಅವರಲ್ಲಿ ಮುಖ್ಯವಾಗಿ [ವ] ಮತ್ತು [ಯ] ಧ್ವನಿಗಳು ಕೆಲವು ಪರಿಸರಗಳಲ್ಲಿ [ಉ] ಮತ್ತು [ಇ] ರೂಪದಲ್ಲಿ ತೋರಿ ಬರುವುದೊಂದು ಈ ರೀತಿಯ ವ್ಯತ್ಯಯ (alternation) ಇಂಡೋ-ಯೂರೋಪಿಯನ್ ಮೂಲ ಭಾಷೆಯಲ್ಲಿ ಹಾಗೂ ಅದಕ್ಕೆ ಸೇರಿದ ಭಾಷೆಗಳಲ್ಲಿ ಕಂಡು ಬಂದಿದೆ. ಕಾರ್ತ್‌ವೇಲಿಯನ್ ಭಾಷೆಯಲ್ಲಿ ಕಂಡು ಬರುವ ವರ್ಣವ್ಯವಸ್ಥೆ ಇಂಡೋ-ಯೂರೋಪಿಯನ್ ಪ್ರಭಾವದಿಂದಲೇ ಎಂದು ನಿಶ್ಚಯವಾಗಿದೆ. ಹೀಗೆ ಪ್ರಭಾವ ಬೀರಲು, ಇಂಡೋ-ಯೂರೋಪಿಯನ್ ಒಂದು ಕಾಲಕ್ಕೆ ದಕ್ಷಿಣ ರಷ್ಯಾದಲ್ಲಿ ಕಾರ್ತ್‌ವೇಲಿಯನ್ ಮೂಲಭಾಷೆಯನ್ನಾಡುವವರ ಪಕ್ಕದಲ್ಲಿ ವಾಸವಾಗಿದ್ದರೆನ್ನಬಹುದು.

ಈಚಿನ ಪುರಾತತ್ತ್ವ (archeological) ಸಂಶೋಧನೆಗಳಿಂದ ದಕ್ಷಿಣ ರಷ್ಯಾದಲ್ಲಿ ೫೦೦೦ ವರ್ಷಗಳ ಹಿಂದೆ ಕುರ್‌ಗನ್ ಎಂಬ ಸಂಸ್ಕೃತಿ ಇತ್ತೆಂದೂ, ಅವರಲ್ಲಿ ಕಂಡು ಬಂದ ಆರ್ಥಿಕ, ಸಾಮಾಜಿಕ, ಮತೀಯ ವಿಶೇಷಗಳು, ವಸತಿ ರಚನೆಗೆ ಸಂಬಂಧಿಸಿದ ವೈಶಿಷ್ಟ್ಯಗಳು, ಇಂಡೋ-ಯೂರೋಪಿಯನ್ ಭಾಷೆಗಳು ನಡುವಣ ಸಾಮಾನ್ಯ ಪದಗಳ ಆಧಾರದ ಮೇಲೆ ಕಲ್ಪಿಸಿಕೊಂಡಿರುವ ಮೂಲ ಭಾಷೆಗೆ ಹತ್ತಿರವಾಗಿದೆಯೆಂದು ತಿಳಿದು ಬಂದಿದೆ. ಈ ಸಂಸ್ಕೃತಿಯಲ್ಲಿ ಸತ್ತವರನ್ನು ಪ್ರತ್ಯೇಕವಾಗಿ ಹೂಣುವ ಆಚಾರವಿತ್ತು. ಸತ್ತವನನ್ನು ಹೂಣುದ ದಿಣ್ಣೆಗೆ ರಷ್ಯನ್ ಭಾಷೆಯಲ್ಲಿ ಕುರ್‌ಗನ್ ಎನ್ನುತ್ತಾರೆ. ಇಂಡೋ-ಯೂರೋಪಿಯನ್ನರ ಮೂಲ ನಿವಾಸ ದಕ್ಷಿಣ ರಷ್ಯಾವಾಗಿದ್ದಿತೆಂದು ನಿಶ್ಚಯಿಸಲು ಇದೂ ಒಂದು ಆಧಾರವಾಯಿತು.

ಇಂಡೊ-ಯೂರೋಪಿಯನ್ ಮೂಲಭಾಷೆಯ ಕಲ್ಪನೆ, ಅದನ್ನಾಡುತ್ತಿದ್ದ ಜನರ ಮೂಲನಿವಾಸ ಸ್ಥಾನ, ಅವರ ಸಂಸ್ಕೃತಿ, ಇವುಗಳ ಬಗ್ಗೆ ಸ್ಥೂಲವಾಗಿ ಪರಿಶೀಲಿಸಿದ್ದಾಯಿತು. ಈಗ ಆ ಕುಟುಂಬದ ಅಧ್ಯಯನದಲ್ಲಿ ಸಂಸ್ಕೃತದ ಸ್ಥಾನವೇನೆಂಬುದನ್ನು ಸ್ವಲ್ಪ ಚರ್ಚಿಸೋಣ.

ಮೊದಲನೆಯದಾಗಿ, ಇಂಡೋ-ಯೂರೋಪಿಯನ್ ಭಾಷೆಗಳ ತೌಲನಿಕ ಅಧ್ಯಯನ ಸಾಧ್ಯವೆನ್ನುವ ವಿಚಾರ ಯೂರೋಪಿಯನ್ ವಿದ್ವಾಂಸರಿಗೆ ತಿಳಿದದ್ದು ಸಂಸ್ಕೃತ ಭಾಷೆಯ ಪರಿಚಯವಾದ ಮೇಲೆಯೇ ಎನ್ನಬಹುದು. ಜೋನ್ಸರವರ ಭಾಷಣದಿಂದ, ಅದುವರೆಗೆ ಯೂರೋಪಿನ ವಿದ್ವಾಂಸರಿಗೆ ಪರಿಚಯವಾಗಿದ್ದ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಿಂದ ಸಂಸ್ಕೃತ ಹೆಚ್ಚು ಭವ್ಯ ಹಾಗೂ ಚೆನ್ನಾಗಿ ಬೆಳೆದು ಬಂದ ಭಾಷೆ ಎಂಬ ಬಗ್ಗೆ ಸೂಚನೆ ದೊರಕಿತು.

"The sanskrit language .... is of a wonderful structure; more perfect than the Greek, more copious than the latin, and more exquisitely refined than either ...."

ಪಾಣಿನಿ ರಚಿಸಿದ ಸಂಸ್ಕೃತ ವ್ಯಾಕರಣಕ್ಕೆ ಸರಿ ತೂಗುವ ವ್ಯಾಕರಣ ಈ ಕುಟುಂಬದ ಬೇರಾವ ಭಾಷೆಗೂ ಇರಲಿಲ್ಲ, ಹಾಗೂ ಇಂದಿಗೂ ಇಲ್ಲ. ಸಂಸ್ಕೃತ ವ್ಯಾಕರಣದ ಪರಿಚಯದಿಂದಾಗಿ, ಪ್ರಕೃತಿ, ಪ್ರತ್ಯಯ, ವ್ಯಾಕರಣ ಪ್ರಕ್ರಿಯೆಗಳ ಸರಳ ಜ್ಞಾನ ವಿದ್ವಾಂಸರಿಗೆ ಉಂಟಾಯಿತು, ಗ್ರೀಕ್ ಮತ್ತು ಲ್ಯಾಟಿನ್ ಜೊತೆಗೆ ಹೊಸದಾದೊಂದು ಭಾಷೆಯ ಜ್ಞಾನದಿಂದ ಭಾಷಾ ಶಾಸ್ತ್ರದ ಹುಟ್ಟು ಮತ್ತು ವಿಕಾಸಕ್ಕೆ ಉತ್ತಮ ಬುನಾದಿಯಾದಂತಾಯಿತು. ಭಾಷೆಗಳು ಪರಸ್ಪರ ಸಂಬಂಧಿಗಳಾಗಿರಬಹುದೆಂಬ ವಿಚಾರ ತಿಳಿದ ಮೇಲೆ ಯೂರೋಪಿನಿಂದ ಬಹು ದೂರದ ಭಾರತದಲ್ಲಿ ಅವರಿಗೆ ಪರಿಚಿತವಾಗಿದ್ದ ಭಾಷೆಗಳ ಸೋದರಿ ಭಾಷೆಯೊಂದಿರುವ ವಿಚಾರದಿಂದ ಈ ತಿಳುವಳಿಕೆಗೆ ಪುಷ್ಟಿ ನೀಡಿದಂತಾಯಿತು, ಈ ಭಾಷೆಗಳ ಪದಗಳಲ್ಲಿ ಕಾಣಬರುವ ಸಾದೃಶ್ಯ ಅತಿಸುಲಭವಾಗಿ ಸ್ಪಷ್ಟವಾಯಿತು. ಉದಾಹರಣೆಗೆ,

ಸಂಸ್ಕೃತ	**ಗ್ರೀಕ್**	**ಲ್ಯಾಟಿನ್**	
ಮಾತಾ	ಮಾತೇರ್	ಮಾತೆರ್	'ತಾಯಿ'
ದ್ವಾ	ದುಓ	ದುಓ	'ಎರಡು'
ತ್ರಯಃ	ತ್ರೆಯಿಸ್	ತ್ರೇಸ್	'ಮೂರು'
ಅಸ್ತಿ	ಎಸ್ತಿ	ಎಸ್ತ್	'ಇದ್ದಾನೆ'

ಪಾಣಿನಿ ವ್ಯಾಕರಣದಿಂದ ಭಾಷೆಯನ್ನು ವಿಶ್ಲೇಷಿಸುವದು ಹೇಗೆಂಬುದು ತಿಳಿಯಿತು. ಹಾಗೂ ಪ್ರಕೃತಿ, ಪ್ರತ್ಯಯಗಳನ್ನು ಸಹ ಸುಲಭವಾಗಿ ಹೋಲಿಸಿ ನೋಡಲು ಸಾಧ್ಯವಾಯಿತು.

ಎರಡನೆಯದಾಗಿ, ಇಂಡೋ-ಯೂರೋಪಿನ್ ಮೂಲ ಭಾಷೆಯ ಕಲ್ಪನೆಯಲ್ಲಿ ಸಂಸ್ಕೃತದ ಕೊಡುಗೆ ಹೆಚ್ಚಾಗಿದೆ. ಮೊದಲಿಗೆ (ಉದಾ: ಬಾಪ್ ವಿದ್ವಾಂಸ) ಮೂಲ ಭಾಷೆ ಸಂಸ್ಕೃತಕ್ಕೆ ಹತ್ತಿರವಾದ ರೂಪ ತಳೆದಿದ್ದಿರಬೇಕೆಂದೇ ವಿದ್ವಾಂಸರು ನಂಬಿ

ದ್ದರು. ಹೀಗಾಗಿ, ಪ್ರಾರಂಭದಲ್ಲಿ ಇತರ ಭಾಷೆಗಳಲ್ಲಾಗಿರುವ ಬದಲಾವಣೆಗಳನ್ನು ತಿಳಿಯಲು ಸಂಸ್ಕೃತ ಮಾನದಂಡವಾಗಿತ್ತು. ಸಂಸ್ಕೃತಕ್ಕೆ ಕೊಟ್ಟಿದ್ದ ಈ ಸ್ಥಾನವನ್ನು ಕಮ್ಮಿ ಮಾಡಿ, ಸ್ಲೈಷರ ಎಂಬ ವಿದ್ವಾಂಸನು ತೌಲನಿಕ ವಿಧಾನದಿಂದ ಮೂಲ ಭಾಷೆಯನ್ನು ಹೇಗೆ ಕಲ್ಪಿಸಿಕೊಳ್ಳಬೇಕೆಂಬುದರ ಪರಿಚಯ ಮಾಡಿಕೊಟ್ಟನು. ಅದಕ್ಕಾಗಿ, ಇತರ ಭಾಷೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲಾರಂಭಿಸಿದರು. ಮೂಲ ಭಾಷೆ ಸಂಸ್ಕೃತದಂತೆಯೇ ಇದ್ದಿರಬೇಕು, ಸಂಸ್ಕೃತದಲ್ಲಿ ಹೆಚ್ಚು ಬದಲಾವಣೆ ಆಗಿದ್ದಿರಲಾರದು ಎಂದು ತಿಳಿದಿದ್ದ ತಪ್ಪು ಅಭಿಪ್ರಾಯವನ್ನು ದೂರಮಾಡಿ ಸಂಸ್ಕೃತದಲ್ಲಿ ಕೂಡ ಬದಲಾವಣೆಯಾಗಿದೆಯೆಂದು ಇವನು ತೋರಿಸಿಕೊಟ್ಟನು. ಉದಾಹರಣೆಗೆ, ಮೂಲ ಭಾಷೆಯ 'ಏ' ಸಂಸ್ಕೃತದಲ್ಲಿ 'ಅ' ಎಂದು ಬದಲಾಯಿಸಿದೆ. ಸಂಸ್ಕೃತ **ಜಾನಿ** 'ಹೆಂಗಸು' ಗಾಥಿಕ್ **ಕ್ವೇನ್ಸ್** ಮೂಲ ಭಾಷೆಯ ಕಂಠ್ಯ ವರ್ಣ ತಾಲವ್ಯ ವರ್ಣವಾಗಿ ಬದಲಾಯಿಸಿರುವರಿಂದ, ಮೊದಲಿಗೆ ಅದರ ಮುಂದಿನ ಸ್ವರ ಅಗ್ರಮಧ್ಯಸ್ವರವಾಗಿದ್ದಿರಬೇಕೆಂದು ನಿಶ್ಚಯವಾಯಿತು. ಬೇರೆ ಸ್ವರಗಳಿರುವಾಗ ಕಂಠ್ಯವರ್ಣ ತಾಲವ್ಯವಾಗಿಲ್ಲ. ಸಂಸ್ಕೃತ **ಗೌ;** 'ಹಸು' ಜರ್ಮನ್ **ಭುವೊ,** ಈ ಕಾರಣದಿಂದ ಮೂಲ ಭಾಷೆಯ ಸ್ವರಗಳ ಕಲ್ಪನೆಯಲ್ಲಿ ಸಂಸ್ಕೃತಕ್ಕಿಂತ ಗ್ರೀಕ್ ಭಾಷೆಗೆ ಹೆಚ್ಚು ಪ್ರಾಧಾನ್ಯ ದೊರಕಿತು. ಆದರೆ ವ್ಯಂಜನಗಳ ಕಲ್ಪನೆಯಲ್ಲಿ ಸಂಸ್ಕೃತಕ್ಕೆ ಹೆಚ್ಚು ಬೆಲೆ. ಮೂಲ ಭಾಷೆಗೆ ಘೋಷ ಮಹಾಪ್ರಾಣ ಘ, ಧ, ಭಗಳನ್ನು ಕಲ್ಪಿಸುವುದರಲ್ಲಿ ಸಂಸ್ಕೃತವೇ ಆಧಾರವೆನ್ನಬಹುದು. ಇನ್ನಾವ ಭಾಷೆಗಳಲ್ಲೂ ಈ ವರ್ಣಗಳು ಈ ರೂಪದಲ್ಲಿ ಉಳಿದು ಬಂದಿಲ್ಲ. ಸಂಸ್ಕೃತ ಒಂದರಲ್ಲೇ ಇವು ಘೋಷ ಮಹಾಪ್ರಾಣಗಳಾಗಿ ಉಳಿದಿವೆ (ಉದಾ: ಸಂಸ್ಕೃತ **ನಭ:** 'ಮೇಘ' ಗ್ರೀಕ್ **ನೆಫೋಸ್;** ಸಂಸ್ಕೃತ **ಮಧು** 'ಜೇನು' ಗ್ರೀಕ್ **ಮೆಥು**). ಆದರೆ ಸಂಸ್ಕೃತದಲ್ಲಿ ಕಂಡುಬಂದಿರುವ ಅಘೋಷ ಮಹಾಪಾಣ ಖ,ಥ,ಫ, ಇಂಡೋ-ಯೂರೋಪಿಯನ್ ಮೂಲ ಭಾಷೆಯಲ್ಲಿರಲಿಲ್ಲ. ಇವು ಕೇವಲ ಸಂಸ್ಕೃತ ಮತ್ತು ಇರಾನಿಯನ್ ಭಾಷೆಗಳಲ್ಲಿ ಬೆಳೆದ ವರ್ಣಗಳು. ಹಿಟ್ಟೈಟ್ ಭಾಷೆಯ ಪರಿಚಯವಾದ ಮೇಲೆ ಈ ವರ್ಣಗಳು ಮೊದಲಿಗೆ ಅಲ್ಪ ಪ್ರಾಣ ಮತ್ತು ಗಲಕುಹರ ಧ್ವನಿಯ (Laryngeal) ಸಂಯುಕ್ತಾಕ್ಷರವಾಗಿತ್ತೆಂದೂ, ನಂತರ ಗಲಕುಹರ ಧ್ವನಿಯು ಹಿಂದಿನ ಸ್ಪರ್ಶ ವ್ಯಂಜನದೊಡನೆ ಸೇರಿಹೋಗಿ ಮಹಾ ಪ್ರಾಣಗಳಾದವೆಂದೂ ತಿಳಿಯಿತು.

ಮೂಲಭಾಷೆಯ ರ, ಲ, ಕೆಲವು ಪರಿಸರಗಳಲ್ಲಿ ವ್ಯಂಜನವಾಗಿಯೂ, ಇತರ ಪರಿಸರಗಳಲ್ಲಿ ಸ್ವರವಾಗಿಯೂ ಉಪಯೋಗವಾಗುತ್ತಿತ್ತು, ಇವುಗಳ ಸ್ವರರೂಪ ಸಂಸ್ಕೃತ ಭಾಷೆಯಲ್ಲಿ ಮಾತ್ರ ಉಳಿದು ಬಂದಿದೆ.

ಮೂಲ ಭಾಷೆಯ ಸ್ವರಾಘಾತ (accent) ಕಲ್ಪನೆಗೆ ಸಂಸ್ಕೃತದ ಸಾಕ್ಷ್ಯ ಬಹಳ ಮುಖ್ಯವಾದದ್ದು. ಮೂಲಭಾಷೆಯ ಪದಗಳಲ್ಲಿ ಸ್ವರಾಘಾತ ಎಲ್ಲಿ

ಬರುತ್ತದೆಂಬುದನ್ನು ಸಂಸ್ಕೃತ ಗ್ರೀಕ್ ಭಾಷೆಗಳ ಆಧಾರದಿಂದ ತಿಳಿಯಬಹುದು. ಈ ಎರಡು ಭಾಷೆಗಳಲ್ಲೂ ಉದಾತ್ತ ಸ್ವರದ ಸ್ಥಾನ ಒಂದೇ ಆಗಿತ್ತು ಉದಾಹರಣೆಗೆ.

ಸಂಸ್ಕೃತ	**ಗ್ರೀಕ್**
ಭ́ರತಿ	ಫ́ೆರೆಇ
ವ́ಜ	ಹೆ́ಪೋಸ್
ಶ್ರುತ́ೆ	ಕ್ಲುತೋ́ಸ್
ಗುರು́	ಬರು́ಸ್

ನಂತರದ ಕೆಲವು ಬದಲಾವಣೆಗಳಿಂದಾಗಿ, ಗ್ರೀಕ್ ಭಾಷೆಯಲ್ಲಿ ಈ ಸ್ವರಗಳ ಸ್ಥಾನದಲ್ಲಿ ವ್ಯತ್ಯಾಸವಾಗಿರುವುದು ಕಂಡು ಬರುತ್ತದೆ. ಉದಾ: ಗ್ರೀಕ್ **ದೆದೊರ್ಕ** ನೋಡಿದನುಸಂಸ್ಕೃತ **ದದ́ರ್ಶ**. ಸಂಸ್ಕೃತದಲ್ಲಿ ಈ ರೀತಿಯ ಬದಲಾವಣೆ ಆಗಿಲ್ಲ. ಜರ್ಮಾನಿಕ್ ಶಾಖೆಯಲ್ಲಿ ತೋರಿ ಬರುವ ಭಿನ್ನ ಬೆಳವಣಿಗೆಗೆ ಆಧಾರವಾದ ಸ್ವರಾಘಾತ ಸಂಸ್ಕೃತದಲ್ಲಿ ಸ್ಪಷ್ಟವಾಗಿ ಉಳಿದಿದೆಯೆಂದು ವೆರ್ನರ್ ಎಂಬ ವಿದ್ವಾಂಸನು ತೋರಿಸಿ ಕೊಟ್ಟನು.

ಉದಾ:

ಸಂಸ್ಕೃತ	**ಪಿತಾ**	=	ಗಾಥಿಕ್ **ಫದರ್**, ಆದರೆ
	ಭ್ರಾತಾ	=	**ಬ್ರೋಥರ್**

ಇಲ್ಲಿ ಗಾಥಿಕ್ ಭಾಷೆಯಲ್ಲಿ ಒಂದೆಡೆ [ದ] ಇನ್ನೊಂದೆಡೆ [ಥ] ಇವೆ. ಸಂಸ್ಕೃತದ ಎರಡು ಪದಗಳಲ್ಲೂ [ತ] ಇದೆ. ವ್ಯಂಜನ [ತ] ನಂತರ ಉದಾತ್ತ ಸ್ವರವಿದ್ದಾಗ ಗಾಥಿಕ್ ಭಾಷೆಯ ಜ್ಞಾತಿ ಪದದಲ್ಲಿ [ದ] ಆಗಿಯೂ, ಉದಾತ್ತಸ್ವರ [ತ] ದ ಹಿಂಭಾಗದಲ್ಲಿದ್ದಾಗ ಗಾಥಿಕ್‌ನ ಜ್ಞಾತಿ ಪದದಲ್ಲಿ [ಥ] ಆಗಿಯೂ ಇರುತ್ತದೆಂದು ಹೇಳಬಹುದು.

ವಾಕ್ಯದಲ್ಲಿ ಮುಖ್ಯ ಕ್ರಿಯಾಪದ ಕೆಲವೊಮ್ಮೆ ಉದಾತ್ತಸ್ವರಾಘಾತವನ್ನು ತೋರುತ್ತದೆ. ಕೆಲವೊಮ್ಮೆ ಉದಾತ್ತ ಸ್ವರ ಕಂಡು ಬರುವುದಿಲ್ಲ. ಗೌಣವಾಕ್ಯಗಳಲ್ಲಿ ಸಂಸ್ಕೃತ ಯಾವ ಸ್ವರ ವಿಧಾನಗಳನ್ನು ತೋರಿಸುತ್ತದೋ ಅದೇ ಮೂಲ ಭಾಷೆಯ ಸ್ವರೂಪವಾಗಿದ್ದಿತೆಂದು ವಿದ್ವಾಂಸರ ಅಭಿಪ್ರಾಯ. ಹಾಗೆಯೇ, ಸಂಸ್ಕೃತ ವಾಕ್ಯಗಳಲ್ಲಿ ಸ್ವರಾಘಾತವಿಲ್ಲದ ಪದಗಳು ಎರಡನೆಯ ಸ್ಥಾನದಲ್ಲಿ ಕಂಡು ಬರುತ್ತವೆ (ಉದಾ: ಪಿತೇವ ಪಿತಾ-ಇವ ಪುತ್ರ ಮಭಿರಕ್ಷತಾದಿಮಂ) ಇದು ಕೂಡ ಮೂಲ ಭಾಷೆಯ ಸ್ವರೂಪವೆನ್ನಬಹುದು.

ಮೂಲ ಭಾಷೆಯ ವ್ಯಾಕರಣದಲ್ಲಿ ಅಪಶ್ರುತಿ (ablaut) ಒಂದು ಮುಖ್ಯ

ಪ್ರಕ್ರಿಯೆ, ಈ ಅಂಶ ಇತರ ಭಾಷೆಗಳಿಗಿಂತ ಸಂಸ್ಕೃತದಲ್ಲಿ ಚೆನ್ನಾಗಿ ಪ್ರತಿಬಿಂಬಿತವಾಗಿದೆ.

ಉದಾ:	ಕರೋತಿ	ಕಾರಯತಿ	ಕೃತ
	ಸ್ತೋತುಂ	ಸ್ತೌತಿ	ಸ್ತುತ

ತೌಲನಿಕ ವಿಧಾನದಿಂದ ಮೂಲಭಾಷೆಯ ವಾಕ್ಯ ರಚನಾ ಕ್ರಮದಲ್ಲಿ ಕರ್ಮ ಪದದ ನಂತರ ಕ್ರಿಯಾಪದವಿರುತ್ತಿತ್ತೆಂದು ಭಾವಿಸಲಾಗಿದೆ. ಈ ಕ್ರಮ ಅನೇಕ ಆರ್ಯಭಾಷೆಗಳಲ್ಲಿ ಹಾಗೂ ಆರ್ಮೇನಿಯನ್ ಭಾಷೆಯಲ್ಲಿ ಕಂಡು ಬರುತ್ತದೆ. (ಉದಾ: ಹಿಂದಿ, **ರಾಮ್ ನೆ ಕುತ್ತಾ ದೇಖಾ**) ಆದರೆ ಯೂರೋಪಿನ ಭಾಷೆಗಳಲ್ಲಿ, ಮುಖ್ಯವಾಗಿ ಗ್ರೀಕ್. ಆಲ್ಬೇನಿಯನ್, ಕೆಲ್ಟಿಕ್ ಇತ್ಯಾದಿ ಭಾಷೆಗಳಲ್ಲಿ ಕ್ರಿಯಾಪದದ ನಂತರ ಕರ್ಮಪದವಿರುವುದು ಕಂಡು ಬರುತ್ತದೆ (ಸ್ಪ್ಯಾನಿಷ್' **ಜುಅನ್ ವಿಯೋ ಎಲ್ ಪೆರೊ** ಜಾನನು ನಾಯಿಯನ್ನು ನೋಡಿದನು')

ಮೂಲ ಭಾಷೆಯಲ್ಲಿ ಮೊದಲ ಕ್ರಮ ಅಂದರೆ ಕರ್ಮಪದ-ಕ್ರಿಯಾಪದ ವಿದ್ದಿತೆಂದರೆ ಹೋಲಿಕೆ (Comparative) ಯ ರಚನೆಯಲ್ಲಿ ಮೊದಲು ಉಪಮಾನ ನಂತರ ವಿಶೇಷಣ ಇರಬೇಕಾಗುತ್ತದೆ. ಆ ಕ್ರಮ ಸಂಸ್ಕೃತದಲ್ಲಿ ಕಂಡು ಬರುತ್ತದೆ. (ಉದಾ: **ವಚ ಘೃತಾತ್ ಸ್ವಾದೀಯೊ ಮಧುನಶ್ಚ ವೋಚತ** ಋಗ್ವೇದ VIII ೨೪, ೨೦)

ಕರ್ಮಪದ-ಕ್ರಿಯಾಪದ ಕ್ರಮವಿರುವ ಭಾಷೆಯ ಇನ್ನೊಂದು ಲಕ್ಷಣವೆಂದರೆ ಗುಣವಾಚಕ ಹಾಗೂ ಷಷ್ಠೀ ವಿಭಕ್ತ್ಯಂತ ವಿಶೇಷಣ ನಾಮಪದದ ಮುಂದೆ ಬರಬೇಕು. ಸಂಸ್ಕೃತದಲ್ಲಿ ಈ ರಚನೆ ಕಂಡು ಬರುತ್ತದೆ (ಉದಾ: **ದ್ಯುಮಂತಂ ಶುಷ್ಮಂ ಆಭರ**-ಋಗ್ವೇದ IX. ೨೯. ೬)

ಮೂಲ ಭಾಷೆಯ ವಾಕ್ಯರಚನಾ ಸ್ವರೂಪ ಗ್ರೀಕ್' ಲ್ಯಾಟಿನ್ ಭಾಷೆಗಳಿಗಿಂತ ಸಂಸ್ಕೃತದಲ್ಲಿ ಚೆನ್ನಾಗಿ ಉಳಿದು ಬಂದಿರಬೇಕೆಂದಾಯಿತು. ಈ ಕ್ರಮ ಯೂರೋಪಿನ ಭಾಷೆಗಳಲ್ಲಿ ನಂತರದ ಬದಲಾವಣೆಗಳಿಂದಾಗಿ ಕ್ರಿಯಾಪದ-ಕರ್ಮ ಪದದ ಕ್ರಮವಾಗಿ ಬೆಳೆದು ಬಂದಿತು.

ಕಡೆಯದಾಗಿ, ಮೂಲ ಭಾಷೆಯ ಪ್ರಾಥಮಿಕ (basic) ಪದ್ಯದ ಸಾಲು ಹೀಗಿದ್ದಿತೆಂಬ ವಿಚಾರ ಬಹಳ ವಿವಾದದಲ್ಲಿದೆ. ಸಂಸ್ಕೃತ ಮತ್ತು ಗ್ರೀಕ್ ಭಾಷೆಗಳಲ್ಲಿ ಈ ಪದ್ಯದ ಸಾಲು ಅಷ್ಟಾಕ್ಷರಿಯಾಗಿದ್ದಿತಾಗಿ ಮೂಲ ಭಾಷೆಯಲ್ಲೂ ಹೀಗೇ ಇದ್ದಿರಬೇಕೆಂದು ಕೆಲವರ ವಾದ. ಇನ್ನು ಕೆಲವರು ಸ್ಲಾವಿಕ್ ಶಾಖೆಯ ಆಧಾರದಿಂದ ಮೂಲ ಭಾಷೆಯ ಪ್ರಾಥಮಿಕ ಪದ್ಯದ ಸಾಲು ಹತ್ತು ಅಕ್ಷರದಿಂದ ಕೂಡಿದ್ದಿತೆಂದು ವಾದಿಸಿದ್ದಾರೆ. ಇತರ ಕೆಲವರು ಸಂಸ್ಕೃತ ಮತ್ತು ಗ್ರೀಕ್ ಆಧಾರವನ್ನೇ ಉಪ

ಯೊಗಿಸಿಕೊಂಡ ಪ್ರಾಥಮಿಕ ಸಾಲು ಹನ್ನೊಂದು ಅಥವಾ ಹನ್ನೆರಡು ಅಕ್ಷರದ್ದಾಗಿದ್ದಿರಬೇಕೆನ್ನುತ್ತಾರೆ. ಸಂಸ್ಕೃತ ಮತ್ತು ಗ್ರೀಕ್ ಭಾಷೆಗಳಲ್ಲಿ ತ್ರಿಷ್ಟುಬ್-ಜಗತೀ ಸಾಲುಗಳು ಅಷ್ಟಾಕ್ಷರಿಯಾದ ಗಾಯತ್ರೀ–ಅನುಷ್ಟುಪ್‌ನಿಂದ ಬೆಳೆದು ಬಂದಿರಬೇಕೆಂದುತೋರಿಸಲು ಸಾಧ್ಯವಾಗಿದೆ. ಸಣ್ಣ ಸಾಲಿಗೆ ಕೆಲವು ಪೂರಕ ಪದಗಳನ್ನು (e.g complements, apposites) ಸೇರಿಸಿದಾಗ ೧೧–೧೨ ಅಕ್ಷರದ ಸಾಲು ದೊರಕುತ್ತದೆಂದು ತೋರಿಸಬಹುದು. ಉದಾಹರಣೆಗೆ,

೧. ಉರು ಕ್ಷಯಾಯ ಚಕ್ರಿರೆ (ಋಗ್ವೇದ ೧.೩೬.೮)
ಉರು ಕ್ಷಯಾಯ ಚಕ್ರಿರೆ **ಸುಧಾತು** (ಋ.೭.೬೦.೧೧)

೨. ಘೃ ತೈ ರ್ಗವ್ಯೂತಿ ಮುಕ್ಷತಂ (ಋ.೩.೧೨.೧೬)
ಘೃ ತೈ ರ್ಗವ್ಯೂತಿ ಮುಕ್ಷತಂ **ಇಳಾ ಭಿ:** (ಋ.೭.೬೫,೪)

೩. ಅಗ್ನಿಂ ಹೋತಾರ ಮೀಳತೆ (ಋ.೬, ೧೪.೨)
ಅಗ್ನಿಂ ಹೋತಾರ ಮೀಳತೆ ನಮೋಭಿ: (ಋ.೫.೧.೭)

೧೧–೧೨ ಅಕ್ಷರಗಳ ದೊಡ್ಡ ಸಾಲುಗಳನ್ನು ಪಡೆಯಲು ೩–೪ ಅಕ್ಷರದ ಪದಗಳನ್ನು ಅಷ್ಟಾಕ್ಷರೀ ಸಾಲಿನ ಕೊನೆಯಲ್ಲಿಯೇ ಸೇರಿಸಬೇಕೆಂಬ ನಿಯಮವಿಲ್ಲ. ಅಷ್ಟಾಕ್ಷರೀ ಸಾಲಿನ ಮಧ್ಯೆ ಕೂಡ ಸೇರಿಸಿ ದೊಡ್ಡ ಸಾಲುಗಳನ್ನು ಪಡೆಯಬಹುದು. ಉದಾಹರಣೆಗೆ,

೪. ಅಯಾ ತೇ ಅಗ್ನೆ ವಿಧೇಯ (ಋ.೨.೬.೨)
ಅಯಾ ತೇ ಅಗ್ನೆ **ಸಮಿಧಾ** ವಿಧೇಯ (ಋ.೪.೪.೧೫)

೫. ಆ ತ್ವಾ ವಹಂತು ಹರಯ (ಋ. ೧. ೧೬. ೧)
ಆ ತ್ವಾ **ಸುಶಿಪ್ರ** ಹರಯೋ ವಹಂತು (ಋ. ೧. ೧೦೧. ೧೦)

ಸಂಸ್ಕೃತದ ಮೇಲಿನ ಉದಾಹರಣೆಗಳಿಂದ ಮೂಲಭಾಷೆಯಲ್ಲಿ ಕೂಡ ಇದೇ ರೀತಿಯ ಕ್ರಮವಿದ್ದಿತೆಂದೂಹಿಸಿಕೊಳ್ಳಬಹುದು.

ಬಸವಣ್ಣನವರ ವಿಕಸನ ಸಿದ್ಧಾಂತ

ಡಾ: ವಸಂತ ಪಾಟೀಲ

ವಿಕಸನ ಸಿದ್ಧಾಂತವೆಂದಾಕ್ಷಣ ಶಿಕ್ಷಣವೇತ್ತರಿಗೆ ತತ್‌ಕ್ಷಣ ವೇದ್ಯವಾಗುವ ವ್ಯಕ್ತಿ ಡಾರ್ವಿನ್. ಆತನ ವಿಕಸನ ಸಿದ್ಧಾಂತವನ್ನು ಇಡೀ ಜಗವೇ ಅರಿತಿದೆ ಹಾಗೂ ಐತಿಹಾಸಿಕವಾಗಿ ಮತ್ತು ವೈಜ್ಞಾನಿಕವಾಗಿ – ಅದೇ ಸರಿಯಾದ ಸಿದ್ಧಾಂತವೆಂದು ಸಾಮಾನ್ಯವಾಗಿ ಸರ್ವರೂ ಒಪ್ಪಿದಂತಿದೆ. "ಮಂಗನಿಂದ ಮಾನವನಾದ" ಎಂಬ ಮೂಲ ವಿಕಸನ ಸಿದ್ಧಾಂತವನ್ನು ಡಾರ್ವಿನ್ನನು ಮಂಡಿಸುವನು. ಈ ಸಿದ್ಧಾಂತವನ್ನು ಒಪ್ಪಲಾರದವರು ಕೇವಲ ಧಾರ್ಮಿಕರು ಅಥವಾ ಅವರ ಧರ್ಮಗಳು. ಧರ್ಮ ಹಾಗೂ ಧಾರ್ಮಿಕರ ದೃಷ್ಟಿಯಲ್ಲಿ ಆದಿಯಿಂದ ಅಂತ್ಯದವರೆಗೆ ದೇವರ, ಅವ್ಯಕ್ತ ಶಕ್ತಿಯ ಪ್ರೇರಣೆಯಿದೆ, ಚಾಲನೆಯಿದೆ. ಹಿಂದೂ ಧರ್ಮದ ಪ್ರಕಾರ "ತೇನ ವಿನಾ ತೃಣಮಪಿ ನ ಚಲತಿ .. ಇದು ದೈವಿಕ ಸಿದ್ಧಾಂತ. ಇದರಲ್ಲಿ ಯಾವುದು ಸರಿ?

ಡಾರ್ವಿನ್ನನ ವಿಕಸನ ಸಿದ್ಧಾಂತ ಐತಿಹಾಸಿಕವಾಗಿ ಹಾಗೂ ವೈಜ್ಞಾನಿಕವಾಗಿ ಸರಿಯೆಂದು ಸಮ್ಮತಿಸಿದರೂ – ಅದರ ಸಂಕುಚಿತತೆಯ ಅರಿವು ಯಾರಿಗಾದರೂ ಆಗಬಹುದು. ಮಂಗನ ಪೂರ್ವದ ವಿಕಸನದ ದಾರಿಯನ್ನು ಹಂತ ಹಂತವಾಗಿ ತೋರಿಸಲು ಸಾಧ್ಯವೇ? ಸ್ವತಃ ಇತಿಹಾಸ ಹಾಗೂ ವಿಜ್ಞಾನಗಳು ಸಹ ವಿಕಸನದ ರಹಸ್ಯವನ್ನು ಭೇದಿಸಲು ಅಸಮರ್ಥ. ಇತಿ + ಹ–ಆಸ = ಇತಿಹಾಸ. ಇದು ಹೀಗಿತ್ತು. ಮಾನವನ ವಿಕಾಸ ಹೀಗಿತ್ತು—ಎಂದು ಇತಿಹಾಸವು ಮಾನವನ ಹಿಂದಿನಿಂದ ನಿನ್ನಿನವರೆಗಿನ ಕೃತಿಗಳ ದಾಖಲೆಗಳ ಅನುಕ್ರಮಣಿಕೆಯ ಪಟ್ಟಿಯನ್ನು ಕೊಡಬಹುದು. ಆದರೆ ಇತಿಹಾಸ ಮಾನವನಿಗಿಂತ ಪೂರ್ವದ ವಿಕಸನವನ್ನು ವಿವರಿಸಲು ಅಸಮರ್ಥ. ಈ ವಿಷಯದಲ್ಲಿ ವಿಜ್ಞಾನವಾದರೂ ಸಮರ್ಥವೇ? ವಿಜ್ಞಾನ ಭೌತಿಕ ಜಗತ್ತು ಮತ್ತು ಹೆಚ್ಚೆಂದರೆ ವಿಶ್ವದ ವಿಕಸನವನ್ನು ವಿವರಿಸಬಹುದು. ಭೂಗೋಲವು ಒಂದು ವಿಜ್ಞಾನ. ಆದರೆ ಹೆಸರೇ ವಿವರಿಸುವಂತೆ ಅದರ ಮೂಲ ವಿಷಯ (ಭೂ + ಗೋಲ) ದುಂಡಗಿರುವ ಭೂಮಿಗೆ ಸೀಮಿತ. ಹೆಚ್ಚೆಂದರೆ ಅದು ಸೂರ್ಯಮಂಡಲದ ಪರಿಜ್ಞಾನವನ್ನು ಕೊಡಬಹುದು. ಖಗೋಲ (ಖ + ಗೋಲ) ಅದರ ಹೆಸರೇ ತಿಳಿಸುವಂತೆ ದುಂಡಗಿನ ಆಕಾಶದ ಕಲ್ಪನೆ; ಜ್ಞಾನ ನೀಡ

ಬಹುದು. ಜ್ಯೋತಿಶ್ಶಾಸ್ತ್ರವೂ ಒಂದು ವಿಜ್ಞಾನವೆಂದು ಭಾವಿಸಿದರೆ ಅದರ ಪರಿಮಿತಿಯೂ ನವಗ್ರಹಗಳಿಗೆ ಮಾತ್ರ ಸೀಮಿತವಾಗಬಹುದು. ಬಹುಶಃ ಈ ಶಾಸ್ತ್ರದ ಮೂಲ ಜ್ಯೋತಿ–ಸೂರ್ಯಸಿರಬಹುದು. ಒಂದು ವೇಳೆ ಈ ಜ್ಯೋತಿಯು ಪರಂಜ್ಯೋತಿಯಾಗಿದ್ದರೆ ಮಾತ್ರ ವಿಶ್ವದ, ಅಂದರೆ ಸೂರ್ಯಮಂಡಲದ ಪೂರ್ವದ ವಿಕಸನದ ಮಾರ್ಗವನ್ನು ಅರುಹಬಹುದು.

ಒಟ್ಟಿನಲ್ಲಿ ವಿಜ್ಞಾನವು ವಿಶ್ವದ ಆದಿಯ ಹಾಗೂ ಅದರ ಹೊರಗಿನ ವಲಯದ ಪರಿಜ್ಞಾನವನ್ನು ಅರಿಯದು. ಇಂದು ವಿಜ್ಞಾನವು ಎಷ್ಟೇ ಪ್ರಮಾಣದಲ್ಲಿ ಬೆಳವಣಿಗೆಯನ್ನು ಹೊಂದಿದ್ದರೂ, ಒಂದು ಗ್ರಹದಿಂದ ಮತ್ತೊಂದು ಗ್ರಹಕ್ಕೆ ಸ್ಪುಟ್ನಿಕ್ ಮುಂತಾದ ಸಾಧನಗಳಿಂದ ಜಿಗಿಯುವ ಸಾಮರ್ಥ್ಯಪಡೆದಿದ್ದರೂ, ಈಗಾಗಲೇ ಮಾನವರು ಚಂದ್ರಲೋಕದಲ್ಲಿ ಅಲೆದಾಡಿ ಅಲ್ಲಿನ ಕಲ್ಲುಗಳನ್ನು ಸೆರೆಹಿಡಿದುಕೊಂಡು ಬಂದಿದ್ದರೂ, ನಕ್ಷತ್ರಗಳ ನೆಲೆಗಳನ್ನು ಸಹ ಅರಿತಿದ್ದರೂ ಸಹ, ಇವೆಲ್ಲವನ್ನು ಮೀರಿ ಅದರ ಆಚೆ ಹಾಗೂ ಅದರ ಪೂರ್ವದ ಪರಿಸ್ಥಿತಿಯ ಬಗೆಗೆ ತಿಳಿಯಲಾರದಷ್ಟು ಅದು ಅಜ್ಞಾನಿಯಾಗಿರುವುದು. ವಿಜ್ಞಾನದ ಅಳವಿಗೆ ನಿಲುಕಲಾರದುದು ಆಧ್ಯಾತ್ಮಿಕ ಜ್ಞಾನಕ್ಕೆ ಮಾತ್ರ ನಿಲುಕುವದು. ವಿಜ್ಞಾನಕ್ಕಿಂತ ಆಧ್ಯಾತ್ಮಿಕ ಮೇಲೆಂಬುದು ಇಲ್ಲಿ ಸ್ಪಷ್ಟ. ಆಧ್ಯಾತ್ಮಿಕ—ಆದಿಯಿಂದ ವಿಜ್ಞಾನವು ಹೊರಹೊಮ್ಮಿದುದು ಸುಸ್ಪಷ್ಟ. ಜೀವ, ಜಗತ್ತು, ವಿಶ್ವಗಳಿಗಿಂತಲೂ ಪೂರ್ವದಲ್ಲಿ ಆದಿಯಾಗಿರುವ ದಿವ್ಯ ಆತ್ಮವೊಂದಿದೆ—ಎಂಬಂಶವನ್ನು ಆಧ್ಯಾತ್ಮಿಕವು ಸೂಕ್ಷ್ಮವಾಗಿ ತಿಳಿಸಿಹೇಳುವದು. ಆ ದಿವ್ಯಾತ್ಮವೇ ಪರಮಾತ್ಮ. ಅದುವೇ ದೃಶ್ಯವಾದ ಜೀವ, ಜಗತ್ತು, ವಿಶ್ವ ಹಾಗೂ ಅದೃಶ್ಯವಾದ ಇನ್ನೂ ಅವೆಷ್ಟೋ ಲೋಕಗಳಿಗೂ[೧] ಕಾರಣೀಭೂತವಾಗಿದೆಯಲ್ಲದೆ, ಅವೆಲ್ಲಕ್ಕೂ ಮೂಲಾಧಾರವಾಗಿದೆ. ಇದುವೆ ದೈವಿಕ ಸಿದ್ಧಾಂತ. ಸರ್ವಧರ್ಮಗಳೂ, ಇದನ್ನು ಒಪ್ಪುತ್ತಿವೆ. ಈ ದೈವಿಕ ಚಮತ್ಕಾರ ಯಾವ ರೀತಿಯಾಗಿ ಹಂತ ಹಂತವಾಗಿ ವಿಕಸನವಾಯಿತು ಎಂದು ಹೇಳುವಲ್ಲಿ ಸ್ಪಷ್ಟಪಡಿಸುವಲ್ಲಿ ಜಾಗತಿಕ ಧರ್ಮಗಳು, ಧರ್ಮಗ್ರಂಥಗಳು ಹಾಗೂ ಧರ್ಮಗುರುಗಳೂ ಸಹ ಹಿಂದೆ ಬಿದ್ದಿದ್ದಾರೆ. ಅಂದಬಳಿಕ ಬಡಪಾಯಿ ವಿಜ್ಞಾನಿ ಡಾರ್ವಿನ್ನನ ಪಾಡೇನು ? ಜ್ಞಾನಿ, ವಿಜ್ಞಾನಿ, ಇವೆಲ್ಲಕ್ಕಿಂತ ಮಿಗಿಲಾಗಿ ಆತ್ಮಜ್ಞಾನಿಯಾಗಿರುವ ಬಸವಣ್ಣ ಈ ದಿಶೆಯಲ್ಲಿ ತನ್ನದೇ ಆದ ಕೊಡುಗೆ

೧. ತಾಯಿ ಯಶೋದೆ ಬಾಲಕೃಷ್ಣನ ಬಾಯಲ್ಲಿ–ಹದಿನಾಲ್ಕು ಲೋಕಗಳನ್ನು ಕಂಡಿದ್ದುಸುಳ್ಳಲ್ಲ. ಪೌರಾಣಿಕ ಸಾಹಿತ್ಯದಲ್ಲಿ ಬರುವ ಅತಳ, ವಿತಳ, ಪಾತಾಳ, ಮಹಾತಳ, ತಳಾತಳ—ಮುಂತಾದ ಲೋಕಗಳು ಕೇವಲ ಕಾಲ್ಪನಿಕಗಳಲ್ಲ. ಹದಿನಾಲ್ಕು ಲೋಕಗಳಲ್ಲಿ —ಸಪ್ತಪಾತಾಳಗಳು ಹಾಗೂ ಸಪ್ತ ಮೇಲುಲೋಕಗಳು – ಚಂದ್ರಶೇಖರಪ್ಪ ರಾಚಪ್ಪ ಪಾಲಿಶೆಟ್ಟರ, ವರ್ಗದರ್ಪಣ, ಅಪ್ರಕಟಿತ ಗ್ರಂಥ, ಧುಮ್ಮವಾಡ (ತಾ: ಕಲಘಟಗಿ, ಜಿ. ಧಾರವಾಡ)

ಯನ್ನು ಕೊಟ್ಟಿರುವ ದೈವಿಕ ಸಿದ್ಧಾಂತವನ್ನು ವಿಕಸನೋಪಾದಿಯಲ್ಲಿ ತನ್ನದೇ ಆದ ಸಿದ್ಧಾಂತದ ಆಧಾರದಮೇಲೆ ವಿವರಿಸಿರುವನು.

ಜೀವಕ್ಕಿಂತ ಮೊದಲು ಜಗತ್ತು ಹಾಗೂ ಜಗತ್ತಿಗಿಂತ ಮೊದಲು ವಿಶ್ವವಿತ್ತೆಂಬುದು ಸರ್ವರಿಗೂ ವಿದಿತವಾದ ವಿಷಯ. ಅದನ್ನು ಸದ್ಯದ ವಿಜ್ಞಾನಗಳು ವಿವರಿಸುತ್ತವೆ. ಆದರೆ ವಿಶ್ವಕ್ಕಿಂತ ಮೊದಲು ಏನಿತ್ತು? ಇದಕ್ಕೆ ವಿಜ್ಞಾನ ಸ್ಪಷ್ಟ ಉತ್ತರ ಕೊಡಲಾರದು. ಏಕೆಂದರೆ ಅದು ಅದರ ಆಳವಿಗೆ ಮೀರಿದ್ದು. ಇದಕ್ಕೆ ಕೇವಲ ಆತ್ಮಜ್ಞಾನಿಗಳು ಮಾತ್ರ ಉತ್ತರಿಸಬಹುದು. ಗ್ರೀಕ ತತ್ತ್ವಜ್ಞಾನಿ ಪ್ಲೇಟೋ (ಕ್ರಿ. ಶ. ಪೂ. ೪೨೯-೩೪೭) ತನ್ನ "ರಿಪಬ್ಲಿಕ್"ದಲ್ಲಿ–ದೃಶ್ಯ ಜಗತ್ತಲ್ಲದೆ, ಅದೃಶ್ಯ ಜಗತ್ತೊಂದಿದೆ ಎಂದು ಹಲವಾರು ಸಲ ಪ್ರತಿಪಾದಿಸಿರುವನು. ದೃಶ್ಯಜಗತ್ತನ್ನು ರವಿಯು ಆಳುವಂತೆ ಅದೃಶ್ಯ ಜಗತ್ತನ್ನು ಒಂದು ಸತ್ಯವು ಆಳುತ್ತದೆ ಎಂದು ಆತನು ವಿವರಿಸುವನು. ಆದರೆ ಆ ಅದೃಶ್ಯ ಜಗತ್ತಿನ ವಿಕಸನ ಮಾರ್ಗವನ್ನು ಆತ ಅರಿಯನು. ಮಿಡಿಗಿಂತ ಇಡಿಯು ಮೊದಲು ಎಂಬುದು ಆತನ ತತ್ತ್ವ. ಜೀವವೆಂಬ ಮಿಡಿ– ನಂತರದಲ್ಲಿ ಉದ್ಭವಿಸಿದೆ. ಇಡಿಯು ಮುಖಾಂತರ ಈತನ ಶಿಷ್ಯ ಅರಿಸ್ಟಾಟಲನ್ನು (ಕ್ರಿ. ಶ. ಪೂ. ೩೮೪-೩೨೨) ತನ್ನ "ಪೊಲಿಟಿಕ್ಸ್" ಮತ್ತು "ಎಥಿಕ್ಸ"ಗಳಲ್ಲಿ ದೇವ ಜಗವನ್ನು ನಡೆಸುವನು ಎಂದು ಹೇಳುವನು. ಈ ಗ್ರೀಕ ತತ್ತ್ವಜ್ಞಾನಿಗಳ ಪ್ರಕಾರ ಆದಿಯಾಗಿದ್ದ ಶಕ್ತಿಯೊಂದು ಇಷ್ಟೆಲ್ಲ ವಿಕಸನಕ್ಕೂ ಕಾರಣವಾಗಿದೆ ಎಂಬುದು ಸ್ಪಷ್ಟ. ಆದರೆ ಇವರೀರ್ವರು ಆ ಶಕ್ತಿಗೆ ತಮ್ಮದೇ ಆದ ಹೆಸರಿಟ್ಟಿಲ್ಲ. ಅಥವಾ ಅದರ ಆಳವು ಅವರಿಗೂ ತಿಳಿದಿಲ್ಲ. ತತ್ತ್ವಜ್ಞಾನಿ ಬಸವಣ್ಣ ವಿಶ್ವದ ಹಿಂದಿನ ಆದಿ ಶಕ್ತಿಗಳೆಲ್ಲವನ್ನೂ ತಿಳಿಯಲು ಪ್ರಯತ್ನಿಸಿರುವನಲ್ಲದೆ ಅವೆಲ್ಲಕ್ಕೂ ತನ್ನದೇ ಆದ ಹೆಸರುಗಳನ್ನು ಸಹ ಕೊಟ್ಟಿರುವನು.

ಈ ವಿಕಸನದ ಆದಿ ಹೇಗೆ ಪ್ರಾರಂಭವಾಯಿತು ? ಆದಿಯಲ್ಲಿ ಏನಿತ್ತು? ಇದಕ್ಕೆ ಮುಂದೆ ಆಧ್ಯಾತ್ಮಿಗಳು ಹಾಗೂ ತತ್ತ್ವಜ್ಞಾನಿಗಳು ತಮ್ಮದೇ ಆದ ರೀತಿಯಲ್ಲಿ ಹಲವು ಪ್ರಕಾರವಾಗಿ ಉತ್ತರಿಸುವರು. ಗ್ರೀಕ ತತ್ತ್ವಜ್ಞಾನಿ ಪ್ಲೇಟೋ ಆದಿಯಲ್ಲಿ ಸತ್ಯವಿತ್ತು ಮುಂದೆ ಅದರಿಂದ ವಿಕಸನ ಪ್ರಾರಂಭವಾಯಿತು ಎಂದು ಹೇಳಬಹುದು. ಇನ್ನು ಸತ್ಯ "ಅಂದರೆ ಏನು? ಎಂದು ಪುನಃ ಪ್ರಶ್ನಿಸಿದಾಗ ಆತನೂ ಕಕ್ಕಾ ಬಿಕ್ಕಿಯಾಗಬಹುದು. ಒಂದು ರೀತಿಯಲ್ಲಿ ಅರಿಸ್ಟಾಟಲನು ನೇರವಾಗಿ ಉತ್ತರಿಸಬಹುದು—"ಆದಿಯಲ್ಲಿ ದೇವನಿರುವ, ಅವನಿಂದ ಮುಂದೆ ವಿಕಸನ" ಎಂದು. ಇಲ್ಲಿ ದೇವ ಸರ್ವಶಕ್ತ, ಸರ್ವವು ಅವನಲ್ಲಿ ಅಡಗಿದೆ. ಆತ ಸ್ವಯಂಭು, ನಿರಾಲಂಬ ಮುಂತಾದ ಸಾಕಷ್ಟು ವಿವರಣೆಯನ್ನು ಭಾರತದ ಆಧ್ಯಾತ್ಮಿಕ ಸಾಹಿತ್ಯ ಒದಗಿಸು

ವದು.[೧] ಈ ದೇವಭಾವ ಅಥವಾ ಈಶ್ವರೀ ಶಕ್ತಿಯನ್ನು ಗ್ರಹಿಸುವವರಿಗೆ ಆದಿಯಿಂದ ಅಂತ್ಯದವರೆಗೂ ಆ ಶಕ್ತಿಯ ವಿಕಸನ ಭಾವವು ತಂತಾನೆಯೇ ಗೋಚರಿಸುವದು. ಈ ದೇವಭಾವವನ್ನು ಅಷ್ಟೊಂದು ಬೇಗ ಒಪ್ಪದ ವೈಜ್ಞಾನಿಕ ಹಾಗೂ ವ್ಯಾವಹಾರಿಕ ದೃಷ್ಟಿಯುಳ್ಳವರ ದೃಷ್ಟಿಯಿಂದ ವಿಚಾರಿಸಿದರೆ ಬೇರೆ ಹಲವು ರೀತಿಯಲ್ಲಿ ಈ ಆದಿಯನ್ನು ಶೋಧಿಸಬಹುದು. ಹಲವರ ಪ್ರಕಾರ "ಆದಿಯಲ್ಲಿ ಏನೂ ಇರಲಿಲ್ಲ. ಅದನ್ನೇ ಹಲವರು "ಏನಿತ್ತೋ ಗೊತ್ತಿಲ್ಲ" ಎನ್ನಬಹುದು. ಒಂದು ರೀತಿಯಲ್ಲಿ ಇವರು ಜ್ಞಾನಿಗಳು, ಶ್ರೇಷ್ಠ. ಕಾರಣ ಅವರಿಗೆ ತಮ್ಮ ಅಜ್ಞಾನದ ಅರಿವಿದೆ. ಇನ್ನು ಕೆಲವರು "ದೇವರಿಗೇ ಗೊತ್ತು" ಎನ್ನಬಹುದು. ಒಂದು ದೃಷ್ಟಿಯಲ್ಲಿ ಇವರು ಅಧ್ಯಾತ್ಮಿಗಳು, ದೈವಿಕವಾದಿಗಳು.

ಗ್ರೀಕ ತತ್ತ್ವಜ್ಞಾನಿ ಅನಾಕ್ಸಿಮ್ಯಾಂಡರನ ಪ್ರಕಾರ ಆದಿಯಲ್ಲಿ "ಅನಂತ" ವಾಗಿತ್ತು. ಹಿಂದೂ ಸಾಹಿತ್ಯದಲ್ಲಿ ಈ ಮಾತು ವಿಪುಲವಾಗಿಬಂದಿದೆ. ಆ ಅನಂತನೇ ದೇವ; ದೇವನೇ ಅನಂತ. ಇದಕ್ಕೆ ಆದಿ, ಅಂತ್ಯವೆಂಬುವಿಲ್ಲ.[೨] ಮತ್ತೊಬ್ಬ ಗ್ರೀಕ ತತ್ತ್ವಜ್ಞಾನಿ ಅನಾಕ್ಸಿಮೆನಸ್‌ನ ಪ್ರಕಾರ ಆದಿಯಲ್ಲಿ ಗಾಳಿಯಿತ್ತು. ಅದೇ ಹಿಂದೂ ಸಾಹಿತ್ಯದಲ್ಲಿ ವರುಣ, ಒಬ್ಬ ದೇವ. ಎಲ್ಲ ಹಿಂದೂ ಧರ್ಮವಾದಿಗಳ ಪ್ರಕಾರ ಆದಿಯಲ್ಲಿ 'ಓಂ'ಕಾರ ನಾದವಿತ್ತು.[೩] ಈ ನಾದ ಒಬ್ಬ ವ್ಯಕ್ತಿಯದೋ, ಒಬ್ಬ ಶಕ್ತಿಯದೋ, ಅಥವಾ ಗಾಳಿಯದೋ? ಇದಕ್ಕೆ ಮೂಲ ಒಂದಿದ್ದರೆ ಅದೇ ಆದಿಯಾಗುವದು. ಆ ನಂತರ ಅದರಿಂದ ನಾದ–ಓಂಕಾರ.

ಹಲವು ಆಧ್ಯಾತ್ಮವಾದಿಗಳ ಪ್ರಕಾರ "ಆದಿ ಶೂನ್ಯವಾಗಿತ್ತು"–ಎಂಬುದು. ಈ ಶೂನ್ಯ ಚಿಕ್ಕದೋ, ದೊಡ್ಡದೋ, ಯಾವ ಬಣ್ಣ? ಶೂನ್ಯ ಇದರರ್ಥ ಏನೂ ಇಲ್ಲವೆಂದೂ ಆಗಬಹುದು. ಏನೂ ಇಲ್ಲವೆಂಬುದು ಅಜ್ಞಾನ. ಇಲ್ಲದ್ದರಿಂದ ವಿಕಸನವಾಗುವುದಿಲ್ಲ. ಏನಾದರೂ ಇದ್ದದ್ದರಿಂದ ವಿಕಸನವಾಗುವದು. ಅಂದಮೇಲೆ ಆದಿಯಲ್ಲಿ ಏನಾದರೂ ಇರಲೇಬೇಕು. ಏನದು? ಆ ಶೂನ್ಯ ಮುಂದಿನ ವಿಕಸನದ ಬೀಜವಾಗಿರಬಹುದು, ಅಥವಾ ಪ್ಲೇಟೋನ ಸಿದ್ಧಾಂತದ ಮಿಡಿಯ ಮೊದಲಿನ ಇಡಿಯಾಗಿರಬಹುದು. ವೀರಶೈವ ಸಿದ್ಧಾಂತದಲ್ಲಿ ಶೂನ್ಯಕ್ಕೆ ಹೆಚ್ಚಿನ ಸ್ಥಾನವಿದೆ.[೪]

---

೧. "ರೂಹಿಲ್ಲದ, ಕೇಡಿಲ್ಲದ ಚಲುವ...ಎಡೆಯಿಲ್ಲದ, ಕಡೆ ಇಲ್ಲದ ನಿಸ್ಸೀಮ..." ಅಕ್ಕಮಹಾದೇವಿ.

೨. "ಜಗದಗಲ, ಮುಗಿಲಗಲ, ಮಿಗೆಯಗಲ ನಿಮ್ಮಗಲ..." ಬಸವಣ್ಣ.

೩. ಓಂ=ಅ+ಉ+ಮ. ಪ್ರಣವ ಸ್ವರೂಪ.

೪. ಶೂನ್ಯ ಸಿಂಹಾಸನ. ಗಣಿತದಲ್ಲಿ—ಶೂನ್ಯದ ಪಾತ್ರ ಹಿರಿದು. ಒಂದು ಶೂನ್ಯ ಹಾಗೂ ಮತ್ತೊಂದು ಶೂನ್ಯದ ಯಾವುದೇ ಸಂಬಂಧವು ಶೂನ್ಯವೇ ಆಗುವುದು. ಪೂರ್ಣವಿರಾಮದ ಮುಖಾಂತರ ಶೂನ್ಯವು ಪರಿಪೂರ್ಣತೆಯನ್ನೂ ಸೂಚಿಸುವುದು. ಅದುವೇ ಮುಕ್ತಿ, ಐಕ್ಯ.

ಅಲ್ಲಮಪ್ರಭುದೇವರ ವಚನ. "ಪೂರ್ಣಾತ್ ಪೂರ್ಣಮಿದಂ...ಪೂರ್ಣಮುದಚ್ಯತೆ" ಅಂದಮೇಲೆ ಶೂನ್ಯ ಸಾಮಾನ್ಯವಲ್ಲ. ಅದು ಪರಿಪೂರ್ಣತೆಯನ್ನೂ ತೋರಿಸುವುದು. ಶೂನ್ಯದಲ್ಲಿ ಎರಡು ವಿಧ- ಅವಲಂಬಶೂನ್ಯ ನಿರಾಲಂಬಶೂನ್ಯ. ಅವಲಂಬನವು ಶೂನ್ಯಕ್ಕಿಂತ ಆದಿಯನ್ನು ತೋರಿಸುವುದು. ಅದು ಯಾವುದು? ನಿರಾಲಂಬನ ಶೂನ್ಯ ಸ್ವತಃ ಆದಿಯಾಗಬಹುದು. ವೀರಶೈವ ಧರ್ಮದ ಲಿಂಗವು ಶೂನ್ಯದ ದ್ಯೋತಕ.

ಈಶ್ವರೀಯ ಬ್ರಹ್ಮಕುಮಾರಿಯವರ ಪ್ರಕಾರ "ಜ್ಯೋತಿ" ಯು ಆದಿಯು ಆ ಬೆಳಕು ಮುಂದಿನ ವಿಕಸವನ್ನು ತೋರಿಸಿತು. ವ್ಯಾವಹಾರಿಕ ದೃಷ್ಟಿಯಿಂದ ಜ್ಯೋತಿಗೆ ಪಣತಿ, ತೈಲ, ಬತ್ತಿ ಹಾಗೂ ಅದಕ್ಕೆ ಅಗ್ನಿಸ್ಪರ್ಶದ ಅವಶ್ಯಕತೆ ಇದೆ. ಇವೆಲ್ಲವು ಜ್ಯೋತಿಗೆ ಮೂಲ, ಆದಿಯಾಗುವವು. ಈ ಪಣತಿಯು ಅವಲಂಬಿತವಾದರೆ ಆ ಆಧಾರ ಆದಿಯಾಗುವುದು. ಈ ಜ್ಯೋತಿ ಪರಂಜ್ಯೋತಿ ಯಾಗಿದ್ದರೆ ಅದು ಸಾಧನ ರಹಿತ, ನಿರಾಲಂಬ ದೇಹದಿಂದ ಜೀವ ಬಿಡುಗಡೆ ಯಾಗುವುದನ್ನು ಚಿತ್ರಿಸುವಾಗ ಜ್ಯೋತಿಯು ದೇಹದಿಂದ ಹೊರಹೋಗುವುದರ ಮುಖಾಂತರ ತೋರಿಸಲಾಗುವುದು. ಅದಕ್ಕೆ ಯಾವ ಆಧಾರವೂ ಇಲ್ಲ. ಜೀವ, ಜಗತ್ತು, ಈಶ್ವರರ ಸಂಬಂಧವನ್ನು ಈ ಜ್ಯೋತಿಯು ಸಂಕಲ್ಪಿಸುವುದು.

ಈ ಸಂಬಂಧ ಅಕ್ಕ ಮಹಾದೇವಿಯ ಕೊಡುಗೆ ಹೆಚ್ಚು ಆಧ್ಯಾತ್ಮಿಕ, ಅಷ್ಟೇ ವೈಜ್ಞಾನಿಕ ಹಾಗೂ ವ್ಯಾವಹಾರಿಕ. ಅವಳ ಪ್ರಕಾರ "ಬಯಲು" ಆದಿಯೂ ಹೌದು ಅಂತ್ಯವೂ ಹೌದು. ಅವಳೇ ಹೇಳುವಂತೆ ''ಬಯಲು ಬಯಲೊಳಗೆ ಬಯಲಾದಂತೆ''. ಈ ಮೂರು ಶಬ್ದಗಳಲ್ಲಿ ಸಾಕಷ್ಟು ಆಳವಾದ ಅರ್ಥವಿದೆ. ಅಕ್ಕನು ಈ ಮಾತನ್ನು ಆಡುವ ಸಂದರ್ಭವನ್ನು ಪರೀಕ್ಷಿಸಿದರೆ ಮೂರು ಶಬ್ದ (ಬಯಲು)ಗಳಿಗೆ ಮೂರು ಭಿನ್ನ ಅರ್ಥಗಳು ಸ್ಪಷ್ಟವಾಗಿ ಗೋಚರಿಸುವವು. "ಬಯಲು (ಆತ್ಮ) ಬಯಲೊಳಗೆ (ಪರಮಾತ್ಮ), ಬಯಲಾದಂತೆ" (ಐಕ್ಯ). ಆದಿ, ಅಂತ್ಯವನ್ನೂ ಈ ಅಕ್ಕನ ಮಾತು ಸ್ಪಷ್ಟೀಕರಿಸುವದು. ಆದಿಯಲ್ಲಿಯೂ ಬಯಲು ಅಂತ್ಯದಲ್ಲೂ ಬಯಲು.೧ ಒಂದು ರೀತಿ ಮಧ್ಯದ ಮಾಯೆಯೂ ಬಯಲೇ. ಬಯಲು ನಿರ್ಜೀವವಲ್ಲ. ಬಯಲು ಬೀಜ. ಬಯಲು ಪ್ಲೇಟೋನ ಇಡಿ. ಅದರಲ್ಲಿ ಜೀವ, ದೇವ ವಿಶ್ವ ಎಲ್ಲವೂ ಇದೆ. ಅದರಲ್ಲಿ ಮಿಡಿಯುವರೆಗಿನ ವಿಕಸನದ ತತ್ತ್ವವಡ ಗಿದೆ. ಈ ಬಯಲಿನಲ್ಲಿ ಪಂಚಮಹಾಭೂತಗಳಿವೆ. ಜೀವ, ಜಗತ್ತು, ವಿಶ್ವ ಮುಂತಾ ದವುಗಳೆಲ್ಲವೂ ಒಮ್ಮೆ ಈ ಬಯಲಿನಲ್ಲಿಯೇ ಲೀನವಾಗುವವು. ಅದುವೇ ಅಂತ್ಯ.

ಈ ವಿಕಸನ ಸಿದ್ಧಾಂತದ ಆದಿಯ ಬಗೆಗೆ ಬಸವಣ್ಣನಷ್ಟು ಸ್ಪಷ್ಟವಾಗಿ ಯಾವ ಜ್ಞಾನಿ, ವಿಜ್ಞಾನಿ, ತತ್ತ್ವಜ್ಞಾನಿಯೂ ಹೇಳಿಲ್ಲ. ಆತನ ವಿಚಾರವು

---

೧. "ಬಯಲಿನಿಂದ ರೂಪ, ರೂಪದಿಂದ ಬಯಲು"— ಅಲ್ಲಮ ಪ್ರಭು. ಆತನೇ ಹೇಳುವಂತೆ ಬಯಲಿನಿಂದ ರೂಪವ ಮಾಡುವವನು ಗುರು. ರೂಪವನ್ನು ಬಯಲಿಗೆ ಮುಟ್ಟಿಸುವ ಪಥಿಕ ಜಂಗಮ.

ಗ್ರಾಹ್ಯವಿರಲಿ, ಅಗ್ರಾಹ್ಯವಿರಲಿ ಆದರೆ ಆತನು ತನ್ನ ಸ್ಪಷ್ಟ ನಿಲುವು, ಸಿದ್ಧಾಂತವನ್ನು ಹೇಳುವದನ್ನು ಯಾರಾದರೂ ಮೆಚ್ಚತಕ್ಕುದು. ಇದಲ್ಲದೆ ಅವನು ಹೇಳುವ ನೇರ, ಸ್ಪಷ್ಟ ಹಾಗೂ ಉಚಿತವಾದ ಧಾಟಿಯನ್ನು ನೋಡಿದರೆ ಸ್ವತಃ ತಾನು ಕಂಡುಂಡ ಅನುಭವವನ್ನು ತನ್ನ ವಚನದಲ್ಲಿ ಹೃದಯ ಬಿಚ್ಚಿ ತೆರೆದಿಟ್ಟಂತಿರುವದು:

"ಆದಿಯಲೊಬ್ಬ ಶರಣ ಮೂರ್ತಿಯಾದ"

ವೀರಶೈವ ಸಾಹಿತ್ಯದಲ್ಲಿ, ಬಸವ ಸಾಹಿತ್ಯದಲ್ಲಿ "ಶರಣ" ನಿಗೆ ವಿಶಿಷ್ಟ ಸ್ಥಾನವಿದೆ. ಬಸವಣ್ಣನವರ ದೃಷ್ಟಿಯಲ್ಲಿ ಶರಣನು ಅನಂತ, ಅಪಾರ, ಸರ್ವ ವ್ಯಾಪಿಯಾಗಿರುವ ಪರಮಾತ್ಮನೂ ಹೌದು ಹಾಗು ಆ ಶಕ್ತಿಗೆ ಸರ್ವರೀತಿಯಿಂದಲೂ ಶರಣು ಹೋದ ಆದರ್ಶ ಭಕ್ತನೂ ಹೌದು. ಆದ್ಯಂತವಾಗಿ ಆತನೇ ಇರುವ ಎನ್ನುವುದಕ್ಕೆ ಈ ಶರಣ ಭಾವವೇ ಆಧಾರ. ಆದಿಯಲ್ಲಿ ಮೂರ್ತಿಯಾದ ಈ ಶರಣ ಪರಮಾತ್ಮನ ವಿರಾಟ ರೂಪ. ಆತನ ಶ್ರೀ ಮುಕುಟ ಬ್ರಹ್ಮಾಂಡದಿತ್ತತ್ತ. ಆತನ ಶ್ರೀ ಪಾದಗಳು ಪಾತಾಳದಿಂದತ್ತತ್ತ. ಇಲ್ಲಿ ವಿಶ್ವದಾಚೆಗೆ ಬ್ರಹ್ಮಾಂಡ ಮುಂತಾದ ಇನ್ನೂ ಅನೇಕ (ಸ್ವಪ್ನ) ಲೋಕಗಳಿವೆ ಎನ್ನುವದು ಸ್ಪಷ್ಟ. ಅದೇ ರೀತಿ ಪಾತಾಳದಿಂದತ್ತತ್ತ ಇನ್ನೂ ಅನೇಕ (ಸ್ವಪ್ನ) ಲೋಕಗಳಿವೆ ಎನ್ನುವುದೂ ಸ್ಪಷ್ಟ. ಆ ಎಲ್ಲ (ಗಳ) ಲೋಕಗಳನ್ನು ವ್ಯಾಪಿಸಿ ಅಥವಾ ಅವೆಲ್ಲವನ್ನೂ ತನ್ನೊಳಗೆ ಅಡಗಿಸಿಕೊಂಡವನು ಈ ದಿವ್ಯ ಪುರುಷ ಶರಣ. ಶರಣನ ಭಕ್ತಿಯು ಪರಮಾತ್ಮನ ಶಕ್ತಿಗೇ ಆಧಾರನೆಂಬಂಶವನ್ನು ಬಸವಣ್ಣ ತನ್ನ ಹಲವು ವಚನಗಳಲ್ಲಿ ವಿಶದೀಕರಿಸಿರುವನು.[೯] ಅನಂತ ಸರ್ವವ್ಯಾಪ್ತಿ, ಸರ್ವಶಕ್ತನನ್ನು ಶರಣ ತನ್ನ ಮನದ ಕೊನೆಯಲ್ಲಿ ಹಿಡಿದಿಡಬಲ್ಲ. ಶರಣ ಅಂಥ ಆದರ್ಶ ಭಕ್ತನೂ ಹೌದು. ಪರಮಾತ್ಮನಿಂದ ಆತ್ಮ, ಆತ್ಮ ಪುನಃ ಪರಮಾತ್ಮ. ಶಿವಯೋಗಿಯಿಂದ ಯೋಗಿ, ಯೋಗಿ ಪುನಃ ಶಿವಯೋಗಿ. ಅಂಥ ಶರಣರನ್ನು ನೆನೆಯುವ ಹಂಬಲ, ಚಿಂತೆ ಬಸವಣ್ಣನದು.[೧೦] ಒಟ್ಟಿನಲ್ಲಿ ಬಸವಣ್ಣನ ಪ್ರಕಾರ

---

೯. "ಸಮುದ್ರ ಘನವೆಂಬೆನೆ ಧರೆಯ ಮೇಲಡಗಿತ್ತು.
ಧರೆಯು ಘನವೆಂಬೆನೆ ಆದಿಶೇಷನ ಫಣೆಯ ಮೇಲಡಗಿತ್ತು.
ಆದಿಶೇಷನು ಘನವೆಂಬೆನೆ ಪಾರ್ವತಿಯ ಕಿರುಕುಣಿಕೆಯುಂಗುರದಲ್ಲಡಗಿತ್ತು.
ಪಾರ್ವತಿಯು ಘನವೆಂಬೆನೆ ಪರಶಿವನ ತೊಡೆಯ ಮೇಲಿರ್ಪಳು.
ಪರಶಿವನು ಘನವೆಂಬೆನೆ ನಮ್ಮ ಕೂಡಲ ಸಂಗನ ಶರಣರ ಮನದ
ಕೊನೆಯಲ್ಲಿ ಅಡಗಿರ್ಪ"

—ಬಸವಣ್ಣ

೧೦. "ಚಕೋರಂಗೆ ಚಂದ್ರಮನಾ ಬೆಳಗಿನ ಚಿಂತೆ.
ಅಂಬುಜಕೆ ಭಾನುವಿನ ಉದಯದ ಚಿಂತೆ.
ಭ್ರಮರಂಗೆ ಪರಿಮಳದ ಬಂಡುಂಬುವ ಚಿಂತೆ.
ಎನಗೆ ಎಮ್ಮ ಕೂಡಲ ಸಂಗನ ಶರಣರ ನೆನೆವ ಚಿಂತೆ."

—ಬಸವಣ್ಣ

ವಿಕಸನದ ಆದಿ ಶರಣ. ಆತ ತಂತಾನೆ ಮೂರ್ತಿಯಾದ. ಅಲ್ಲಿಂದ ಮುಂದೆ ವಿಕಸನ ಪ್ರಾರಂಭವಾಯಿತು. ಇನ್ನು ಮುಂದಿನ ಹಂತ ಯಾವುದು?

ಆ ಶರಣನ ಮೂರ್ತಿಯಿಂದ "ಸದಾಶಿವನಾದ."

ಒಂದು ಜ್ಯೋತಿ ಮತ್ತೊಂದನ್ನು ಬೆಳಗಿಸುವಂತೆ ಶರಣನಿಂದ ಸದಾಶಿವನು ಹೊರ ಹೊಮ್ಮುವ ಚಿತ್ರಣವಿಲ್ಲಿದೆ. "ಸದಾಶಿವ" ಒಬ್ಬ ದೇವ, ಅಥವಾ ಶಕ್ತಿ. ಹೆಸರೇ ಸೂಚಿಸುವಂತೆ ಸದಾಶಿವನುಯ, ಸಂತಸ. ಆದಕ್ಕಂತಲೇ ಈತನ ಹೆಸರಿಡುವ ವಾಡಿಕೆ. "ಸದುವಿನಯವೇ ಸದಾಶಿವನ ಒಲುಮೆ". ಇದರ ಮುಂದಿನ ವಿಕಸನದ ಹಂತ ಬಸವಣ್ಣ ಮುಂದುವರಿಯುವಂತೆ

"ಆ ಸದಾಶಿವನ ಮೂರ್ತಿಯಿಂದ ಜ್ಞಾನಶಕ್ತಿಯಾದಳು"

ಈ ಮೂರನೆಯ ಹಂತದಲ್ಲಿ ಪ್ರಥಮವಾಗಿ ಶಕ್ತಿಯ, ಹೆಣ್ಣಿನ ಪಾತ್ರ ಬರುವದು. ಇದರ ಪೂರ್ವದ ಎರಡೂ ಹಂತಗಳಲ್ಲಿ ಶಿವಶಕ್ತಿಯರಿಬ್ಬರೂ ಒಗ್ಗೂಡಿ ಇದ್ದುದು ಸ್ಪಷ್ಟ.[೧೨] ಪೂರ್ವದ ಎರಡೂ ಹಂತಗಳಲ್ಲಿ ಹೆಣ್ಣಿನ ಅಂಶ ಬೀಜೋಪಾದಿಯಲ್ಲಿ ಅಡಗಿದ್ದರೂ ಬಾಹ್ಯವಾಗಿ ಗೋಚರಿಸುವುದು ಗಂಡುರೂಪ, ಪುರುಷ. ಈ ರೀತಿ ಬಸವನ ಸಿದ್ಧಾಂತದಲ್ಲಿ ಪುರುಷ ಆದಿ–ಆ ಮೇಲೆ ಮೂರನೆಯ ಹಂತದಲ್ಲಿ ಶಕ್ತಿ, ಹೆಣ್ಣು ಬರುವಳು. ಇಲ್ಲಿ ಪುರುಷನಿಂದ ಪ್ರಕೃತಿ. ವಿಕಸನ ಸಿದ್ಧಾಂತವು ಈ ರೀತಿ ಪುರುಷ ಪ್ರಧಾನತೆಯನ್ನು ಸ್ಪಷ್ಟೀಕರಿಸುವದು. ಈ ಮಾತನ್ನು ಇಂದಿಗೂ ಸದ್ಯದಲ್ಲಿ ಜಾಗತಿಕವಾಗಿ ಸಮಾಜದಲ್ಲಿ ಕಾಣುವೆವು. ಇದು ಈಶ ಸೃಷ್ಟಿ; ಮಾನವ ಸೃಷ್ಟಿಯಲ್ಲ.

ಸದಾಶಿವ ಮತ್ತು ಜ್ಞಾನಶಕ್ತಿ ಇವರ ನಡುವಿನ ಸಂಬಂಧ ಎಂಥದು? ಅವನಿಂದ ಅವಳು ಬಂದಿರುವುದರಿಂದ, ಅವನು ತಂದೆ ಅವಳು ಮಗಳು. ಬಸವಣ್ಣನ ಈ ವಿಕಸನದ ಮೂಲಕ ಈ ರೀತಿ ಅರ್ಥೈಸಿದರೆ ಪ್ರಥಮತಃ ಕಾಣುವ ತಂದೆ–ಮಗಳ ಸಂಬಂಧ. ಈ ಪೂರ್ವದಲ್ಲಿ ಶರಣ ಮತ್ತು ಸದಾಶಿವನ ಸಂಬಂಧ ಪ್ರಥಮದ ತಂದೆ—ಮಗನ ಸಂಬಂಧ. ಈ ಪ್ರಥಮ ಮೊಮ್ಮಗಳಿಗೆ ಶರಣ ಪ್ರಥಮ ಅಜ್ಜ. ಆದರೆ ವಿಕಸನವಾದಂತೆ—ಸಂಬಂಧ ವಿಕೃತಿಹೊಂದುತ್ತದೆ.

"ಆ ಸದಾಶಿವಂಗೆ ಜ್ಞಾನಶಕ್ತಿಗಿಬ್ಬರಿಗೆಯೂ ಶಿವನಾದ"

ಪೂರ್ವದ ತಂದೆ ಮಗಳು ನಂತರದಲ್ಲಿ ಗಂಡ ಹೆಂಡಿರ ಪಾತ್ರವಾಡಿದಂತಿದೆ ಈ ವಿಕಸನದ ಮಾರ್ಗದಲ್ಲಿ. ಹಾಗಿದ್ದರೆ ಇವರೇ ಪ್ರಥಮ ದಂಪತಿಗಳು. ಒಂದು ರೀತಿಯಲ್ಲಿ ಇದು ಮಾರ್ಮಿಕವಾಗಿದೆ. ಪ್ರತಿಯೊಬ್ಬ ಗಂಡ ಸದಾಶಿವನಾಗಿರಬೇಕು. ಪ್ರತಿಯೊಬ್ಬ ಹೆಂಡತಿ "ಜ್ಞಾನಶಕ್ತಿ" ಯಾಗಿರಬೇಕು. ಗಂಡ ಹೆಂಡತಿಯನ್ನು

೧೨. ಶಿವನು ಅರ್ಧನಾರಿ ನಟೇಶ್ವರ.

ಮಗಳಂತೆ ಸಲುಹಬೇಕು ಹಾಗೂ ಹೆಂಡತಿಯಾದವಳು ಗಂಡಸಿಗೆ ತಂದೆಯ ಸಮಾನ ಮಾನ ಮರ್ಯಾದೆ ಕೊಡಬೇಕು. ಇದೆಲ್ಲ ನಮ್ಮ ಲೌಕಿಕ ಪ್ರಪಂಚದ ಸಂಬಂಧಗಳು, ಇಚ್ಛೆಗಳು. ಅವೇ ನಿಯಮಗಳನ್ನು ಈ ಅಲೌಕಿಕ ದೇವತೆಗಳಿಗೆ ಅನ್ವಯಿಸಬಹುದೇ ? ಅದೇನೇ ಇದ್ದರೂ ಸದಾಶಿವ ಮತ್ತು ಜ್ಞಾನಶಕ್ತಿಗಿಬ್ಬರಿಗೆಯೂ ಶಿವ ಮಗನಾದ. ಇಲ್ಲಿ ಲೌಕಿಕದ ಒಂದು ಪ್ರಥಮ ಕುಟುಂಬವನ್ನು ಕಾಣಬಹುದು.

ಸಾಮಾನ್ಯವಾಗಿ ಪ್ರಚಲಿತದಲ್ಲಿ ಸದಾಶಿವ ಮತ್ತು ಶಿವರಲ್ಲಿ ಭಿನ್ನತೆಯನ್ನು ಕಾಣದಿದ್ದರೂ–ಬಸವಣ್ಣನ ಸಿದ್ಧಾಂತದಲ್ಲಿ ಅವರಿಬ್ಬರೂ ಸ್ಪಷ್ಟವಾಗಿ ಭಿನ್ನರು. ಮೊದಲಿಗನು ತಂದೆ, ಎರಡನೆಯವನು ಅವನ ಮಗ. ಶಿವನಿಗೆ ಹಿಂದೂ ಸಾಹಿತ್ಯದಲ್ಲಿ ಹಲವು ಹೆಸರುಗಳು–ಈಶ್ವರ, ಶಂಕರ, ತ್ರಿನೇತ್ರ, ಸೋಮಶೇಖರ ಇತ್ಯಾದಿ. ಈತನೇ ಮೂಲ ಅಥವಾ ಆದಿದೇವನಲ್ಲ. ಅವನಿಗಿಂತ ಪೂರ್ವದಲ್ಲಿ ಅವನಪ್ಪ ಹಾಗೂ ಅವನಜ್ಜಂದಿರು ಇರುವುದರಿಂದ ಬಹುಶಃ ಅವರನ್ನು ಕುರಿತು ಈತ ಕಣ್ಣು ಮುಚ್ಚಿ ತಪಸ್ಸು ಮಾಡುತ್ತಿರಬಹುದು—ಕೈಲಾಸದಲ್ಲಿ ಈಶ್ವರೀ ವಿದ್ಯಾಲಯದ ಬ್ರಹ್ಮಕುಮಾರಿಯರ ಪ್ರಕಾರ ಶಿವನು ದೇವನಲ್ಲ ಅವನೊಬ್ಬ ಅವತಾರಿ ಅಥವಾ ಮಧ್ಯವರ್ತಿ. ಬಸವಣ್ಣನ ವಿಕಸನ ಸಿದ್ಧಾಂತ ಮುಂದುವರೆಯುವುದು.

"ಆ ಶಿವಂಗೆ ಇಚ್ಛಾಶಕ್ತಿಯಾದಳು"

ಈ ಹಿಂದೆ ಸದಾಶಿವನಿಗೆ ಜ್ಞಾನ ಶಕ್ತಿಯಾದಂತೆ, ಇಲ್ಲಿ ಶಿವನಿಗೆ ಇಚ್ಛಾ ಶಕ್ತಿಯಾಗುವಳು. ಲೌಕಿಕಾರ್ಥದಲ್ಲಿ, ಪುನಃ ಗಂಡಿನಿಂದ ಹೆಣ್ಣು. ಈ ಅರ್ಥದಲ್ಲಿ ಶಿವನ ಮಗಳು ಇಚ್ಛಾ ಆದರೆ ಭಾವಾರ್ಥದಲ್ಲಿ, ಸದಾಶಿವನಿಗೆ ಜ್ಞಾನೋದಯವಾದಂತೆ ಶಿವನಿಗೆ ಇಚ್ಛೆಯಾಯಿತು ವಿಕಸನದತ್ತ. ಈ ಹಂತದಲ್ಲಿಯೂ ಗಂಡೇ ಪ್ರಧಾನ. ಯಾವ ಹಂತದಲ್ಲಿಯೂ ಹೆಣ್ಣಿನಿಂದ ಗಂಡು ಬಂದಿಲ್ಲ. ಬಸವಣ್ಣ ಮುಂದುವರೆಯುವ.

"ಆ ಶಿವಂಗೆ ಇಚ್ಛಾಶಕ್ತಿಗಿಬ್ಬರಿಗೆಯೂ ರುದ್ರನಾದ"

ಇಲ್ಲಿ ಶಿವನ ಮಗ ರುದ್ರ. ಆದರೆ ಪ್ರಚಲಿತದಲ್ಲಿ ಶಿವನ ಇನ್ನೊಂದು ಹೆಸರು ರುದ್ರ. ಶಾಂತನಾಗಿದ್ದಾಗ ಶಿವ, ಸಿಟ್ಟಿಗೆದ್ದಾಗ ಅವನೇ ರುದ್ರ. ಈ ಸಿಟ್ಟಿನವೇ ಒಂದು ವಿಶೇಷ ಅವತಾರ ರೌದ್ರಾವತಾರ. ಈತನ ಹೆಸರಿಡುವ ವಾಡಿಕೆಯೂ ಇದೆ. ಅಂದಬಳಿಕ ಈತನೂ ಒಬ್ಬ ದೇವತೆ. ಜೀವನದಲ್ಲಿ ಶಾಂತತೆ ಒಂದು ಗುಣವಾಗಿದ್ದರೆ, ಸಿಟ್ಟೂ ಒಂದು ಗುಣವೇ. ಆದರೆ ಅದೇಕೋ ಅದನ್ನು ಅವಗುಣದ ಪಟ್ಟಿಯಲ್ಲಿ ಸೇರಿಸಲಾಗುತ್ತಿದೆ; "ಶಾಂತತೆ ಕೊಟ್ಟು ಹೋದರೆ ಸಿಟ್ಟು.....ಹೋಗುತ್ತದೆ" ಎಂದು ಗ್ರಾಮ್ಯ ಗಾದಿಮಾತು ಜೀರಿ: ಬಸವಣ್ಣ ಮುಂದುವರೆಯುವ:

"ಆ ರುದ್ರಂಗೆ ಕ್ರಿಯಾಶಕ್ತಿಗಿಬ್ಬರಿಗೆಯೂ ವಿಷ್ಣುವಾದ"

ಇಲ್ಲಿ ಒಂದೇ ವಾಕ್ಯದಲ್ಲಿ ಎರಡು ವಿಷಯಗಳನ್ನು ಜೋಡಿಸಿರುವ. ವಿಕಸನದ ನಿಯಮದಂತೆ ರುದ್ರನಿಂದ ಕ್ರಿಯಾಶಕ್ತಿ. ಈ ಮಾತು ಇಲ್ಲಿ ಗೌಣವಾಗಿದ್ದರೂ ಅದರ ಸತ್ಯತೆ ಸ್ಪಷ್ಟ. ಕ್ರಿಯಾ ಪ್ರಥಮದಲ್ಲಿ ರುದ್ರನ ಮಗಳು, ಕೊನೆಯಲ್ಲಿ ಅವನರ್ಧಾಂಗಿ. ಅವರಿಂದ ವಿಷ್ಣು. ಈ ಬಸವಣ್ಣನ ಸಿದ್ಧಾಂತದ ಪ್ರಕಾರ ಶರಣ ಧರ್ಮದಿಂದ ಶೈವಧರ್ಮ ಮುಂದೆ ಅದರಿಂದ ವೈಷ್ಣವಧರ್ಮ. ಹರಿ ಹರ ಪಂಥಗಳು ಹಾಗೂ ಅವೆರಡರಲ್ಲಿ ಬಡಿದಾಟ ಮುಂತಾದವೆಲ್ಲ ಟೊಳ್ಳು ಹಾಗೂ ಅವೆಲ್ಲ ಮಾನವ ನಿರ್ಮಿತ ಸಂಕುಚಿತತೆಯ ಭಾವನೆಗಳು ಬಹುಶಃ ಸ್ವಾರ್ಥಕ್ಕಾಗಿ, ಎಂಬಂಶಗಳು ಇಲ್ಲಿ ಸ್ಪಷ್ಟ. ಬಸವಣ್ಣನ ವಿಕಸನ ಸಿದ್ಧಾಂತದ ಪ್ರಕಾರ ಈ ಎಲ್ಲ ದೇವತೆಗಳು ಒಂದೇ ದೈವಿಕ ಕುಟುಂಬದ ವಂಶಾವಳಿಯಲ್ಲಿ ಬರುವರು. ಇಲ್ಲಿ ಶಿವ ವಿಷ್ಣುವಿನ ಅಜ್ಜ. ಅಂದಬಳಿಕ ಜಗಳ ಹಾಗೂ ಬಡಿದಾಟಕ್ಕೆ ಆಸ್ಪದವೇ ಇಲ್ಲ. ಬಸವಣ್ಣ ಮುಂದುವರೆಯುವನು:

"ಆ ವಿಷ್ಣುವಿಗೆ ಲಕ್ಷ್ಮಿಯಾದಳು"

ಪುರುಷ ಪ್ರಧಾನತೆಯು ಮುಂದುವರೆಯುವುದು. ವಿಷ್ಣುವಿನಿಂದ ಲಕ್ಷ್ಮಿ. ಆತ ಲಕ್ಷ್ಮಿಯನ್ನು ಪಡೆದ ಅಥವಾ ಹಡೆದ–ಎರಡೂ ಅರ್ಥವನ್ನು ಹಚ್ಚಬಹುದು. ಹಿಂದೂ ಸಾಹಿತ್ಯದ ಪ್ರಕಾರ ಕ್ಷೀರಸಾಗರವನ್ನು ಕಡೆದಾಗ ಸಿಕ್ಕ ಹದಿನಾಲ್ಕು ರತ್ನಗಳಲ್ಲಿ[೧೪] ಲಕ್ಷ್ಮಿಯೂ ಒಂದು ರತ್ನ. ಅದನ್ನು ವಿಷ್ಣು ಪಡೆದ. ಬಸವಣ್ಣ ಮುಂದುವರೆಯುವ:

"ಈ ವಿಷ್ಣುವಿಗೆ ಮಹಾಲಕ್ಷ್ಮಿಗಿಬ್ಬರಿಗೆಯೂ ಬ್ರಹ್ಮನಾದ"

ಆ ಲಕ್ಷ್ಮಿಯೇ ಮಹಾಲಕ್ಷ್ಮಿಯಾಗಿ ಬೆಳೆದು ವಿಷ್ಣುವಿನ ಅರ್ಧಾಂಗಿಯಾಗುವಳು. ಅವರಿಗೆ ಬ್ರಹ್ಮ ಪುತ್ರನಾಗುವನು. ಬಸವಣ್ಣನ ವಿಕಸನ ಸಿದ್ಧಾಂತದಲ್ಲಿ ಗಂಡಿನಿಂದ ಗಂಡೂ ಹುಟ್ಟಿದೆ (ಶರಣನಿಂದ ಸದಾಶಿವ), ಹೆಣ್ಣೂ ಹುಟ್ಟಿದೆ (ಸದಾಶಿವನಿಂದ ಜ್ಞಾನಶಕ್ತಿ, ಶಿವನಿಂದ ಇಚ್ಛಾ ಶಕ್ತಿ, ರುದ್ರನಿಂದ ಕ್ರಿಯಾಶಕ್ತಿ, ವಿಷ್ಣುವಿನಿಂದ ಲಕ್ಷ್ಮಿ, ಮುಂದೆ ಬ್ರಹ್ಮನಿಂದ ಸರಸ್ವತಿ). ಆದರೆ ಈ ಹಂತದವರೆಗೆ, ಗಂಡು ಹೆಣ್ಣಿನ ಸಂಗದಿಂದ ಹುಟ್ಟಿದವರೆಲ್ಲ ಗಂಡುಗಳು ಮಾತ್ರ ಹಿಂದೂ ಸಾಹಿತ್ಯದ ಪ್ರಕಾರ ವಿಷ್ಣುವಿನ ನಾಭಿಕಮಲದಿಂದ ಬ್ರಹ್ಮ ಹುಟ್ಟಿದ. ಇಲ್ಲಿ ಲಕ್ಷ್ಮಿಯ ಪಾತ್ರವಿಲ್ಲ. ಆ ಕಾರಣ ಬ್ರಹ್ಮ ಕೇವಲ ತಂದೆಯ ಮಗ, ತಾಯಿಮಗನಲ್ಲ. ಸದಾಶಿವನೂ ಹಾಗೆಯೇ ತಂದೆ ಶರಣನ ಮಗ. ಬಸವಣ್ಣ ಮುಂದುವರೆಯುವನು:

೧೪. ಲಕ್ಷ್ಮಿ, ಕೌಸ್ತುಭ, ಪಾರಿಜಾತ, ಸುರ, ಧನ್ವಂತರಿ, ಚಂದ್ರಮಾ, ಕಾಮಧೇನು, ಐರಾವತ, ಅಪ್ಸರಸ್ತ್ರೀ, ಉಚ್ಚೈಶ್ರವ, ಹಾಲಾಹಲ, ಶಾರ್ಙ್ಗ, ಪಾಂಚಜನ್ಯ, ಅಮೃತ ಗಳೆಂಬ ಚತುರ್ದಶರತ್ನಗಳು. ಚಂದ್ರಶೇಖರಪ್ಪ–ರಾಚಪ್ಪ ನಾಲಿಶೆಟ್ಟರ, ನಗರ ದರ್ಪಣ, ಅಪ್ರಕಟಿತ ಗ್ರಂಥ, ಧಾರವಾಡ.

"ಆ ಬ್ರಹ್ಮಂಗೆ ಸರಸ್ವತಿಗಿಬ್ಬರಿಗೆಯೂ
ನರರು, ಸುರರು, ದೇವರ್ಕಳು, ಹೆಣ್ಣು ಗಂಡು ಸಚರಾಚರ ಸಹಿತವಾಗಿ
ಎಂಬತ್ತು ನಾಲ್ಕುಲಕ್ಷ ಜೀವಜಂತುಗಳ ಜಾತಿ
ಎಂದರೆ ಜಗವಾಯಿತು;

ಬ್ರಹ್ಮನಿಂದ ಸರಸ್ವತಿಯು ಜನ್ಮತಾಳಿದಳು- ಎಂಬುದು ಇಲ್ಲಿ ಗೌಣವಾಗಿದ್ದರೂ ಸ್ಪಷ್ಟ. ಮಗಳೇ ಮುಂದೆ ಅರ್ಧಾಂಗಿಯಾಗಿ ಅವರಿಬ್ಬರೂ ವಿಕಸನವನ್ನು ಮುಂದುವರೆಸುವರು. ಅವರಿಂದ ಎಲ್ಲ ಸೃಷ್ಟಿಯಾಯಿತು. ದೃಷ್ಟಿಗೆ ಬೀಳುವುದೆಲ್ಲ ಸೃಷ್ಟಿ. ಅದರ ಆಚೆಯದು ಭಾವನೆಗೆ ಮಾತ್ರ ನಿಲುಕುವುದು. ಹಿಂದೂ ಸಾಹಿತ್ಯದ ಪ್ರಕಾರ ಬ್ರಹ್ಮ ಸೃಷ್ಟಿಸಿದ ಎಂಬ ವಿಚಾರವಿದೆ. ಅಲ್ಲಿ ಸರಸ್ವತಿಯು ಪಾತ್ರ ಗೌಣ. ಬಹುಶಃ ಪುರುಷ ಪ್ರಧಾನತೆಯಲ್ಲಿ ಸೃಷ್ಟಿಯಲ್ಲಿ ಅವಳ ಪಾತ್ರವಿದ್ದರೂ ಕೇವಲ ತಂದೆಯ ಹೆಸರನ್ನು ನಾವೀಗ ಬರೆಯುವಂತೆ ಈ ಸೃಷ್ಟಿಯೂ ತನ್ನ ತಂದೆಯ ಹೆಸರನ್ನು ಮಾತ್ರ ಮುಂದೆಮಾಡಿರಬೇಕು. ಅಂತೂ ಅವರ, ಸೃಷ್ಟಿಸಿದ್ದು ೮೪ ಲಕ್ಷ ಬೇರೆ ಬೇರೆಯ ಜೀವರಾಶಿಗಳನ್ನು. ಇದೇ ಸಂಖ್ಯೆಯು ಅಕ್ಕನ ವಚನದಲ್ಲಿ೧೫ ಹಾಗೂ ಸಾಮಾನ್ಯವಾಗಿ ಹಿಂದೂ ಸಾಹಿತ್ಯದಲ್ಲಿ ಬರುವುದು. ಇನ್ನು ಒಂದೊಂದು ಜೀವರಾಶಿಯ ಸಂಖ್ಯೆ ಅದೆಷ್ಟೋ ?೧೬ ಅವೆಲ್ಲದರ ಒಟ್ಟು ಅಂಕಿ ಸಂಖ್ಯೆಗಳು ಹಿಂದೂ ಶಾಹಿತ್ಯದಲ್ಲಿ ಎಲ್ಲೂ ಬಂದಿರಲಿಕ್ಕಿಲ್ಲ. ಬರುವುದು ಕಷ್ಟ. ಅದು ಆಗಾಗ್ಗೆ ಬದಲಾಗುವುದು. ಆದರೆ ಜೀವರಾಶಿಗಳ ಸಂಖ್ಯೆ ಖಚಿತವಿರಬೇಕು.

ಈ ವಿಕಸನ ಮಾರ್ಗದಲ್ಲಿ ಪ್ರಥಮವಾಗಿ "ಜಾತಿ" ಬಂದಿದೆ. ಇಲ್ಲಿ ಅದರರ್ಥ ರಾಶಿ, ವರ್ಗ ಎಂದಾಗುತ್ತಿದ್ದರೂ ಈ ಜಾತಿಗೂ ಜೀವಗಳಿಗೂ ಸಂಬಂಧವಿರುವದು. ಅದು ಆ ಜೀವಿಗಳ ಗುಣವನ್ನು, ರಾಶಿಯನ್ನು, ವರ್ಗವನ್ನು ಅಥವಾ ಗುಂಪನ್ನು ತೋರಿಸಬಹುದು. ಈ ಶಬ್ದದ ಆವಶ್ಯಕತೆ ಇಲ್ಲಿಯವರೆಗಿನ ವಿಕಸನಕ್ಕೆ ಇದ್ದಿಲ್ಲ. ಇದರ ತಾತ್ಪರ್ಯವೆಂದರೆ ಜಾತಿ ದೇವನಿರ್ಮಿತವಲ್ಲ ಮಾನವ ನಿರ್ಮಿತ. ಜಾತಿಗೂ ಜೀವಿಗೂ ಸಂಬಂಧವಿದೆ ಆದರೆ ದೇವನಿಗಿಲ್ಲ.

ಇಲ್ಲಿ ಪ್ರಥಮವಾಗಿ ಜಗ ಅಥವಾ ಜಗತ್ತಿನ ಪ್ರಸಂಗ ಬಂದಿದೆ. ಈ ಜಗಕ್ಕೂ ಹಾಗೂ ಜೀವಿಗೂ ಸಂಬಂಧವಿರುವುದು ಸ್ಪಷ್ಟ. ಜೀವಿಗಳಿರುವವೆಂದೇ ಇದು ಜಗತ್ತು. ಆದಿಯಿಂದ ಇಲ್ಲಿಯವರೆಗಿನ ವಿಕಸನವನ್ನು ಕೂಲಂಕಷವಾಗಿ

೧೫- "ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ
೮೪ ಲಕ್ಷಯೋನಿಯೊಳಗೆ ಬಂದೆ ಬಂದೆ
ಬಾರದ ಭವಂಗಳನು ಉಂಡೆ ಉಂಡೆ —ಅಕ್ಕಮಹಾದೇವಿ.

೧೬. ಸದ್ಯಕ್ಕೆ ಮಾನವರ ಸಂಖ್ಯೆ ೩೦೦ ಕೋಟಿ ಮಿಕ್ಕಿದೆ.

ಅಭ್ಯಾಸಿಸಿದರೆ ಈ ಜೀವಿಯೇ ಈ ವಿಕಸನದ ಕೊನೆಯ ಹಂತ. ಡಾರ್ವಿನ್ನನ ವಿಕಸನ ಸಿದ್ಧಾಂತ ಮೂಲವಾಗಿ ಈ ಜೀವಿಯ ವಿಕಸನಕ್ಕೆ ಸಂಬಂಧಿಸಿರುವುದು. ಭೂಗೋಲ, ಜ್ಯೋತಿಷ್ಯ ಮತ್ತು ಖಗೋಲ ಮುಂತಾದ ಶಾಸ್ತ್ರಗಳು ಈ ಜಗತ್ತಿನ ಹಂತ ಹಂತವಾದ ವಿಕಸನವನ್ನು ತಿಳಿಸಿಕೊಡುತ್ತವೆ. ಈ ಸಂಬಂಧ ಬಸವಣ್ಣನ ಸಿದ್ಧಾಂತದಲ್ಲಿ ವಿವರಣೆಗಳಿಲ್ಲ. ಬ್ರಹ್ಮನ ಸೃಷ್ಟಿಯಲ್ಲಿ ಮೊದಲು ಮೈದಾಳಿದುದು ಬಹುಶಃ ರವಿ ಅಥವಾ ಸೂರ್ಯ. ಅವನಿಂದ ಇನ್ನುಳಿದೆಲ್ಲ ನವಗ್ರಹಗಳು, ಚಿಕ್ಕೆಗಳು, ಧೂಮಕೇತು ಮುಂತಾದವುಗಳು. ಅದುವೇ ಸೂರ್ಯಮಂಡಲ ಅರ್ಥಾತ್ ವಿಶ್ವ. ಈ ನವಗ್ರಹಗಳಲ್ಲಿ ಒಂದು ಗ್ರಹ ಪೃಥ್ವಿ. ಅದು ಸದ್ಯದ ರೂಪಕ್ಕೆ ಬರಲು ತನ್ನದೇ ಆದ ಅವಧಿ ಪಡೆದಿದೆ—ಅನಿಲ, ದ್ರವರೂಪಗಳಿಂದ ಘನರೂಪ ತಾಳಲು, ಅವರ ಹಿಂದಿನ ರೂಪಗಳೆಲ್ಲವನ್ನೂ ಇಂದಿಗೂ ಅದರ ಒಡಲಿನಲ್ಲಿ ಕಾಣಬಹುದು. ಭೂಕಂಪ, ಜ್ವಾಲಾಮುಖಿಗಳು ಈ ವಿಷಯ ಸ್ಪಷ್ಟೀಕರಿಸಬಹುದು. ಅಂತೂ ಪೃಥ್ವಿಯ ಮೇಲೆ ಮೂರು ಪಾಲು ನೀರು ಒಂದು ಪಾಲು ಭೂಮಿ ಸ್ಥಿರವಾಯಿತು. ಸಸ್ಯ ಜೀವ ನಂತರ ಪ್ರಾಣಿಜೀವ (ಜಲಚರ) ಪ್ರಾರಂಭವಾದುದು ನೀರಿನಲ್ಲಿ. ತದನಂತರ ಭೂಚರ, ಖಗ, ಮೃಗಗಳ ವಿಕಸನ. ಕೊನೆಯ ಹಂತದಲ್ಲಿ ಮಾನವ ಜೀವಿ ಬಂದ. ಇಲ್ಲಿಯ ವರೆಗಿನ ಸೃಷ್ಟಿ ಆತನ ಪುಷ್ಟಿಗಾಗಿಯೇ ಆತನ ಬರುವಿಕೆಯ ಪೂರ್ವದಲ್ಲಿಯೇ ಸಂಗ್ರಹಗೊಂಡಂತಿದೆ. ಕೂಸಿನ ಜನನಕ್ಕಿಂತ ಮೊದಲೇ (ಹಲವು ತಿಂಗಳು) ತಾಯಿಯ ಮೊಲೆಯಲ್ಲಿ ಹಾಲು ಸಂಗ್ರಹವಾದಂತಿದೆ. ಇದೇ ದೇವಕರುಣೆ. ಗಾಳಿ, ಮಳೆ, ಭೂಮಿ, ಅಗ್ನಿ, ಆಹಾರ ಈ ಎಲ್ಲ ಪ್ರಕೃತಿಯಲ್ಲಿ ಆತನ ಕರುಣೆ, ಪ್ರೇರಣೆ ಎಲ್ಲವೂ ಇದೆ. ಸಾಮಾನ್ಯವಾಗಿ ಎಲ್ಲ ಧರ್ಮಗಳ ಪ್ರಕಾರ ಮಾನವ ಜೀವಿಯಲ್ಲಿ ಪ್ರಥಮವಾಗಿ ಭೂಮಿಯ ಮೇಲೆ ಕಾಣಿಸುವುದು—ಗಂಡು.[೧೮] ಇಲ್ಲಿಯೂ ಪುರುಷ ಪ್ರಧಾನತೆಯನ್ನು ಕಾಣಬಹುದು. ತದನಂತರ ಹೆಣ್ಣು.

ಈ ವಿಕಸನ ಸಿದ್ಧಾಂತದಲ್ಲಿ ಒಂದು ತತ್ವವಡಗಿದೆ. ವಿಕಸನವು ಇಲ್ಲಿಯ ವರೆಗೂ ಪ್ರಗತಿಪರವಿದೆ. ಈ ೮೪ ಲಕ್ಷ ಜೀವರಾಶಿಗಳಲ್ಲಿ ಮಾನವ ಜೀವ ಕೊನೆಯದಾಗಿ ಸೃಷ್ಟಿಯಾದದುದು. ಆ ಕಾರಣದಿಂದ ಇಲ್ಲಿಯವರೆಗಿನ ಜೀವರಾಶಿಗಳಲ್ಲಿ ಅದು ಪರಿಪೂರ್ಣ. ಮಾನವಜೀವಿಯು ವಿಕಸನದ ಫಲ. ಒಂದು ದೃಷ್ಟಿಯಲ್ಲಿ ಮಾನವ ಜೀವಿಯು ವಿಶ್ವದ ಕೇಂದ್ರಬಿಂದು. ಇದು ಅರಿವು ಉಳ್ಳಜೀವ. ಇದಕ್ಕೆ ಈ ಎಲ್ಲ ವಿಕಸನದ ಅರಿವಿದೆ. ಇದಕ್ಕೆ ತನ್ನ ತಂದೆ ತಾಯಿ, ಬಂಧು ಬಳಗ, ಧರ್ಮ,

೧೮. ಕ್ರಿಶ್ಚಿಯನ್ ಧರ್ಮ—ಬೈಬಲ್‌ದಲ್ಲಿ ಮೊದಲು ಆಡ್ಯಾಮ್ ನಂತರ ಈವ. ಇಸ್ಲಾಂ ಧರ್ಮದಲ್ಲಿ ಆನರೇ ಅವಾನ್ ಮತ್ತು ಇವಾ. ಹಿಂದೂ ಧರ್ಮದಲ್ಲಿ ಪುರುಷ ಮತ್ತು ಪ್ರಕೃತಿ.

ಅಧರ್ಮದ ಅರಿವಿದೆ. ಅರಿವಿನೊಂದಿಗೆ ಮಾನವತ್ವ ಕಾಯ್ದುಕೊಂಡು, ದೇವ ಮಾನವನಾಗುವ ಹಾಗೂ ಕೊನೆಯಲ್ಲಿ ದೇವನಲ್ಲಿಯೇ ಲೀನವಾಗುವ, ಐಕ್ಯವಾಗುವ ಅಥವಾ ಮುಕ್ತಿ ಪಡೆಯುವ ಸಾಮರ್ಥ್ಯ ಈ ಮಾನವ ಜೀವಗಿದೆ. ಆದ್ದರಿಂದ ಎಲ್ಲಿ ೮೪ ಲಕ್ಷ ಜೀವರಾಶಿಗಳಲ್ಲಿ ಮಾನವ ಜೀವ ಶ್ರೇಷ್ಠ.[೧೯] ಈತ ಜ್ಞಾನಿಯಾಗಬಲ್ಲ. ಸುಜ್ಞಾನಿಯಾಗಬಲ್ಲ, ತತ್ತ್ವಜ್ಞಾನಿಯಾಗಬಲ್ಲ, ವಿಜ್ಞಾನಿಯಾಗಬಲ್ಲ ಕವಿ, ಕಲಾಕಾರ ಇನ್ನೂ ಏನೇನೋ. ಇವಕ್ಕೆಲ್ಲ ಮಿಗಿಲಾಗಿ ಈತ ಶರಣನಾಗಬಲ್ಲ. ಮುಕ್ತಿ ಪಡೆಯುವ ಹಕ್ಕು ಮಾನವನಿಗಿದೆ.ಒಂದುವೇಳೆ ಒಬ್ಬ ದೇವತೆ ಸಹ ಮುಕ್ತಿ ಪಡೆಯಬೇಕಾದರೆ ಈ ಭೂಮಿಗೆ ಮಾನವ ಜೀವಿಯಾಗಿರಬೇಕು. ಈ ಆತ್ಮನೆ ಪರಮಾತ್ಮನಾಗಿ ಬೆಳೆಯಬಲ್ಲ. "ತತ್ ತ್ವಂ ಅಸಿ" ಸಿದ್ಧಾಂತ ಇದನ್ನೇ ಸೂಚಿಸುವುದು. ಶೈವ ಸಿದ್ಧಾಂತದ "ಶಿವೋಹ್ಂ, ಅಥವಾ "ಸೋಹಂ" ಶಂಕರಾಚಾರ್ಯರ "ಅಹಂಬ್ರಹ್ಮಾಸ್ಮಿ" ಮುಂತಾದವುಗಳು ಇಲ್ಲಿ ಸ್ಪಷ್ಟ. ಇದಕ್ಕಾಗಿಯೇ ಪುರಂದರ ದಾಸರು "ಮಾನವಜನ್ಮ ಬಲುದೊಡ್ಡದು" ಎಂದರಲ್ಲದೆ ಗ್ರೀಕ ತತ್ತ್ವಜ್ಞಾನಿ ಸಾಕ್ರೇಟಿಸನು ಮಧ್ಯಹಗಲಿನಲ್ಲಿ ಕೈಯಲ್ಲಿ ಕಂದೀಲು ಹಿಡಿದು ಸಂತೆಯಲ್ಲಿ ಇಂಥ ಮಾನವನನ್ನು ಹುಡುಕಿದ;ಮಗುವು ತನ್ನ ತಂದೆತಾಯಿಯರನ್ನೇ ಕುಣಿದಾಡಿಸುವಂತೆ ಭಕ್ತನು ತನ್ನ ದೇವನನ್ನು ಕುಣಿದಾಡಿಸುವಷ್ಟು ಸಾಮರ್ಥ್ಯಪಡೆಯಬಲ್ಲ.[೨೦] ಸಂಕ್ಷಿಪ್ತದಲ್ಲಿ ಹೇಳಬೇಕಾದರೆ ಭಕ್ತನಿಗಾಗಿ ದೇವ ಎಷ್ಟೋ ರೂಪ, ಎಷ್ಟೋ ವೇಷ ಹಾಗೂ ಎಷ್ಟೋ ಪಾತ್ರಗಳನ್ನಾಡಬೇಕಾಯಿತು. :ದೇವನಿರುವುದೇ ಭಕ್ತಿಯ ಆಧಾರದ ಮೇಲೆ.[೨೧] ಮಾನವನು ಮಾನವನಾಗಿದ್ದರೆ ಸಾಕು. ಅದಷ್ಟೋ ಮೇಲು.[೨೨] ಇನ್ನು ಮಾನವನು ಮಾನವನಾಗದೆ ದಾನವನಾದರೆ ಸರ್ವನಾಶ. ಈ ದೃಷ್ಟಿಯಲ್ಲಿ ಈ ಜೀವಿಯು ಎಲ್ಲ ೮೪ ಲಕ್ಷ ಜೀವರಾಶಿಗಳಲ್ಲಿ ಕನಿಷ್ಠ. ಅಣುಬಾಂಬುಗಳ ಯುದ್ಧವಾದರೆ ಎಲ್ಲ ೮೪ ಲಕ್ಷ ಜೀವರಾಶಿಗಳ ನಾಶ.

ಮಾನವ ಜೀವಿಗಳಲ್ಲಿಯೂ ಸಹ, ಎಲ್ಲ ಧರ್ಮಗಳ ಪ್ರಕಾರ, ಪುರುಷನು ಪ್ರಥಮ ನಂತರದಲ್ಲಿ ಹೆಣ್ಣು ವಿಕಸನಹೊಂದುವಳು. ವಿಕಸನ ಸಿದ್ಧಾಂತದ ಮೇರೆಗೆ ಇಲ್ಲಿ ಪ್ರಗತಿ ಇರಲೇಬೇಕು. ಹೆಣ್ಣು ಗಂಡಿಗಿಂತ ಶ್ರೇಷ್ಠ[೨೩] ಕ್ಷಮಾ, ದಯಾ, ತಾಳ್ಮೆ, ರೂಪ, ಪ್ರೇಮ ಮುಂತಾದ ದೃಷ್ಟಿಯಲ್ಲಿ. ಆದರೆ ದಾರಿ ತಪ್ಪಿದ

---

೧೯. ಇದನ್ನು ಗ್ರೀಕ ತತ್ವಜ್ಞಾನಿ ಪ್ಲೇಟೋನೂ ಒಪ್ಪುವನು.

೨೦. "ಕುಳಿತು ಭಜಿಸಿದರೆ ನಿಂತು ಕೇಳುವ, ನಿಂತು ಭಜಿಸಿದರೆ ಕುಣಿದಾಡಿ ಕೇಳುವ ನಮ್ಮ ಪುರಂದರ ವಿಠಲ"—**ಪುರಂದರದಾಸ.**

೨೧. "ನಮ್ಮ ಶರಣರ ಮನದ ಕೊನೆಯಲ್ಲಡಗಿರ್ಪ"—**ಬಸವಣ್ಣ**

೨೨. "ನೀನೇನಾದರೂ ಆಗು ಮೊದಲು ಮಾನವನಾಗು—**ಸಿದ್ದಯ್ಯ ಪುರಾಣಿಕ.**

೨೩. ತಾಯಿಗಿಂತ ಬಂಧುವಿಲ್ಲ.

ಹೆಣ್ಣು, ಎಲ್ಲಕಿಂತ ಕನಿಷ್ಠಳೂ ಸಹ. ಅವಳು ಸ್ವರ್ಗಕ್ಕೂ ದಾರಿ ತೋರಬಲ್ಲಳು, ಅಷ್ಟೇ ನರಕಕ್ಕೂ ಸಹ. ಧರ್ಮಗಳ ಪ್ರಕಾರ ಮುಂದಿನದಕ್ಕಾಗಿ ಹಿಂದಿನ ತಯ್ಯಾರಿ. ಹೆಣ್ಣಿಗಾಗಿ ಗಂಡು ಮೊದಲೇ ಸಿದ್ಧತೆಯಲ್ಲಿದೆ. ಹೆಣ್ಣಿನ ರಕ್ಷಣೆ, ಪೋಷಣೆ ಮೊದಲೇ ಗಂಡಿನ ರೂಪದಲ್ಲಿ ಸಿದ್ಧವಾಗಿದೆ. ಅವೆರಡೂ ಮುಂದಿನ ವಿಕಸನಕ್ಕೆ ಸಿದ್ಧ—ಸಮಾಜ, ರಾಷ್ಟ್ರ, ಜಾಗತಿಕ ರಾಷ್ಟ್ರ.

ಬಸವಣ್ಣನ ವಿಕಸನ ಸಿದ್ಧಾಂತದಲ್ಲಿ "ನರರು, ಸುರರು, ದೇವರ್ಕಳು" ಬರುವರು. ಇವರೆಲ್ಲ ಜಗದ ಮೇಲೆ ಅರ್ಥಾತ್ ಪೃಥ್ವಿಯ ಮೇಲೆ ಇರುವರು. ಅಂದಮೇಲೆ ಸುರರು, ದೇವರ್ಕಳು ಇವರೆಲ್ಲ ದೇವತೆಗಳಿರಲಾರರು. ನರರೇ ವಿಕಸನ ಹೊಂದಿ ಆತ್ಮದಿಂದ ಮಹಾತ್ಮರಾಗಿ ಮುಂದೆ ಅವರೇ ಪರಮಾತ್ಮಸ್ವರೂಪಿಗಳಾಗಲಾಗುವರು. ಶರಣರು ಎಲ್ಲ ಕಾಲದಲ್ಲಿಯೂ ಇರುವರು ಎಂಬುದು ಇಲ್ಲಿ ಸ್ಪಷ್ಟವಾಗುವದು. ಬಸವಣ್ಣ ಮುಂದುವರೆಯುವನು

"ಹೊರೆಯೆಂದೊಡೆ ಆಕಾಶದಲ್ಲಿ ನಿಂದರು!
ಗರುಡ ಗಂಧರ್ವಸಿದ್ಧ ವಿದ್ಯಾಧರರು
ಮೊದಲಾದ ದೇವಸಮೂಹಂಗಳೆಲ್ಲ"

ಭೂಮಿಗೆ ಇನ್ನು ಹೆಚ್ಚು ಭಾರ ಬೇಡವೆಂದು ದೇವಸಮೂಹವು ಆಕಾಶದಲ್ಲಿ ನಿಂತಿತು. ವಿಜ್ಞಾನಿ ಬಸವಣ್ಣ ಸತ್ಯವನ್ನೇ ನುಡಿದಿರುವ. ದೇವ ಸಮೂಹ ಭೂಮಿಯ ಮೇಲೆಯೂ ಇಲ್ಲ ಹಾಗೂ ಇನ್ನುಳಿದ ಗ್ರಹಗಳಲ್ಲಿಯೂ ಇಲ್ಲ.[೨೪] ಬಸವಣ್ಣನ ಸಿದ್ಧಾಂತದ ಮೇರೆಗೆ ದೇವಸಮೂಹವು ಭೂಮಿಯ ಜನಸಂಪರ್ಕದಿಂದ ದೂರ ಉಳಿಯಲು ಕಾರಣ—ಭೂಮಿಗೆ ಹೆಚ್ಚು ಭಾರವಾಗುವುದು ಎನ್ನುವುದು ಮಾತ್ರ. ತಾವು ಶ್ರೇಷ್ಠರೆಂದಾಗಲಿ ಅಥವಾ ಜನತೆಯ ಕೈಯಲ್ಲಿ ತಾವು ಉಳಿಯಲಾರರೆಂದಾಗಲಿ ಅವರು ಬೇರ್ಪಟ್ಟಿಲ್ಲ. ವೈಜ್ಞಾನಿಕವಾಗಿ ದೇವಸಮೂಹ ಕಾಣಬೇಕಾದರೆ ಈ ಬಸವ ಸಿದ್ಧಾಂತದ ಪ್ರಕಾರ, ಜಗತ್ತು (ಪೃಥ್ವಿ), ವಿಶ್ವ (ಸೂರ್ಯಮಂಡಲ)ಗಳನ್ನು ದಾಟಿ ಅದರಾಚೆಗೆ ಆಕಾಶದಲ್ಲಿ ನಡೆಯಬೇಕು. ಸದ್ಯದ ವಿಜ್ಞಾನ ವಿಶ್ವಪರ್ಯಟನೆಗೆ ಸ್ಪುಟ್ನಿಕ ಸಾಧನಗಳ ಮುಖಾಂತರ ಸಿದ್ಧವಾಗಿದೆ. ವಿಶ್ವದಾಚೆಗೆ ಬ್ರಹ್ಮಾಂಡವನ್ನು ವಿಜ್ಞಾನವು ಇನ್ನೂ ಭೇದಿಸಬೇಕಾಗಿದೆ. ಇಲ್ಲಿಯವರೆಗೆ ಆ ಬ್ರಹ್ಮಾಂಡವನ್ನು ಯಾವ ಆಧ್ಯಾತ್ಮಿಕ ಜೀವಿಯೂ ಸಹ ಭೇದಿಸಿದಂತಿಲ್ಲ. ದೇಹಾತ್ಮನಾಗಿ ಯಾವನೂ ಅಲ್ಲಿ ಹೋಗಿ ಬಂದಿಲ್ಲ. ಭಕ್ತಿಗೆ ಅಥವಾ ತಪಸ್ಸಿಗೆ ಒಲಿದು ದೇವತೆಗಳು ಭೂಮಿಗೆ ಬಂದು ಅವರ ಕನಸಿನಲ್ಲಿಯೋ,

೨೪. ಚಂದ್ರ ಲೋಕದಲ್ಲಿ ಯಾವ ಜೀವಿಯೂ ಇಲ್ಲ ಎಂದು ಈಗಿನ ವಿಜ್ಞಾನ ತನ್ನ ಪ್ರಯೋಗದಿಂದ ಹೇಳಿದೆ. ಅಮೇರಿಕೆಯ ಆರ್ಮಸ್ಟ್ರಾಂಗ ತನ್ನ ಸಂಗಡಿಗನೊಂದಿಗೆ ಚಂದ್ರನ ಮೇಲೆ ಇಳಿದು ಅಲ್ಲಿಂದ ಅಲ್ಲಿನ ಕಲ್ಲುಗಳನ್ನು ತಂದಿರುವ.

ಮನದಲ್ಲಿಯೋ ಅಥವಾ ಪ್ರತ್ಯಕ್ಷವಾಗಿಯೋ ಅಥವಾ ಬೇರೆ ಯಾವುದೋ ರೂಪದಲ್ಲಿ ಅನುಗ್ರಹಿಸಿದ ಉದಾಹರಣೆಗಳು ಸಾಕಷ್ಟಿವೆ. ಬುದ್ಧನು ತಪಸ್ಸಿನಿಂದ ಜ್ಞಾನವನ್ನು ಪಡೆದನು. ಕ್ರಿಸ್ತ ಹಾಗೂ ಮೊಹಮ್ಮದ ಪೈಗಂಬರರು ತಪಸ್ಸಿನಿಂದ ಜ್ಞಾನವನ್ನು ಪಡೆದರು. ನಿಜವಾದ ಸತ್ಯವನ್ನರಿಯಲು ರಾಮಕೃಷ್ಣ ಪರಮಹಂಸರು ದಕ್ಷಿಣೇಶ್ವರದ ಪಂಚವಟಿಯಲ್ಲಿ ಧ್ಯಾನಾಸಕ್ತರಾಗಿ ಕುಳಿತಾಗ-ಅವರು ಮೇಲೆ ಮೇಲೆ ಹೋದಂತಾಗಿ ಒಂದೆಡೆ ನಿಲ್ಲುವ ಪ್ರಸಂಗ ಬರುವದು. ಪ್ರಜ್ವಲಿಸುವ ತೇಜಸ್ಸು, ಅಗ್ನಿಯನ್ನು ನೋಡಲು ಸಹ ಅಸಮರ್ಥರಾದರಲ್ಲದೆ ಅದನ್ನು ದಾಟುವ ಮಾತೇ ಇರಲಿಲ್ಲ.[೨೫] ಆಧ್ಯಾತ್ಮಿ ಮತ್ತು ವಿಜ್ಞಾನಿಗಳು ವಿಶ್ವದುದ್ದಕ್ಕೂ ಪರ್ಯಟನ ಮಾಡಬಹುದು. ಆದರೆ ಅದರಾಚೆ ಇಬ್ಬರಿಗೂ ಅಗಮ್ಯ. ಬಸವಣ್ಣನವರು ಕೊನೆಯಲ್ಲಿ ತಮ್ಮ ವಚನವನ್ನು ಈ ರೀತಿ ಮುಕ್ತಾಯಗೊಳಿಸುವರು:

"ಕೂಡಲ ಸಂಗಮದೇವಾ, ನೀವು ಮನದಲ್ಲಿ ಸಂಕಲ್ಪಿಸಿ ಆಗೆಂದೊಡಾದವು"[೨೬] ಇಷ್ಟೆಲ್ಲ ವಿಕಾಸವು ದೇವನ ಇಚ್ಛೆಯಂತೆ ಆಗಿದೆ. ಈ ಎಲ್ಲ ವಿಕಸನಕ್ಕೂ ದೇವನೇ ಕಾರಣ. ಎಲ್ಲವೂ ದೇವನಿರ್ಮಾಣ. ಇದಕ್ಕೆ ದೈವಿಕ ಸಿದ್ಧಾಂತವೆನ್ನುವರು.[೨೭] ಇಡೀ ವಿಕಸನ ಸಿದ್ಧಾಂತಕ್ಕೆ ದೈವಿಕ ಸಿದಾಂತವು ಕಾರಣ. ವಿಕಸನ ಸಿದಾಂತವು ಸ್ವತಂತ್ರವಲ್ಲ. ಅದಕ್ಕೆ ಆಧಾರ ದೈವಿಕ ಸಿದ್ಧಾಂತ. ಎಲ್ಲವೂ ದೇವನಿಚ್ಛೆ. ಆತನು ಒಲಿದರೆ ಕೊರಡು ಕೊನರುವುದು, ಬರಡು ಹಯನಹುದು, ವಿಷವು ಅಮೃತವಾಗುವುದು[೨೮] ತೇನವಿನಾತೃಣಮಪಿನಚಲತಿ" ಎಂಬುದೂ ಇಲ್ಲಿ ಸ್ಪಷ್ಟ.

ಬಸವಣ್ಣನ ಈ ವಿಕಸನ ಸಿದ್ಧಾಂತವು ಹಲವಾರು ಸತ್ಯಗಳನ್ನು ಸ್ಪಷ್ಟೀಕರಿಸುವುದು—(೧) ದೇವನೊಬ್ಬ ನಾಮ ಹಲವು (೨) ಬ್ರಹ್ಮ ಸೃಷ್ಟಿ ಕರ್ತ (೩) ಸಕಲಜೀವಜಂತುಗಳೆಲ್ಲ ಒಂದು ಜಾತಿ. (೪) ಜೀವ, ಜಗತ್ತು, ಈಶ್ವರನ ಸಂಬಂಧ (೫) ಆಧ್ಯಾತ್ಮಿಕದಿಂದ ಭೌತಿಕ ಮರಳಿ ಆಧ್ಯಾತ್ಮಿಕದೆಡೆಗೆ (೬) ಶೈವ ಸಂಪ್ರದಾಯದ ನಂತರ ವೈಷ್ಣವ ಸಂಪ್ರದಾಯ (೭) ರುದ್ರನ ಮಗ ವಿಷ್ಣು ಅರ್ಥಾತ್

---

೨೫. ಕುವೆಂಪು, **ರಾಮಕೃಷ್ಣ ಪರಮಹಂಸ** ಮತ್ತು **ವಿವೇಕಾನಂದ.**

೨೬. ವಿಹಾರಿ, **ಬಸವಣ್ಣನವರ ವಚನಗಳು,** (ಭಾವಾರ್ಥ ಸಹಿತ). ಎರಡನೆಯ ಮುದ್ರಣ, ೧೯೫೮ ಪ್ರಕಾಶಕರು ಬಿ. ಜಿ. ಸಂಕೇಶ್ವರ, ಹುಬ್ಬಳ್ಳಿ.

೨೭. ಡಾ: ವಸಂತ ಪಾಟೀಲ "ಮಾನವತಾವಾದಿ ಬಸವಣ್ಣ". **ಮಾನವಿಕ ಭಾರತಿ.**— ಸಂಪುಟ ೧, ಸಂಚಿಕೆ ೧. ಷಾಣ್ಮಾಸಿಕ, ಕ. ವಿ. ವಿ. ಧಾರವಾಡ, ಜನೇವರಿ ೧೯೭೭.

೨೮. "ನೀನೊಲಿದರೆ ಕೊರಡು ಕೊನರುವುದು
ಬರಡು ಹಯನಹುದು.
ವಿಷವು ಅಮೃತವಹುದು
ಸಕಲ ಪಡಿಪದಾರ್ಥವು ಇದಿರಲಿರ್ಪವು"—**ಬಸವಣ**

ಶೈವನ ಮಗ ವೈಷ್ಣವ ಎರಡರಲ್ಲಿಯೂ ತಂದೆ ಮಗನ ಸಂಬಂಧವಿದೆ. (೮) ದ್ರಾವಿಡರ ನಂತರ ಆರ್ಯರು (೯) ಸಂಸಾರ ಹೇಯದಲ್ಲಿ ಆಧ್ಯಾತ್ಮಿಕ ಭೌತಿಕಗಳೆರಡರಲ್ಲಿಯೂ ಸಂಸಾರವಿದೆ. (೧೦) ಗಂಡು ಹೆಣ್ಣುಗಳು ಆಧ್ಯಾತ್ಮಿಕದಲ್ಲಿಯೂ ಇರುವವು ಭೌತಿಕದಲ್ಲಿಯೂ ಸಹ. (೧೧) ಎರಡೂ ರಂಗಗಳಲ್ಲಿಯೂ ಗಂಡು ಮೊದಲು ತದನಂತರ ಹೆಣ್ಣು ಬರುವುದು (೧೨) ಗಂಡಿನಿಂದ ಹೆಣ್ಣು ಹುಟ್ಟಿದೆ. (೧೩) ಗಂಡಿಗೆ ಹೆಣ್ಣು ಅರ್ಧಾಂಗಿ, ಅರ್ಧನಾರಿ ನಟೇಶ್ವರ ಇದಕ್ಕೆ ಸಾಕ್ಷಿ.(೧೪) ಬಹುಶಃ ಗಂಡು ಇಚ್ಛಿಸುವುದು ಹೆಣ್ಣನ್ನು, ಹೆಣ್ಣು ಇಚ್ಛಿಸುವುದು ಮಕ್ಕಳನ್ನು (೧೫) ಒಟ್ಟಿನಲ್ಲಿ ಗಂಡಿಗೆ ಪ್ರಾಧಾನ್ಯತೆ—ಆಧ್ಯಾತ್ಮಿಕದಲ್ಲಿಯೂ ಭೌತಿಕದಲ್ಲಿಯೂ ಗಂಡು ಹೆಣ್ಣಿನಲ್ಲಿ ಸಮಾನತೆ ಅಶಕ್ಯ ಹಾಗೂ ಅದರ ಅವಶ್ಯಕತೆಯೂ ಇಲ್ಲ. ಇರಲೂ ಬಾರದು. (೧೬) ರಾಜಕೀಯ ಹಾಗೂ ಆಡಳಿತಾತ್ಮಕ ವಿಷಯಗಳಾದ ಸಂಘಟನೆ, ಸಾರ್ವಭೌಮತ್ವ ಹಾಗೂ ವಿಧೇಯಕತೆಗಳು ಆಧ್ಯಾತ್ಮಿಕತೆಯಲ್ಲಿಯೂ ಹಾಗೂ ಭೌತಿಕದಲ್ಲಿಯೂ ಇವೆ. (೧೭) ಎಲ್ಲ ವಿಕಸನವೂ ನೈಸರ್ಗಿಕ, ಸ್ವಾಭಾವಿಕ (೧೮) ಎಲ್ಲಕ್ಕೂ ದೈವಿಕ ಸಿದ್ಧಾಂತವು ಮೂಲಾಧಾರ.

ಒಟ್ಟಿನಲ್ಲಿ ಬಸವಣ್ಣನ ವಿಕಸನ ಸಿದ್ಧಾಂತವು ದೈವಿಕವೂ ಹೌದು, ವೈಜ್ಞಾನಿಕವೂ ಹೌದು. ಆದಿಯಿಂದ ಇಂದಿನವರೆಗಿನ ವಿಕಸನವನ್ನು ಇಷ್ಟು ಹಂತ ಹಂತವಾಗಿ, ಸ್ಪಷ್ಟವಾಗಿ ಯಾರೂ ಇಲ್ಲಿಯವರೆಗೆ ಹೇಳಿಲ್ಲ. ಆಧ್ಯಾತ್ಮಿಕಕ್ಕೆ, ವಿಜ್ಞಾನಕ್ಕೆ ಹಾಗೂ ಸಮಾಜಶಾಸ್ತ್ರಕ್ಕೆ ಬಸವಣ್ಣನವರ ಈ ಸಿದ್ಧಾಂತವು— ಒಂದು ಒಳ್ಳೆಯ ಕೊಡುಗೆ.

ಇಟಲಿ ದೇಶದ " ಬಂಡೆಚಿತ್ರ ಸಂಶೋಧನೆ ಮತ್ತು ಸಂರಕ್ಷಣೆ" ತರಬೇತಿಯ ಅನುಭವಗಳು

ರು. ಮ. ಷಡಕ್ಷರಯ್ಯ

ಇಟಲಿ ದೇಶದ ಬ್ರೆಶಿಯಾ ಪ್ರಾಂತದಲ್ಲಿಯ ೬೦ ಕಿ.ಮೀ. ಉದ್ದದ ವಾಲ್ಕ ಮೋನಿಕಾ ಎಂಬ ಪರ್ವತದಲ್ಲಿ ಕಪ್ರೊದಿಪ್ರೋಂತೆ ಎಂಬ ಚಿಕ್ಕ ಹಳ್ಳಿಯಲ್ಲಿ ಜಗತ್ಪ್ರಸಿದ್ಧ ಸೆಂಟ್ರೋಕಮುನೊ ಡಿ ಸ್ಟುಡಿ ಪ್ರಿ ಇಸ್ಟಾರಿಚಿ ಎಂಬ ಸಂಸ್ಥೆ ಇದೆ. ಇಲ್ಲಿ ಜುಲೈ ೬ ರಿಂದ ಅಗಸ್ಟ್ ೮, ೧೯೮೩ ವರೆಗೆ ೩೩ ದಿವಸ ಬಂಡೆಚಿತ್ರ ಸಂಶೋಧನೆ ಮತ್ತು ಸಂರಕ್ಷಣೆ'ಯ ಬಗ್ಗೆ ಬೇಸಿಗೆಕಾಲದ ತರಬೇತಿ ಪಡೆದೆನು. ಈ ಪ್ರದೇಶದಲ್ಲಿ ಕಮ್ಯುನಿಯನ್ ಜನಾಂಗದ ಜನರಿರುವುದರಿಂದ ಈ ಸಂಸ್ಥೆಗೆ 'ಸೆಂಟರೋ ಕಮ್ಯುನೊ' ಅಥವಾ 'ದಿ ಕಮ್ಯುನಿಯನ್ ಸೆಂಟರ್ ಫಾರ್ ಪ್ರಿಃ ಇಸ್ಟಾರಿಕ್ ಆ್ಯಂಡ್ ಎತನೋಲಾಜಿಕ್ ಸ್ಟಡೀಜ' ಎಂದು ಕರೆಯುತ್ತಾರೆ. ಈ ಸಂಸ್ಥೆ ಅಗಸ್ಟ ೩ ೧೯೬೪ ರಲ್ಲಿ ೨೧ ಸದಸ್ಯರಿಂದ ಸ್ಥಾಪನೆಯಾಗಿದೆ. ಸುಮಾರು ೧೦೦೦ ಕ್ಕೂ ಮಿಕ್ಕಿ ಈಗ ಈ ಸಂಸ್ಥೆಗೆ ಸದಸ್ಯರಿದ್ದಾರೆ. ಈ ಸಂಸ್ಥೆ ಯುರೋಪದಲ್ಲೇ ವಿಶಿಷ್ಟ ಸಂಶೋಧನ ಕೇಂದ್ರ. ಬಂಡೆಚಿತ್ರ ಸಂಶೋಧನೆಗೆ ಇದು ಪ್ರಪಂಚದಲ್ಲೇ ಒಂದು ಹೆಸರಾಂತ ಕೇಂದ್ರವಾಗಿದೆ. ವಾಲ್ಕ ಮೋನಿಕಾ ಪರ್ವತ ಪ್ರದೇಶದಲ್ಲಿಯ ಅಸಂಖ್ಯಾತ ಬಂಡೆ ಚಿತ್ರವಿರುವುದರಿಂದ ಈ ಸಂಸ್ಥೆ ಸಾಕಷ್ಟು ಜನಪ್ರಿಯವಾಗಿದೆ. ಇಲ್ಲಿ ೧,೩೦,೦೦೦ ಬಂಡೆ ಚಿತ್ರಗಳು ಪತ್ತೆಯಾಗಿ ಅವುಗಳನ್ನೆಲ್ಲ ೧೨ ವರ್ಷದಲ್ಲಿ ಪ್ರತಿಮಾಡಿಕೊಂಡು ಮತ್ತು ಪುಸ್ತಕದ ಪಟ್ಟಿಯನ್ನು ಬೆಳಕಿಗೆ ತರುವುದರಲ್ಲಿ ಈ ಸಂಸ್ಥೆ ಯಶಸ್ಸನ್ನು ಗಳಿಸಿದೆ. ಈ ಬಂಡೆ ಚಿತ್ರಗಳ ಕಣಿವೆ (ಪರ್ವತ ಪ್ರದೇಶ) ಯು ೧೯೭೯ರಲ್ಲಿ ಪ್ರಪಂಚದ ಪಿತ್ರಾರ್ಜಿತ ಆಸ್ತಿಯಾಗಿ ಯುನೆಸ್ಕೋ ಕೈಗೆ ಸೇರಿದೆ. ಇಲ್ಲಿಯ ಪುಸ್ತಕ ಭಂಡಾರ ಉತ್ತರ ಇಟಲಿಯಲ್ಲೇ ಪ್ರಸಿದ್ಧವಾಗಿದೆ.

ಈ ತರಬೇತಿಗೆ ಯುನೆಸ್ಕೋ ನನಗೆ ವಿದ್ಯಾರ್ಥಿ ವೇತನ ನೀಡಿತ್ತು. ನಮ್ಮ ದೇಶದಿಂದ ನಾನೊಬ್ಬನೇ ಈ ತರಬೇತಿಯಲ್ಲಿ ಭಾಗವಹಿಸಿದ್ದೆನು. ಪ್ರೊ|| ಇಮ್ಮೆನಲಲ ಆನಾಟಿ ಅಂತರಾಷ್ಟ್ರೀಯ ಬಂಡೆಚಿತ್ರಗಳ ಸಂಶೋಧನೆಯಲ್ಲಿ ಪ್ರಸಿದ್ಧ ವಿದ್ವಾಂಸರು. ಇವರು ಈ ಸಂಸ್ಥೆಯ ಡೈರೆಕ್ಟರ. ಇವರು ನನ್ನ ಪ್ರಾಗೈತಿಹಾಸಿಕ ಸಂಶೋಧನೆಯ ಅನುಭವ ನೋಡಿ 'ಬಂಡೆ ಚಿತ್ರಗಳ ಸಂಶೋಧನೆ ಮತ್ತು

ಸಂರಕ್ಷಣೆ' ಬಗ್ಗೆ ತಮ್ಮ ಸಂಸ್ಥೆಯಲ್ಲಿ ಬೇಸಿಗೆ ಕಾಲ ತರಬೇತಿ ಪಡೆಯಲು ಯುನೆಸ್ಕೋದಿಂದ ನನ್ನ ವಿದ್ಯಾರ್ಥಿ ವೇತನ ಕಲ್ಪಿಸಿಕೊಟ್ಟರು.

ಪ್ರಾಗೈತಿಹಾಸಿಕ ಮತ್ತು ಮೂಲಚಿತ್ರಕಲೆಯ ಮತ್ತು ಇವುಗಳಿಗೆ ಸಂಬಂಧಿಸಿದ ವಿಷಯವು ಮೂಲ ಮಾನವ ಮತ್ತು ಪ್ರಾಗೈತಿಹಾಸಿಕ ಮಾನವನ ಆರ್ಥಿಕ, ಸಾಮಾಜಿಕ ಜಾಣತನದ ಜೀವನದ ಅಭ್ಯಾಸ ಮಾಡುವುದು ಮತ್ತು ಕಮೂನಿಯನ್ ಜನರ ನಾಗರಿಕತೆಯ ಮೇಲೆ ಬೀರಿದ ಪ್ರಭಾವದ ಬಗ್ಗೆ ಸಂಶೋಧನೆ ಮಾಡುವುದು ಈ ಸಂಸ್ಥೆಯ ಉದ್ದೇಶವಾಗಿದೆ. ಯುನೆಸ್ಕೋ ಮತ್ತು ಇನ್ನಿತರ ಸಂಸ್ಥೆಗಳ ಆರ್ಥಿಕ ನೆರವಿನಿಂದ ಬಂಡೆಚಿತ್ರ ಸಂಶೋಧನೆ ಮತ್ತು ಸಂರಕ್ಷಣೆ ಬಗ್ಗೆ ವಿಶೇಷ ಅಂತರರಾಷ್ಟ್ರೀಯ ತರಬೇತಿ ನೀಡುವದು ಈ ಸಂಸ್ಥೆಯ ಮತ್ತೊಂದು ಉದ್ದೇಶವಾಗಿದೆ. ಮುಂದೆ ಇವರ ಸಂಶೋಧನೆ ಮತ್ತು ಅಭ್ಯಾಸದ ಕ್ರಮ ಎಲ್ಲಾ ಕಡೆ ಒಂದೇ ಬಗೆಯಿರಬೇಕೆಂಬುದು ಈ ಸಂಸ್ಥೆಯ ಇನ್ನೊಂದು ಉದ್ದೇಶವಾಗಿದೆ.

ದಕ್ಷಿಣ ಭಾರತದ ಶಾಸನಗಳ ೯ನೆಯ ಸಂಪುಟದಲ್ಲಿ ಉಜ್ಜಯಿನಿ ಶ್ರೀ ಮರುಳಸಿದ್ದೇಶ್ವರ ದೇವಾಲಯದ ಕಂಭಶಾಸನ ಅಸ್ಪಷ್ಟ ಒಡೆದಿದೆ ಎಂದು ಅಪೂರ್ಣವಾಗಿ ಪ್ರಕಟವಾಗಿದೆ. ನಾನು ಇದರ ಪ್ರತಿಯನ್ನು ಪೂರ್ಣವಾಗಿ ತೆಗೆದುಕೊಂಡು ಈ ಶಾಸನ ಪಾಠಕ್ರಮವನ್ನಲ್ಲದೆ ಇನ್ನಿತರ ಪ್ರತಿಗಳನ್ನು ನೋಡಿ ೧೯೭೭ರಿಂದ ನನಗೆ ಸಂಶೋಧನೆ ಪ್ರಾರಂಭಮಾಡಲು ನಮ್ಮ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಶ್ರೀನಿವಾಸ ರಿತ್ತಿ ಅವರಿಂದ ಪುರಸ್ಕಾರ ದೊರೆಯಿತು. ಮುಂದೆ ಸಂಶೋಧನೆಗೆ ಪ್ರೋತ್ಸಾಹ ಉತ್ತೇಜನ ಒದಗಿಸುತ್ತ ನನಗೆ ಪಿಎಚ್.ಡಿ ಸಂಶೋಧನೆಗೆ ಮಾರ್ಗದರ್ಶನ ನೀಡುತ್ತಿರುವವರು ಡಾ. ಅ. ಸುಂದರ ಅವರು. ಸಾಕಷ್ಟು ಸಲ ತಲೆದೋರಿದ ಆರ್ಥಿಕ ಮುಗ್ಗಟ್ಟನ್ನು ಎದುರಿಸಿ ಮುನ್ನುಗ್ಗಲು ಸಹಾಯಕರಾದವರು ಶ್ರೀ ಮುನೀರ ಅಹ್ಮದ ಜವಳಿ ಮತ್ತು ಶ್ರೀ ಎಂ. ಎಂ. ಜೆ ಸತ್ಯಪ್ರಕಾಶ ನನ್ನ ಆತ್ಮೀಯ ಗೆಳೆಯರು. ಇಟಲಿ ಮತ್ತು ಆಸ್ಟ್ರಿಯಾ ದೇಶದ ಇತ್ತೀಚಿನ ಪ್ರವಾಸದ ಅವಕಾಶ ಕಲ್ಪಿಸಿಕೊಡಲಿಕ್ಕೆ ಇವರೆಲ್ಲ ಮುಖ್ಯ ಕಾರಣರೆಂದು ಭಾವೋದ್ವೇಗದಿಂದ ಈ ಸಂದರ್ಭದಲ್ಲಿ ನಾನು ನೆನೆದರೆ ಉತ್ಪ್ರೇಕ್ಷೆಯಾಗಲಾರದು. ಈ ಸಂಸ್ಥೆಯಲ್ಲಿ ಬೇಸಿಗೆ ತರಬೇತಿ ಪಡೆಯಲು ಒಟ್ಟು ನಾಲ್ಕು ತಂಡಗಳ ೮ ದೇಶಗಳಿಂದ ೨೧ ಅಭ್ಯರ್ಥಿಗಳು ಭಾಗವಹಿಸಿದ್ದರು.

ಇಂಡಿಯಾದಿಂದ ನಾನು, ಸೌದಿ ಅರೇಬಿಯಾದಿಂದ ಶ್ರೀ ಮಾಜಿದಖಾನ, ಕಾಂಗೋದಿಂದ ಶ್ರೀ ಪತೆರ್ ನಾ ಬಹುಬುಜ, ಅಮೇರಿಕಾದಿಂದ ಪ್ರೊ. ಹೆಲನ್, ಸ್ವಿಸ್‌ದಿಂದ ಶ್ರೀ ಮಾರ್ಕ ಎಂಡ್ರಿ ಬುಂಗ್ಲಿ: ಪೋರ್ತಗಲ್‌ದಿಂದ ಕುಮಾರಿ ತೆರೆಸಾ, ಗೊಮೆಸ್, ಡಾ ಕೋಸ್ಟಾ, ಇಸ್ರೇಲದಿಂದ ಲಂಡನ್ನಿನ ಶ್ರೀ ಲೂಡ್ವಿಗ್ ಜಫೆ ಮತ್ತು ಇಟಲಿ ದೇಶದವರಾದ ಕು. ಜೂಜಿ, ಕು. ಮಾರಿಸೆಲ್ಲಾ ಲಾಂಡಿ, ಕು.

ಲೊರಿದಾನಾ ಲೊಂಬರಡಿ, ಕು. ಪತ್ರಿಜಿಯಾ, ನೆಗ್ಗಿಯಾ, ಕು. ಅತೊನೆಲ್ಲಾ ಸಿಮೊನೆ, ಕು. ಬಾರ್ಬರಾ ತೆಬಲ್ಡಿ, ಕು. ಸೀಲ್ವಾನೆ ಗೊವಲ್ಡೊ, ಕು. ಲೂಜಿಯಾ ಜೆಲ್ಲಸ್ಪಿಗಾ, ಕು. ಜಿರ್ವೊನ್ನಾ ಸೊರೆಗ್ನಿ, ಕು. ಅಂತೊಲಾಲ್ಲಾ ಬೆರಟಾ, ಶ್ರೀ ಜುಜೆಪಿ ಬ್ರೂನೊದ್, ಶ್ರೀ ಕ್ಲಾಡಿವೆಮೊಂದಿಸಿ, ಶ್ರೀ ಅಂಟೋನಿಯೋ, ಶ್ರೀ ಫ್ರಾಂಕೊ ಪಿಗೊಲೊಟ್ಟಿ ಇವರೆಲ್ಲ ಭಾಗವಹಿಸಿದ್ದರು.

ತರಬೇತಿಯಲ್ಲಿ ನಮಗೆ ಪ್ರಾಗೈತಿಹಾಸಿಕ ಬಂಡೆಚಿತ್ರಗಳ ಸಂಶೋಧನೆ, ಸಂರಕ್ಷಣೆ, ಉತ್ಖನನ, ವಿವಿಧ ದೇಶದ ವಿದ್ವಾಂಸರಿಂದ ವಿಶೇಷ ಉಪನ್ಯಾಸಗಳು, ಪ್ರತಿವಾರ, ರಜಾದಿನಗಳಲ್ಲಿ ಪ್ರವಾಸ, ಚರ್ಚಾಕೂಟ, ಮನೋರಂಜನ ಕಾರ್ಯ ಕ್ರಮಗಳು ನಡೆಯುತ್ತಿದ್ದವು. ತರಗತಿ ಸಮಯದಲ್ಲಿ ಮಾತ್ರ ಸಮಯಕ್ಕೆ ಬಹಳ ಮಹತ್ವ ಇದ್ದಿತು. ಮತ್ತು ಎಲ್ಲಾ ಸಂದರ್ಭಗಳಲ್ಲಿ ಪ್ರತಿದಿನ ಓಡಾಡಲಿಕ್ಕೆ ನಮಗೆ ಕಾರುಗಳ ಸೌಕರ್ಯವಿತ್ತು.

ತರಗತಿಗಳು ಪ್ರತಿದಿನ ಬೆಳಿಗ್ಗೆ ೮ ರಿಂದ ಸಾಯಂಕಾಲ ೫-೩೦ ರವರೆಗೆ ನಡೆಯುತ್ತಿದ್ದವು ಮಧ್ಯಾಹ್ನ ಎರಡು ತಾಸು ೧೨-೩೦ ರಿಂದ ೨-೩೦ ವರೆಗೆ ಊಟಕ್ಕೆ ಬಿಡುವು ಇರುತ್ತಿತ್ತು. ವಾರಕ್ಕೆ ಒಂದು ಅಥವಾ ಎರಡು ವಿಶೇಷ ಉಪನ್ಯಾಸಗಳು ಸಾಮಾನ್ಯವಾಗಿ ರಾತ್ರಿ ೮-೩೦ ರಿಂದ ೧೧-೦೦ ಗಂಟೆಯುವರೆಗೆ ನಡೆಯುತ್ತಿದ್ದವು. ಈ ಉಪನ್ಯಾಸಗಳಿಗೆ ಕಾನ್ಫೆರೆನ್ಸ್ ಎಂದು ಕರೆಯುತ್ತಿದ್ದರು.

ಪ್ರಾರಂಭದಲ್ಲಿ ವಾಲ್ ಕ್ಯಮೋನಿಕ ಪರ್ವತ ಕಾಡು ಪ್ರದೇಶದಲ್ಲಿ ಪ್ರಾಗೈತಿ ಹಾಸಿಕ ಬಂಡೆಚಿತ್ರಗಳ ಅನ್ವೇಷಣೆ ಮತ್ತು ಸಂಶೋಧನೆ ನಡೆಸಿದೆವು. ಇದರಿಂದ ಕೆಲವು ಬಂಡೆಚಿತ್ರ ನೆಲೆಗಳು ಬೆಳಕಿಗೆ ಬಂದವು. ನಂತರ ೨೧ ವಿದ್ಯಾರ್ಥಿಗಳನ್ನು ಮೂರು ಗುಂಪುಗಳನ್ನಾಗಿ ಬೇರ್ಪಡಿಸಿದರು. ಒಂದೊಂದು ಗುಂಪಿಗೆ ಒಬ್ಬೊಬ್ಬ ಕಪೋ ಎಂದರೆ ಶಿಕ್ಷಕರನ್ನು ನೇಮಿಸಿ ಗುಂಪಿನ ಒಂದು ವಿಧದ ಕೆಲಸವನ್ನು ವಹಿಸಿದ್ದರು. ತರಬೇತಿ ಅಂತ್ಯದಲ್ಲಿ ಪ್ರತಿಯೊಂದು ಗುಂಪಿನವರು ತಮ್ಮ ಕೆಲಸ ಗಳನ್ನು ೩೩ ದಿನಗಳಲ್ಲಿ ಪೂರ್ಣ ಮುಗಿಸಿ ಎಲ್ಲರ ಸಮ್ಮುಖದಲ್ಲಿ ತಮ್ಮ ವರದಿ ಒಪಿಸಂಗಳನ್ನು. ಈ ಸ್ಥಿಗೆಪ್ಪಿಸುವ ಜವಾಬ್ದಾರಿ ಆಯಾ ಗುಂಪಿನ ಕಪೋಗಳಿಗಿತ್ತು.

ನಮ್ಮ ಗುಂಪಿನಲ್ಲಿ ಎಂಟೂ ದೇಶದ ಅಭ್ಯರ್ಥಿಗಳು ಇದ್ದೆವು. ನಮ್ಮ ಗುಂಪಿಗೆ ಕು. ಮಿಲಾ ಅಂತ ಒಬ್ಬ ಕಪೋ ಇದ್ದಳು. ಇವಳಿಗೆ ಮಾತ್ರ ಈ ಸಂಸ್ಥೆಯ ಕಪೋ ಗಳಲ್ಲಿ ಹಲವಾರು ಭಾಷೆಗಳು ಗೊತ್ತಿದ್ದವು. ಇದರಿಂದಾಗಿ ಇವಳನ್ನು ಪ್ರಾಯಶಃ ನಮ್ಮ (ಅಂತರಾಷ್ಟ್ರೀಯ ಅಭ್ಯರ್ಥಿಗಳ) ಮೇಲೆ ಕಪೋ ಆಗಿ ನೇಮಿಸಿರಬೇಕು.

ಈ ಸಂಸ್ಥೆ ಉತ್ತರಕ್ಕೆ ಸುಮಾರು ೧ ಕಿ.ಮಿ. ಅಂತರದಲ್ಲಿರುವ ಸೆರದೀನ ಎಂಬ ಪ್ರದೇಶದ ‹ಬಂಡೆಚಿತ್ರದ› ನೆಲೆಯಲ್ಲಿ ನಮ್ಮ ಗುಂಪಿಗೆ ಕೆಲಸ ವಹಿಸಿದ್ದರು

ಇಲ್ಲಿಯ ಬಂಡೆಚಿತ್ರ ಪ್ರಾಯಶಃ ವಾಲ್ಕ ಮೋನಿಕಾ ಪ್ರದೇಶದಲ್ಲಿಯೇ ಅಂತ್ಯಂತ ದೊಡ್ಡದು. ಈ ಪ್ರದೇಶದ ಪೂರ್ವಕ್ಕೆ ಬುಡದಲ್ಲೇ ಇಜಿಯೋ ಎಂಬ ಸುಂದರ ಸರೋವರ ಇದೆ. ಈ ಹಿಂದೆ ಈ ಬಂಡೆ ಚಿತ್ರನೆಲೆಯನ್ನು ಸುಮಾರು ಅರ್ಧ ಭಾಗ ವನ್ನು ಉತ್ಖನನ ಮಾಡಿ ಸ್ವಚ್ಛಮಾಡಲಾಗಿತ್ತು. ಸುಮಾರು ೧೬ ದಿವಸ ಇಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದವರಗೆ ಕೆಲಸ ಮಾಡಿದೆವು. ಇದರಿಂದ ಅಪೂರ್ವವಾದ ಮಾಹಿತಿ ನನಗೆ ಲಭಿಸಿತು.

ಬಂಡೆಚಿತ್ರ ನೆಲೆಯ ಮೇಲೆ ಸುಮಾರು ೫೫ ಸೆ. ಮಿ. ಆಳ ೧೫×೧೦ ಅಡಿಯ ಉದ್ದ–ಅಗಲವಾದ ಮಣ್ಣಿನ ಗುಡ್ಡೆ ಆವರಿಸಿತ್ತು. ಕೆಲದಿನ ಆಗಾಗ್ಗೆ ಹೊರಗಿನಿಂದ ಬಂದ ವಿದ್ಯಾರ್ಥಿಗಳ ಮತ್ತು ಇನ್ನಿತರರ ಸಹಾಯದಿಂದಲೂ ಈ ಗುಡ್ಡೆಯನ್ನು ಉತ್ಖನನದಿಂದ ತೆಗೆದು ಬಂಡೆಚಿತ್ರದ ನೆಲೆಯನ್ನು ಸ್ವಚ್ಛಮಾಡಿದೆವು. ಇಲ್ಲಿ ಮಧ್ಯ ಯುಗಕ್ಕೆ ಸೇರಿದ ಕೆಲವು ಮಡಿಕೆ ಚೂರುಗಳು ಮಾತ್ರ ದೊರೆತವು. ನಂತರ ನಮಗೆ ಬಂಡೆಚಿತ್ರ ಕಾಪಾಡುವ ಕೆಲಸ ವಹಿಸಿದರು. ಈ ಬಂಡೆಯು ಇನ್ನಿತರ ಪ್ರದೇಶದ ಬಂಡೆಗಳಂತೆ ಸ್ಯಾಂಡ್ ಸ್ಟೋನದಾಗಿದೆ. ಈ ಬಂಡೆ ನೆಲೆಯನ್ನು ನೀರಿನಿಂದ ಸ್ವಚ್ಛವಾಗಿ ತೊಳೆದೆವು. ಮುನ್ನೆಚ್ಚರಿಕೆ ಕ್ರಮವಾಗಿ ಇಲ್ಲೊಂದು ವಿಶೇಷ ಅನುಕೂಲ ಕಲ್ಪಿಸಿಕೊಂಡೆವು. ಏಕೆಂದರೆ ಈ ಬಂಡೆಯು ಇಳಿಜಾರಾಗಿದೆ. ಈ ಬಂಡೆಮೇಲ್ಭಾಗದಲ್ಲಿ ಬಿರುಕು ಬಿಟ್ಟ ಹಾಗೂ ಚಿಕ್ಕಪುಟ್ಟ ರಂಧ್ರಗಳಿದ್ದ ಜಾಗವನ್ನು ನೋಡಿಕೊಂಡು ಸರಿಸಾಧಾರಣ ಒಂದೇ ಸರಳ ರೇಖೆಯಲ್ಲಿ ಬರುವಹಾಗೆ ಕೆಲವುಗಳನ್ನು ಗುರುತಿಸಿಕೊಂಡು ಹಗ್ಗಕಟ್ಟುವ ಸ್ಟೀಲಿನ ಕೊಂಡಿ ಮೊಳೆಗಳನ್ನು ಭದ್ರವಾಗಿ ಆ ಸ್ಥಳಗಳಲ್ಲಿ ಜಡಿದು ಬೇಕಾದ ಅಳತೆಗೆ ಹಗ್ಗಗಳ ತುದಿಯಿಂದ ಗಟ್ಟಿ ಮತ್ತು ಉದ್ದವಾದ ದುಂಡನೆಯ ಕಟ್ಟಿಗೆ ಕೋಲು ಅಥವಾ ಕಂಭಗಳಿಗೆ ಕಟ್ಟುತ್ತಿದ್ದರು. ಇದರಿಂದಾಗಿ ಕಟ್ಟಿಗೆ. ಕೋಲಿನ ಮೇಲೆ ಒರಗಿ ನಿಂತು ಅವಶ್ಯವಾದರೆ ಹಗ್ಗಗಳನ್ನು ಒಂದೆಡೆ ಹಿಡಿದು ಇಳಿ-ಜಾರು ಬಂಡೆಯಮೇಲೆ ಕೆಲಸ ಮಾಡಲು ಅನುಕೂಲವಾಗಿತ್ತು. ನಿಜವಾಗಿಯೂ ಈ ವಿಧಾನ ಎತ್ತರ ಕಡಿದಾದ ಗುಡ್ಡಗಳ ಬಂಡೆ ಚಿತ್ರಗಳನ್ನು ಅಭ್ಯಾಸಮಾಡಲಿಕ್ಕೆ ಅನುಕೂಲಕರವಾಗುತ್ತದೆ.

ಇಳಿಜಾರಿನಲ್ಲಿ ಕಟ್ಟಿಗೆ ಮೇಲೆ ನಿಂತು ಬಂಡೆಯನ್ನು ತೊಳೆದೆವು. ನಂತರ ಅಲ್ಲಲ್ಲಿ ಹಾಳಾದ ಮತ್ತು ಕ್ಷೀಣಿಸಿದ ಚಿತ್ರಗಳ ಬಾಹ್ಯರೂಪದ ಅಭ್ಯಾಸ ಕೈಕೊಂಡೆವು. ಏಕೆಂದರೆ ಅನೇಕ ರೀತಿಯಲ್ಲಿ ಬಂಡೆಚಿತ್ರಗಳು ಹಾಳಾಗಿರುವದನ್ನು ನಾವು ಅಲ್ಲಿ ಕಾಣುತ್ತೇವೆ. ಅವುಗಳೆಂದರೆ: ೧) ತನ್ನಷ್ಟಕ್ಕೆ ತಾನೇ ಚಲಿಸುವ ಅಂಶಗಳಿಂದ, ಉದಾಹರಣೆಗೆ ಕಲ್ಲು ಬಂಡೆ ಬಿರುಕುಬಿಡುವುದು ಮತ್ತು ಸವೆಯುವದು, ಇದಕ್ಕೆ ಮುಖ್ಯಕಾರಣ ನೀರು ಮತ್ತು ಗಾಳಿ ಮತ್ತು ನೀರುಗಡ್ಡೆಯಿಂದ ೨) ಭೌತ ರಾಸಾಯನಿಕ ಅಂಶಗಳಿಂದ. ಉದಾರಣೆಗೆ ಆಮ್ಲ ಅಥವಾ ಉಪ್ಪುಗೂಡಿದ ನೀರಿನಿಂದ

ಸ್ವಾಭಾವಿಕವಾಗಿ ಆಕ್ಸೈಡಗೆ ಪರಿವರ್ತನೆ ಹೊಂದಿ ತುಕ್ಕು ಮತ್ತು ರಂಪ್ರ ಚಿಹ್ನೆ
ಮೂಡುವವು. ೩)ಪ್ರಾಣಿ ಮತ್ತು ಮನುಷ್ಯರಿಂದ. ಉದಾಹರಣೆಗೆ: ತುಳಿತದಿಂದ,
ಬಂಡೆಗಳನ್ನು ಹೊಡೆದು ಧ್ವಂಸಮಾಡುವುದರಿಂದ, ಹೊಸದಾಗಿ ಇವುಗಳ ಮೇಲೆ
ಗೆರೆಗಳನ್ನು ಕೊರೆಯುವವರಿಂದ ಅಥವಾ ಚಿತ್ರಗಳನ್ನು ನಮೂದಿಸುವದರಿಂದ, ನಿಜ
ವಾದ ಮೊದಲಿನ ಚಿತ್ರಗಳು ಅಸ್ಪಷ್ಟವಾಗತ್ತವೆ. ೪) ಪ್ರಾಣಿ ಸಸ್ಯಜೀವಿಗಳ ಅಂಶ
ದಿಂದ, ಉದಾಹರಣೆಗೆ: ಲಿಚನ್‌ಗಳಿಂದ, ಪಂಗಿ ಮತ್ತು ಇನ್ನಿತರ ಸೂಕ್ಷ್ಮಜೀವಿಗಳು
ಬಂಡೆಚಿತ್ರಗಳ ಮೇಲೆ ಆಕ್ರಮಿಸಿ ಜೀವಿಸುವದರಿಂದ ಹೀಗೆ ಹಲವಾರು ವಿಧದಿಂದ
ಚಿತ್ರಗಳು ನಶಿಸುವ ಕಾರಣಗಳನ್ನು ಅಭ್ಯಾಸ ಮಾಡಿದೆವು. ಹೀಗೆ ನಶಿಸಿದ ಚಿತ್ರಗಳು
ಐದು ರೀತಿಯಲ್ಲಿ ಇಲ್ಲಿನವರೆಗೆ ಉಳಿದುಕೊಂಡ ಬಗೆಯನ್ನು ಕಂಡುಕೊಳ್ಳಲಾಗಿದೆ.
೧) ಬಹುಶ್ರೇಷ್ಠ, ೨)ಹಿತವಾದ, ೩) ಮಧ್ಯಮ, ೪)ಕೆಟ್ಟ, ೫)ಅತಿಕೆಟ್ಟ. ಇದಾದ
ನಂತರ ಚಿತ್ರಗಳ ಮೇಲೆ ಇಂಗಾಲ, ಗಂಧಕ ಮತ್ತು ಇನ್ನಿತರ ಹೊಗೆ ಏನಾದರೂ
ಆವರಿಸಿದೆಯೇ ಎಂಬುದನ್ನು ಗಮನಿಸಬೇಕು ಮತ್ತು ಜಾಗರೂಕತೆಯಿಂದ ವೈಜ್ಞಾ
ನಿಕವಾಗಿ ಹೊರತೆಗೆಯುವ ಬಗ್ಗೆ ಕಾಳಜಿ ವಹಿಸಬೇಕು. ಕಾರಣಾಂತರದಿಂದ ಬಂಡೆ
ಚಿತ್ರಗಳು ಬಲಿಯಾಗುವ ಸಂಭವವನ್ನು ತಪ್ಪಿಸಲು ಬೇರೆ ಬೇರೆ ಪರಿಣಿತರ ಸಲಹೆ
ಮತ್ತು ಸಹಕಾರ ಪಡೆದು ಸೂಕ್ತ ಸಂರಕ್ಷಣೆಯನ್ನು ಕೈಕೊಳ್ಳಬೇಕು.

ತದನಂತರ ಚಿತ್ರಗಳ ಪ್ರತಿರೂಪ ತಯಾರಿಸುವ ವಿಧಾನ ಪ್ರಾರಂಭಿಸಿದೆವು.
ಡಿಸ್ಟೆಂಪರಿನಂತ ಬಿಳಿಯ ರಾಸಾಯನಿಕ ಬಣ್ಣವನ್ನು ನೀರಿನಲ್ಲಿ ಕರಗುವ ಅತಿ ಅಳುಕು
ಅಥವಾ ತೆಳ್ಳಗೆ ಮಾಡಿಕೊಂಡು ಬಂಡೆ ಚಿತ್ರಗಳಿಲೆಯ ಮೇಲೆ ಸುಣ್ಣಬಳಿದ ಹಾಗೆ
ಒಂದೇ ದಪ್ಪ ತೆಳುವಾದ ಪದರು ಹೊಳೆಯುವ ಹಾಗೆ ಬ್ರಿಸ್ಸಿನಿಂದ ಬಣ್ಣವನ್ನು ಲೇಪಿ
ಸಿದೆವು. ಈ ಬಣ್ಣವು ಕಲ್ಲುಬಂಡೆಯ ಮೇಲೆ ಯಾವುದಾದರೂ ಕ್ರಿಯೆಯನ್ನು ನಡೆಸಿ
ಚಿತ್ರದ ಬಾಹ್ಯರೂಪವನ್ನು ಹಾಳುಮಾಡಬಹುದೇ? ಎಂಬುದರ ಬಗ್ಗೆ ಮೊದಲೇ
ಪ್ರಯೋಗ ಮಾಡಿ ನೋಡಿಕೊಳ್ಳಬೇಕು. ನಂತರ ಈ ಬಣ್ಣವನ್ನು ಲೇಪಿಸಬೇಕು.
ಇದನ್ನು ಪೂರ್ಣವಾಗಿ ಸುಮಾರು ೨೪ ತಾಸು ಒಣಗಲು ಬಿಡಬೇಕು. ಈ ರಾಸಾಯನಿಕ
ಬಣ್ಣದ ವಿಶೇಷ ಸಂರಕ್ಷಣೆ ಗುಣವೆಂದರೆ ಸೂಕ್ಷ್ಮಜೀವಿಗಳಿಂದಾಗಲೀ ಭೌತರಾಸಾ-
ಯನಿಕ ಕ್ರಿಯೆಗಳಿಂದಾಗಲೀ ಮುಂದೆ ಸಂಭವಿಸಬಹುದಾದಂಥ ಹಾನಿಯನ್ನು
ತೊಡೆದುಕೊಳ್ಳುವದು. ಐದು ವರ್ಷಕ್ಕೊಮ್ಮೆ ಬಂಡೆ ಚಿತ್ರಗಳಿಗೆ ಈ ಬಣ್ಣವನ್ನು
ಲೇಪಿಸುತ್ತಿರಬೇಕು. ನಂತರ ಇದ್ದಲಿಪುಡಿಯಂಥ ಕಪ್ಪು ಪುಡಿಯನ್ನು (ಮೃದು
ಮಾಡಿಕೊಂಡು) ಸ್ವಲ್ಪ ಒದ್ದೆಮಾಡಿಕೊಂಡು ದಪ್ಪನಾಗಿ ಮಡಚಿದ ಬಟ್ಟೆ
ಅಥವಾ ಡ್ಯಾಬರ್ ಸಹಾಯದಿಂದ ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ಒಣಗಿದ ಬಿಳಿ
ಬಣ್ಣ ಲೇಪನೆಯ ಮೇಲೆ ಕಪ್ಪೊತ್ತಬೇಕು. ಇದರಿಂದ ಸ್ವಲ್ಪ ಆಳದಲ್ಲಿರುವ ಚಿತ್ರ
ಗಳೂ ಸ್ಪಷ್ಟವಾಗಿ ಕಾಣುತ್ತವೆ. ನಾವು ಶಾಸನಗಳನ್ನು ಪ್ರತಿ ಮಾಡುವಾಗ ಈ

ವಿಧಾನವನ್ನು ಅನುಸರಿಸುತ್ತೇವೆ. ಎಲ್ಲಿ ವೀಕ್ಷಕರ ಸಂಖ್ಯೆ ಹೆಚ್ಚು ಇರುತ್ತದೆ, ಅಲ್ಲಿ ಬಣ್ಣಗಳ ಲೇಪನದಿಂದ ಬಂಡೆಚಿತ್ರಗಳನ್ನು ಸುಂದರವಾಗಿ ಕಾಣುವಂತೆ ಪ್ರದರ್ಶಿಸ ಬೇಕೆನ್ನುತ್ತಾರೆ. ಈ ವಿಧಾನಕ್ಕೆ ಬಂಡೆಚಿತ್ರಗಳ ಕಾಪಾಡುವಿಕೆ ಎಂದು ಕರೆಯುವರು.

ಮುಂದೆ ಬಂಡೆಚಿತ್ರಗಳನ್ನು ಪ್ರತಿಮಾಡಿಕೊಳ್ಳುವ ವಿಧಾನಕ್ಕೆ ಬಂದೆವು. ಚಿತ್ರಗಳನ್ನು ಪ್ರತಿಮಾಡುವ ಮೊದಲು ನಮಗೆ ತಿಳಿದದ್ದೇನೆಂದರೆ ಬಂಡೆ ಚಿತ್ರಗಳನ್ನು ಪೂರ್ಣವಾಗಿ ಸ್ಪಷ್ಟವಾಗಿ ಕಾಣಿಸುವ ಹಾಗೆ ಮಾಡಿಕೊಳ್ಳುವದು; ಪ್ರತಿಮಾಡಿಕೊಳ್ಳುವ ನೆಲೆ ಹೇಗಿದೆ ಮತ್ತು ಬಂಡೆ ಭಾಗ ಹೇಗಿದೆ ಎಂಬುದರ ನಕ್ಷೆ ತಯಾರಿಸುವದು, ಪ್ಲಾಸ್ಟಿಕ ಸೀಟಿನ ಉದ್ದಗಲದ ಆಕಾರವು ಪೂರ್ಣ ವಾಗಿ ಬಂಡೆನೆಲೆಗೆ ಆವರಿಸುವಷ್ಟು ಇದೆಯೇ? ಎಂಬುದನ್ನು ನೋಡಿಕೊಳ್ಳು ವದು, ಈ ಪ್ಲಾಸ್ಟಿಕ್ ಶೀಟು ಹೊಳೆಯುವ ಮೂರು ಎಲೆಗಳಿಗಿಂತ ಹೆಚ್ಚು ದಪ್ಪ ಇರಬಾರದು ಸಾಧ್ಯವಾದರೆ ೧೯೦×೧೨೦ ಸೆ.ಮಿ ಉದ್ದಗಲ ಭಾಗ ಮಾಡಿಕೊಳ್ಳದೆ ಪೂರ್ಣ ಪ್ಲಾಸ್ಟಿಕ್ ಶೀಟಿನ ಮೇಲೆ ಬಂಡೆಚಿತ್ರಗಳನ್ನು ಪ್ರತಿ ಮಾಡಿಕೊಳ್ಳಲು ಉಪಯೋಗಿಸಬಹುದು. ಒಮ್ಮೆ ಪ್ರತಿಮಾಡಲು ಪ್ರಾರಂಭಿಸಿದ ಬಳಿಕ ಅದು ಮುಗಿಯುವವರೆಗೆ ಅಲ್ಲಿಂದ ಪ್ರತಿ ಮಾಡುವವರು ಕದಲದೆ ಸಾಧ್ಯವಾದಷ್ಟು ಒಂದು ದಿನದಲ್ಲೇ ಪತ್ರಿಮಾಡಿಕೊಳ್ಳುವದನ್ನು ಮುಗಿಸಿ ಕೊಳ್ಳಬೇಕು. ಯಾವ ಚಿತ್ರದ ಜಾಗ ಬಿಡದೆ ನೆನಪಿನಲ್ಲಿಟ್ಟುಕೊಂಡು ಪ್ರತಿ ಪ್ಲಾಸ್ಟಿಕ್ ಶೀಟಿಗೆ ಅಂಕಿಗಳನ್ನು ಕೊಡುತ್ತ ಬಂದಿರಬೇಕು. ಪ್ಲಾಸ್ಟಿಕ್ ಶೀಟ ಮತ್ತು ಬಂಡೆಚಿತ್ರಗಳ ನೆಲೆಯು ಒಣಗಿರಬೇಕು. ಪ್ಲಾಸ್ಟಿಕ್ ಶೀಟ್ ಮೇಲೆ ಸ್ಥಳದ ಹೆಸರು, ದಿನಾಂಕ, ಬಂಡೆಯ ಅಂಕೆ, ಬಂಡೆಯ ಪ್ರದೇಶ ಪ್ರತಿ ಮಾಡಿ ಕೊಳ್ಳುವವರ ಹೆಸರುಗಳನ್ನು ನೊಂದಾಯಿಸಬೇಕು. ತದನಂತರ ಚಿತ್ರಗಳನ್ನು ಪ್ರತಿಮಾಡಿಕೊಳ್ಳುವ ಕಾರ್ಯ ನಿರ್ವಹಿಸುವದು ಹೇಗೆಂದರೆ ಬಂಡೆಯ ಒಂದು ಕಡೆಯಿಂದ ಸಕ್ರಮವಾಗಿ ಶೀಟುಗಳನ್ನು ಇಟ್ಟುಕೊಳ್ಳುತ್ತಾ ಎಲ್ಲಿಯೂ ಕುಟ್ಟಿತಗೆದ ಚಿತ್ರಗಳನ್ನು ಬಿಡದಂತೆ ಎಚ್ಚರವಹಿಸಿ ಮಸಿ ಅಳಿಯದ 'ಫೆಲ್ಟ-ಟಿಪ್ಪಡ್ ಪೆನ್ನುಗಳಾದ ಫ್ಲೋ ಮಾಸ್ಟರ್ ಅಥವಾ ಮೇಕರ್ ಪಿಲಾಟ್‌ಗಳಿಂದ ಪ್ರತಿಮಾಡಿಕೊಳ್ಳಬೇಕು. ಅಲ್ಕೋಹಾಲನ್ನು ಹತ್ತಿಯಲ್ಲಿ ನೆನಸಿ ಬೇಕಾದಾಗ ಮಸಿಯ ಚಿನ್ನೆಯನ್ನು ಅಳಿಸಬೇಕು. ಕುಟ್ಟಿ ತೆಗೆದ ಚಿತ್ರಗಳಿಗೆ ಕಪ್ಪುಮಸಿಯಿಂದ ಪ್ರತಿ ತೆಗೆಯಬೇಕು. ಇನ್ನಿತರ ಸ್ವಾಭಾವಿಕ ವಾಗಿ ಒಡೆದ ರಂಧ್ರವಿದ್ದವುಗಳಿಗೆ ಕೆಂಪು ಮಸಿಯ ಪೆನ್ನಿನಿಂದ ಗುರ್ತಿಸ ಬೇಕು. ಒಂದರಮೇಲೊಂದು ಚಿತ್ರಗಳು ಕಂಡರೆ ಬೇರೆ ಬೇರೆ ಬಣ್ಣದ ಪೆನ್ನು ಗಳಿಂದ ಚಿತ್ರದ ನಕಲನ್ನು ಗುರ್ತಿಸಿಕೊಳ್ಳಬೇಕು. ಬೇರೆ ಬಣ್ಣದ ಪೆನ್ನು ಗಳನ್ನು ಉಪಯೋಗಿಸಿದಲ್ಲಿ ಸೀಟಿನ ಕೆಳಗೆ ಇದರ ಬಗ್ಗೆ ವಿವರಿಸಿರಬೇಕು.

ನಂತರ ಇವುಗಳನ್ನು ಪೊರತೆಗೆದು ದುಂಡು ಉದ್ದನೆಯ ಕೊಳಲಿಗೆ ಸುತ್ತಿಕೊಂಡು ಪ್ರಯೋಗ ಶಾಲೆಗೆ ಒಯ್ಯಬೇಕು. ನಂತರ ಪ್ರಯೋಗ ಶಾಲೆಯಲ್ಲಿ ಮತ್ತೊಮ್ಮೆ ಟ್ರೇಸಿಂಗ್ ಪೇಪರಮೇಲೆ ಪ್ರತಿಮಾಡಿಕೊಳ್ಳಬೇಕು. ಉದ್ದೇಶಿಸಿದ ಮೇಜಿನ ಮೇಲೆ ಪ್ರತಿಪಡೆದ ಒಂದೊಂದು ಪ್ಲಾಸ್ಟಿಕ್ ಶೀಟ್‌ಗಳನ್ನಿಟ್ಟು ಅವರ ಮೇಲೆ ಟ್ರೇಸಿಂಗ್ ಪೇಪರ್ ಹೊಂದಿಸಿಕೊಂಡು ಡ್ರಾಯಿಂಗ್ ಪಿನ್ನಿನಿಂದ ಬಿಗಿ ಮಾಡಿಕೊಂಡು ಬರೆಯುವ ಕಡ್ಡಿಪೆನ್ನಿನಂಥ ೦.೪ ಮತ್ತು ೦.೬ ಸೆ. ಮಿ ವ್ಯಾಸದ ಬರೆಯುವ ಡ್ರಾಫ್ಟಿಂಗ್ ಪೆನ್ನಿನಿಂದ ಮತ್ತೊಮ್ಮೆ ಎಚ್ಚರಿಕೆಯಿಂದ ಪ್ರತಿಮಾಡಿಕೊಳ್ಳಬೇಕು. ತದನಂತರ ಕೊನೆಯಲ್ಲಿ ಪ್ರತಿಗಳನ್ನೆಲ್ಲಾ ದಾಖಲೆ ಮಾಡಿಕೊಂಡೆವು.

ಮುಂದೆ ಪ್ರತಿಯೊಂದು ಚಿತ್ರಗಳ ಅಭ್ಯಾಸವನ್ನು ಕೈಕೊಂಡೆವು. ಒಂದೊಂದು ಚಿತ್ರಕ್ಕೆ ಒಂದೊಂದು ಅಂಕಿಯನ್ನು ಕೊಡುತ್ತಾ ಹಲವಾರು ವಿಧದಲ್ಲಿ ವಿಂಗಡಿಸಿದ ಸಾಲುಪಟ್ಟಿ ನೊಂದಾಯಿಸಿದ ಬಂಡೆಚಿತ್ರಗಳಿಂದು ವಿಂಗಡಿಸುವ ಅರ್ಜಿಯಲ್ಲಿ ಒಂದೊಂದು ಚಿತ್ರದ ವಿವಿಧ ಗುಣಗಳಿಗೆ ಒಂದೊಂದು ಅಂಕಿಗಳನ್ನು ಆಯಾ ಚಿತ್ರದ ಮುಂದೆ ಅಂಕಿಗಳನ್ನು ಕೊಡುತ್ತಾ ಪುಸ್ತಕದ ಪಟ್ಟಿಯನ್ನು ತಯಾರಿಸಿದೆವು. ಅಂಕಿಯನ್ನು ಮೊದಲೇ ತಯಾರಿಸಿದ ಪುಸ್ತಕದಲ್ಲಿ ತೋರಿಸಿದ ಕ್ರಮದಂತೆ ಅಂಕಿಗಳನ್ನು ಕೊಡಲಾಯಿತು. ಇದಕ್ಕೆ ಪುಸ್ತಕ ಪಟ್ಟಿ ಎನ್ನುವರು. ಇದು ಮುಂದೆ ವಿಸ್ತಾರವಾಗಿ ಅಭ್ಯಾಸ ಮಾಡಲು ಉಪಯೋಗವಾಗುವುದು. ಬಂಡೆಚಿತ್ರಗಳ ಅಭ್ಯಾಸದ ಈ ವಿಧಾನ ನಿಜವಾಗಿಯೂ ಅಪೂರ್ವದ್ದು. ಏಕೆಂದರೆ ಈ ವಿಧಾನದಿಂದ ಪ್ರಾಗೈತಿಹಾಸಿಕ ಮಾನವನು ರಚಿಸಿದ ಬಂಡೆ ಚಿತ್ರಗಳು ಯಾವ ಯಾವ ಕಾಲಮಾನದವು ಎಂಬುದನ್ನು ಸುಲಭವಾಗಿ ವಿಂಗಡಿಸುವುದು, ಆಗಿನ ಮಾನವನು ಬಂಡೆಗಳ ಮೇಲೆ ಚಿತ್ರಗಳನ್ನು ಯಾವ ಕಡೆಯಿಂದ ಕುಳಿತು ರಚಿಸಿದ ಮತ್ತು ಯಾವ ಕೋನದಲ್ಲಿ ಚಿತ್ರಗಳನ್ನು ಕುಟ್ಟಿತೆಗೆದ, ಯಾವ ಯಾವ ಕಲಾಕೌಶಲ್ಯದಿಂದ ಚಿತ್ರಗಳನ್ನು ರೂಪಿಸಿದ, ಎಂಬುದನ್ನು ಈ ಅಭ್ಯಾಸದಿಂದ ಸ್ಪಷ್ಟವಾಗಿ ತಿಳಿಯಲು ಅನುಕೂಲವಾಗುತ್ತದೆ. ಮತ್ತು ಒಂದರ ಮೇಲೆ ಮತ್ತೊಂದು ಕಾಲದ ಚಿತ್ರಗಳು ಇದ್ದರೆ ಅವುಗಳನ್ನು ಸಹ ಸುಲಭವಾಗಿ ಬೇರ್ಪಡಿಸಬಹುದು. ಇದಾದನಂತರ ಪ್ರತಿಯೊಂದು ಚಿತ್ರದ ಛಾಯಾ ಚಿತ್ರ ತೆಗೆದುಕೊಳ್ಳಲಾಯಿತು. ಒಟ್ಟು ೧೦ ವಿಧಾನಗಳನ್ನು ಉಪಯೋಗಿಸಿಕೊಂಡು ಪುಸ್ತಕ ಪಟ್ಟಿಯನ್ನು ತಯಾರುಮಾಡುವರು. ಅವುಗಳೆಂದರೆ:

೧ ವಿಸ್ತಾರಮಾಡಿಕೊಳ್ಳುವಿಕೆ [Elaboration]: ಉದಾಹರಣೆ ಬಂಡೆ ಚಿತ್ರ ನೆಲೆ ಕಂಡುಹಿಡಿದ ದಿನದಿಂದ ಹಿಡಿದು ಪ್ರತಿಮಾಡಿಕೊಂಡ ಪ್ರತಿಯೊಂದು ಚಿತ್ರವನ್ನು ಬೇರ್ಪಡಿಸುವ ವಿಧಾನದವರೆಗಿನ ದಿನಾಂಕಗಳನ್ನು ಮತ್ತು ಯಾರು

ಎಷ್ಟು ಕಾರ್ಯನಿರ್ವಹಿಸಿದರೆಂಬುದು ಈ ವಿಧಾನದ ಕೆಳಗೆ ಬರುತ್ತವೆ.

೨. ಭೌಗೋಳಶಾಸ್ತ್ರ ಮತ್ತು ಸ್ಥಳವರ್ಣನೆ [Geography and Topography]

೩. ಬಂಡೆಗಲ್ಲಿನ ಗುಣಗಳ ಸ್ವಾಭಾವಿಕ ಕಾಲಮಾನ ಮಾಹಿತಿ [General date on the rock]

೪. ಭೂಗರ್ಭಶಾಸ್ತ್ರ ಮತ್ತು ಸಂರಕ್ಷಣೆ [Geography and conservation]

೫. ಚಿತ್ರನಮೂನೆ ಮತ್ತು ಶೈಲಿ [Typology and Style] : ಇಲ್ಲಿ ವಿವಿಧ ಬಗೆಯನ್ನು ತಿಳಿಯೋಣ. ಚಿತ್ರಬಿಡಿಸುವ ಕುಶಲತೆ [Technique of engraving], ಬಂಡೆಮೇಲೆ ಉಪಯೋಗಿಸಿದ ಜಾಗ [use of space on the rock], ಈ ಸ್ಥಳಗಳಲ್ಲಿ ಉಪಯೋಗಿಸಿದ ಜಾಗ, [use of space within the figures], ಈ ಚಿತ್ರಗಳ ಅನುಪಾತ [Proportion of the figures]. ಕೊರೆದು ರಚಿಸಿದ ಚಿತ್ರಗಳ ಆಳ [depth of the engraving], ಅತ್ಯಂತ ದೊಡ್ಡ ಚಿತ್ರದ ಅಳತೆ ಪರಮಾವಧಿ [Maximum measure of the largest figure], ಅತ್ಯಂತ ಸಣ್ಣ ಚಿತ್ರದ ಅಳತೆ ಪರಮಾವಧಿ [maximum measure of the smallest figure]. ಚಿತ್ರಗಳ ರಚನೆಗಳು, ಸಂಘಗಳು (ಮಂಡಲಿಗಳು) ಮತ್ತು ದೃಶ್ಯಗಳು [compositions of figures, associations and scenes], ಚಿತ್ರಶೈಲಿ ಮತ್ತು ರೂಪಾಂತರಗಳು [Style and schematization], ಕಾರ್ಯಚಲನೆ [movement] ಮಹತ್ವದ ಗುಣಗಳು [Especially notable characteristics] ಶೈಲಿಯ ಸಂಯೋಗ, ಆವಶ್ಯಕ ಮೂಲವಸ್ತುಗಳು [Stylistic synthesis: essential elements], ಶೈಲಿಯ ನಕಾಶ [Stylistic chart].

೬. ಚಿತ್ರಗಳ ವಿಂಗಡನೆ [Classification of Figures] : ಇಲ್ಲಿ ಮನುಷ್ಯ ತಲೆ, ಪ್ರಾಣಿದೇಹ ಚಿತ್ರಗಳು [Anthoroxmorphic figures], ಪ್ರಾಣಿ ತಲೆ, ಮನುಷ್ಯದೇಹ ಚಿತ್ರ, [Zoomarphine figures], ರಚನೆಯ ಚಿತ್ರಗಳು, ಆಯುಧಗಳು ಮತ್ತು ಉಪಕರಣಗಳು [Weapons and Tools] ಚಿತ್ರಗಳ ರೂಪಾಂತರ [Schematic figures], ಇನ್ನಿತರ ಚಿತ್ರಗಳು [Other figures], ಚಿತ್ರಗಳನ್ನು ವಿಂಗಡಿಸುವ ನಕಾಶೆ ಈ ರೀತಿ ಇದರಲ್ಲಿ ವಿಂಗಡಿಸಿದೆ.

೭. ಕಾಲಮಾನ [Chronology] : ಇಲ್ಲಿ ಒಂದರ ಮೇಲೆ ಮತ್ತೊಂದ ಕಾಲದ ಚಿತ್ರಗಳು [Superimpositions], ಲೇಪನ [Patina], ಆವರಿಸಿದ

ಮಾಪನ [Degree of wear], ಅಂಟಿಕೊಂಡಿರುವದು [Inscrustation], ಭೂಗರ್ಭಶಾಸ್ತ್ರದ ದಿನ್ನೆಗಳು [Geological Deposits], ಪುರಾತತ್ವ ಶೋಧಗಳು [Archaeological Findings], ಚಿತ್ರಗಳ ಸಂದರ್ಭ [Figurative Context], ಪರಸ್ಪರ ಸಂಬಂಧದ ವಿಷಯ [Comparative Data] ಇನ್ನಿತರ ವಿಷಯ [Other data], ಕಾಲಗಣನೆಯ ನಕಾಶೆ [Chronological Chart];

೮. ನಮೂದಿಸುವಿಕೆ [Documentation].

೯. ವಿಂಗಡನೆ [Analysis].

೧೦. ಅರ್ಥೈಸುವದು [Interpretation].

ಈ ಮೇಲೆ ಮುಖ್ಯವಾದ ವಿಧಾನಗಳನ್ನು ಮಾತ್ರ ಸ್ಥೂಲವಾಗಿ ವಿಸ್ತರಿಸಲಾಗಿದೆ.

ಮತ್ತೊಂದು ಮಹತ್ವದ ಸಂಗತಿಯೆಂದರೆ ವಿವಿಧ ಬಗೆಯ ಬಂಡೆಚಿತ್ರಗಳನ್ನು ನಿರ್ಮಿಸುವುದರಲ್ಲಿ ಪ್ರಾಗೈತಿಹಾಸಿಕ ಮಾನವ ಒಟ್ಟು ವಿವಿಧ ಒಂಬತ್ತು ಕಲಾ-ಕೌಶಲ್ಯಗಳನ್ನು ಇಲ್ಲಿಯ ವರೆಗೆ ಗುರ್ತಿಸಲಾಗಿದೆ.

೧. ಬಣ್ಣದ ಲೇಪನ [Painting],

೨. ಕುಟ್ಟಿ ಚಿತ್ರಿಸುವದು [Pecked engraving],

೩. ಕತ್ತರಿಸಿ ಚಿತ್ರಿಸುವುದು [Incisions],

೪. ನಯಮಾಡಿ ಚಿತ್ರಿಸುವುದು [polished engraving],

೫. ದೊಡ್ಡ ಮತ್ತು ಸಣ್ಣ ರಿಲೀಫ್ [High and low reliefs],

೬. ಇನ್ನಿತರ ಕಲಾಕೌಶಲ್ಯತೆಗಳು [Other Techniques],

೭. ಬಂಡೆಗಳ ಮೇಲೆ ಚಿತ್ರಿಸುವ ಕಲಾ ಕೌಶಲ್ಯತೆಯ ಬಳಕೆ [Previous Technique of depiction on the Rock]

ಇವುಗಳನ್ನು ಅಂದರೆ ಕಲಾಕೌಶಲ್ಯತೆಗಳನ್ನು ಉಪಯೋಗಿಸಿ ಬಂಡೆಗಳ ಮೇಲೆ ಕಲ್ಲಿನ ಚಿತ್ತಾಳಿಯ ಕಬ್ಬಿಣದ ಅಥವಾ ಇನ್ನಿತರ ಉಪಕರಣಗಳನ್ನು ಉಪಯೋಗಿಸಿ ಚಿತ್ರಗಳನ್ನು ರೂಪಿಸಿದನು. ಇಂತಹ ಉಪಕರಣಗಳು ಬೆಳಕಿಗೆ ಬಂದಿವೆ. ಈ ಬಂಡೆಚಿತ್ರ ಸಂಶೋಧನೆ ಮತ್ತು ಸಂರಕ್ಷಣೆಯ ಅಭ್ಯಾಸದ ವಿಷಯ ಇನ್ನೂ ಬಹಳ ಇರುವುದರಿಂದ ಈ ಸಂದರ್ಭದಲ್ಲಿ ಮೊಟಕುಗೊಳಿಸಿರುವೆನು. ಪ್ರತಿಯೊಂದು ಸಮಯದಲ್ಲಿ ಈ ಚಿತ್ರ ನಮ್ಮಲ್ಲಿದೆ. ಕೆಲವು ಅಪೂರ್ವದ್ದಾಗಿವೆ. ಮತ್ತೆ ಕೆಲವು ಹೊಸದಾಗಿವೆ. ಎನ್ನುತ್ತಿದ್ದೆ. ಆದರೆ ಆಗಾಗ್ಗೆ ನನ್ನ ಕಪ್ಪೋ ಕರ್ನಾಟಕದಲ್ಲಿ ಇದಾವುದೂ ಇಲ್ಲ, ಕರ್ನಾಟಕದ

ಬಗ್ಗೆ ಏನೂ ಹೇಳಬೇಡಿ ಎನ್ನುತ್ತಿದ್ದಳು. ಮುಂದೆ ಡಾಕ್ಟರ್ ಅನಾಟಿಯವರು ನನ್ನ ಉಪನ್ಯಾಸದ ನಂತರ ಕರ್ನಾಟಕದ ಶೋಧಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದನ್ನು ಕೇಳಿ ನನ್ನ ಕಪ್ರೋಕು. ಮಿಲಾ ಕರ್ನಾಟಕದ ಬಂಡೆ ಚಿತ್ರಗಳ ಬಗ್ಗೆ ಕೆಣಕುವದನ್ನು ಕಡಿಮೆ ಮಾಡಿದಳು.

ವಾರಕ್ಕೊಮ್ಮೆ ವಿಶೇಷ ಉಪನ್ಯಾಸಗಳು ಇರುತ್ತಿದ್ದವು. ಕೆಲವೊಮ್ಮೆ ಎರಡು ಸಲ ಉಪನ್ಯಾಸಗಳು ಇರುತ್ತಿದ್ದವು. ಇವುಗಳನ್ನು ಸಂಭ್ರಮದಿಂದ ನಡೆಸುತ್ತಿದ್ದರು. ಉಪನ್ಯಾಸ ಸಂದರ್ಭದಲ್ಲಿಯ ವ್ಯಾಖ್ಯಾನ ಚರ್ಚೆ, ಇತ್ಯಾದಿಗಳನ್ನೆಲ್ಲ ಟೇಪರಿಕಾರ್ಡ ಮಾಡಿಕೊಳ್ಳುತ್ತಿದ್ದುದು ವಿಶೇಷ ಸಂಗತಿಯಾಗಿತ್ತು. ಸಾಮಾನ್ಯವಾಗಿ ಉಪನ್ಯಾಸಕರು ಸ್ಲೈಟ್ಸ್‌ಗಳನ್ನು ತೋರಿಸುತ್ತ, ವಿವರಣೆಯನ್ನು ಕೊಡುತ್ತಿದ್ದುದು, ಉಪನ್ಯಾಸಕ್ಕೆ ಒಂದು ಶೋಭೆ ತರುವಂತಾಗುತ್ತಿತ್ತು. ವಿಶೇಷ ಉಪನ್ಯಾಸಗಳು ವಿವಿಧ ದೇಶದ ಪ್ರಾಗೈತಿಹಾಸಿಕ ನೆಲೆಗಳ ಮತ್ತು ಬಂಡೆಚಿತ್ರಗಳ ಸಂಶೋಧನೆ ಮತ್ತು ಸಂರಕ್ಷಣೆಯ ಕುರಿತು ಬೇರೆ ಬೇರೆ ಪ್ರಸಿದ್ಧ ವಿದ್ವಾಂಸರಿಂದ ಏರ್ಪಟ್ಟವು. ಅವುಗಳೆಂದರೆ:

೧. ಈ ಸಂಸ್ಥೆಯ ಡೈರೆಕ್ಟರ್ ಪ್ರೊ. ಇಮೆನಲ್ ಅನಾಟಿ ಪ್ರಪಂಚದ ಬಂಡಚಿತ್ರಗಳ ಉಗಮ, ಬೆಳವಣಿಗೆ, ಮತ್ತು ಹರಡಿದ ಬಗೆ ಮತ್ತು ಕಾಲಮಾನಗಳ ವ್ಯತ್ಯಾಸದ ಬಗ್ಗೆ ಅಂಕಿ ಸಂಕಲೆಗಳನ್ನು ಕುರಿತು.

೨. ಅಮೇರಿಕದ ಪ್ರೊ. ರಿನಾರ್ಡ ಇವರು ಮ್ಯುಜಿಯಂ ಪದ್ಧತಿಗಳು, ಪ್ರಾಗೈತಿಹಾಸಿಕ ನೆಲೆಯಲ್ಲಿ ಮ್ಯುಜಿಯಂ ತಯಾರಿಸುವ ಪದ್ಧತಿಗಳು, ಮ್ಯುಜಿಯಂಗೆ ಸಂಪರ್ಕ ಕಲ್ಪಿಸುವ ಗುಂಪು, ಮ್ಯುಜಿಯಂಗೂ ಮತ್ತು ಸಾರ್ವಜನಿಕರಿಗೂ ಇರುವ ಪರಸ್ಪರ ಸಂಬಂಧ ಕುರಿತು.

೩. ಇಂಗ್ಲೆಂಡಿನ ಗ್ಲಾಸ್ಗೊ ವಿಶ್ವವಿದ್ಯಾಲಯ ಪ್ರೊ. ಮಾಸ್ಟರ್ ಇವರು ಪಶ್ಚಿಮ ಯುರೋಪದ ದಾರಿಕೋಣಿಯ ಗೋರಿಗಳಲ್ಲಿಯ ಚಿತ್ರಗಳನ್ನು ಕುರಿತು.

೪. ಬಂಡೆಚಿತ್ರಗಳ ರಕ್ಷಣೆಯ ಇಟಲಿ ದೇಶದ ಮುಖ್ಯಸ್ಥರಾದ ಸ್ವಾರ್ಜ ಬಹೂವರ್ ಏ ದೆ ಮಸ್ಸಾರಿ ಮತ್ತು ಇವರ ಸಹೋದ್ಯೋಗಿ ಡಾ. ರಾಫ್ಲಾ ಎಲಿ ಇವರು ಬಂಡೆಚಿತ್ರಗಳ ಸಂರಕ್ಷಣೆ ಕುರಿತು.

೫. ನಪ್ರೊಲಿ ವಿಶ್ವವಿದ್ಯಾಲಯದ ಪ್ರೊ. ಫ್ರಾನ್ಸಿಸ್ಕೊ ಪೆಡೆಲೆ ಇವರು ವಾಲ್ಕಮೋನಿಕಾ ಪ್ರದೇಶದ ಎಕಾಲಾಜಿ ಕುರಿತು.

೬. ಡಾ. ರಾಫಾ ಎಲೆ ಡೆ ಮರಿನಿಸ್, ಮಿಲಾನದ ಸುಪರಿಟೆಂಡೆಂಟ್ ಆರ್ಕ್ಯಾಲಾಜಿಸ್ಟ್ ಇವರು ಮಿಲಾನೋ ಪ್ರದೇಶದ ಪ್ರಾಗೈತಿಹಾಸಿಕ ನೆಲೆಗಳ ಸಂಶೋಧನೆ ಕುರಿತು.

ಇವರೆಲ್ಲರೂ ಉಪನ್ಯಾಸ ನೀಡಿದರು. ಮತ್ತು ತರಬೇತಿಯ ಅಂತರಾಷ್ಟ್ರೀಯ ಅಭ್ಯರ್ಥಿಗಳಲ್ಲಿ ಅಮೇರಿಕದ ಪ್ರೊ. ಎಲೆನ್, ಕಾಂಗೋಡಾ ಫಫೇರಸಾ, ಸೌದೀ ಅರೇಬಿಯಾದ ಮಾಜಿದ್ ಖಾನ್ ಮತ್ತು ನನ್ನ ವಿಶೇಷ ಉಪನ್ಯಾಸಗಳಿದ್ದವು. ಇನ್ನಿತರರಂತೆ ನಾನು ನನ್ನ ಮಾತೃಭೂಮಿ ಕರ್ನಾಟಕದ ಪ್ರಾಗೈತಿಹಾಸಿಕ ನೆಲೆಗಳ ಮತ್ತು ಬಂಡೆಚಿತ್ರಗಳ ಸಾಮಾನ್ಯ ಗುಣಲಕ್ಷಣಗಳ ಬಗ್ಗೆ ಮಾತನಾಡಿದೆ. ನಾನೊಬ್ಬನೇ ಮಾತ್ರ ಇನ್ನಿತರರಂತೆ ಛಾಯಾಚಿತ್ರ ಅಥವಾ ಸ್ಲೈಡ್ಸ್ ತೋರಿಸಿದೆ. ಉಪನ್ಯಾಸ ಕೊಟ್ಟೆನು. ಇನ್ನಿತರರ ಪ್ರಸಂಗದಂತೆ ನನಗೂ ಕೆಲವು ಪ್ರಶ್ನೆಗಳನ್ನು ಕೇಳಿದರು. ಶಿಲಾಯುಗದ ಅಸಿವಿಲಿಯನ್ ಉಪಕರಣ ಭಾರತದಲ್ಲಿ ಸಿಕ್ಕಿವೆ ಎಂಬುದಕ್ಕೆ ಪ್ರೊ. ಅನಾಟಿಯವರು "ನಾನು ಈ ವಿಷಯವನ್ನು ಒಪ್ಪುವುದಿಲ್ಲ. ಮುಂದೇನಾದರೂ ಅಂತಹ ಉಪಕರಣಗಳನ್ನು ನಾನು ನೋಡಿದರೆ ನನ್ನ ಅಭಿಪ್ರಾಯವನ್ನು ಬದಲಿಸಿಕೊಳ್ಳುತ್ತೇನೆ" ಎಂದರು. ಇವರು ಮುಂದಿನ ವರ್ಷ ಪ್ರಾಯಶಃ ಜನೆವರಿ ೧೯೮೪ ರ ಮೊದಲವಾರದಲ್ಲಿ ನಮ್ಮಲ್ಲಿಗೆ ಬಂದು ಕರ್ನಾಟಕ ಪ್ರಾಗೈತಿಹಾಸಿಕ ಬಂಡೆಚಿತ್ರ ನೆಲೆಗಳನ್ನು ನೋಡುವ ಮತ್ತು ಅಸಿವಿಲಿಯನ್ ಉಪಕರಣಗಳನ್ನು ಮುಂತಾದವುಗಳನ್ನು ವೀಕ್ಷಿಸಿ ಅಭ್ಯಾಸ ಕೈಕೊಳ್ಳುವ ಕಾರ್ಯಕ್ರಮವಿದೆ ಎಂದು ತಿಳಿದಿರುವೆನು.

ಪ್ರತಿವಾರ ಅಂತ್ಯದಲ್ಲಿ ಅಂದರೆ ಶನಿವಾರ ಮತ್ತು ರವಿವಾರ ತರಬೇತಿ ರಜೆ ಇರುತ್ತಿತ್ತು. ಬೇರೆ ಬೇರೆ ಸ್ಥಳಗಳನ್ನು ನೋಡಲು ಪ್ರವಾಸಗಳನ್ನು ಈ ಸಮಯದಲ್ಲಿ ಏರ್ಪಡಿಸುತ್ತಿದ್ದರು. ಆಸಕ್ತಿಯುಳ್ಳ ಅಭ್ಯರ್ಥಿಗಳು ಮಾತ್ರ ನಿಗದಿ ಪಡಿಸಿದ ಹಣಕೊಟ್ಟು ಪ್ರವಾಸದಲ್ಲಿ ಭಾಗವಹಿಸುತ್ತಿದ್ದರು. ನನಗೊಂದೇ ಪ್ರಾಯಶಃ ಯುನೆಸ್ಕೋ ವಿದ್ಯಾರ್ಥಿವೇತನ ಕೊಟ್ಟಿದ್ದರಿಂದ ನನಗೆ ಹಣಕೊಡುವ ಅವಶ್ಯಕತೆ ಇರಲಿಲ್ಲ. ಸ್ನೇಹಿತರ ಸಂಗಡ ಪ್ರತಿದಿನ ಪೇಟೆ ಕಡೆ ಅಥವಾ ಹೊರಗೆ ಹೋದಾಗ ಮಾತ್ರ ನನ್ನ ಜೇಬಿನಿಂದ ಹಣ ಖರ್ಚು ಮಾಡುತ್ತಿದ್ದೆ. ಮುಂದೆ ಕೆಲ ದಿನಗಳ ನಂತರ ಖರ್ಚಿಗೆ ಹಣ ಸಾಲದಿದ್ದಾಗ ಸೌದಿ ಅರೇಬಿಯಾದ ಮಾಜಿದ್ ಖಾನ್ ನನಗೆ ಸಹಾಯಕರಾದರು. ಏಕೆಂದರೆ ಇಲ್ಲಿಂದ ನಾನು ನನ್ನ ಹೆಚ್ಚಿನ ಖರ್ಚಿಗಾಗಿ ಕೇವಲ ಒಂದು ಸಾವಿರ ರೂಪಾಯಿಗಳನ್ನು ಮಾತ್ರ ಒಯ್ದಿದ್ದೆ. ಕಾರಣ ಇಷ್ಟೆ: ಯುನೆಸ್ಕೊ ತಂತಿ ಸಂದೇಶದಂತೆ ಬಾಂಬೆದಲ್ಲಿ ಹೋಗಿಬರುವ ಟಿಕೆಟಗಳನ್ನು ಇಟಾಲಿಯನ್ ಕಾನ್ಸೂಲೆಟ್ ಜನರಲ್ ಇವರಿಂದ ಪಡೆದು ನಂತರ ವಸತಿ ಉಟೋಪಚಾರಕ್ಕೆ ಸೆಂಟ್ರೊದಿಂದ ಹಣ ಪಡೆಯಬೇಕಾಗಿತ್ತು. ಆದರೆ ಸೆಂಟ್ರೋದ ವರೇ ಅಚ್ಚು-ಕಟ್ಟಾದ ಎಲ್ಲಾ ವ್ಯವಸ್ಥೆಯನ್ನು ಕಲ್ಪಿಸಿದರು. ಇದರಿಂದ ಹಣ ಕೇಳಿ ಪಡೆಯುವ ವಿಷಯವೇ ದೂರವಾಯಿತು.

ಬಂಡೆ ಚಿತ್ರಗಳ ಮಸ್ಸಿ ಎ ಶರದೀನಾ ಪಾರ್ಕ ಮತ್ತು ರಾಷ್ಟ್ರೀಯ ಕೇಂದ್ರ

ಪಾರ್ಕ್, ನಾಡ್ರೊ ಮ್ಯುಜಿಯಂ, ಪೊಂತೆ ಡಿ ಲೈ ಎ, ಚಿವ್ರಾ, ಬೋಲ್ಜಾನ್‌ದಲ್ಲಿಯ ಚಿವಿಕೊ ಮ್ಯೂಜಿಯಂ, ಟ್ರೆನಟಿನೋದಲ್ಲಿಯ ಮೊರೆಸರೋ ಮ್ಯೂಜಿಯಂ ಲಿದ್ರೊದಲ್ಲಿಯ ಡೆಲ್ಲ ಸಲೆ ಸಿಟ್ಟೆ ಮ್ಯೂಜಿಯಂ, ಇನ್ನಿತರ ಸ್ಥಳಗಳಲ್ಲಿ ಪ್ರವಾಸದಲ್ಲಿ ತೋರಿಸಲಾಯಿತು. ಇದಲ್ಲದೆ ಎಡೋಲೊ ಹತ್ತರದ ಅವಿಓಲೋಕ್ಕೆ ಹೋಗಿ ಅಲ್ಲಿಯ ೨೩೦೦ ಮೀ. ಎತ್ತರದ ಮಂಜು ಆವರಿಸಿದ (ಕೆಲಭಾಗ ಮಾತ್ರ) ಪರ್ವತವನ್ನು ಕೆಲವರ ಸಂಗಡ ನಾನೂ ಏರಿದೆನು. ಒಟ್ಟು ನಾಲ್ಕು ಸಲ ವಾರಾಂತ್ಯ ಪ್ರವಾಸದಲ್ಲಿ ಭಾಗವಹಿಸಿದ್ದೆನು.

ಸಂತೋಷ ಸಂಗತಿಯೆಂದರೆ ಪ್ರವಾಸದ ಮೊದಲ ವಾರದಲ್ಲಿ ಹಳೆ ಶಿಲಾಯುಗದ ಕೊಡಲಿಯನ್ನು ಪೊಂತೆ ಡಿ ಲೈ ಎ ಕಣಿವೆಯಲ್ಲಿ ಮತ್ತು ಇನ್ನೊಂದೆಡೆ ಜಿಂಬ್ರಾದ ಹತ್ತಿರದ ಕಣಿವೆಯಲ್ಲಿ ಸೂಕ್ಷ್ಮ ಶಿಲಾಯುಗದ ಉಪಕರಣಗಳನ್ನು ಪತ್ತೆ ಹಚ್ಚಿದೆನು. ಪ್ರೊ|| ಅನಾಟಿಯವರಿಂದ ಮೆಚ್ಚುಗೆ ದೊರೆಯಿತು.

ಈ ತರಬೇತಿಯಿಂದ ನನಗೆ ಮಹತ್ವದ ಹೊಸ ಮಾಹಿತಿಗಳು ತಿಳಿದಿವೆ. ಮತ್ತು ಪುರಾತತ್ವ ಸಂಶೋಧನೆ ಮುಂತಾದ ಅಭ್ಯಾಸ ಕ್ರಮ ಇತ್ಯಾದಿ ಕರ್ನಾಟಕದ ಪ್ರಾಯಶಃ ನಮ್ಮ ದೇಶದಲ್ಲಿಯೇ ನಾವು ಹಲವಾರು ವ್ಯತ್ಯಾಸಗಳನ್ನು ನಮ್ಮ ಅಭ್ಯಾಸದಲ್ಲಿ ಕಾಣುತ್ತೇವೆ. ಮೊದಲು ಈ ತರಬೇತಿಯ ಅಭ್ಯಾಸದ ವಿಧಾನವನ್ನು ನಮ್ಮ ದೇಶದಲ್ಲಿ ಪ್ರಯೋಗಮಾಡಬೇಕಾಗಿದೆ. ನಮ್ಮ ದೇಶದಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಈಗಾಗಲೇ ಹಲವಾರು ಪ್ರಾಗೈತಿಹಾಸಿಕ ಬಂಡೆಚಿತ್ರಗಳ ನೆಲೆಗಳು ಬೆಳಕಿಗೆ ಬಂದಿವೆ. ಅವುಗಳನ್ನು ಈಗಾಗಲೇ ವಿಶೇಷವಾಗಿ ಡಾ. ಸುಂದರ ಇವರು ಹಲವುಗಳನ್ನು ಕಂಡುಹಿಡಿಯುವದರ ಜೊತೆಗೆ ಆಳವಾದ ಅಧ್ಯಯನವನ್ನು ಮಾಡಿದ್ದಾರೆ. ಪ್ರಾಯಶಃ ಕರ್ನಾಟದಲ್ಲಿ ಪ್ರಾಗೈತಿಹಾಸ ಬಂಡೆ ಚಿತ್ರಗಳ ಅಧ್ಯಯನ ಕೈಕೊಳ್ಳುವವರಲ್ಲಿ ಇವರೇ ಮೊದಲು. ಕರ್ನಾಟಕದಲ್ಲಿಯ ಬಂಡೆಚಿತ್ರಗಳ ಪ್ರತಿಯನ್ನು ತೆಗೆದು ಅಭ್ಯಾಸ ಮಾಡುವ ಕ್ರಮವನ್ನು ಇನ್ನು ಮುಂದೆ ಪ್ರಯತ್ನಿಸಬೇಕಾಗಿದೆ. ಬಳ್ಳಾರಿ ಜಿಲ್ಲೆಯ ಹಳಕುಂಡಿ, ರಾಯಚೂರ ಜಿಲ್ಲೆಯ ಮಸ್ಕಿ ಇನ್ನಿತರ ಸ್ಥಳಗಳಲ್ಲಿ ಕೆಲವು ಬಂಡೆ ಚಿತ್ರಗಳು ಬಹು ಎತ್ತರದ ಗುಡ್ಡಗಳ ತುದಿಯಲ್ಲಿವೆ. ಇಲ್ಲಿಯ ಚಿತ್ರಗಳ ಪ್ರತಿರೂಪವನ್ನು ಪಡೆದುಕೊಳ್ಳುವದು ಹೇಗೆ? ಎಂದು ಡಾ. ಅ. ಸುಂದರ ಅವರು ಸಂಶಯದಿಂದ ಕೇಳಿದರು. ಸಾಮಾನ್ಯವಾಗಿ ಬಂಡೆ ಚಿತ್ರಗಳ ಪ್ರತಿಮಾಡಲಿಕ್ಕೆ ಒಂದು ಗುಂಪು ಬೇಕಾಗುತ್ತದೆ. ಇದು ಒಬ್ಬರಿಂದ ಮಾಡುವ ಕೆಲಸವಲ್ಲ. ಗಟ್ಟಿಯಾದ ಹಗ್ಗ ಮತ್ತು ಕಟ್ಟಿಗೆಗಳ ಅಥವಾ ಲೋಹಗಳ ಕೋಲುಗಳ ಸಹಾಯದಿಂದ ಜಾಗರೂಕತೆಯಿಂದ ಕಲ್ಲುಗಳ; ಸಮತಟ್ಟನ್ನು ನೋಡಿಕೊಂಡು ಬೇಕಾದ ಆಕೃತಿಗೆ ಹಗ್ಗಗಳನ್ನು ಬಂಡೆಗೆ ಕಟ್ಟಿಕೊಳಬೇಕು. ಹಗ್ಗಗಳ ತುದಿಯಿಂದ ಕಟ್ಟಿಗೆ ಕೋಲುಗಳನ್ನು ಬಂಡೆಗೆ ಅಡ್ಡವಾಗಿ ಇರಿಸಿ ಕಟ್ಟಿಕೊಳ್ಳಬೇಕು. ಇಂಥ ವಿಧಾನವನ್ನು ಅನು

ಸರಿಸಿದರೆ ಕಷ್ಟಸಾಧ್ಯವಾದ ಬಂಡೆಚಿತ್ರಗಳ ಪ್ರತಿಯನ್ನು ಪಡೆಯಬಹುದು. ಆದರೆ ಪ್ರತಿಪಡೆಯುವವರು ಬಹಳ ಧೈರ್ಯವಂತರಿರಬೇಕು.

ಕರ್ನಾಟಕದಲ್ಲಿ ನನಗೆ ಲಭಿಸಿದ ತರಬೇತಿಯು ಕುಶಲತೆಯನ್ನು ಪ್ರಯೋಗಿಸಿ ಅಭ್ಯಾಸ ಕೈಕೊಂಡಲ್ಲಿ ನಿಜವಾಗಿಯೂ ನನಗೆ ಮಹತ್ವದ ಹೊಸ ವಿಷಯಗಳು ಬೆಳಕಿಗೆ ಬರುತ್ತವೆ. ಮುಂದೆ ಅಂತರಾಷ್ಟ್ರೀಯ ಮಟ್ಟದಲ್ಲಿ ವಿವೇಚಿಸಿದಾಗ ಒಂದು ವಿಶಿಷ್ಟ ಸ್ಥಾನ ಕರ್ನಾಟಕದ ಬಂಡೆ ಚಿತ್ರಗಳಿಗೆ ಲಭಿಸುವದೆಂಬ ದೃಢ ವಿಶ್ವಾಸ ನನಗಿದೆ.

ಈಗಾಗಲೇ ಬೆಳಕಿಗೆ ಬಂದ ಕರ್ನಾಟಕದ ಪ್ರಾಗೈತಿಹಾಸಿಕ ಬಂಡೆಚಿತ್ರಗಳ ವೈಭವದ ಸೊಬಗು ನಶಿಸುತ್ತಿರುವುದನ್ನು ನಾವು ಕಾಣುತ್ತೇವೆ. ಇದಕ್ಕೆ ಹಲವಾರು ಕಾರಣಗಳಿವೆ; ಮತ್ತು ಇದಕ್ಕೆ ಸೂಕ್ತ ಸಂರಕ್ಷಣೆಯ ಸಲಹೆಗಳನ್ನು ತಿಳಿಸಬೇಕೆನಿಸುತ್ತದೆ. ಬಂಡೆಚಿತ್ರ ಬಾಹ್ಯರೂಪ ಸೀಳಿದ್ದರೆ ಅಥವಾ ಬಿರುಕು ಬಿಟ್ಟಿದ್ದರೆ ಅಥವಾ ಒಡೆದಿದ್ದರೆ ಕಾರ್ಬೋನೇಟ್ ಮಡ್ಡಿಬಣ್ಣದ ಪುಡಿಯನ್ನು ತುಂಬಬೇಕು. ಬಂಡೆಗಳ ಬಣ್ಣಕ್ಕೆ ಹೊಂದಾಣಿಕೆಯಾಗುವ ಬಣ್ಣವನ್ನು ಉಪಯೋಗಿಸಬೇಕು. ನೀರಿನ ಹೊಡೆತದಿಂದ ಹಲವು ಕಡೆ ಬಂಡೆಚಿತ್ರಗಳು ಅಸ್ಪಷ್ಟವಾಗಿ ಕಾಣುವುದುಂಟು. ಈ ಬಂಡೆಚಿತ್ರಗಳ ಬಾಹ್ಯರೂಪವು ಕಪ್ಪಾಗಿ ಕಾಣುವುದುಂಟು. ಇದು ಕ್ಯಾಲ್ಸಿಯಂ ಕಾರ್ಬೋನೇಟ ಆಗಿರುತ್ತದೆ. ಇಂಥಹ ಚಿತ್ರಗಳು ಹಾಳಾಗುವದನ್ನು ಚಂದ್ರವಳ್ಳಿ, ಅಪ್ಪೇನಹಳ್ಳಿ (ಬಳ್ಳಾರಿ ಜಿಲ್ಲಾ), ಇತ್ಯಾದಿ ಸ್ಥಳಗಳಲ್ಲಿ ನೋಡಬಹುದಾಗಿದೆ. ಇಂಥ ಪಿಡುಗನ್ನು ದೂರಮಾಡಿ ಬಂಡೆ ಚಿತ್ರಗಳನ್ನು ಸಂರಕ್ಷಿಸಬೇಕಾಗಿದೆ. ಇಲ್ಲಿಯೂ ಬಂಡೆಚಿತ್ರಗಳನ್ನು ಸ್ವಚ್ಛಮಾಡಿ ಐದು ವರ್ಷಕ್ಕೊಂದು ಸಲ ತೆಳ್ಳಗೆ ನೀರಿನಲ್ಲಿ ಕರಗುವ ರಸಾಯನಿಕ ಬಣ್ಣದ ಲೇಪನ ಮಾಡುತ್ತಿರಬೇಕು ಇದರಿಂದ ಇಂಥಹ ಪಿಡುಗನ್ನು ದೂರಮಾಡಬಹುದಾಗಿದೆ. ಕೆಲವೊಮ್ಮೆ ಬಂಡೆ ಚಿತ್ರಗಳ ನೆಲೆಯ ವಾಸಸ್ಥಳಗಳ ಕೆಳಗೆ ನೀರು ನಿಲ್ಲುವುದುಂಟು. ಗಾಳಿ ಮತ್ತು ಉಷ್ಣತೆಯಿಂದ ನಿಂತ ನೀರು ಆವಿಯಾಗಿ ಆವಿಯಲ್ಲಿಯ ಲವಣ ವಸ್ತುಗಳು ಬಂಡೆಗೋಡೆಯ ವಾಸಸ್ಥಳದ ಬಾಹ್ಯರೂಪದಲ್ಲೆಲ್ಲ ಮೆತ್ತಿಕೊಳ್ಳುವುದು. ಇದರಿಂದ ಕುಟ್ಟಿತೆಗೆದ ಅಥವಾ ಬಣ್ಣದಿಂದ ಚಿತ್ರಿಸಿದ ಚಿತ್ರಗಳು ಅಸ್ಪಷ್ಟವಾಗಿ ಕಾಣುವವು. ಇದನ್ನು ಬಾದಾಮಿ ಸಂಗನ ಕಲ್ಲು, ಅಪ್ಪೇನಹಳ್ಳಿ,- ಇತ್ಯಾದಿ ಸ್ಥಳಗಳಲ್ಲಿ ನಾವು ವೀಕ್ಷಿಸಬಹುದಾಗಿದೆ. ಇಂಥಹ ಸಂದರ್ಭದಲ್ಲಿ ನೀರು ಶೇಖರಿಸದಂತೆ ಸಂರಕ್ಷಿಸುವದು ಮತ್ತು ಮಳೆಗಾಲ ಅಥವಾ ಶೀತವಾತಾವರಣವಿದ್ದಾಗ ಎಲೆಕ್ಟ್ರಿಕ್ ಉಪಕರಣಗಳಾದ ಕ್ರೊಮಾಟೆಕ್ಸ್, ಥರ್ಮೋ ವಾಯರಗಳಿಂದ ಬಂಡೆ ಚಿತ್ರಗಳಿಗೆ ಸ್ವಲ್ಪ ದೂರದಿಂದ ಉಷ್ಣವನ್ನು ಪೂರೈಸುವ ವಿಧಾನವನ್ನು ಅಳವಡಿಸಬೇಕಾಗುತ್ತದೆ. ಇಂಥ ವಿಧಾನ ನಮ್ಮ ವಿಶ್ವವಿದ್ಯಾಲಯದ ಗ್ರಂಥಭಾಂಡಾರದಲ್ಲಿ ಉಪಯೋಗಿಸು

ತ್ತಿರುವದನ್ನು ನಾವು ನೋಡಿದ್ದೇವೆ ಅಥವಾ ನೋಡಬಹುದಾಗಿದೆ. ಇದರಿಂದ ಶೀತ ಸಮಯದಿಂದ ಚಿತ್ರಗಳ ಬಾಹ್ಯರೂಪದಲ್ಲಿ ಮೆತ್ತಿಕೊಳ್ಳುವ ನೀರಿನ ಘನೀಕರಿಸುವಿಕೆಯನ್ನು ತಪ್ಪಿಸಬಹುದಾಗಿದೆ. ಕೆಲವೊಮ್ಮೆ ಸಪಾಟಾದ ಗಾಳಿ ಬೆಳಕಿಗೆ ಮುಖ ಮಾಡಿನಿಂತ ಬಂಡೆಚಿತ್ರಗಳ ಮೇಲೆ ಮಣ್ಣಿನ ಗುಡ್ಡೆಯಿರುವುದುಂಟು. ಇಂತಹ ನೆಲೆಯಲ್ಲಿ ಇರುವೆಗಳು ಗೂಡುಗಳನ್ನು ಕಟ್ಟುವವು. ಇದರಿಂದಾಗಿ ಬಂಡೆಚಿತ್ರಗಳ ಬಾಹ್ಯರೂಪ ಕ್ಷೀಣಿಸುತ್ತ ಹಾಳಾಗುವದು. ಮತ್ತು ಮುಂದೆ ಕಾಲಾಂತರದಲ್ಲಿ ಗೂಡುಕಟ್ಟಿದ ಜಾಗದಲ್ಲಿ ರಂಧ್ರಗಳೂ ಮೂಡುವವು. ಕೆಲವೊಮ್ಮೆ ಸೂಕ್ಷ್ಮ ಸಸ್ಯ ಜೀವಿಗಳು ಇಂಥಹ ನೆಲೆಯಲ್ಲಿ ಬೆಳೆದು ಅವುಗಳಲ್ಲಿಯ ಕ್ಲೋರೊಫಿಲ್‌ನ ಹಸಿರು ಬಣ್ಣವು ಬಣ್ಣ ಚಿತ್ರಗಳ ಮೇಲೆ ಮೆತ್ತಿಕೊಂಡು ನಿಜವಾದ ಚಿತ್ರಗಳನ್ನು ಅಸ್ಪಷ್ಟಗೊಳಿಸುತ್ತದೆ. ಮತ್ತು ಬಂಡೆಚಿತ್ರಗಳ ಮೇಲೆ ಆವರಿಸಿದ ಮಣ್ಣಿನ ಸಹಾಯದಿಂದ ಸಸ್ಯಗಳು ಬೆಳೆದು ಬೇರುಗಳನ್ನು ಚಿತ್ರಗಳ ಮೇಲೆ ದಟ್ಟವಾಗಿ ಆವರಿಸಿಕೊಳ್ಳುವುದುಂಟು. ಮುಂದೆ ಇಂಥಹ ನೆಲೆಗಳನ್ನು ಸ್ವಚ್ಛಮಾಡಿದಾಗ ಬೇರಿನಿಂದ ಕ್ಷೀಣಿಸಿದ ಬಂಡೆಚಿತ್ರಗಳ ಬಾಹ್ಯರೂಪವನ್ನು ನೋಡಬಹುದು. ಆದ್ದರಿಂದ ಬಂಡೆ ಚಿತ್ರ ಸ್ವಚ್ಛಮಾಡಿದ ನಂತರ ಐದು ವರ್ಷಕ್ಕೊಮ್ಮೆ ರಾಸಾಯನಿಕ ಬಣ್ಣದ ಲೇಪನ ಮಾಡುವ ಅವಶ್ಯಉಂಟು. ಬಣ್ಣ ಚಿತ್ರಗಳ ಮೇಲೆ ಮೆತ್ತಿಕೊಂಡ ಕ್ಲೊರೋಫಿಲ್‌ವನ್ನು ವೈಜ್ಞಾನಿಕವಾಗಿ ಪ್ರಯೋಗದ ಮೂಲಕ ಪರೀಕ್ಷೆ ಮಾಡಿ ಸೂಕ್ತ ರಾಸಾಯನಿಕ ವಸ್ತುಗಳನ್ನು ಉಪಯೋಗಿಸಿ ತಕ್ಕ ಮಟ್ಟಿಗೆ ಇಂಥಹ ಚಿತ್ರಗಳನ್ನು ರಕ್ಷಿಸಬಹುದಾಗಿದೆ.

ಭೌತ ರಸಾಯನಿಕ ಕಾರಣದಿಂವ, ಮನುಷ್ಯ ಪ್ರಾಣಿಗಳಿಂದ, ಸಸ್ಯ ಮತ್ತು ಪ್ರಾಣಿಜೀವಿಗಳಿಂದ, ವಾತಾವರಣದ ಗಾಳಿ ಮತ್ತು ಮಳೆಯಿಂದ, ಮತ್ತು ಸರಿಯಾದ ಸಂರಕ್ಷಣೆ ಇಲ್ಲದೆ ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಗಳು ಹಾಳಾಗುವದನ್ನು ನಾವು ಕಾಣಬಹುದಾಗಿದೆ.

ಪ್ರವಾಸ ಮತ್ತು ಉಪನ್ಯಾಸದ ಕೆಲವು ಮಹತ್ವದ ವ್ಯತ್ಯಾಸಗಳನ್ನು ವೀಕ್ಷಿಸಿದಾಗ ಹಲವಾರು ವಿಷಯಗಳನ್ನು ತಿಳಿಸಬೇಕೆನಿಸುತ್ತದೆ. ಮ್ಯುಜಿಯಂ ಬಗ್ಗೆ ಹೇಳಬೇಕೆಂದರೆ ನಮ್ಮ ಕರ್ನಾಟಕದ ಮ್ಯುಜಿಯಂಗಳನ್ನು ಇನ್ನೂ ಹೆಚ್ಚು ಅಭಿವೃದ್ಧಿ ಪಡಿಸುವ ಅವಶ್ಯಕತೆ ಇದೆ. ಸ್ವಲ್ಪದರಲ್ಲಿ ಸ್ಥೂಲವಾಗಿ ಕೆಲವುಗಳನ್ನಾದರೂ ಹೇಳಬೇಕೆನಿಸುತ್ತದೆ.

ಸಾಮಾನ್ಯವಾಗಿ ಮ್ಯುಜಿಯಂನಲ್ಲಿ ಉತ್ಖನನದಲ್ಲಿ ದೊರೆತ ಉಪಕರಣಗಳನ್ನು ಪ್ರದರ್ಶಿಸಲಾಗಿದೆ. ಉತ್ಖನನದ ನೆಲೆಯಲ್ಲಿ ಅಸ್ಥಿಪಂಜರಗಳು ಹೇಗೆ ಬಯಲಾಗಿದ್ದವು ಹಾಗೆಯೇ ಅದೇ ನಮೂನೆ ಹೊಂದಿದ ಪದರುಗಳು ಸಹಿತ

ಮ್ಯುಜಿಯಂನಲ್ಲಿ ಗ್ಲಾಸ ಕೋಕೇಸನಲ್ಲಿಟ್ಟು ವಿಶೇಷ ರಕ್ಷಣೆಯ ಪ್ರದರ್ಶನದ ಅವಶ್ಯಕತೆ ಇದೆ. ಏಕೆಂದರೆ ನಮ್ಮ ಕರ್ನಾಟಕದಲ್ಲಿ ಬೃಹತ್ ಶಿಲಾಯುಗದ ಗೋರಿಗಳಲ್ಲಿ ಮಾನವನ ಅಸ್ತಿ ಅವಶೇಷಗಳು ಹಲವಾರು ಕಡೆಯಿಂದ ಉತ್ಖನನ ವಲ್ಲಿ ಕಂಡುಬಂದಿವೆ. ಸಾಮಾನ್ಯವಾಗಿ ಒಂದೇ ಪ್ರದೇಶದ ಪ್ರಾಗೈತಿಹಾಸಿಕ ಉಪಕರಣಗಳನ್ನು ಮ್ಯುಜಿಯಂನಲ್ಲಿ ಸಂಗ್ರಹಿಸಿ ಪ್ರದರ್ಶಿಸಲಾಗುತ್ತಿದೆ. ರಾಷ್ಟ್ರ ಮತ್ತು ಅಂತ್‌ರರಾಷ್ಟ್ರ ಮಟ್ಟದಲ್ಲಿ ದೊರೆತ ಪ್ರಾಗೈತಿಹಾಸಿಕ ಉಪಕರಣಗಳನ್ನು ಸಂಗ್ರಹಿಸಿ ಪ್ರದರ್ಶಿಸುವುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಸಂಗ್ರಹಿಸಿದ ಶಿಲಾಯುಗದ ಆಯುಧ ಉಪಕರಣಗಳನ್ನು ಪ್ರಾಗೈತಿಹಾಸಿಕ ಮಾನವ ಹೇಗೆ ತನ್ನ ದಿನನಿತ್ಯದ ಕೆಲಸಗಳಿಗೆ ಅವುಗಳನ್ನು ಉಪಯೋಗಿಸುತ್ತಿದ್ದ ಎಂಬುದರ ಪರಿಚಯವನ್ನು ಮ್ಯುಜಿಯಂನಲ್ಲಿ ಚಿತ್ರದ ಮೂಲಕ ಮತ್ತು ಪ್ರಯೋಗದ ಮೂಲಕ ತೋರಿಸುವುದು, ಸೂಕ್ತವೆಂದು ಇದರಿಂದ ಸಾಮಾನ್ಯ ಮನುಷ್ಯನಿಗೆ ತಕ್ಕಮಟ್ಟಿಗೆ ವಿಶೇಷ ಅರಿವುಂಟಾಗುತ್ತದೆ. ಮತ್ತು ಪ್ರಾಗೈತಿಹಾಸಿಕ ಕಾಲಾಂತರ ದಲ್ಲಿ ಯಾವ ಯಾವ ತರಹದ ಪಕ್ಷಿಪ್ರಾಣಿಗಳು ಜನರು ಇದ್ದರೆಂಬ ನಕ್ಷೆಯಿರುವ ಚಿತ್ರಪಟಗಳನ್ನು ತಯಾರಿಸಿ ಮ್ಯುಜಿಯಂನಲ್ಲಿ ಪ್ರದರ್ಶಿಸುವವುದು ಒಳ್ಳೆಯದು. ಅಲ್ಲಿ ಒಂದು ಸಣ್ಣ ಹಳ್ಳಿಯ ಮ್ಯುಜಿಯಂನಲ್ಲಿ ಇಂಥಹ ಅಚ್ಚುಕಟ್ಟಾದ ವ್ಯವಸ್ಥೆಯ ಪ್ರದರ್ಶನ ಸಾಮಾನ್ಯವಾಗಿರುತ್ತದೆ. ಮತ್ತು ಕರ್ನಾಟಕದಲ್ಲಿ ಬೆಳಕಿಗೆ ಬಂದ ಬಂಡೆ ಚಿತ್ರಗಳ ಪ್ರತಿರೂಪದ ನಕಾಶೆಗಳನ್ನಾಗಲಿ ಅಥವಾ ಛಾಯಾಚಿತ್ರಗಳ ನ್ನಾಗಲಿ ತಯಾರಿಸಿ ಮ್ಯುಜಿಯಂಗಳಲ್ಲಿ ಮತ್ತು ಪ್ರವಾಸಿಗರ ಸಂಖ್ಯೆ ಹೆಚ್ಚಿರುವ ಭಾಗದಲ್ಲಿ ಪ್ರದರ್ಶಿಸಿ ತಮ್ಮ ಪ್ರಾಗೈತಿಹಾಸಿಕ ಬಂಡೆಚಿತ್ರಗಳ ಗತವೈಭವದ ಪರಿಚಯ ಮಾಡಿಕೊಡುವುದು ಸೂಕ್ತವೆಂದು ನನಗೆ ತೋರುತ್ತದೆ ಮತ್ತು ಅಲ್ಲಿ ಬಂಡೆ ಚಿತ್ರಗಳ ಛಾಯಾಚಿತ್ರ ಮತ್ತು ಅವುಗಳ ಪ್ಲಾಸ್ಟರ ಆಫ್ ಪ್ಯಾರೀಸ್ ವಸ್ತುವಿನ ಮೇಲೆ ಅಚ್ಚೊತ್ತಿದ ಚಿತ್ರಗಳು ಸಾಮಾನ್ಯವಾಗಿ ಪ್ರತಿಯೊಂದು ಹೋಟಲ್ ಮನೆ ಮುಂತಾದ ಕಡೆ ನಾವು ಕಾಣುತ್ತೇವೆ. ವ್ಯತ್ಯಾಸ: ನಮ್ಮ ದೇಶದಲ್ಲಿ ಹೆಚ್ಚಾಗಿ ದೇವರ ಛಾಯಾಚಿತ್ರಗಳನ್ನು ಕಾಣುತ್ತೇವೆ.

ಪಶ್ಚಿಮ ಯೂರೋಪದ ದಾರಿಕೋಣೆಯ ಗೋರಿಗಳ ಕಲೆ ಈ ಉಪನ್ಯಾಸದ ಬಗ್ಗೆ ಹಲವಾರು ಮಹತ್ವದ ವ್ಯತ್ಯಾಸಗಳು ಕಾಣುತ್ತವೆ. ಇದೇ ನಮೂನೆಯ ಗೋರಿಗಳು ನಮ್ಮ ಕರ್ನಾಟಕದಲ್ಲಿ ಕೊಣ್ಣೂರು ಇತ್ಯಾದಿ ಭಾಗಗಳಲ್ಲಿವೆ. ಆದರೆ ಇವು ಗಾತ್ರದಲ್ಲಿ ಬಹಳ ಚಿಕ್ಕವು. ಕಾಲಮಾನದಲ್ಲಿ ಅವು ಇವುಗಳಿಗಿಂತ ಬಹಳ ಪ್ರಾಚೀನ ಕಾಲಮಾನ ಕ್ರಿ. ಪೂ ೪೦೦೦ ರಿಂದ ೧೫೦೦ ಅಲ್ಲಿಯವು ; ಕರ್ನಾಟಕದ ಗೋರಿಗಳು ಕ್ರಿ.ಶ.ಪೂ. ೧೦೦೦ ನಂತರದ ಕಾಲದವು. ಅಲ್ಲಿಯ ಗೋರಿಗಳ ಒಳ ಅಥವಾ ಹೊರಪಕ್ಕದಲ್ಲಿ ಹಿಡಿಗೆ ಚಂದ್ರನಂತೆ ಒಂದರೊಳಗೆ ಮತ್ತೊಂದರಂತೆ

ಕೂಡಿಕೊಂಡ ವರ್ತುಳಾಕಾರದ ಬಂಡೆ ಚಿತ್ರಗಳು ಸಾಮಾನ್ಯವಾಗಿವೆ.

ಆದರೆ ಇಂಥಹ ನಮೂನೆ ನಮ್ಮಲ್ಲಿ ಕಾಣಸಿಗವು. ಅಲ್ಲಿಯ ಒಂದು ಗೋರಿಯು ನೋಡಲಿಕ್ಕೆ ನಮ್ಮ ದೇಶದ ಮಧ್ಯಪ್ರದೇಶದಲ್ಲಿ ಸಾಂಚಿಸ್ತೂಪದಂತೆ ಗೋಚರಿಸುವುದು. ಇದರ ವ್ಯಾಸ ೮೦ ಮೀ. ಮತ್ತು ಈ ಗೋರಿಗಳಿಗೆ ಹೊಂದಿಕೊಂಡ ಕಪ್ ಆ್ಯಂಡ ರಿಂಗ್ ನಮೂನೆಯ ಬಂಡೆಚಿತ್ರಗಳಿದ್ದು, ಇದರ ಬಗ್ಗೆ ೧೦೭ ವಾದಗಳು ಇವೆ. ಆದರೆ ಅವುಗಳ ವಿಶೇಷತೆ ಏನು ಎಂಬುದು ಇನ್ನೂ ಗುಟ್ಟಾಗಿದೆ.

ಡಾ. ಅನಾಟಿಯವರ ಉಪನ್ಯಾಸದಲ್ಲಿ ಅಂತರಾಷ್ಟ್ರೀಯ ಬಂಡೆಚಿತ್ರಗಳ ಬಗ್ಗೆ ವಿಸ್ತಾರದ ಪರಿಚಯುವಾಯಿತು. ಅಂತರಾಷ್ಟ್ರದ ಒಟ್ಟು ೨೦ ಸಾವಿರ ಬಂಡೆಚಿತ್ರಗಳು ಯುನೆಸ್ಕೋದ ಪಿತ್ರಾರ್ಜಿತ ಆಸ್ತಿ ಎಂದು ಮಾರ್ಪಾಡಾಗಿ ೮೦೦ ಬಂಡೆಚಿತ್ರಗಳ ಪ್ರದೇಶಗಳಿಂದು ೧೪೪ ಆರಿಸಿದ ಮುಖ್ಯವಾದ ಪ್ರದೇಶಗಳನ್ನಾಗಿ ಬೇರ್ಪಡಿಸಿರುವುದು ತಿಳಿಯಿತು. ೧೦ ಸಾವಿರ ಚಿತ್ರಗಳು ೧೦೦೦ ಸಾವಿರ ಚದರ ಮೈಲು ಪ್ರದೇಶದಲ್ಲಿ ಇದ್ದರೆ ಅದಕ್ಕೆ ಒಂದು ಪ್ರದೇಶವೆಂದು ವಿಭಾಗಿಸಿಕೊಂಡಿದ್ದಾರೆ. ಆಫ್ರಿಕಾದಲ್ಲಿ ೩೧, ಏಶಿಯಾದಲ್ಲಿ ೮೧, ಅಮೇರಿಕಾದಲ್ಲಿ ೩೪, ಯುರೋಪದಲ್ಲಿ ೨೧ ಮತ್ತು ತಾಂಜಾನಿಯಾದಲ್ಲಿ ೧೨, —ಪ್ರದೇಶಗಳಿವೆ. ಪ್ರಪಂಚದಲ್ಲಿ ಅತ್ಯಂತ ಪ್ರಾಚೀನ ಬಂಡೆಚಿತ್ರನೆಲೆ ಮಧ್ಯಆಫ್ರಿಕಾದ ತಾಂಜಾನಿಯಾ. ಅದು ४೦,೦೦೦ ಸಾವಿರ ವರ್ಷ ಹಳೆಯದೆಂದು ತಿಳಿಯಲಾಗಿದೆ. ಮತ್ತು ಒಂದೊಂದು ದೇಶದ ಅತ್ಯಂತ ಪ್ರಾಚೀನ ಬಂಡೆಚಿತ್ರಗಳ ಪರಿಚಯುವನ್ನು ಮಾಡಿ ಕೊಡಲಾಯಿತು.

ಬಂಡೆಚಿತ್ರಗಳ ಸಂರಕ್ಷಣೆ ಕುರಿತು ಉಪನ್ಯಾಸ ನಿಜವಾಗಿಯೂ ಅಪೂರ್ವದ ಮಾಹಿತಿಯಾಗಿದೆ. ಈ ಮೇಲೆ ಸ್ಥೂಲವಾಗಿ ಇದರ ಬಗ್ಗೆ ತಿಳಿಸಿರುವೆನು. ಇಲ್ಲಿ ಬಂಡೆಗಳ ವರ್ಣಚಿತ್ರಗಳಿದ್ದರೆ ವೈಜ್ಞಾನಿಕವಾಗಿ ರಾಸಾಯನಿಕ ಪ್ರಯೋಗದ ಮೂಲಕ ಪರೀಕ್ಷೆ ಮಾಡುವ ಸಲಹೆಗಳನ್ನು ಪರಿಚಯುಮಾಡಲಾಯಿತು. ವರ್ಣಚಿತ್ರಗಳನ್ನು ಮನುಷ್ಯರ ಅಥವಾ ಪ್ರಾಣಿಗಳ ರಕ್ತದಿಂದ ಮತ್ತು ಇನ್ನಿತರ ವಸ್ತುಗಳನ್ನು ಮಿಶ್ರಮಾಡಿ ಚಿತ್ರಸಿದ್ದರೆ ಈ ಚಿತ್ರದ ಸ್ವಲ್ಪ ಅಂಶವನ್ನು ಚಾಕು ಅಥವಾ ಇನ್ನಿತರ ಹರಿತವಾದ ಉಪಕರಣದಿಂದ ಸಂಗ್ರಹಿಸಿಕೊಂಡು ಪ್ರಯೋಗಶಾಲೆಯಲ್ಲಿ ರಾಸಾಯನಿಕ ವಸ್ತುಗಳಿಂದ ಪರೀಕ್ಷೆ ಮಾಡಬೇಕು. ಇದರಿಂದ ಮನುಷ್ಯನ ಅಥವಾ ಪ್ರಾಣಿಯ ರಕ್ತವಿದ್ದರೆ ಹೆಮೋಗ್ಲೋಬಿನ್ ಅಂಶ ಪತ್ತೆಯಾಗುವುದು. ಮತ್ತು ಇನ್ನಿತರ ಕ್ಯಾಲ್ಸಿಯಂ ಕಾರ್ಬೋನೇಟ್ ಅಥವಾ ಲವಣ ಅಂಶಗಳು ಗೊತ್ತಾಗುವವು. ಇದು ಮುಂದೆ ಕಾಲಮಾನವನ್ನು ಕಂಡುಹಿಡಿಯಲಿಕ್ಕೆ ಬಹಳ ಅನುಕೂಲವಾಗುತ್ತದೆ.

ಮತ್ತೊಂದು ಶಿಲಾಯುಗದ ಆಯುಧೋಪಕರಣಗಳನ್ನು ತಯಾರಿಸುವ ಬಗೆಯನ್ನು ಪ್ರಯೋಗದ ಮೂಲಕ ತೋರಿಸಲಾಯಿತು. ಪ್ರಾಗೈತಿಹಾಸಿಕ ಸಂಶೋಧನ ವಿದ್ಯಾರ್ಥಿಗಳಿಗೆ ಈ ಪ್ರಯೋಗ ಬಹಳ ಮಹತ್ವದ್ದಾಗಿದೆ. ಇದನ್ನು ವಿದ್ಯಾರ್ಥಿಗಳು ಸ್ವತಃ ವೀಕ್ಷಿಸಿದರೆ ಅವರಿಗೆ ನಿಜವಾಗಿಯೂ ಶಿಲಾಯುಗದ ಆಯುಧೋಪಕರಣಗಳ ತಯಾರಿಕೆಯ ವಿವಿಧ ಕಲಾಕೌಶಲ್ಯತೆಯ ಪರಿಜ್ಞಾನ ಮೂಡುವದಲ್ಲದೆ ಅವರ ವ್ಯಾಸಂಗಕ್ಕೆ ಹೆಚ್ಚಿನ ಪ್ರಯೋಜನವಾಗುವದು.

ಪ್ರವಾಸದಲ್ಲಿ ಟ್ರೆಂಟೊ ಹತ್ತಿರದ ಒಂದು ಉತ್ಖನನ ನೆಲೆಯನ್ನು ಮ್ಯುಜಿಯಂ ಮಾಡಿ ಪರಿವರ್ತಿಸಿದ್ದಾರೆ. ಅಂದರೆ ಉತ್ಖನನ ಮಾಡಿದ ಪ್ರಾಗೈತಿಹಾಸಿಕ ನೆಲೆಯ ಮೇಲೆ ತಾತ್ಪೂರ್ತಿಕ ಸುಂದರ ವಿಶಾಲವಾದ ಮನೆಯನ್ನು ಕಟ್ಟಿ ಒಳಗಡೆ ವಿಶೇಷ ಬೆಳಕಿನ ವ್ಯವಸ್ಥೆಯನ್ನು ಕಲ್ಪಿಸಿ ಪ್ರತಿಯೊಂದು ಉತ್ಖನನದಲ್ಲಿ ಕಂಡು ಬಂದ ವಿವಿಧ ಮಾದರಿಯ ಪದರಗಳನ್ನು ಗುರ್ತಿಸಲಾಗಿದೆ. ಮತ್ತು ಇದರ ಅಕ್ಕ-ಪಕ್ಕದಲ್ಲಿ ಹೊರಗೆ ಕಂಡ ಪದರುಗಳ ಸಹಿತ ಸುಣ್ಣದಿಂದ ಲೇಪನ ಮಾಡಿ ತಯಾರಿಸಿದ ಸಮತಟ್ಟಾದ ನೆಲೆಗಟ್ಟು ಮತ್ತು ಒಲಿ ಇವುಗಳಿಗೆ ಹೊಂದಿಕೊಂಡ ಮೃತ್ ಪಾತ್ರೆಗಳು ಮೊಂತಾದ ವಸ್ತುಗಳು ಸಹಿತ ಬಯಲಾದ್ದನ್ನು ವೀಕ್ಷಕರಿಗೆ ಮನರಂಜಿಸುವಂತೆ ಪ್ರದರ್ಶಿಸಲಾಗಿದೆ.

ಇದೇ ಮಾದರಿಯಲ್ಲಿ ಕೇವಲ ಉತ್ಖನನ ಮಾಡಿದ ಪ್ರಾಗೈತಿಹಾಸಿಕ ನೆಲೆಯ ಸುತ್ತು ಬೇಲಿಯನ್ನು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯಲ್ಲಿ ಹಚ್ಚಲಾಗಿದೆ. ಆದರೆ ಇದರಿಂದ ಸಂರಕ್ಷಣೆ ಪಡೆದ ಪದರಗಳು ನೈಸರ್ಗಿಕ ವಿಕೋಪದಿಂದ (ಗಾಳಿ ಮಳೆಯಿಂದ) ಹಾಳಾಗಿವೆ. ಈ ಎರಡೂ ಮಾದರಿಯ ಪ್ರದರ್ಶನದಲ್ಲಿ ಕೆಲ ದೋಷಗಳು ಕಂಡುಬರುತ್ತವೆ. ಇಟಲಿ ದೇಶದಲ್ಲಿಯ ಟ್ರೆಂಟೋ ಹತ್ತಿರದ ಈ ಮೇಲೆ ತಿಳಿಸಿದ ಉತ್ಖನನ ಪ್ರದೇಶದ ಮ್ಯುಜಿಯಂನಿಂದ ಇತ್ತೀಚಿನ ಉಪಕರಣಗಳು ಪ್ರಾಗೈತಿಹಾಸಿಕ ನೆಲೆ ಸಂಗಡ ಕೂಡಿ ಕೊಳ್ಳುವದು ಮತ್ತು ಸ್ವಲ್ಪಲ್ಲ ಸ್ವಲ್ಪ ಭಾಗ ಈ ನೆಲೆಗೆ ಧಕ್ಕೆ ಮಾಡಿರುವುದು. ಇದರಿಂದ ಐತಿಹಾಸಿಕ ನಿಜವಾದ ಪ್ರಾಗೈತಿಹಾಸಿಕ ಮಹತ್ವದ ನೆಲೆಗೆ ತಪ್ಪು ಕಲ್ಪನೆಯನ್ನು ಸೃಷ್ಟಿಸಿದಂತಾಗುತ್ತದೆ. ಆದ್ದರಿಂದ ಈ ಎರಡೂ ಪ್ರಯೋಗಗಳ ವಿಧಾನ ಅಸಮಂಜಸವಾಗಿವೆ. ಇದಕ್ಕೆ ಹೊಸ ಸೂಕ್ತ ವಿಧಾನವನ್ನು ಕಲ್ಪಿಸುವ ಅವಶ್ಯಕತೆ ಇದೆ ಎಂದು ನನ್ನ ಸಂಶೋಧನ ಮಾರ್ಗದರ್ಶಕರಾದ ಡಾ. ಅ. ಸುಂದರ ಅವರು ಅಭಿಪ್ರಾಯ ಪಟ್ಟಿದ್ದಾರೆ.

ನನಗೆ ಇಲ್ಲಿ ಮತ್ತೊಂದು ವಿಶಿಷ್ಟ ಮಾಹಿತಿ ತಿಳಿದಿದ್ದರೆಂದರೆ ಸಾಮಾನ್ಯವಾಗಿ ಪ್ರತಿಯೊಬ್ಬ ಪಾಶ್ಚಿಮಾತ್ಯ ಸಂಶೋಧಕರು ಒಂದೊಂದು ಸಮಸ್ಯೆಯನ್ನು ತೆಗೆದುಕೊಂಡು ಆಳವಾದ ಅಭ್ಯಾಸ ಅಥವಾ ಸಂಶೋಧನೆಯನ್ನು ರಾಷ್ಟ್ರ ಮತ್ತು

ಅಂತರಾಷ್ಟ್ರೀಯ ಮಟ್ಟದಲ್ಲಿ ಮಾಡುತ್ತಾರೆ. ಇದು ನಮ್ಮಲ್ಲಿ ಅಪೂರ್ವವಾಗಿದೆ ಯೆಂದು ನಾನು ಈ ಸಂದರ್ಭದಲ್ಲಿ ಊಹಿಸಿದರೆ ತಪ್ಪಾಗಲಾರದು. ಸಾಮಾನ್ಯ ವಾಗಿ ಹಲವಾರು ವಿಷಯುಗಳ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಸಂಶೋಧನೆ ಮಾಡುವದರಿಂದ ಯಾವ ವಿಷಯದಲ್ಲೂ ಸಂಶೋಧಕ ಪರಿಪೂರ್ಣನಾಗಲಿಕ್ಕೆ ಸಾಧ್ಯವಿಲ್ಲವೆಂದು ನನಗೆ ಅನಿಸುತ್ತದೆ.

ಒಂದೊಂದು ಚಿತ್ರದ ಸಮಸ್ಯೆಗಳನ್ನು ಕುರಿತು ಆಳವಾದ ಸಂಶೋಧನೆ ಮಾಡುವದನ್ನು ನಾನು ಕಂಡೆ. ಒಂದು ವಿಶಿಷ್ಟ ಮಾಹಿತಿಯೆಂದರೆ ಒಂದೊಂದು ಪ್ರಾಣಿಯ ಅಥವಾ ಪಕ್ಷಿಯ ಅಥವಾ ಬೇಟೆಯಾಡುವ ಮನುಷ್ಯರ ಅಥವಾ ನೃತ್ತಿಸುವ, ಮನೋರಂಜನೆಯ ದೃಶ್ಯಗಳ ಅಥವಾ ಸೂರ್ಯ-ಚಂದ್ರ ನಕ್ಷತ್ರಗಳ ಅಥವಾ ಸಮುದ್ರ ಸರೋವರಗಳ ಅಥವಾ ಇವೆಲ್ಲವುಗಳನ್ನೊಳಗೊಂಡ ಸಂಯುಕ್ತ ಚಿತ್ರಗಳು ಅಥವಾ ಚಕ್ರಾಕಾರೀತಿಯಲ್ಲಿರುವ ಕಪ್ ಆ್ಯಂಡ್ ರಿಂಗಗಳ ಅಥವಾ ಕ್ರೆಸೆಂಟಿಕ್ ರಿಂಗ್ಸ್ ಅಥವಾ ಮನುಷ್ಯರ ಪಾದಗಳ ಮುಂತಾದವುಗಳ ಚಿತ್ರಗಳನ್ನು ಕುರಿತು ಇವುಗಳಿಗೆ ಅವಶ್ಯವೆನಿಸಿದ ಸಂದರ್ಭಗಳಲ್ಲಿ ತತ್ಸಮ ಸಂಪರ್ಕ ಹೊಂದ ಬಹುದಾದ ತತ್ವಜ್ಞಾನ ಪುರಾಣ ಕಥೆ ವೇದ ಉಪನಿಷತ್ತು ಇವುಗಳ ಹಿನ್ನೆಲಿಯನ್ನು ಆ ಚಿತ್ರಗಳಿಗೆ ಹೋಲಿಸಿ, ಬಂಡೆಚಿತ್ರಗಳ ಬಗ್ಗೆ ಇತಿಹಾಸ ರೂಪಿಸುವದು ಸರ್ವೇ ಸಾಮಾನ್ಯವಾಗಿದೆ. ಮತ್ತು ಇವುಗಳ ಅಭ್ಯಾಸವನ್ನು ರಾಷ್ಟ್ರ ಮತ್ತು ಅಂತ ರಾಷ್ಟ್ರ ಮಟ್ಟದಲ್ಲಿ ಮಾಡುವರು. ಹೆಚ್ಚಾಗಿ ಅಭ್ಯಾಸದಲ್ಲಿ ಕಂಪ್ಯೂಟರ್‌ಗಳನ್ನು ಬಳಸುವದು ಸ್ವಾಭಾವಿಕವಾಗಿದೆ. ಪ್ರತಿದಿನ ಹಗಲುರಾತ್ರಿ ಸತತವಾಗಿ ಡಾ. ಅನಾಟಿಯವರು ಬಂಡೆ ಚಿತ್ರಗಳ ಸಂಶೋಧನೆಯಲ್ಲಿ ಮತ್ತು ವಿಶ್ವವಿದ್ಯಾಲಯ ದಿಂದ ಬಂದ ಸಂಶೋಧನ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವದು ಹೊಸ ಹೊಸ ಬಂಡೆಚಿತ್ರಗಳ ಪ್ರತಿರೂಪ ಪಡೆಯುವ ಬಗ್ಗೆ ಯೋಚಿಸುವದು ಮುಂತಾದ ಅವರ ಕಾರ್ಯತತ್ಪರತೆಯನ್ನು ವೀಕ್ಷಿಸಿ ನನಗೆ ಬಹಳ ವಿಸ್ಮಯವನ್ನು ಮಾಡಿತು.

ಯಶೋಧರ ಚರಿತೆ: ಧಾರ್ಮಿಕ ವಿಶ್ಲೇಷಣೆ

ಡಾ. ಶಾಂತಿನಾಥ ದಿಬ್ಬದ

ಲೌಕಿಕ ಹಾಗೂ ಧಾರ್ಮಿಕ ಕಾವ್ಯಕೃತಿಗಳ ಸರಣಿ ಕನ್ನಡ ಸಾಹಿತ್ಯದ ಆದಿ ಕಾಲದಿಂದಲೇ ರೂಢವಾದುದು. ಪಂಪಪೂರ್ವಕವಿ ಗುಣವರ್ಮನ ಹರಿವಂಶ-ಶೂದ್ರಕ ಎಂಬ ಕೃತಿಗಳಿಂದ ಈ ಸರಣಿ ಆರಂಭವಾಗಿದೆಯೆಂಬುದು ಸತ್ಯವಾದರೂ ಪ್ರಸ್ತುತ ಕೃತಿಗಳು ಅಲಭ್ಯವಿದ್ದ ಕಾರಣ ಈ ಸಂಪ್ರದಾಯದ ಪ್ರವರ್ತಕನ ಪಟ್ಟ ಕವಿಕುಲಗುರುವಾದ ಪಂಪನಿಗೆ ದಕ್ಕಿದೆ. ತನ್ನ ಎರಡು ಕೃತಿಗಳ ಧೋರಣೆಯನ್ನು ಪಂಪ 'ಬೆಳಗುವೆನಿಲ್ಲಿ ಲೌಕಿಕಮುಮನಲ್ಲಿ ಜಿನಾಗಮಮುಮಂ' ಎಂದು ಸ್ಪಷ್ಟವಾಗಿ ಸಾರಿ ಹೇಳಿದ್ದಾನೆ. ಹೀಗೆ ನಾಗವರ್ಮನಿಂದ ಆರಂಭವಾಗಿ ಪಂಪನಿಂದ ಪ್ರತಿಷ್ಠಾಪಿತವಾಗಿ ಮುಂದೆ ಬಹುಕಾಲದವರೆಗೂ ಸಾಗಿಬಂದಿದೆ ಈ ಇಬ್ಬಗೆಯ ಧೋರಣೆಯ ಕೃತಿದ್ವಯಗಳ ಸಂಪ್ರದಾಯ. ಶತಮಾನಗಳ ಕಾಲ ಉಳಿದುಕೊಂಡು ಬಂದಿರುವಲ್ಲಿಯೇ ಇದು ಗಳಿಸಿದ್ದ ಜನಪ್ರಿಯತೆಯ ಸೂಚನೆಯಿದೆ.

ಹೀಗೆ ಸುಪ್ರತಿಷ್ಠವಾದ–ಸುದೀರ್ಘವಾದ ಈ ಪರಂಪರೆಯನ್ನು ಮೊಟ್ಟಮೊದಲ ಬಾರಿಗೆ ಮೀರಿ ನಡೆದ ಧೈರ್ಯ ಕವಿಜನ್ನನದಾಗಿದೆ. ಅವನ ಎರಡೂ ಕೃತಿಗಳು ಧಾರ್ಮಿಕ ಕೃತಿಗಳೇ ಆಗಿವೆ. ಒಂದು, ಅನಂತನಾಥಪುರಾಣ ಸಾಂಪ್ರದಾಯಿಕವಾದ ಶುದ್ಧ ಧಾರ್ಮಿಕ ಕೃತಿ, ಇನ್ನೊಂದು ಯಶೋಧರ ಚರಿತೆ ಧಾರ್ಮಿಕ ಲೌಕಿಕಗಳ ಸಮ್ಮಿಶ್ರಕೃತಿ. ಯಶೋಧರಚರಿತೆಯ ಶಾರೀರಿಕ ರಚನೆ, ವಿಷಯನಿರೂಪಣಾ ವೈಖರಿ, ಗತಿಗಳು ವಿಶಿಷ್ಟವಾಗಿವೆ; ಅನಂತನಾಥಪುರಾಣಕ್ಕಿಂತ ಭಿನ್ನವಾಗಿವೆ. ಯಶೋಧರ ಚರಿತೆಯಲ್ಲಿ ಮೈದಳೆದ ಧಾರ್ಮಿಕ ವಿವರಗಳು ಹಾಗೂ ಅದನ್ನು ಕವಿ ಅಳವಡಿಸಿದ ರೀತಿ ಈ ಖಚಿತ ಉದ್ದೇಶಗಳನ್ನು ಹೊತ್ತು ಹೊರಬಂದುದು ಈ ಲೇಖನ.

ಸ್ಥೂಲದೃಷ್ಟಿಗೆ ಯಶೋಧರಚರಿತೆ ಧಾರ್ಮಿಕ ಕೃತಿಯಂತೆ ಕಂಡುಬರುವುದೂ ಕಷ್ಟ. ಅಷ್ಟೊಂದು ಲೌಕಿಕದ ಸೊಗಡು ಅಲ್ಲಿದೆ. ಧರ್ಮಬೋಧೆ ಈ ಕೃತಿಯ ಪರಮೋದ್ದೇಶ ಎಂಬ ವಾಸ್ತವಾಂಶ ಒಮ್ಮೆಲೆ ಗೋಚರಿಸದು. ಹಾಲಿನೊಳಗಿನ ತುಪ್ಪದಂತೆ ಲೌಕಿಕದ ಆಳದಲ್ಲಿ ಹುದುಗಿಕೊಂಡಿದೆ ಅಲ್ಲಿಯ ಧರ್ಮ ! ಜನ್ನನ ಸಮನ್ವಯಶಕ್ತಿ ಅಡಗಿರುವುದು ಇಲ್ಲಿಯೇ. ಧರ್ಮ–ಕಾವ್ಯಧರ್ಮಗಳೆರಡೂ

ಅವನಲ್ಲಿ ರಕ್ತಗತವಾಗಿ ಒಗ್ಗೂಡಿವೆಯೋ ಏನೋ ಎಂಬಂತೆ ಸಹಜವಾಗಿ, ಅಭೇದ ಭಾವದಲ್ಲಿ ಹೊರಹೊಮ್ಮಿದೆ ಈ ಕೃತಿಯಲ್ಲಿ. ಬಹುಶಃ ಈ ಅಬಾಧಿತ ವಿಚಾರವಾಹಿನಿಗೆ ಆತನ ಶ್ರೀಮಂತ ವ್ಯಕ್ತಿತ್ವ ಹಾಗೂ ಮನೋಭಾವಗಳೂ ಕಾರಣವಾಗಿವೆ. ಕುಲ ಬಲ ರೂಪ ಬಲಾದಿಗಳನ್ನೆಲ್ಲ ಹೊಂದಿದ ಜನ್ನ ಲೌಕಿಕಪಾರಮಾರ್ಥಿಕಗಳೆರಡರಲ್ಲೂ ಸೌಭಾಗ್ಯಶಾಲಿಯಾಗಿದ್ದ. 'ಭೋಗರೂಪ ವಿಲಾಸೋದಯದಿಂದೆ' ಸಂದ ಜನ್ನ 'ಜೈನಮಂದಿರ ನಿರ್ಮಾಣ ಧನ'ನೂ ಆಗಿದ್ದ. ರಾಜಕೃಪೆಯನ್ನು ಹೊಂದಿದ ಆತ 'ಜಗದೊಳ್ ತಾನಿತ್ತ ಕೈಯಲ್ಲದೆ ಒಡ್ಡಿದ ಕೈಯ್ಯಲ್ಲದ ಪೆಂಪು' ಪಡೆದವ. ತನ್ನ ಕವಿತಾ ಶಕ್ತಿಯ ಬಗ್ಗೆ ಅವನಿಗೆ ಪೂಜ್ಯತೆ. 'ಜಿನೇಂದ್ರವಾಗ್ವನಿತೆ ನಿಲ್ಕಸ್ಮನ್ ಮುಖಾಂಭೋಜದೊಳ್' ಎಂದೂ ಈ 'ಜನಾರ್ದನನ ವಕ್ತ್ರಾಂಭೋಜಮನ್ ಸಾರ್ದು ಸಂಸ್ಥಿತೆಯಾಗಿರ್ದುದರಿಂದೆ ತಾನೆ ಸೊಬಗೆಯಾದಳ್, ಜಾಣೆಯಾದಳ್ ಸರಸ್ವತಿ ಸಂಮೋಹಿತೆಯಾದಳ್, ಅಗ್ಗಳೆಯೆಯಾದಳ್ ವಿಶ್ವಭೂಚಕ್ರದೊಳ್' ಎಂದೂ ಹೇಳಿರುವಲ್ಲಿ ಈ ಭಾವ ಸ್ಪಷ್ಟವಾಗಿದೆ.

ಲೌಕಿಕ ಜೀವನದ ಕಕ್ಷೆಗೆ ಸಂಬಂಧಿಸಿದ ಸರ್ವಶಕ್ತ ವಿಷಯವಾದ ಶೃಂಗಾರವನ್ನು ಮೂಲಭಿತ್ತಿಯನ್ನಾಗಿರಿಸಿಕೊಂಡು ಅದರ ಮೇಲೆ ಧಾರ್ಮಿಕದ ಚಿತ್ರ ಮೂಡಿಸಿದ್ದಾನೆ ಜನ್ನ. ಇದೊಂದು ಅಪೂರ್ವ ಸಮಾಗಮ! ಪೂರ್ವಪಶ್ಚಿಮಗಳೆರಡರ, ವಿರುದ್ಧ ಪ್ರಕೃತಿಗಳೆರಡರ ಮಧ್ಯೆ ಕವಿಮಾಡಿದ ಸಮಾಗಮದ ಫಲವೇ ಈ ಕ್ರಮನೀಯವಾದ ಕಾವ್ಯಕನ್ನಿಕೆ–ಯಶೋಧರಚರಿತೆ ಕಾಮನ ಕಾಟ, ವಿಧಿಯ ವಿಲಾಸ, ವ್ಯಕ್ತಿಯ ಮೂಢನಂಬಿಕೆ, ವಾಮಾಚಾರ, ಮನೋದೌರ್ಬಲ್ಯ, ಅದಕ್ಕನುಗುಣವಾಗಿ ಆತ ಕ್ರಿಯೆಯಲ್ಲಿ ತೊಡಗುವಿಕೆ, ಅಲ್ಲಿ ಜರುಗುವ ಹಿಂಸೆ, ತತ್ಪರಿಣಾಮವಾಗಿ ಒದಗುವ ಫಲಾಫಲ ಇವೆಲ್ಲವುಗಳ ಹೃದಯಸ್ಪರ್ಶಿ ಚಿತ್ರಣ ಇಲ್ಲಿದೆ. ಧರ್ಮವಿರುದ್ಧವಾದ ವಿಕೃತ ಪ್ರಣಯ, ಪಾಪ, ಹಿಂಸೆ ಇವುಗಳ ಕಾರಣದಿಂದ ವ್ಯಕ್ತಿ ಜನ್ಮಜನ್ಮಾಂತರಗಳ ಸುಳಿಯಲ್ಲಿ ಸುತ್ತಿ ಬಳಲಿ, ಪ್ರಾಯಶ್ಚಿತ್ತಪಡುವ ಹಂತಹಂತದ ಯಶಸ್ವೀ ಚಿತ್ರಣ ಇಲ್ಲಿದೆ. ಲೌಕಿಕದ ಈ ವಿಷಮವಿಷಯಗಳನ್ನು ಮುಂದಿಟ್ಟು ಅದರ ಹಿಂದುಗಡೆಯೇ ಧಾರ್ಮಿಕದ ದಿವ್ಯದರ್ಶನ ಮಾಡಿಸಿದ್ದಾನೆ ಕವಿ. ಸಾಹಿತ್ಯಿಕದೃಷ್ಟಿಯಿಂದಲೂ ಈ ಕೃತಿ ಖಂಡಿತವಾಗಿ ಮೇಲ್ಮಟ್ಟದ್ದಾಗಿದೆ.

ಯಶೋಧರಚರಿತೆ ನಾಲ್ಕು ಅವತಾರಗಳಲ್ಲಿ ಹಬ್ಬಿದ ಕೃತಿ. ಆರಂಭದಲ್ಲಿ ಗುರುಪರಂಪರೆ, ಆಶ್ರಯದಾತನ ವಿವರ ಇತ್ಯಾದಿಗಳಿದ್ದು ತರುವಾಯ ಕಥೆ ಆರಂಭವಾಗುತ್ತದೆ. ಕಥೆಯೊಂದಿಗೆ ಅಲ್ಲಲ್ಲಿ ಬಂದ ಧಾರ್ಮಿಕ ಅಂಶಗಳು ಜೈನ ಧರ್ಮದ ಚರಣಾನುಯೋಗಕ್ಕೆ ಸಂಬಂಧಿಸಿದವಾಗಿವೆ. ವ್ರತ–ನೋಂಪಿಗಳು ಈ ಚರಣಾನುಯೋಗದ ಪ್ರಧಾನಮಾರ್ಗಗಳಾಗಿದ್ದು, ಜನ್ನನ ಕಾಲದಲ್ಲೂ ಇವು ಪ್ರ–ಇಂದೂ

ಇವೆ. ಅದರಲ್ಲೂ ಅಷ್ಟಮಿ ಅಥವಾ ಜೀವದಯಾಷ್ಟಮಿ ಎಂದು ಕರೆಯಲ್ಪಡು ವಂತೂ ತುಂಬ ಜನಪ್ರಿಯವಾದುದು. ಇಂಥ ಶುಭಪ್ರಸಂಗಗಳಲ್ಲಿ ಕೇಳ ಬೇಕಾದ ಪುಣ್ಯಕಥೆ ಇದೆಂದು ಕವಿ ಆರಂಭದಲ್ಲಿ ತಿಳಿಸಿದ್ದಾನೆ. "ಶ್ರಾವಕಜನದುಪವಾಸಂ ಜೀವದಯಾಷ್ಟಮಿಯೊಳಾಗೆ ಪಾರಣೆ ಕಿವಿಗೀ ವಸ್ತು ಕಥನದಿಂದುದ್ಭಾವಿಸಿ ಕವಿ ಭಾಳಲೋಚನಂ ವಿರಚಿಸಿದಂ." ಈ ವ್ರತವನ್ನು ಶ್ರಾವಕರು ಅಶ್ವಯುಜ ಮಾಸದ ಶುಕ್ಲಪಕ್ಷದ ಅಷ್ಟಮಿಯಲ್ಲಿ ಆಚರಿಸುತ್ತಾರೆ. ಅಷ್ಟಮಿಯಂದು ಉಪ ವಾಸವಿದ್ದು, ಜಿನೋಪಾಸನೆಯಲ್ಲಿ ನಿರತರಾಗಿ, ಮರುದಿನ ಪಾರಣೆ ಮಾಡಬೇಕಾ ದುದು ಈ ವ್ರತದ ಪದ್ಧತಿ. ಭಕ್ತಿನಿರ್ಭರತೆಯಲ್ಲಿ ಮನ ತೀವವಾದಾಗ ಇಂಥ ಪುಣ್ಯಕಥೆಗಳನ್ನು ಕೇಳಬೇಕೆಂಬ ಪುರಾತನರ ಅರ್ಥಪೂರ್ಣ ಸಂಪ್ರದಾಯ ಸ್ತುತ್ಯ ವಾದುದು. ಇಂಥ ವ್ರತಗಳ ಆಚರಣೆಯ ಹಿನ್ನೆಲೆಗನುಸಾರವಾಗಿ, ಕೇವಲ ಒಂದು ಸಂಕಲ್ಪ ಹಿಂಸೆ ಮಾಡಿದ ದೋಷದಿಂದಾಗಿ ಇಷ್ಟೆಲ್ಲ ಅವಾಂತರ ನಡೆಯಿತು ಎಂದಾಗ ಉದ್ದೇಶಪೂರ್ಣವಾಗಿ ಮಾಡುವ ಜೀವಹಿಂಸೆಯಿಂದ ಎಂಥ ಅನಾಹುತ ನಡೆದೀತು ? ಎಂಬ ಮಾರ್ಗದರ್ಶಕ ನೀತಿಯನ್ನನುಸರಿಸಿ, ಯಶೋಧರನ ಈ ಕಥೆಯನ್ನಿಲ್ಲಿ ಉದಾಹರಿಸಲಾಗಿದೆ.

ಈ ಕಥೆ ಪ್ರಸ್ತಾಪವಾದ ಕೃತಿಗಳಲ್ಲೆಲ್ಲ[೧], ಆರಂಭದಲ್ಲಿ ಮುನಿಸುವ್ರತ ಸ್ವಾಮಿ ನಮ್ಮನ್ನು ರಕ್ಷಿಸಲಿ' ಎಂಬ ಅರ್ಥದ ಮಾತಿದೆ. ಈ ಮಾತನ್ನು ಆಧರಿಸಿ ಈ ವ್ರತ ಹಾಗೂ ಕಥೆಗಳು ಮುನಿಸುವ್ರತ ತೀರ್ಥಂಕರರ ಕಾಲದಿಂದೀಚೆ ಪ್ರಚುರ ಗೊಂಡಿರಬೇಕೆಂದು ವಿದ್ವಾಂಸರು ತರ್ಕಿಸಿದ್ದಾರೆ.

ಜೈನಧರ್ಮದಲ್ಲಿ ಮೂನಿಸಮುದಾಯಗಳು ಹಳೆಯ ಕಾಲದಿಂದಲೂ ಅಸ್ತಿ ತ್ವದಲ್ಲಿವೆ. ಅಂಥದೇ ಒಂದು ನಿದರ್ಶನ ಇಲ್ಲಿದೆ. ರಾಜಪುರದಲ್ಲಿ ಬೀಡು ಬಿಟ್ಟಿದ್ದ ಸುದತ್ತಾಚಾರ್ಯರು ಪರ್ವನಿಮಿತ್ತವಾಗಿ ಉಪವಾಸಮಾಡಿದ್ದು, ಅದು ಮುಗಿದ ಕಾರಣ ಇಬ್ಬರು ಎಳವರೆಯದ ಶಿಷ್ಯರನ್ನು ಭಿಕ್ಷೆಗೆ ಕಳಿಸುತ್ತಾರೆ. ಅದೇ ಸಮ ಯಕ್ಕೆ, ತಮ್ಮೂರ ಮಾರೀದೇವಿಯ ಜಾತ್ರೆಯಲ್ಲಿ ಕೊಡಬೇಕಾದ ನರಬಲಿಗಾಗಿ ಹುಡುಕುತ್ತಿದ್ದ ತಳವಾರ ಚಂಡಕರ್ಮ ಅವರನ್ನು ಹಿಡಿಯುತ್ತಾನೆ. ಓದುಗರನ್ನು ಕಣ್ಮುಚ್ಚಿ-ಬಾಯ್ಮುಚ್ಚಿ ಅಮುಕಿದಂತಿರುವ ಈ ಸನ್ನಿವೇಶದಲ್ಲಿ ಅಣ್ಣ ಅಭಯರುಚಿ ತಂಗಿಗೆ ಹೇಳುವ 'ಅಭೀತೆಯಾಗೆಲೆಗೆ ತಾಯೆ ಮರಣದ ದೆಸೆಯೊಳ್' ಎಂಬಲ್ಲಿ ಇಡೀ ಜೈನಧರ್ಮ ಸಮರ್ಪಣಾಭಾವ ಮಡುಗಟ್ಟಿ ನಿಂತಿದೆ. ಸದುದ್ದೇಶಪೂರ್ವಕ ವಾಗಿ ಮರಣವನ್ನೇ ಬರಮಾಡಿಕೊಳ್ಳುವ ಸಲ್ಲೇಖನೆಯಂಥ ದಿಟ್ಟವ್ರತಗಳನ್ನು

---

೧ ಯಶೋಧರ ಕಾವ್ಯಂ ೧೯೫೩-ಸಂ. ಶ್ರೀನಾನ್ ಎಸ್. ಜೊಮ್ಮರಸ ಪಂಡಿತರು. ಮೈಸೂರು ಪುಟ x.

ಪಾಲಿಸುವ ಶ್ರವಣನಿಗೆ ಮರಣದ ಭಯವೇ ? ಎಂಬ ದೂರದ ಅರ್ಥ ಇಲ್ಲಿ ಎದುರಾಗುತ್ತದೆ. ಅಣ್ಣ ತಂಗಿಗೆ ಧೈರ್ಯ ತುಂಬುವ ಈ ಸಂದರ್ಭದಲ್ಲಿ ಜೈನರಲ್ಲಿರುವ ತಪಸ್ಸಿನ ಕಲ್ಪನೆ ಹಾಗೂ ಸ್ಥಾನಮಾನಗಳ ಸ್ಪಷ್ಟ ಅರಿವಾಗುತ್ತದೆ. 'ಪೆತ್ತ ಪರೀಷಹಜಯುಮೆ ತಪಂ ತಪಕೆ ಬೇರೆ ಕೋಡೆರಡೊಳವೆ' ? ಎಂಬುದು ಇಲ್ಲಿಯ ಉಕ್ತಿ. ವ್ಯಕ್ತಿಗೆ ಬಂದೊದಗಬಹುದಾದ ಆಂತರಿಕ ಹಾಗೂ ಬಾಹ್ಯಕ್ಲೇಶಗಳನ್ನು ಜಯಿಸುವುದೇ ತಪಸ್ಸು ಎಂಬ ಈ ಮಾತಿನಿಂದ ಜೈನ ಚರಣಾನುಯೋಗದ ಸೂಕ್ಷ್ಮ ಪರಿಜ್ಞಾನ ಕವಿಗಿರುವುದು ವಿದಿತವಾಗುತ್ತದೆ.

ಅಣ್ಣನಿಗೆ ತಂಗಿ ನೀಡಿದ ಉತ್ತರವೂ ಅಷ್ಟೇ ದಿಟ್ಟವಾದುದು, ನಿರ್ಭೀತವಾದ ಜೈನಸಂಸ್ಕಾರಮಾತ್ರದಿಂದ ಮೂಡಿ ಬರಬಹುದಾದ ಮಾತು. "ಮಾಡಿದುದಂ ನಾವುಣ್ಣದೆ ಪೋಕುಮೆ ? ಭಯಮೇಕಣ್ಣ ಭವಪ್ರಕೃತಿ ವಿಕೃತಿ ನಾವರಿಯದುದೇ ?" 'ಮಾಡಿದುದಂ ನಾವುಣ್ಣದೆ ಪೋಕುಮೆ' ಎಂಬಲ್ಲಿ ಜೈನರ ಸಪ್ತ ತತ್ವಗಳಲ್ಲಿಯ ಆಸ್ರವ ಹಾಗೂ ಬಂಧ ತತ್ವಗಳ ಛಾಯೆಯಿದೆ. ನಮ್ಮ ನಮ್ಮ ಕರ್ಮಾನುಸಾರವಾಗಿ ನಾವು ಮುಂದಿನದನ್ನು ಉಪಭೋಗಿಸಬೇಕಾಗುತ್ತದೆ. ಧರ್ಮ ಕರ್ಮವಿಚಾರವೇ ಬದುಕಿಗೆ ಮೂಲ; ನಮ್ಮ ಕರ್ಮಕ್ಕೆ ನಾವೇ ಹೊಣೆಗಾರರು ಆತ್ಮನು ಕರ್ತೃವೂ ಹೌದು-ಭೋಕ್ತೃವೂ ಹೌದು ಎಂಬೆಲ್ಲ ಜೈನ ವಿಚಾರಸರಣಿ ಇಲ್ಲಿ ಸೂತ್ರಪ್ರಾಯವಾಗಿ ಬಂದಿದೆ. ಅಲ್ಲದೆ ಪುನರ್ಜನ್ಮಗಳ ಬಗ್ಗೆ ಜೈನರು ಹೊಂದಿದ ನಂಬಿಕೆಯ ಬಗ್ಗೆಯೂ ಇಲ್ಲಿ ಸ್ಪಷ್ಟವಾಗುತ್ತದೆ.

ಜೈನರಲ್ಲಿ ಆತ್ಮಕ್ಕೆ ಹೆಚ್ಚಿನ ಪ್ರಾಧಾನ್ಯತೆಯಿದ್ದು ಶರೀರ ಅಲ್ಲಿ ಗೌಣ. ಅವರ ಪ್ರಕಾರ ಶರೀರ ಕೇವಲ ಸುಖಕ್ಕಾಗಿ ಬಾಯಿಬಿಡುತ್ತ, ಉಳ್ಳ ಅಪಾಯ ಕೋಟಿಗಳೆಲ್ಲವಕ್ಕೂ ತವರುಮನೆಯಿದ್ದಂತೆ. ಶರೀರದಿಂದ ಏನೆಲ್ಲ ಹಾನಿಯಾಗಬಹುದು ಎಂಬ ಭಾವ. ಈ ಮಾತಿನಲ್ಲಿದೆಯಲ್ಲದೆ ಅಂಥ ಕ್ಷುದ್ರ ಶರಿರದ ಬಗ್ಗೆ ಹಂಬಲಿಸುವುದಾದರೂ ಏಕೆ ಎಂಬ ಸದ್ವಿವೇಕವೂ ಇದೆ.

ಜೀವಹಿಂಸೆಯನ್ನು ಮನಸ್ಸಿನಿಂದ ಒಪ್ಪುವುದಂತೂ ದೂರದ ಮಾತು, ಕಣ್ಣಿಂದ ನೋಡುವುದೂ ಕಷ್ಟಕರ ಎನ್ನುವಂತೆ ಆ ಮಾರೀದೇವತೆಯ ಮಂದಿರದ ಭೀಭತ್ಸ ಚಿತ್ರಣ ನೀಡಿದ್ದಾನೆ ಕವಿ. ಕೂಸುಗಳಾದ ಅಭಯರುಚಿ-ಅಭಯಮತಿಗಳು ಅದೆಲ್ಲವನ್ನು ಕಣ್ಣಾರೆ ಕಂಡೂ ಕಂಗೆಡದ ಧೀರರು. ನೆತ್ತಿಯ ಮೇಲೆ ಖಡ್ಗ ನೇತಾಡುವಾಗಲೂ 'ನಿರ್ಮಲ ಧರ್ಮದಿಂದ ಧರೆಯಂ ಪಾಲಿಸು' ಎಂದು ಜಿನಶಾಸನ ವಾಕ್ಯವನ್ನು ನುಡಿದು ರಾಜನನ್ನು ಹರಸಿದ ಪರಿಶುದ್ಧಾತ್ಮರು. ಈ ಪ್ರಸಂಗದಲ್ಲಿಯ ಬಾಲಕರ ದಿಟ್ಟ ಧೀರೋದಾತ್ತ ನಿಲುವು, ದಿವ್ಯತೇಜ ಇತ್ಯಾದಿಗಳನ್ನು ಕಂಡರೆ, ತಾಮಸವನ್ನು ತಳ್ಳಬಲ್ಲ ರಜೋಗುಣವೇ ಮೂರ್ತಿವೆತ್ತಂತೆ ಭಾಸವಾಗು

ತ್ತದೆ. ಆ ಕೂಸುಗಳನ್ನು ಕಂಡ ಮಾರಿದತ್ತ ಚಕಿತನಾಗಿ ಅವರ ವೃತ್ತಾಂತ ತಿಳಿಯುವ ಕಾತರ ವ್ಯಕ್ತಪಡಿಸುತ್ತಾನೆ. ಆತನಿಗೆ ಬಾಲಕರಿಂದ ದೊರೆತ ಉತ್ತರ ಅವರ ಶ್ರೀಮಂತ ಹಾಗೂ ಧೀಮಂತ ಆತ್ಮಶಕ್ತಿಗೆ ಸಾಕ್ಷಿಯಾಗಿದೆ: 'ಧರ್ಮಪರ-ರ್ಗಲ್ಲದೆಮ್ಮಯ ನಿರ್ಮಲಚಾರಿತ್ರವಿಂಬುಗೆಯ್ಯದು' ನಿರ್ಮಲಚಾರಿತ್ರವೆಂಬುದು, ಪುಣ್ಯಕಥೆಯೆಂಬುದು ಧರ್ಮಪರರಲ್ಲದವರಿಗೆ ಲಭಿಸದು ಎಂಬುದು ನಿತ್ಯಸತ್ಯವಾಗಿದೆ. ಇಷ್ಟಕ್ಕೇ ಬಿಡದ ಬಾಲಕರು ಮಾರಿದತ್ತನ ಒಳಗಣ್ಣನ್ನೇ ತೆರೆಯಿಸಿ ಬಿಡುತ್ತಾರೆ: ಗುಣಿಗಳ ಗುಣರತ್ನವಿಭೂಷಣಮೆಸೆವುದೆ ವಿಕಳಹೃದಯರಾದವರ್ಗೆ ನೃಪಾಗ್ರಣಿ ಪೇಳ್ ತುಪ್ಪೇರಿದ ದರ್ಪಣದೊಳ್ ಪಜ್ಜಳಿಸಲಾರ್ಪುದೆ ಪ್ರತಿಬಿಂಬ. ವಿಕಳಹೃದಯರಿಗೆ ಹೇಗೆ ಗುಣಿಗಳ ಅರಿವಾಗುವುದಿಲ್ಲವೋ ಹಾಗೆಯೇ ಜಿಡ್ಡಾದ ಆತ್ಮದರ್ಪಣದಲ್ಲಿ ಪರಮಾತ್ಮನ ಪ್ರತಿಬಿಂಬವೂ ಮೂಡಲಾರದು ಎಂಬ ಮಾತನ್ನು ಯಾವ ಮತದವರು ತಾನೆ ಒಪ್ಪಲಾರರು? ಇಂಥ ಕೆಲಪ್ರಸಂಗಗಳಲ್ಲಿ ಜನ್ನ ಜೈನಮತವನ್ನು ಮೀರಿ ಮಾನವಧರ್ಮದ ತತ್ವಗಳನ್ನೇ ಪ್ರತಿಪಾದಿಸಿದ್ದಾನೆ.

ಮನ ತಿಳಿಯಾದ ಬಳಿಕ ಮಾರಿದತ್ತ ಕೂಸುಗಳಿಗೆ ಕೈ ಮುಗಿಯುತ್ತಾನೆ. ಆತನ ಮನ ದಯೆಯಲ್ಲಿ ನೆಲೆಗೊಂಡ ಕಾರಣ. ಇದುವರೆಗೆ ದುರ್ಮಾರ್ಗದಲ್ಲಿ ಸಾಗಿದ ಅವನ ಸುಕೃತದ ಕಾಲ ಕೂಡಿ ಬಂತು. ಹಿಂಸಾರಭಸಮತಿಯಾಗಿದ್ದ ಆತ ಕಾಲಬ್ಧಿಯ ಪರಿಣಾಮದಿಂದ ಪರಿಶುದ್ಧನಾಗುತ್ತಾನೆ. ಕಾಲಲಬ್ಧಿ ಎಂದಾ-ದರೂ ಪೊಲಗೆಡಿಸುವುದೇ'? ಅಂತೆಯೇ ನಮ್ಮ ಪುಣ್ಯಕಥಾಶ್ರವಣದಿಂದ ನೀನು ಧರ್ಮಪಥಕ್ಕೆ ಸಲ್ಲುವಿ ಎಂದು ಬಾಲಕರು ಹರಸುತ್ತಾರೆ. ಇದೇ ರೀತಿಯಲ್ಲಿ 'ಮಾರಿದತ್ತಂಗೆ ಹಿಂಸಾರಭಸಮತಿಗೆ ಸಯ್ದಂ ಪೇಳ್ದು ಧರ್ಮಕ್ಕೆ ತಂದೀ ಶುಭ ಕಥನಮನತ್ಯಾನಂದದಿಂ ಕೇಳ್ವ ಭವ್ಯಪ್ರಭು ಸಭೆಗೆಸೆದಿರ್ಕುಂ ಮಂಗಳ ಶ್ರೀ ವಿಲಾಸಂ' ಎಂದು ಕವಿಯೂ ಅಭಿಮಾನ-ಭಕ್ತಿಪೂರ್ವಕವಾಗಿ ಹೇಳಿದ್ದಾನೆ. ಬಾಲಕರು ಹೇಳಿದ ಕಥೆಯು 'ಶ್ರೀಮತ್ತೀರ್ಥಾಧಿಪನ ವದನಾಂಭೋಜದಿಂ ಸರ್ವ ಭಷಾಸಾಮಾನ್ಯಂ ಶ್ರೀವಚನಮೊಗೆದತ್ತಾ ವಚೋಮಾರ್ಗದಿಂ' ಎನ್ನುವಲ್ಲಿ ತೀರ್ಥಂಕರರದು ಶ್ರೀವಚನ, ತಾಲೋಷ್ಟ ಸಂಪುಟರಹಿತವಾದ ಅವರ ಅಸ್ಖಲಿತವಾಣಿ ಸರ್ವಭಷೆಯವರಿಗೂ ಸಾಮಾನ್ಯ ಎಂಬ ಜೈನ ನಂಬಿಕೆಗಳಿವೆ.

ಕಥೆ ಮುಂದುವರೆಯುತ್ತದೆ; ಉಜ್ಜಯಿನಿಪುರ-ಅದರ ರಾಜಯಶೌಘ-ಅವನ ರಾಣಿ ಚಂದ್ರಮತಿ-ಮಗ ಯಶೋಧರ-ಯಶೋಧರನ ಸತಿ ಅಮೃತಮತಿ-ಮಗ ಯಶೋಧರ ತರುಣನಾಗುವ ಹೊತ್ತಿಗೆ ಯಶೌಘ ವೃದ್ಧನಾಗಿದ್ದ, ಆತನಿಗೆ ಲೌಕಿಕದ ಬದುಕು ಸಾಕಾಗಿತ್ತು. ವಿರಕ್ತಿಯತ್ತ ಮನ ಒಲಿದಿತ್ತು. ವ್ಯಕ್ತಿಯ ಈ ಹಂತದ ಯಶಸ್ವೀ ಹಾಗೂ ಪರಿಣಾಮಕಾರಿ ಚಿತ್ರಣಗಳು ಜೈನ ಅಭಿಜಾತ

ಕಾವ್ಯಗಳಲ್ಲಿ ಮಾತ್ರ ದೊರೆಯುತ್ತಿದ್ದು, ಅವು ಜೈನ ಪರಂಪರೆಯ ಪ್ರಾತಿನಿಧಿಕ ಚಿತ್ರಗಳೂ ಆಗಿವೆ. ಈ ಮಾತಿಗೆ ಯಶೌಘನ ವೃದ್ಧಾಪ್ಯದ ಚಿತ್ರವನ್ನೇ ಉದಾಹರಣೆಯಾಗಿ ಕೊಡಬಹುದು. 'ನರೆಯೆಂಬ ಹೊರಸು ನೊಗವೆಂಬರ ಮನೆಯಂ ಪೊಕ್ಕ ಕಾರಣ ಆ ರಾಜ ಅಖಿಳ ವಿಷಯಾಮಿಷವನ್ನು ತೊರೆದನಂತೆ, ವೃದ್ಧರ ಕೂದಲು ಬೆಳ್ಳಗಾಗುವುದಾಗಲಿ, ಮನೆಯಲ್ಲಿ ಪಾರಿವಾಳ(ಕಾಗೆ?) ಪ್ರವೇಶಿಸಿದರೆ ಆ ಮನೆಯನ್ನು ಬಿಡವುದಾಗಲಿ ಬದುಕಿನ ಸಾಮಾನ್ಯ ಅಂಶಗಳು. ಅಂಥ ಚಿತ್ರಗಳನ್ನು ಕೇವಲ ವಸ್ತುಗಳಾಗಿ ಬಳಸದೆ ಸಂಕೇತಗಳಾಗಿ ಬಳಸಿ ಕಾವ್ಯದ ಅರ್ಥಮಹತಿಯನ್ನು ಹೆಚ್ಚಿಸಿರುವದು ಜೈನ ಕವಿಗಳ ವೈಶಿಷ್ಟವಾಗಿದೆ. ಮನದಲ್ಲಿ ವೈರಾಗ್ಯ ಮೂಡಿದ ತಕ್ಷಣ ಯಶೌಘ 'ಕಂಬಂದಪ್ಪಿದ ಕರಿಯಂತೆ' ತಪೋವನಕ್ಕೆ ನಡೆದನೆಂಬಲ್ಲಿ ಜೈನಸಾಧುಗಳು ತಪಸ್ಸಿನ ರಂಗದಲ್ಲಿ ಈಡಾಡುವ ಪರಿಯನ್ನು ಪರ್ಯಾಯವಾಗಿ ಸೂಚಿಸಲಾಗಿದೆ. ಜೈನರ ಪ್ರಕಾರ, ಈ ಬದುಕು ವ್ಯಕ್ತಿಯನ್ನು ಕಟ್ಟಿ ಹಾಕಿರುತ್ತದೆ–ಕಂಬಕ್ಕೆ ಆನೆಯನ್ನು ಕಟ್ಟಿದಂತೆ; ಅದರ ಮನಸ್ಸಿಗೆ ವಿರುದ್ಧವಾಗಿ. ಅಂತೆಯೇ ಅದು ಆ ಬಂಧನದಿಂದ ಕೊಸರಿಕೊಂಡು ಮುಕ್ತವಾಗಿ ತನ್ನ ಸಹಜನೆಲೆಯಾದ ತಪೋರಾಜ್ಯವನ್ನು ಪ್ರವೇಶಿಸುತ್ತದೆ ಇತ್ಯಾದಿಯಾದ ಸೂಕ್ಷ್ಮವಾದ ಭಾವತರಂಗ ಕವಿಯ ಮಾತಿನಲ್ಲಿ ಅಡಗಿರುವದನ್ನು ಗುರುತಿಸಬಹುದು.

ಮುಂದೆ, ಯಶೌಘ ತಪಸ್ಸಿಗೆ ಹೋದ–ಮಗ ರಾಜ್ಯಭಾರ ವಹಿಸಿಕೊಂಡು ಇದ್ದ–ಒಂದು ರಾತ್ರಿ, ಅಂತಃಪುರದಲ್ಲಿ ರಾಜರಾಣಿಯರು ಮಲಗಿದ್ದಾಗ ಸಂಗೀತದ ಅಲೆ ತೇಲಿ ಬರುತ್ತದೆ. ಸಂಗೀತ ಕೇಳಿದ ರಾಣಿ'ಮುಟ್ಟಿದ ಮನಮನೆ ತೊಟ್ಟನೆ' ಪಸಾಯದಾನಂಗೊಟ್ಟಳ್' ಎಂದು ಕವಿ ಹೇಳುವಲ್ಲಿ ಆತನ ಅದ್ಭುತ ಕಾವ್ಯಶಕ್ತಿಯ ಅರಿವಾಗುತ್ತದೆ. ತನ್ನ ಮನಸ್ಸನ್ನು 'ತೊಟ್ಟನೆ' ಒಪ್ಪಿಸಿಬಿಟ್ಟಳು ಎಂಬ ಮಾತಿನ ಹಿಂದೆ ಅಮೃತಮತಿಯ ಅದುವರೆಗಿನ ಮತ್ತು ಆಗಿನ ಮಾನಸಿಕ ಹಾಗೂ ದೈಹಿಕ ತುಡಿತ–ತೀವ್ರತೆಗಳು ಓದುಗರ ಮುಂದೆ ಏಕಕಾಲಕ್ಕೆ ಹೊಳೆಯುತ್ತವೆ.

ಮನವನ್ನು ಕಳೆದುಕೊಂಡ ರಾಣಿ ತನ್ನ ದಾಸಿಯ ಮೂಲಕ, ಹಾಡು ಹೇಳಿದ ಅಷ್ಟಾವಂಕನ ಸಂಪರ್ಕ ಬಯಸುತ್ತಾಳೆ. ದಾಸಿಯ ಆಗಿನ ಅನಿಸಿಕೆ 'ಚಿತ್ರಮ ಪಾತ್ರೆ ರಮತೇ ನಾರೀ' ಎಂಬ ಒಂದೆ ಒಂದು ಮಾತಿನಲ್ಲಿ ಶೃಂಗಾರಕವಿ ಜನ್ನ ಸ್ತ್ರೀಯ ಇಡೀ ಮನೋವ್ಯಾಪಾರವನ್ನೇ ಪರಿಚಯಿಸಿ ಕೊಡುತ್ತಾನೆ. ಅಷ್ಟಾವಂಕನ ಕುರೂಪದ ಬಗ್ಗೆ ದಾಸಿ ಹೇಸಿಕೊಳ್ಳುತ್ತಾಳೆ. ಆದರೆ 'ಮರುಳೆ–ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್' ಎಂಬ ವಿಚಿತ್ರಸ್ತರದ ಆಳಕ್ಕೆ ತನ್ನ ರಾಣಿ ಇಳಿದಿರುವುದು ಅವಳಿಗೇನು ಗೊತ್ತು?

ಅಂತೂ ದಾಸಿಗೆ ಲಂಚಕೊಟ್ಟು ರಾಣಿ ತನ್ನ ಆಶೆಯನ್ನು ಈಡೇರಿಸಿಕೊಳ್ಳುತ್ತಾಳೆ. ಅಮೃತಮತಿಯಲ್ಲಾದ ಪರಿವರ್ತನೆಯನ್ನು ಯಶೋಧರ ಗ್ರಹಿಸುತ್ತಾನೆ

ಪರೀಕ್ಷಿಸಿಯೂ ನೋಡುತ್ತಾನೆ. ಕಠೋರಸತ್ಯವನ್ನು ಕಣ್ಣಾರೆ ಕಾಣುತ್ತಾನೆ. ಕುಸಿದು ಹೋದ ಆತ ಬದುಕಿನಲ್ಲಿ ಜಿಗುಪ್ಸೆ ಹೊಂದಿದ. ಆ ಪಾಪಿಗಳನ್ನು ಕೊಲ್ಲ ಲೆಂದು ಒಂದು ಕ್ಷಣ ಖಡ್ಗವನ್ನು ಎತ್ತಿದನಾದರೂ ವಿವೇಕ ಮೀರಿ ವರ್ತಿಸಲಿಲ್ಲ. ಅವನ ಇಲ್ಲಿಯ ಕ್ಷಮಾಗುಣ ಅಪೂರ್ವವಾದುದು. ರಾಜನ ಈ ನಡತೆ ಸಾಮಾನ್ಯ ಲೌಕಿಕದ ಸ್ತರದಲ್ಲಿ ಹೇಡಿತನದಂತೆ ಕಂಡರೂ ಆತನನ್ನು ಕವಿ ಚಿತ್ರಿಸಿದ ವಿವೇಕ ಶೀಲವಾದ ಸ್ತರವೇ ಬೇರೆ! ಆ ಕ್ಷಣದಲ್ಲಿ ಬುದ್ಧಿಯ ಮೇಲಿನ ಹಿಡಿತ ಕಳೆದು ಕೊಂಡಿದ್ದರೆ ಯಶೋಧರನ ಪಾತ್ರದ ಮಹತಿಯೇ ಮಾಯವಾಗುತ್ತಿತ್ತು. ಆಗ ಅವನಲ್ಲಿ, ಹಿಂಸೆ–ಅಹಿಂಸೆಗಳ ವಿಚಾರಕ್ಕಿಂತ ಸ್ತ್ರೀಯ ಕೀಳುತನದ ಹೇಸಿಕೆಯ ಭಾವವೇ ಅತಿಯಾಗಿತ್ತೆಂದು ಗ್ರಹಿಸುವುದು ಹೆಚ್ಚು ಸೂಕ್ತ. ಅಂತೆಯೇ ಆತ "ಕೊಂದಾ ಪುಳು ಪುಟ್ಟುವ ಸರಕದೊಳಗೆ ಬೀಳ್ವನೆ ಚದುರಂ' ಎಂದು ಚಿಂತಿಸಿ, ತಾನಾಗ ಕೊಂದರೂ ಅವಳ ದೇಹವನ್ನು ಕೊಂದಂತಾಗುವುದೇ ವಿನಃ ಭಾವವನ್ನಲ್ಲ ಎಂದು ಭಾವಿಸಿ ಅವಳನ್ನು ಅವಳ ಪಾಡಿಗೆ ಬಿಟ್ಟುಬಿಡುತ್ತಾನೆ. ಅಂದಿನಿಂದ ಅಮೃತಮತಿ ಯಶೋಧರನ ದೃಷ್ಟಿಯಲ್ಲಿ 'ಪುಳಿ ಮುಟ್ಟಿದ ದುಗ್ಧ' ವಾಗಿ 'ನೀಮುರ್ಟ್ಟಿದ ಜೇನೆಯ್ಯಾಗಿ ಉಳಿಯುತ್ತಾಳೆ. 'ಮನಸಿಜನ ಮಾಯೆ ವಿಧಿವಿಲಸನದ ನೆರ ವನ್ನು ಪಡೆದು ಅವಳನ್ನು ಆಗಲೇ ಕೊಂದಿದೆ ಎಂಬ ಕಾರಣದಿಂದಲೋ ಏನೋ ರಾಜ ಅವಳನ್ನು ಕ್ಷಮಿಸಿಬಿಡುತ್ತಾನೆ. ತನ್ನ ದುರ್ವರ್ತನೆ ರಾಜನಿಗೆ ತಿಳಿದಿದೆ ಯೆಂಬುದು ಅಮೃತಮತಿಗೂ ಗೊತ್ತಾಗುತ್ತದೆ. ಹಾಗಾಗಿ, ಒಂದೆಡೆ ರಾಣಿ ಅಧೋಮುಖಿಯಾಗಿ ಜಡವಾದರೆ ಇನ್ನೊಂದೆಡೆ ರಾಜ ಉರ್ಧ್ವಮುಖನಾಗಿ ಲಘುವಾ ಗುತ್ತ ಸಾಗುತ್ತಾನೆ. ಇಲ್ಲಿ ಇವಳಿಗೆ ಬೇಕಾದದ್ದು ಸಂಗಸುಖವಾದರೆ ಅಲ್ಲಿ ಅವನಿಗೆ ಬೇಕಾದದ್ದು ನಿಸ್ಸಂಗಸುಖ, ಅವಳದು ಪ್ರವೃತ್ತಿಯಾದರೆ ಅವನದು ನಿವೃತ್ತಿ! ಬಹುಶಃ ಇಬ್ಬರಿಗೂ ಅದು ಅನಿವಾರ್ಯವೂ ಆಯಿತು. ಇಲ್ಲಿಂದ ಮುಂದೆ ಕಾವ್ಯ ಲೌಕಿಕ ಕಕ್ಷೆಯಿಂದ ಬಿಡಿಸಿಕೊಂಡು ಅಲೌಕಿಕ ಕಕ್ಷೆಯನ್ನು ಪ್ರವೇಶಿಸುತ್ತದೆ.

ದಿನೇ ದಿನೇ ರಾಜ ಕಳಾಹೀನನಾಗುತ್ತಾನೆ. ತಾಯಿ ಚಂದ್ರಮತಿ ಮಮತೆ ಯಿಂದ ಮಗನನ್ನು ವಿಚಾರಿಸುತ್ತಾಳೆ. ಚತುರನಾದ ಮಗ ಘಟನೆಗೆ ಕನಸಿನ ಬಣ್ಣಕೊಟ್ಟು ತಿಳಿಸುತ್ತಾನೆ. ಪಾಪ ಅವನಿಗೇನು ಗೊತ್ತು–ಅದೇ ತನ್ನ ದುರಂತ ಬದುಕಿಗೆ ನಾಂದಿಯಾದೀತೆಂದು ? ಕನಸು ಅಶುಭಸೂಚಕವೆಂದು ಬಗೆದ ತಾಯಿ ಅದರ ನಿವಾರಣೋಪಾಯವನ್ನು ಹುಡುಕಿ, ಮಾರೀದೇವತೆಗೆ ಒಂದು ಕುರಿಯನ್ನು ಕೈಯಾರೆ ಬಲಿಕೊಡಬೇಕೆಂದು ಸೂಚಿಸುತ್ತಾಳೆ. 'ಒಂದು ಮಾಡಲು ಹೋಗಿ ಒಂಭತ್ತಾಯಿತು' ಎಂಬಂತಾಯಿತು ರಾಜನ ಸ್ಥಿತಿ !

ಹೆಣ್ಣುದೇವತೆಯಲ್ಲಿ ನಂಬಿಕೆ, ಹಿಂಸೆ, ಬಲಿಕೊಡುವುದರಿಂದ ಅರಿಷ್ಟನಿವಾರಣೆ

ಯಾಗುವುದೆಂಬ ನಂಬಿಕೆಗಳು ಮೂಲದ ಜೈನ ಪರಿಸರದ ಅಂಶಗಳಲ್ಲ ಕಾರಣ ಈ ಕಥೆಯಲ್ಲಿಯ ಘಟನೆ ಜೈನಧರ್ಮದ ಮಧ್ಯ ಕಾಲೀನ ಪರಿಸರದ್ದಾಗಿರಬೇಕು. ಸ್ತ್ರೀದೇವತೆಯನ್ನು ಉಪಾಸಿಸುವ ಹಾಗೂ ಹಿಂಸೆಯನ್ನು ಮನ್ನಿಸುವ ಪ್ರಕ್ರಿಯೆ ಖಂಡಿತವಾಗಿಯೂ ಜೈನಧರ್ಮದ ಮೇಲಾದ ಅನ್ಯಮತದ ಪ್ರಭಾವ. ಬಹುಶಃ ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ನಡೆದ ಘಟನೆ ಹಾಗೂ ಅದರ ವೃತ್ತಾಂತ ಈ ಕಥೆ.

ಇಲ್ಲಿಂದ ಮುಂದೆ ಜೈನ ತಾತ್ವಿಕ ಜಿಜ್ಞಾಸೆ ತುಂಬ ಸ್ಫುಟವಾಗಿದೆ. ತಾಯಿಯ ವಿಚಿತ್ರ ಮಾತನ್ನು ಕೇಳಿದ ಮಗ ಚಿಂತಾಕ್ರಾಂತನಾದ. 'ಮೇಗಂ ಬಗೆವೊಡೆ ವಧೆ ಹಿತಮಾಗದು' ಎಂಬ ಸೂತ್ರಪ್ರಾಯವಾದ ಧೋರಣೆಯನ್ನಾತ ತಳೆದ. 'ಮರ್ತ್ಯಂಗೆ ನಿತ್ಯವೆ ಮಾನಸವಾಳ್' ಎನ್ನುವಲ್ಲಿ ಬದುಕಿನ ಕ್ಷಣಿಕತೆ ಹಾಗೂ ಜೈನರು ಬದುಕಿಗೆ ನೀಡುವ ಅಲ್ಪಬೆಲೆಗಳು ವಿದಿತವಾಗಿವೆ. ಮನುಷ್ಯನ ಬಾಳು ಸಾಯುವ ಕುದುರೆ ಯಿದ್ದಂತೆ, ಅದಕ್ಕೆ ಹುಲ್ಲು ಹಾಕುವುದು ಜಾಣರ ಲಕ್ಷಣವಲ್ಲ. ಅಧರ್ಮವೇ ಧರ್ಮವೆಂದು ಬಗೆದು ಮತ್ತೆ ಹೊಸ ಕೇಡನ್ನು ಆಮಂತ್ರಿಸುವುದು ಬೇಡವೆಂದು ಮಗ ಗೋಗರೆಯುತ್ತಾನೆ. ಆದರೆ ಎಲ್ಲವೂ ವ್ಯರ್ಥಪ್ರಲಾಪ ಮಾತ್ರ.

'ಜೀವದಯೆ ಜೈನಧರ್ಮಂ' ಎಂದು ಹೃದಯಾಂತರಾಳದಿಂದ ನುಡಿದ ರಾಜ ಜೀವಹಿತದಲ್ಲಿ ನಂಬಿಕೆಯಿಟ್ಟವರು ಎಂದಾದರೂ ಹಿಂಸೆಯನ್ನು ಮಾನ್ಯ ಮಾಡು ವರೇ ? ಎನ್ನುವನು. ತಾಯಿಗೆ ಸಿಟ್ಟುಬರುತ್ತದೆ. 'ಗುರುವಚನಮಲಂಘನೀಯಂ' 'ಧರ್ಮದೊಳರಸುಗಳೇಂ ಶಾಂತಿಯೆಂದೊಡನುಸಂಸರೆ ಪೇಳ್' ಎಂದು ಎಚ್ಚರಿಕೆ ನೀಡುತ್ತಾಳೆ. ಕೊನೆಗೆ ಜೀವಂತ ಕುರಿಯ ಬದಲು ಹಿಟ್ಟಿನ ಕೋಳಿಯನ್ನಾದರೂ ಬಲಿಕೊಡಲೇಬೇಕು ಇಲ್ಲದಿದ್ದರೆ ನಾನೇ ಬಲಿಯಾಗುವೆನೆಂದು ಹೆದರಿಸಿ ಮಗನನ್ನು ಸಂಕಲ್ಪಹಿಂಸಾಪಾಶದಲ್ಲಿ ಬಂಧಿಸುತ್ತಾಳೆ ಅಸಹಾಯಕನಾದ ರಾಜ ಯಾವುದನ್ನು ಮೆಚ್ಚಬೇಕು? ಒಂದು ಕಡೆ ಜನ್ಮವಿತ್ತ ತಾಯಿ ಮಮತೆ, ಇನ್ನೊಂದೆಡೆ ಪಾಲಿಸು ತ್ತಿರುವ ಧಾರ್ಮಿಕ ಸೆಳೆತ! ಕೊನೆಗೂ ಸೂಕ್ಷ್ಮವಾದ ಕರುಳೇ ಗೆದೆಯುತ್ತದೆ. 'ಭವನೆಯಿಂದ ಮಚ್ಚುದಾಸ್ರವಮೆನಗಿನ್ನೆಂತ ಪಾಪಮಿದಿರ್ವಂದಪುದೇ' ಎಂದು ಚಿಂತಿಸಿಯೇ ಮುಂದುವರೆಯುತ್ತಾನೆ. ಇಲ್ಲಿಯ ಈ ಮಾತು ಜೈನ ಸಪ್ತತತ್ವಗಳಿಗೆ ಸಂಬಂಧಿಸಿದ್ದು. ಭಾವನಾಮಾತ್ರದಿಂದ ಕರ್ಮಾಣುಗಳು ಬಂದು ಆತ್ಮಪ್ರದೇಶದಲ್ಲಿ ಸೇರಿಬಿಡುತ್ತವೆ. ಕೊಲ್ಲುವೆನೆಂಬ ಭಾವನೆಯೇ ಪಾಪಾಸ್ರವಕ್ಕೆ ಕಾರಣ. ಇದೇ ಸಂಕ ಲ್ಪಹಿಂಸೆ. ಇಲ್ಲಿ ರಾಜನಿಂದ ಜರುಗುವ ಹಿಂಸೆ ಅದರಿಂದೊದಗುವ ಘೋರ ಪರಿಣಾ ಮಗಳನ್ನು ನಿರೂಪಿಸಲಾಗಿದೆ. ಈ ಉದಾಹರಣೆಯನ್ನು ನೀಡುವ ಮೂಲಕ ಮೂಢ ನಂಬಿಕೆ ಹಾಗೂ ಸ್ವಾರ್ಥಗಳ ಕಾರಣದಿಂದಾಗಿ ಜರುಗುತ್ತಿರುವ ಹಿಂಸೆಯನ್ನು ತಡೆಗಟ್ಟಬೇಕೆಂಬ ಪ್ರಯತ್ನವೂ ಈ ಕಥೆಗಾರನದಾಗಿರುವುದನ್ನು ಗಮನಿಸಬೇಕು.

ಅಂತೂ ರಾಜ ಕೋಳಿಯನ್ನು ಕೊಲ್ಲಲೇಬೇಕಾಯಿತು-ಕೊಂದ. ಆಗ ಹುಟ್ಟಿದ ವಿಕೃತಕೂಗು ಒಂದು ಜೆಂತರ*ನದೆಂದು ಕವಿ ಹೇಳಿದ್ದಾನಾದರೂ ನಮ್ಮ ಪ್ರಕಾರ ಆ ಕೂಗು ಬಹುಶಃ ಯಶೋಧರನ ಆತ್ಮದ್ದೇ. ಉದ್ದೇಶಪೂರ್ವಕವಾಗಿ, ಸ್ವಾರ್ಥಕ್ಕಾಗಿ ನಾನು ಹಿಂಸೆ ಮಾಡುತ್ತಿರುವೆನಲ್ಲ ಎಂಬ ಯುಕ್ತಿ ಯುಕ್ತ ಪ್ರಜ್ಞೆಯೇ ಯಶೋಧರನ ಆತ್ಮದಲ್ಲಿ ಕುಳಿತು ಕೂಗಿರಬಹುದೆಂಬುದು ನಮ್ಮ ಅನಿಸಿಕೆ. ಹೊರನೋಟಕ್ಕೆ ಅಲ್ಲಿ ನಡೆದ ಹತ್ಯೆ ಕೊಳಿಯದಾದರೂ ಒಳನೋಟಕ್ಕೆ ಮಾತ್ರ ಯಶೋಧರನ ಆತ್ಮನದು. ಈ ವಿಚಿತ್ರ ಹಾಗೂ ತರ್ಕಯೊಗ್ಯವಾದ ಕಲ್ಪನೆ ಕೇವಲ ಜೈನ ಧರ್ಮದ ಕೊಡುಗೆ ಅಂತೆಯೇ ಹೇಳುವದು – ಹಿಂಸೆ ಅಹಿಂಸೆಗಳ ವಿಚಾರವನ್ನು ಜೈನ ಧರ್ಮದಷ್ಟು ಸೂಕ್ಷ್ಮವಾಗಿ ಅಭ್ಯಸಿಸಿದ ಧರ್ಮ ಬೇರೋಂದಿಲ್ಲ ಎಂದು.

ಕೋಳಿಯ ಹತಿಯೊಂದಿಗೆ ತನ್ನ ಆತ್ಮವೂ ಹತಿಯಾಯಿತೆಂದು ಮುಂದೆ ಸ್ವತಃ ರಾಜನೇ ಹೇಳುತ್ತಾನೆ; ಅಮೃತಮತಿಯೆಂಬ ಪಾತಕಿಯ ಮಾಯೆ ಬನಮಾಯ್ತು ಚಂದ್ರಮತಿಮಾತೆಯ ಮಾತೆಮಗೆ ಬಲಿಯಾಯ್ತು ಹಿಂಸನಮಮೋಘಶರಮಾಯ್ತು ಕೆಡೆದುದಾತ್ಮಕುರಂಗಂ. ಕವಿಯ ಈ ಮಾತಿನಲ್ಲಿ ಆತನ ಚಿತ್ರಕಲಾಕೌಶಲ್ಯದ ಜೊತೆಗೆ ತತ್ವಪ್ರತಿಪಾದನಾ ಪ್ರೌಢಿಮೆಯೂ ವ್ಯಕ್ತವಾಗಿದೆ. ಸತಿಯ ಮಾಯೆಯೆಂಬ ಬನದಲ್ಲಿ ತಾಯಿಯ ಮಾತೆಂಬ ಬಲಿಯಲ್ಲಿಸಿಕ್ಕು ಹಿಂಸೆಯೆಂಬ ಬಾಣದ ಹತಿಗೆ ಸಿಕ್ಕು ನನ್ನ ಆತ್ಮವೆಂಬ ಜಿಂಕೆ ಸತ್ತುಹೋಯಿತು ಎಂಬ ಈ ತಾತ್ಪರ್ಯದಲ್ಲಿ ಜೀವ – ಅಜೀವ ಆಸ್ರವ – ಬಂಧ ಇತ್ಯಾದಿಗಳ ವಿವೇಚನೆಯಿದೆ. ವಾಸ್ತವವಾಗಿ ಹಿಂಸೆಯಿಂದ ಕೇವಲ ವಸ್ತು ಸಾಯುವುದಿಲ್ಲ, ತನ್ನ ಆತ್ಮನೇ ಸಾಯುತ್ತಾನೆ ಎಂಬ ಸೂಕ್ಷ್ಮಾತಿ ಸೂಕ್ಷ್ಮವಾದ ಜೈನ ಪ್ರಜ್ಞೆಯ ಚಿತ್ರ ಇಲ್ಲಿದೆ.

ಮಾಡಿದ ತಪ್ಪಿಗಾಗಿ ಯಶೋಧರ ಬೇಸತ್ತ. ಮಗನಾದ ಯಶೋಮತಿಗೆ ಪಟ್ಟಗಟ್ಟಿ ತಾನು ತಪಸ್ಸಿಗೆ ಹೊರಟ. ದುರ್ಬುದ್ಧಿಯ ರಾಣಿ ಕೊನೆಯ ಸಹ ಭೋಜನಕ್ಕೆ ಆಮಂತ್ರಿಸಿ ವಿಷ ಹಾಕಿ ಕೊಲ್ಲುತ್ತಾಳೆ. ರಾಣಿಯನ್ನು ಸಂದೇಹದಿಂದ ಕಾಣುವ ಪ್ರಜ್ಞೆ ರಾಜನಲ್ಲಿರಲಿಲ್ಲವೇ ? ಎಂದು ವಿಚಾರಿಸುವದಕ್ಕಿಂತ, ಇದು ವಿಧಿ ತಂದೊಡ್ಡಿದ ವಿಲಸನವೆಂದು ಆದರಲ್ಲೂ ಕೈಯಾರೆ ಜರುಗಿದ ಸಂಕಲ್ಪಹಿಂಸೆಯ ಪರಿ

---

* ಕವಿ ಇಲ್ಲಿ ಜೆಂತರನ ಪ್ರಸ್ತಾಪವನ್ನು ತಾರದೆ ನೇರವಾಗಿ ಯಶೋಧರನ ಆತ್ಮವೆ-ಕೂಗಿತು ಎಂದರೂ ನಡೆಯುತ್ತಿತ್ತು. ಆದರೂ ಆತ ಕಾವ್ಯ ಬರೆಯುತ್ತಿರುವುದು ಸರ್ವರಿಗೇ ಸಾಮಾನ್ಯರಿಗೆ. ಹಿಂಸೆ-ಅಹಿಂಸೆ, ಆತ್ಮ-ಅಧ್ಯಾತ್ಮಗಳ ನೆಲೆಯನ್ನು ಎತ್ತರದ ಸ್ತರದಲ್ಲಿ ನಿಂತು ಹೇಳಿದರೆ ಅದು ಸಾಮಾನ್ಯರಿಗೆ ತಿಳಿಯಲಿಕ್ಕಿಲ್ಲ ಹಾಗೂ ಕಥೆಗಾರಿಕೆಯ ಸೊಗಸೂ ಊನವಾ-ದೀತು ಎಂಬ ಔಚಿತ್ಯಪ್ರಜ್ಞೆಯಿಂದಲೋ ಏನೋ ಕವಿ ಸಾಮಾನ್ಯಜನತೆಯ ಬುದ್ಧಿ-ಮತ್ತೆ ನಂಬಿಕೆ ಆಚರಣೆಗಳ ಸ್ತರದಲ್ಲೇ ತನ್ನ ಘಟನಾವಳಿಗಳನ್ನು ಹವ್ಯಿಕೊಂಡಿದ್ದಾನೆ.

ಣಾಮವೆಂದೂ ಭಾವಿಸಿದರೆ ಕಥೆಯ ಓಟಕ್ಕೆ ಉದ್ದೇಶಿಕ ಗತಿ ಹಾಗೂ ಗುರಿಗಳು ಒದಗುತ್ತವೆ.*

ಘೋರಹಿಂಸೆ ತಾಯಿ ಮಗನನ್ನು ಬೆನ್ನು ಬಿಡದೆ ಕಾಡುತ್ತದೆ; ಕೂಡಿಸಿ ಅಗಲಿಸುತ್ತದೆ ಮತ್ತೆ ಮತ್ತೆ. ತಾಯಿಮಗ ಸೇರಿ ಆ ಕೀಳು ಭವಗಳಲ್ಲಿ ತೊಳಲಾಡುತ್ತಾರೆ. ಈ ಎರಡೂ ಜೀವಿಗಳ ಮಧ್ಯ ಇದ್ದಿತೆಂದು ಹೇಳಲಾದ ಭವಾಂತರವ್ಯಾಮೋಹವಾಗಲಿ, ಭವಾವಳಿಯ ವಿಚಾರವಾಲಿ ಜೈನ ಸಾಂಪ್ರದಾಯಿಕ ಕಥೆಗಳ ಸಾಮಾನ್ಯ ಅಂಶಗಳಾಗಿವೆ. ಜನ್ಮಾಂತರಗಳಲ್ಲಿ ಸುತ್ತುತ್ತಿರುವ ಆ ಜೀವಿಗಳು ಕಾಡುಕೋಳಿಗಳಾಗಿ ಹುಟ್ಟುತ್ತವೆ.

ಒಂದು ದಿನ ಚಂಡಕರ್ಮ ತಪೋನಿರತನಾದ ಜೈನ ಯತಿಯೋರ್ವನನ್ನು ಕಂಡು ಆಕರ್ಷಿತನಾಗುತ್ತಾನೆ. ಈ ಸಂದರ್ಭದಲ್ಲಿ ಕವಿ ನೀಡಿದ ಯತಿಯ ಚಿತ್ರ ಜೀವಂತವಾಗಿದೆ: 'ಮನಮಿರೆ ಪುರ್ಬಿನ ಮೊದಲೊಳ್ ಮನದೊಳಗಿರೆ ವಾಯು ಕರಣತತಿ ವಾಯುವಿನೊಳ್ ಕುನಿದಿರೆ ಪದ್ಮಾಸನದೊಳ್ ತನುವಿರೆ ಯೋಗೀಂದ್ರನಾತ್ಮಚಿಂತೆಯೊಳಿರ್ದಂ' ನಿಧಿಗೆ ಬಾಗುವ ದೀಪದಂತೆ ಚಂಡಕರ್ಮ ಮುನಿಗಳಿಗೆ ವಂದಿಸಿದ .ಮುನಿಗಳು ತಮ್ಮ ಅವಧಿಜ್ಞಾನದ ಬಲದಿಂದ ತಳವಾರನು ಆಸನ್ನಭವ್ಯನೆಂದು ಅರಿತು ಅವನೊಂದಿಗೆ ಚರ್ಚೆಗೆ ತೊಡಗುತ್ತಾರೆ. ಈ ಪರಿ ಕುಳಿತು ನೀವೇನು ಮಾಡುತ್ತಿದ್ದೀರಿ? ಎಂಬ ಅವನ ಮುಗ್ಧ ಪ್ರಶ್ನೆಗೆ. ಮುನಿಗಳು ಅವಿಕಲನಾದ ಆತ್ಮನನ್ನು ನೆನೆಯುತ್ತಿರುವುದಾಗಿ ಉತ್ತರಿಸುತ್ತಾರೆ. ತಳವಾರನ ಕುತೂಹಲ ಇಮ್ಮಡಿಯಾಗುತ್ತದೆ. ಆತ ಇನ್ನೂ ಹೆಚ್ಚಿನ ವಿಚಾರಣೆಗೆ ತೊಡಗುತ್ತಾನೆ.

ಅವರಿಬ್ಬರ ನಡುವೆ ನಡೆದ ಚರ್ಚೆ ಜೈನರ ಆತ್ಮತತ್ವದ ಪ್ರತಿಧ್ವನಿಯೇ ಆಗಿದೆಯೆನ್ನಬಹುದು. 'ಅಂಗಿಯ ಅಂಗದೊಳೆಲ್ಲಂ ತೀವಿರ್ಪಂ ಭೂತಚತುಷ್ಟಾವಯವದಿನನ್ಯನಾತ್ಮನತಿ ಚೈತನ್ಯಂ' ಇದು ಆತ್ಮನ ಅಸ್ತಿತ್ವ ಹಾಗೂ ಇರುವಿಕೆಯ ರೀತಿ ಚೇಡನ ವಾದ ಮುಂದುವರೆಯುತ್ತದೆ: ನೋಡಲು ಆತ್ಮ ಸಿಗಲಾರ, ಅಲ್ಲಿ ಕೇವಲ ಶರೀರವಿದೆಯೇ ವಿನಃ ಆತ್ಮವಿಲ್ಲ, ಅನೇಕ ಪ್ರಾಣಿಗಳನ್ನು ಕೊಂದು ಹುಡುಕಿದೆ ಆತ್ಮ ಸಿಕ್ಕಿಲ್ಲ, ಅಲ್ಲದೆ ಆ ಜೀವಿ ಸತ್ತಮೇಲೆ ಒಳಗಿದ್ದ ಆತ್ಮ ಮೇಲೆಲ್ಲಿ ಹೋಯಿತು? ಇಷ್ಟೇ ಅಲ್ಲ, ತಗ್ಗೊಂದರಲ್ಲಿ ಒಬ್ಬ ಕಳ್ಳನನ್ನು ಹಾಕಿ ಬಾಯಿ ಮುಚ್ಚಿಟ್ಟು

* ಅಮೃತಮತಿಯ ಅನೈತಿಕ ಲೈಂಗಿಕ ಸಂಬಂಧಕ್ಕೆ ಹಾಗೂ ವಿಷಹಾಕಿ ತಾಯಿ ಮಗನನ್ನು ಕೊಂದದ್ದಕ್ಕೆ ಶಿಕ್ಷೆ ಏಕಿಲ್ಲ ಎಂದು ಅವಸರದಿಂದ ಕೇಳುವವರೆಗೂ ಕವಿ ಉತ್ತರ ವಿತ್ತಿದ್ದಾನೆ: ಮುಂದೆ ಅವಳೂ ರೋಗಿಯಾಗಿ ಸತ್ತು ಜನ್ಮಗಳ ಸುಳಿಯಲ್ಲಿ ಸಿಲುಕಿ ಬಳಲುತ್ತಾಳೆ. ಯಮನೂ ಅವಳನ್ನು ಒಯ್ಯಲು ಹೇಸಿದನೆಂಬ ಒಂದೇ ಮಾತಿನಲ್ಲಿ ಕವಿ ಅವಳ ದುಃಸ್ಥಿತಿಯನ್ನು ತಿಳಿಸಿದ್ದಾನೆ.

ಕೆಲದಿನಗಳ ತರುವಾಯ ತೆಗೆದು ನೋಡಿದರೆ ಅಲ್ಲಿ ಕೇವಲ ಶರೀರವಿರುವುದೇ ವಿನಃ ಆತ್ಮನಿರುವುದಿಲ್ಲ. ಶರೀರದಿಂದ ಆತ್ಮನನ್ನು ನೆಲ ನುಂಗುವುದೋ ಹೇಗೆ? ಈ ಮುಂತಾದ ತನ್ನ ಸಮಸ್ಯೆಗಳನ್ನಾತ ಮುನಿಗಳೆದುರು ಒಡ್ಡುತ್ತಾನೆ. ಕಳ್ಳನನ್ನು ತಕ್ಕಡಿಯಲ್ಲಿಟ್ಟು ತೂಕಮಾಡಿ, ಆತನ ಬಾಯಿಮೂಗುಗಳನ್ನು ಒತ್ತಿಹಿಡಿದು ಕೊಂದು, ಆ ಮೃತದೇಹವನ್ನು ತೂಕ ಮಾಡಿ ನೋಡಿದರೆ ಅದರ ತೂಕ ಕಡಿಮೆ ಯಾಗುವುದಿಲ್ಲ. ಆದ್ದರಿಂದ ದೇಹ ಬೇರೆ ಆತ್ಮ ಬೇರೆಯಲ್ಲ. ಕಾರಣ ಜೀವನೇ ದೇಹವಲ್ಲದೆ ದೇಹಕ್ಕೆ ಬೇರೆಯಾದ ಜೀವನಿಲ್ಲ—ಓದುಗರನ್ನೂ ಒಂದು ಕ್ಷಣ ನಿಬ್ಬೆರಗುಗೊಳಿಸಬಲ್ಲ ಈ ಸತರ್ಕವಾದ ತಳವಾರನದು!

ತಳವಾರನ ಪ್ರಶ್ನೆಗಳಿಗೆ ಗುರುಗಳು ಕೊಡುವ ಉತ್ತರ ಜೈನಶಾಸ್ತ್ರ ಸಂಬದ್ಧ ವಾದುದಾದರೂ ಸಾಕಷ್ಟು ತಿಳಿಯಾಗಿದೆ. ಪ್ರಶ್ನೋತ್ತರಗಳ ರೂಪದಲ್ಲಿ, ಜಟಿಲ ವಿಷಯವನ್ನು ಬಿಡಿಬಿಡಿಸಿ ತೋರಿ ಸ್ಪಷ್ಟಗೊಳಿಸಿದ ಕವಿಯ ಈ ಸಂದರ್ಭದ ಜಾಣ್ಮೆಯೂ ಗಮನಾರ್ಹವಾಗಿದೆ. ಗುರುಗಳ ಉತ್ತರ ಹೀಗಿದೆ: ಕತ್ತರಿಸಿದರೂ, ಹೋಳು ಮಾಡಿದರೂ ಕಟ್ಟಿಗೆಯಿಂದ ಬೆಂಕಿ ಹೊರಡಲಾರದು, ಒಂದನ್ನೊಂದು ಮಸೆದಾಗ ಮಾತ್ರ ಬೆಂಕಿ ಹುಟ್ಟುತ್ತದೆ. ಹಾಗೆಯೇ ವಿವೇಕಯುತವಾದ ಕಾರ್ಯ ಗಳಿಂದ ಮಾತ್ರ ಜೀವವು ಶರೀರದಿಂದ ಬೇರೆಯಾಗಿ ಕಾಣುವುದು. ಗುರುಗಳ ಇನ್ನೊಂದು ಸ್ಪಷ್ಟೀಕರಣ ಹೀಗಿದೆ: ತಗ್ಗಿನೊಳಗೆ ನಿಂತು ಶಂಖ ಊದಿದರೂ ಸಹಿತ ಶಂಖದೊಳಗಿಂದ ಧ್ವನಿ ತೂರಿ ಬರುತ್ತಿದೆ. ಹಾಗೆ ಬಂದ ಆ ಶಬ್ದ ಶಂಖ ದಿಂದ ಬೇರೆ ಅಲ್ಲವೆ? ಅದೇ ರೀತಿ ಶರೀರದಿಂದ ಜೀವನೂ ಬೇರೆ-ಗಾಳಿ ತುಂಬಿದ ತಿದಿಯನ್ನು ತೂಕ ಮಾಡಿನೋಡಿ ಆ ನಂತರ ಅದರ ಗಾಳಿ ಬಿಟ್ಟು ತೂಕಮಾಡಿ ನೋಡಿದರೆ ತೂಕ ಅಷ್ಟೇ ಇರುತ್ತದೆ ನಿಜ, ಆ ತಿದಿಯಿಂದ ಗಾಳಿ ಬೇರೆಯಾಗಿರು ವಂತೆ ದೇಹದಿಂದ ಆತ್ಮನೂ ಬೇರೆಯೇ ಆಗಿರುತ್ತಾನೆ.

ಆತ್ಮನು ಅನಾದಿ, ಅನಂತ, ನಿರತ್ಯಯ, ಚಿನ್ಮಯ, ನಿಃಪ್ರದೇಶಿಕ, ಉಪಾದೇಯ ಮುಕ್ತಿಮುಕ್ತ, ಪರಮಾತ್ಮ, ಆತನ ಕ್ಷೇತ್ರ ಅಪಾರ. 'ಕಲ್ಲೊಳ್ ಪೊನ್ ಪಾಲೊಳ್ ಘೃತಮಿಲ್ಲೆನವೇಡೆನಲುಂಟು ದೇಹದೊಳಗಾತ್ಮನವೇಕಿಲ್ಲ?, ಕುರುಡಂಗೆ ತೋರದೊಡಿಪುದೆ ವಸ್ತು'? ಭೇದಿಸಿ ನೋಡುವವನಿಗೆ ಆತ್ಮ ಇದ್ದೇ ಇದ್ದಾನೆ ಎನ್ನುತ್ತಾರೆ ಗುರುಗಳು.

ಮಾಡುವವನೂ ಆತ್ಮನೇ, ಉಣ್ಣುವವನೂ ಆತ್ಮನೇ ಅಂತೆಯೇ ಪಾಪ ಸಮುದ್ರದಲ್ಲಿ ಮುಳುಗುವವನೂ, ಸದ್ಗುಣಸಮುದನೂ, ಭವಸಾಗರವನ್ನು ದಾಟುವವನೂ ಅದೇ ಆತ್ಮನು. ಕೇವಲ ಜ್ಞಾನವೆಂಬ ದಿವ್ಯನೇತ್ರ ಹೊಂದಿರು ವವನೇ ಪರಮಾತ್ಮ. ಅವನ ವಚನವೇ ಆಗಮ. ಜೀವದಯೆಯೇ ಧರ್ಮ.

ಇದನ್ನು ಸದ್ಭಾವನೆಯಿಂದ ನಂಬುವದೇ ಸಮ್ಯಕ್ತ್ವ ಎಂದೆಲ್ಲ ಯತಿಗಳು ಹೇಳುವಲ್ಲಿ ಆತ್ಮ-ಪರಮಾತ್ಮ ಆಗಮ-ಸಮ್ಯಕ್ತ್ವ ಮುಂತಾದ ಜೈನ ಪರಿಭಾಷೆಗಳ ವಿಶ್ಲೇಷಣೆಯಿದೆ.

ಮುಕ್ತಿಯನ್ನು ಬಯಸುವಾತ ಕೊಲ್ಲಬಾರದು, ಹುಸಿಯಾಡಬಾರದು, ಕಳಲಾಗದು, ಪರಸ್ತ್ರೀಯರನ್ನು ಹೊಂದಬಾರದು, ಅತಿಯಾದ ಆಶೆಯಿರಬಾರದು. ಎಂಬ ಮಾತುಗಳು ಜೈನ ಪಂಚ ಅಣುವ್ರತಗಳಾದ ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ ಮುಂತಾದವುಗಳ ಪ್ರತಿನಿಧಿಗಳಾಗಿಯೇ ಬಂದಂತಿವೆ. ಒಟ್ಟಿನಲ್ಲಿ ಓದುಗನನ್ನು ಒಳಗುಮಾಡಿಕೊಂಡು ನಡೆದ ಒಂದು ಸಜೀವ ಧರ್ಮ ಗೋಷ್ಠಿಯಂತೆ ಕಂಗೊಳಿಸಿದೆ ಈ ಸಂದರ್ಭ.

ಕ್ರಮೇಣ ಬೇಡನ ಬುದ್ಧಿ ತಿಳಿಯಾಗುತ್ತದೆ. ಸಂದೇಹ ಜಟಿಲತೆಗಳುಮಾಯ ವಾಗಿ ತಿಳುವಳಿಕೆ ಆತ್ಮೀಯತೆಗಳು ಮೂಡುತ್ತವೆ. ಅವನ ಮನ ಹದಕ್ಕೆ ಬಂದು ದನ್ನರಿತ ಮುನಿಗಳು ಬೇಡನಿಗೆ ಯಶೋಧರ ಚಂದ್ರಮತಿಯರ ಉದಾಹರಣೆ ಕೊಡು ತ್ತಾರೆ. ಅಂದು ಹಿಟ್ಟಿನ ಕೋಳಿಯನ್ನು ಕೊಂದ ಕಾರಣ ಜನ್ಮ ಜನ್ಮಾಂತರಗಳಲ್ಲಿ ನೊಂದು ಈಗ ಅವರೂ ಕೋಳಿಗಳಾಗಿರುವುದಲ್ಲದೆ, ಅಲ್ಲೇ ಕಣ್ಣೆದುರಿನಲ್ಲಿ ಸುತ್ತಾ-ಡುತ್ತಿರುವುದನ್ನು ತಿಳಿಸುತ್ತಾರೆ. ಪಂಚವ್ರತಗಳಲ್ಲಿ ಒಂದೇ ಒಂದು ವ್ರತಹೀನನಾದ ಕಾರಣ ಯಶೋಧರ ಈ ದುಸ್ಥಿತಿಗಿಳಿದಿದ್ದಾನೆ. ಉಳಿದೆಲ್ಲ ವ್ರತಗಳನ್ನು ತಪ್ಪಿದಲ್ಲಿ ಪರಿಸ್ಥಿತಿ ಏನಾಗಬಾರದು ? ಎಂದು ತಳವಾರನಲ್ಲಿ ಸಮಯೋಚಿತ ಪ್ರಜ್ಞೆಯನ್ನು ಮೂಡಿಸುತ್ತಾರೆ. 'ಅದರಿಂ ತನ್ನಂತಿರೆ ಬಗೆವುದು ಪೆರರಂ ಪ್ರಾಣಿಹಿಂಸೆಯಂ ಮಾಡ ಲ್ವೇಡ ದಯಾಮೂಲಂ ಧರ್ಮಂ ಪದುಳಿಸಿ ಕೇಳ್ಮಗನೆ ಹಿತಮಿದುಭಯಭವಕ್ಕಂ' ಎಂದು ಮುಂತಾಗಿ ಇದುವರೆಗೆ ಮುನಿಗಳು ಮಾಡಿದ ಧರ್ಮಬೋಧೆಯೆಲ್ಲವನ್ನು ಆ ಕೋಳಿಗಳೂ ಕೇಳಿಸಿಕೊಂಡು ಬಿಡುತ್ತವೆ—ಅವುಗಳ ಸುಕೃತದ ಕಾಲ ಕೂಡಿಬಂದ ಕಾರಣ. ಜಾತಿಸ್ಮಾರತ್ವಗುಣದ ನೆರವಿನಿಂದ ಕೋಳಿಗಳು ಕಳೆದ ಜನ್ಮಗಳ ಎಲ್ಲ ವಿವರಗಳನ್ನು ಸ್ಮರಿಸಿಕೊಳ್ಳುತ್ತವೆ. ಈ ಜಾತಿಸ್ಮಾರತ್ವದ ಕಲ್ಪನೆ ಜೈನರದು.

ಏಧಿಪಲಸದ ಹಾಗೆಯೇ ಮುಂದುವರೆಯುತ್ತದೆ. ಮುನಿ ಮತ್ತು ಬೇಡನ ಮಧ್ಯ ಚರ್ಚೆ ನಡೆವ ಹೊತ್ತಿಗೆ, ವಿಹಾರಾರ್ಥಿಯಾದ ಯಶೋಮತಿಯೂ ಅಲ್ಲಿಗೆ ಬರುತಾನೆ. ಕೊನೆಗೂ ಧರ್ಮದ ಸಾಮೀಪ್ಯ ಲಭಿಸಿತಲ್ಲ ಎಂಬ ಸಂತೋಷದಿಂದ ಆ ಕೋಳಿಗಳು ಕೂಗಿಕೊಳ್ಳುತ್ತವೆ. ತಕ್ಷಣ ಸದ್ದು ಬಂದತ್ತ ಬಾಣ ಬಿಟ್ಟು ವಸ್ತು ಗಳನ್ನು ಹೊಡೆಯುವ ತನ್ನ ಶಬ್ದಭೇದಿ ವಿದ್ಯೆಯನ್ನು ಪ್ರದರ್ಶಿಸುವ ಭರದಲ್ಲಿ ಯಶೋಮತಿ ಆ ಕೋಳಿಗಳನ್ನು ಕೊಂದುಬಿಡುತ್ತಾನೆ. ವ್ರತದೊಂದಿಗೆ ಜೀವತೆತ್ತ

ಕೋಳಿಗಳು ಸಮಾಧಿಮರಣ ಹೊಂದಿದ ಕಾರಣ ಪ್ರೀತರಾಗಿ, ಯಶೋಮತಿ-ಕುಸುಮಾವಳಿಯರ ಉದರದಲ್ಲಿ ಅಭಯರುಚಿ-ಅಭಯಮತಿಗಳಾಗಿ ಜನ್ಮ ತಳೆಯುತ್ತವೆ. ಕೂಸುಗಳು ಬೆಳೆದು ಕೆಲದಿನಗಳಲ್ಲಿ ಮುನಿಸಂಘದಲ್ಲಿ ಸೇರಿಕೊಳ್ಳುತ್ತವೆ.

ಒಂದು ದಿನ ಬೇಟೆಗೆ ಹೋದ ಯಶೋಮತಿಗೆ ಬೇಟೆಯೇ ದೊರೆಯುವುದಿಲ್ಲ. ಸಮೀಪದಲ್ಲಿದ್ದ ಜೈನ ಮುನಿಗಳೇ ಅದಕ್ಕೆ ಕಾರಣರೆಂದು ಸಂದೇಹಿಸಿಕೊಂಡು ಯಶೋಮತಿ ಅವರನ್ನು ಕೊಲ್ಲಲು ಯತ್ನಿಸುತ್ತಾನೆ. ಆಗ ಕಲ್ಯಾಣಮಿತ್ರನೆಂಬ ಅವನ ಗೆಳೆಯ ಬುದ್ಧಿವಾದ ಮಾಡುತ್ತಾನೆ. ಮುನಿಗಳು 'ಮೂರು ಲೋಕದ ಕೈಗನ್ನಡಿ ಸಾಮರ್ಥ್ಯದ ಸದ್ಗುಣದೊಡೆಯರು' ಎಂದೂ 'ಪೊಡಮಡಲೆತ್ತುವ ಕೈಗಳ್ ಪೊಡೆಯಲ್ಕೆತ್ತುಗುಮೆ' ಎಂದೂ ಎಚ್ಚರಿಸುತ್ತಾನೆ. ಆಗ ಅಸಾರಂ ಸಂಸಾರಂ ಗಡ ಮೆಂದಂತು ತಪಂಗೆಯ್ದ ಆ ಮುನಿಗಳಿಗೆ ಯಶೋಮತಿ ನಮಿಸಿ ಪೂರ್ವವೃತ್ತಾಂತಗಳನ್ನು ಕೇಳುತ್ತಾನೆ ತನ್ನವರಾದ ಚಂದ್ರಮತಿ ಯಶೋಧರರ ಕಥೆ ಕೇಳುತ್ತಾನೆ. 'ನೀನರಿವೆ ಕೊಂದ ಘೋರಮನಾಸಿಗ್ರಹವಧೆಯಿನಂದು ಸತ್ತವರರಿವರ್ ಮೀನುಂ ಮೊಸಳೆಯುಮಾದಂ ತಾ ನೆಗಳ್ದಜಪ್ರೋತಮಹಿಷ ಮಾದಂದರರಸಾ' ಎಂದು ಮುನಿಗಳು ವಿವರವಾಗಿ ಹೇಳಿ ಯಶೋಮತಿಯ ಕಣ್ಣುಗಳನ್ನು ತೆರೆಯಿಸುತ್ತಾರೆ. ಧರ್ಮದಿಂದೆದಗುವ ಪದಗಳಿಂದ ಆಕರ್ಷಿತನಾ ಯಶೊಮತಿ 'ಬಾಪು! ಸಂಕಲ್ಪವಧೆಗಿನಿತಾಯ್ತು ದಿಟದೊಳೇನೇನಾಗರ್' ಎಂದು ಉದ್ಗರಿಸುತಾನೆ. ಇದುವರೆಗಿನ ತನ್ನ ಹಿಂಸೆಗೆ ಹೇಸಿಕೊಂಡು ದೀಕ್ಷೆ ಪಡೆದು ಮುನಿಸಂಘದಲ್ಲಿ ಸೇರಿಕೊಳ್ಳುತ್ತಾನೆ.

ಓದುಗರು ಈಗ ಕಥೆಯ ಆರಂಭದತ್ತ ಗಮನಹರಿಸಬೇಕು. ಆರಂಭದಲ್ಲಿ ಮಾರಿದೇವತೆಯ ಮಂದಿರದಲ್ಲಿ ಬಾಲಕರು ಮಾರಿದತ್ತನಿಗೆ ಹೇಳಲು ತೊಡಗಿದ ಕಥೆ ಈಗ ಮುಕ್ತಾಯದತ್ತ ಬರುತ್ತದೆ. ಬಾಲಕರು ಮಾರಿದತ್ತನನ್ನು ಎಚ್ಚರಿಸುತ್ತಾರೆ: ನಮ್ಮ ಬಂಧನ ಅಥವಾ ಸಾವಿನ ಬಗ್ಗೆ ನಮಗೆ ಚಿಂತೆಯಿಲ್ಲ ಆದರೆ ನಿನ್ನ ಕೇಡಿನಬಗ್ಗೆ ಚಿಂತಿಸುತ್ತಿದ್ದೇವೆ. ಅಷ್ಟೇ ಅಲ್ಲದೆ, 'ಸಂಕಲ್ಪಹಿಂಸೆಯೊಂದರೊಳಾಂ ಕಂಡೆಂ ಭವದ ದುಃಖಮುಂಡೆಂ ನೀಂ ನಿಃಶಂಕೆಯಿನಿನಿತು ದೇಹಿಗಳಂ ಕೊಂದಪೆ ನರಕದೊಳ್ ನಿವಾರಣೆವಡೆವೈ' ಎಂಬ ಬಾಲಕರ ಮಾತು ಮಾರಿದತ್ತನ ಮನದ ಆಳಕ್ಕೆ ತಲಪುತ್ತವೆ. ಬಾಲಕರ ಇಂಗಿತವನ್ನರಿತ ಮಾರಿದೇವತೆಯೇ ಪ್ರತ್ಯಕ್ಷಳಾಗಿ ಬಾಲಕರಿಗೆ ವಂದಿಸಿ ಕ್ಷಮೆ ಕೇಳಿ ಇನ್ನು ಮುಂದೆ ಹಿಂಸೆ ಸಲ್ಲದೆಂಬ ಸೂಚನೆಯನ್ನು ಜನಕ್ಕೆ ಸಾರಿ ಹೇಳಿ ಅದೃಶ್ಯಳಾಗುತ್ತಾಳೆ. ಹಿಂಸೆಯನ್ನು ಅಹಿಂಸೆ, ಮೂಢನಂಬಿಕೆಗಳನ್ನು ಮಿಥ್ಯಾತ್ವವನ್ನು ಸಮ್ಯಕ್ತ್ವ ಗೆದ್ದಿರುವ ಸ್ಪಷ್ಟ ಸೂಚನೆ ಇಲ್ಲಿದೆ. ಅಂದಿನಿಂದ ಪುನಃ ಅಹಿಂಸಾತ್ಮಕ ಪೂಜಾಪದ್ಧತಿ ಆರಂಭವಾದ ಬಗ್ಗೆಯೂ ತಿಳಿದುಬರುತ್ತದೆ. 'ಪ್ರಜೆಯೆಲ್ಲಂ ಜಲಗಂಧಸ್ರಜತಂಡುಲಧೂಪದೀಪಚರುತಾಂಬೂಲವ್ರಜದಿಂ ಪೂಜಿ

ಸುವುದು' ಎಂಬಲ್ಲಿ ಸೂಚಿತವಾದ ಪರಿಕರಗಳೆಲ್ಲ ಅಹಿಂಸಾತ್ಮಕವಾಗಿದ್ದು ಜೈನ ಪೂಜಾಕ್ರಮದ ವೈಶಿಷ್ಟ್ಯವನ್ನು ಪ್ರತಿಪಾದಿಸುತ್ತವೆ.

ನರಬಲಿಗಾಗಿ ಹಿಡಿತಂದ ಅಬಾಲಕರು ತನ್ನ ತಂಗಿ ಮಕ್ಕಳೆಂದು ಗೊತ್ತಾದ ಮೇಲಂತೂ ಹಿಂಸಾರಭಸಮತಿಯಾದ ಮಾರಿದತ್ತ ತನ್ನ ಹಿಂಸೆಗಾಗಿ ಅಸಹ್ಯಪಟ್ಟು ದೀಕ್ಷೆವಹಿಸಿ ಉಗ್ರತಪ ಗೈದು ಸಮಾಧಿಮರಣ ಹೊಂದುತ್ತಾನೆ ಅತ್ತ ಆ ಬಾಲಕರೂ ಆರಾಧನಾವಿಧಿಯಿಂದ ತೀರಿ ಸ್ವರ್ಗದಲ್ಲಿ ದೇವತೆಗಳಾಗಿ ಹುಟ್ಟುತ್ತಾರೆ.

ಹೀಗೆ ಯಶೋಧರ ಚರಿತೆಯೆಂಬ ಈ ಕೃತಿಯಲ್ಲಿ ಲೋಕಧರ್ಮ ಹಾಗೂ ಧರ್ಮಗಳೆರಡೂ ಸಮ್ಮಿಳಿತವಾಗಿವೆ. ಕೃತಿಯ ಪೂರ್ವಾರ್ಧಕತೆಯ ಸೊಗಸುಗಾರಿಕೆಯಿಂದ ಕೂಡಿದ್ದರೆ ಉತ್ತಾರಾರ್ಧ ತತ್ವದ ಗಡಸುಗಾರಿಕೆಯಿಂದ ಕೂಡಿದೆ. ಅಂತೆಯೇ ಮೊದಲರ್ಧಭಾಗ ಜನಪ್ರಿಯವೂ, ಕೊನೆಯರ್ಧ ಭಾಗ ಮನಪ್ರಿಯವೂ ಎನ್ನಿಸುತ್ತದೆ. ಹಿಂಸೆಯ ಪರಿಣಾಮದ ಸೂಕ್ಷ್ಮತೆ, ಪದೇ ಪದೇ ಒದಗುವ ಸಾವು ಭವಾವಳಿಗಳ ತೊಡಕು, ಎರಡು ಜೀವಿಗಳ ಮಧ್ಯದ ಜನ್ಮಾಂತರಗಳ ಸಂಬಂಧ ತಳ ಪಾರನ ಧಾರ್ಮಿಕ ಜಿಜ್ಞಾಸೆಯ ಆಳ ಹಾಗೂ ಒಟ್ಟು ಕಥಾನಿರೂಪಣೆಯ ಕ್ರಮ ಈ ಮುಂತಾದ ವಿಷಯಗಳಲ್ಲಿ ಓದುಗ ಹೆಚ್ಚು ಪರಿಶ್ರಮಿಸಬೇಕಾಗುತ್ತದೆಯೆಂಬ ಮಾತು ಸತ್ಯವಾದರೂ ಧರ್ಮ-ತತ್ವಗಳನ್ನು ಕಾವ್ಯದಲ್ಲಿ ಕಟ್ಟಿ ಹಾಕುವುದೂ ಅಷ್ಟೇ ಕಷ್ಟಸಾಧ್ಯವಾದ ಕಾರ್ಯವೆಂಬುದನ್ನು ಗಮನಿಸಬೇಕಾಗುತ್ತದೆ ಅದರಲ್ಲೂ ಜೈನಧರ್ಮ-ತತ್ವಗಳಂಥ ಜಟಿಲ ವಿಷಯಳನ್ನು ಕವಿ ಜನ್ನ ಇಷ್ಟೊಂದು ತಿಳಿಯಾಗಿ ನಿರೂಪಿಸಿರುವಲ್ಲಿ ಆತನ ಕಾವ್ಯಕಲಾಸಿದ್ಧಿ ಹಾಗೂ ಧಾರ್ಮಿಕ ಸಂಸ್ಕಾರಗಳ ಸ್ಪಷ್ಟ ಮುದ್ರೆಯಿದೆಯೆಂದು ಧಾರಾಳವಾಗಿ ಹೇಳಬಹುದು.

ಶಿಕ್ಷಣ ಮಹಾವಿದ್ಯಾಲಯಗಳಲ್ಲಿಯ ಹಣದ ವೆಚ್ಚ: ಒಂದು ತುಲನಾತ್ಮಕ ಅಧ್ಯಯನ

ಡಾ|| ಹೆಚ್. ಎಮ್. ಕಾಶಿನಾಥ

ಪೀಠಿಕೆ

ಶಿಕ್ಷಣವು ನಮ್ಮ ಉತ್ತಮ ಭವಿಷ್ಯತ್ತಿಗಾಗಿ ಬದಲಾವಣೆಯನ್ನು ಮಾಡುವ ಸಾಧನವಾಗಿದ್ದು, ಭವಿಷ್ಯತ್ತಿನಲ್ಲಿ ನಮ್ಮ ಸಮಾಜ, ರಾಷ್ಟ್ರ ಉತ್ತಮವಾಗಿರಬೇಕೆಂಬ ದೃಷ್ಟಿಯಿಂದ ಶಿಕ್ಷಣದ ಸುಧಾರಣೆಗೆ ಅನೇಕ ಪ್ರಯತ್ನಗಳು ನಡೆದಿವೆ.ಅದಕ್ಕಾಗಿ ಶಿಕ್ಷಣದ ಮೇಲೆ ಇಂದು ಯೋಜನೆಗಳ ರೂಪದಲ್ಲಿಯೂ ಹೇರಳ ಹಣ ವೆಚ್ಚವಾಗುತ್ತದೆ. ಮಕ್ಕಳಲ್ಲಿ ಜವಾಬ್ದಾರಿ, ಸಾಂಸ್ಕೃತಿಕ ಬೆಳವಣಿಗೆ,ಸೃಜನಾತ್ಮಕ ಶಕ್ತಿ ಹೆಚ್ಚಿಸುವ ಸಾಮರ್ಥ್ಯ ತರಬೇತಿ ಹೊಂದಿದ ಶಿಕ್ಷಕರಿಂದ ಮಾತ್ರ ಸಾಧ್ಯವಾಗಿರುವುದರಿಂದ ಇಂದು ಶಿಕ್ಷಣ ಮಹಾವಿದ್ಯಾಲಯಗಳ ಪಾತ್ರವು ಶಿಕ್ಷಣದಲ್ಲಿ ಮಹತ್ತರವಾದುದಾಗಿದೆ. ಶಿಕ್ಷಣ ಮಹಾವಿದ್ಯಾಲಯಗಳು ವಿವಿಧ ಉದ್ದೇಶಗಳಿಗನುಗುಣವಾಗಿ ಹೇರಳ ಹಣ ವಿನಿಯೋಗಿಸುತ್ತಿವೆ. ವಿವಿಧ ಆಡಳಿತ ವ್ಯವಸ್ಥೆಯಲ್ಲಿರುವಂಥ ಈ ಶಿಕ್ಷಣ ಮಹಾವಿದ್ಯಾಲಯಗಳು ಹಣವನ್ನು ಯಾವರೀತಿಯಾಗಿ ವಿನಿಯೋಗಿಸುತ್ತವೆ ಎಂದು ತಿಳಿಯಲು ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

ಈ ಅಧ್ಯಯನವು ಬೇರೆ ಬೇರೆ ಆಡಳಿತದಲ್ಲಿರುವ-ವಿಶ್ವವಿದ್ಯಾಲಯ, ಸರಕಾರಿ, ಖಾಸಗಿ (ಅನುದಾನ ಪಡೆದ ಮತ್ತು ಅನುದಾನಪಡೆಯದ) ಶಿಕ್ಷಣ ಮಹಾವಿದ್ಯಾಲಯಗಳಲ್ಲಿಯ ವೆಚ್ಚದ ಮಾದರಿಯನ್ನು ತುಲನಾತ್ಮಕ ರೀತಿಯಲ್ಲಿ ಅಭ್ಯಾಸ ಮಾಡುವ ಗುರಿಯನ್ನು ಇಟ್ಟುಕೊಂಡಿದೆ.

ಈ ಅಧ್ಯಾಯವು ಆಯಾ ಶಿಕ್ಷಣ ಮಹಾವಿದ್ಯಾಲಯಗಳ ವೆಚ್ಚದ ಅಂಶದಲ್ಲಿ ಬೋಧನಾತ್ಮಕ, ಆಡಳಿತಾತ್ಮಕ ಮತ್ತು ಕಲ್ಯಾಣಾತ್ಮಕ ಸೇವೆಗಳಿಗೆ ಕೊಟ್ಟಿರುವ ಪ್ರಾಧಾನ್ಯತೆಯನ್ನು ತಿಳಿಯುವ ಉದ್ದೇಶವನ್ನು ಹೊಂದಿದೆ.

ಕೊನೆಯದಾಗಿ ಆಯ್ದುಕೊಂಡ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ತಲಾವೆಚ್ಚವನ್ನು ತಿಳಿಯುವ ಆಕಾಂಕ್ಷೆ ಹೊಂದಿದೆ.

ಅಧ್ಯಯನದ ನಿರ್ದಿಷ್ಟ ಗುರಿಗಳು

i. ಶಿಕ್ಷಣ ಮಹಾವಿದ್ಯಾಲಯಗಳ ವೆಚ್ಚದ ಮಾದರಿಯನ್ನು ತುಲನಾತ್ಮಕವಾಗಿ ಅಭ್ಯಾಸ ಮಾಡುವುದು;

ii. ಶಿಕ್ಷಣ ಮಹಾವಿದ್ಯಾಲಯದಲ್ಲಿಯ ವೆಚ್ಚದ ಅಂಶಗಳಾದ ಬೋಧನ, ಆಡಳಿತ ಮತ್ತು ಕಲ್ಯಾಣಾತ್ಮಕವಾಗಿ ಸೇವೆಗಳಿಗೆ ಕೊಟ್ಟಿರುವ ಪ್ರಾಧಾನ್ಯತೆಯನ್ನು ತುಲನಾತ್ಮಕವಾಗಿ ಅಭ್ಯಾಸಮಾಡುವದು;

iii. ಶಿಕ್ಷಣ ಮಹಾವಿದ್ಯಾಲಯಗಳಲ್ಲಿಯ ಪ್ರತಿ ತಲಾವೆಚ್ಚವನ್ನು ತುಲನಾತ್ಮಕವಾಗಿ ಅಭ್ಯಾಸ ಮಾಡುವುದು.

ಸಮಸ್ಯೆಯ ವ್ಯಾಪ್ತಿ

ಈ ಅಧ್ಯಯನವು ಕರ್ನಾಟಕದಲ್ಲಿಯ ನಾಲ್ಕು ಶಿಕ್ಷಣ ಮಹಾವಿದ್ಯಾಲಯಗಳನ್ನು ಆಯ್ಕೆಮಾಡಿಕೊಂಡಿದೆ. ಆಯ್ಕೆ ಮಾಡಿಕೊಂಡ ಮಹಾವಿದ್ಯಾಲಯಗಳು ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಭಿನ್ನವಾಗಿವೆ. ಅಂದರೆ ವಿಶ್ವವಿದ್ಯಾಲಯದ, ಕರ್ನಾಟಕ ಸರಕಾರದ, ಖಾಸಗಿ ಧನಸಹಾಯ ಪಡೆದ, ಮತ್ತು ಖಾಸಗಿ ಧನ ಸಹಾಯ ಪಡೆಯದ ಶಿಕ್ಷಣ ಮಹಾವಿದ್ಯಾಲಯಗಳಾಗಿವೆ. ನಂತರ ೧೯೭೮-೮೨ರ ಅವಧಿಯಲ್ಲಿ ಮಹಾವಿದ್ಯಾಲಯಗಳು ಮಾಡಿದ ವೆಚ್ಚವನ್ನು ಮಾತ್ರ ಅಧ್ಯಯನಕ್ಕೆ ತೆಗೆದುಕೊಂಡಿದೆ.

ದತ್ತಾಂಶಗಳ ಸಂಗ್ರಹಣೆ ಮತ್ತು ವಿಶ್ಲೇಷಣೆ

ಅಧ್ಯಯನಕ್ಕೆ ಆಯ್ದುಕೊಂಡ ಶಿಕ್ಷಣ ಮಹಾವಿದ್ಯಾಲಯಗಳಿಂದ ೧೯೭೮-೮೨ರ ಅವಧಿಯಲ್ಲಿ ಖರ್ಚು ಮಾಡಿದ ಒಟ್ಟುವೆಚ್ಚವನ್ನು ತರಿಸಿಕೊಂಡು, ಬಂದ ದತ್ತಾಂಶವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಶಿಕ್ಷಣ ಮಹಾವಿದ್ಯಾಲಯಗಳ ವೆಚ್ಚದ ಮಾದರಿಯ ತುಲನಾತ್ಮಕ ಅಧ್ಯಯನವು ಈ ಕೆಳಗಿನಂತಿದೆ.

ತಖ್ತೆ ೧ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಬೋಧನಾ ಸಿಬ್ಬಂದಿ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	ರೂ. ೧,೭೩,೪೨೨.೬೨	೯೩.೯೦
೨	ಸರಕಾರಿ	ರೂ. ೧,೭೯,೫೨೨.೧೫	೪೮.೭೬
೩	ಖಾಸಗಿ-ಧನಸಹಾಯ ಪಡೆದ	ರೂ. ೧,೭೫,[illegible]೨೮.೩೫	೬೫.೯೦
೪	ಖಾಸಗಿ-ಧನಸಹಾಯ ಪಡೆಯದ	ರೂ. ೭೫,೨೩೯.೦೭	೪೬.೯೯

ತಖ್ತೆ ೨ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಬೋಧನೇತರ ಸಿಬ್ಬಂದಿಯ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	ರೂ. ೧,೬೫,೨೫೬.೦೬	೪೧.೮೦
೨	ಸರಕಾರಿ	ರೂ. ೧,೪೬,೬೮೦.೬೦	೩೯.೮೪
೩	ಖಾಸಗಿ-ಧನಸಹಾಯ ಪಡೆದ	ರೂ. ೪೬,೪೧೦.೦೫	೧೭.೪೬
೪	ಖಾಸಗಿ-ಧನಸಹಾಯ ಪಡೆಯದ	ರೂ.೨೦,೦೮೮.೦೦	೧೭.೦೭

ತಖ್ತೆ ೩ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಪುಸ್ತಕ ಮತ್ತು ಪತ್ರಿಕೆಗಳ ಮೇಲೆ ಮಾಡಿರುವ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	ರೂ. ೧೦,೧೦೧.೧೬	೨.೫೬
೨	ಸರಕಾರಿ	ರೂ. ೧,೦೨೧.೫೦	೦.೩೦
೩	ಖಾಸಗಿ-ಧನಸಹಾಯ ಪಡೆದ	ರೂ. ೫,೩೨೭.೦೫	೨.೦೦
೪	ಖಾಸಗಿ-ಧನಸಹಾಯ ಪಡೆಯದ	ರೂ. ೪,೯೦೬.೨೮	೩.೧೯

ತಖ್ತೆ ೪ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಕಛೇರಿಗೆ ಅವಶ್ಯವಾದ ಹಾಗೂ ಲೇಖನ ಸಾಮಗ್ರಿಗಳ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ. ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	ರೂ.೨.೫೪೬.೫೨	೦.೬೫
೨	ಸರಕಾರಿ	—	—
೩	ಖಾಸಗಿ-ಧನಸಹಾಯ ಪಡೆದ	ರೂ. ೬೦೨.೦೦	೦.೨೨
೪	ಖಾಸಗಿ-ಧನಸಹಾಯ ಪಡೆಯದ	ರೂ.೨,೦೪೬.೬೦	೧.೩೩

ತಖ್ತೆ ೫ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಅಂಚೆ, ತಂತಿ ಮತ್ತು ಟೆಲಿಫೋನ್ ವಿಭಾಗಗಳ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ. ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	ರೂ. ೩,೯೧೦.೩೫	೧.೦೦
೨	ಸರಕಾರಿ	—	—
೩	ಖಾಸಗಿ ಧನಸಹಾಯ ಪಡೆದ	ರೂ. ೫,೦೫೭.೭೫	೧.೯೦
೪	ಖಾಸಗಿ-ಧನಸಹಾಯ ಪಡೆಯದ	ರೂ. ೭೩೧.೧೫	೦.೪೮

ತಖ್ತೆ ೬ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ನೀರು ಮತ್ತು ವಿದ್ಯುಚ್ಛಕ್ತಿಯ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ. ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	ರೂ. ೪೧೬.೮೧	೦.೧೧
೨	ಸರಕಾರಿ	—	—
೩	ಖಾಸಗಿ-ಧನಸಹಾಯ ಪಡೆದ	ರೂ. ೬೬೨.೧೮	೦.೨೫
೪	ಖಾಸಗಿ-ಧನಸಹಾಯ ಪಡೆಯದ	ರೂ. ೪೪೮.೧೪	೦.೨೯

ತಖ್ತೆ ೭ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಕಟ್ಟಡ ಬಾಡಿಗೆ ಮತ್ತು ತೆರಿಗೆಗಳ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ. ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	ರೂ.೫,೪೨೦.೧೪	೧.೩೮
೨	ಸರಕಾರಿ	—	—
೩	ಖಾಸಗಿ–ಧನಸಹಾಯ ಪಡೆದ	ರೂ.೯,೦೦೦.೦೦	೩.೩೮
೪	ಖಾಸಗಿ–ಧನಸಹಾಯ ಪಡೆಯದ	ರೂ.೧,೪೪೦.೦೦	೦.೯೪

ತಖ್ತೆ ೮ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಸೀಶೋಪಕರಣ ಮತ್ತು ಸಾಧನ ಸಲಕರಣೆಗಳ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	ರೂ. ೮೪೦.೦೦	೦.೨೨
೨	ಸರಕಾರಿ	—	—
೩	ಖಾಸಗಿ-ಧನಸಹಾಯ ಪಡೆದ	ರೂ. ೫,೨೧೯.೨೭	೧.೯೬
೪	ಖಾಸಗಿ-ಧನಸಹಾಯ ಪಡೆಯದ	ರೂ. ೯೬೦.೦೦	೦.೬೩

ತಖ್ತೆ ೯ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಶೈಕ್ಷಣಿಕ ಪ್ರವಾಸದ ಮೇಲೆ ಮಾಡಿರುವ ವೆಚ್ಚವನ್ನು ತೋರಿಸುತ್ತದೆ.

ಕ್ರ. ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	ರೂ. ೨,೪೦೦.೦೦	೦.೬೦
೨	ಸರಕಾರಿ	ರೂ. ೩,೦೦೦.೦೦	೦.೮೦
೩	ಖಾಸಗಿ-ಧನಸಹಾಯ ಪಡೆದ	—	—
೪	ಖಾಸಗಿ-ಧನಸಹಾಯ ಪಡೆಯದ	ರೂ. ೩,೨೮೫.೨೦	೨.೧೪

ತಖ್ತೆ ೧೦ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಕಛೇರಿಯ ಆಕಸ್ಮಿಕ ಮತ್ತು ಇತರ ಅಂಶಗಳ ಮೇಲೆ ಮಾಡಿರುವ ವೆಚ್ಚವನ್ನು ತೋರಿಸುತ್ತದೆ.

ಕ್ರ. ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	ರೂ. ೩,೬೭೮.೨೨	೦.೯೫
೨	ಸರಕಾರಿ	ರೂ. ೬,೮೯೭.೮೦	೧.೯೦
೩	ಖಾಸಗಿ-ಧನಸಹಾಯ ಪಡೆದ	ರೂ. ೨,೦೬೩.೪೫	೦.೭೮
೪	ಖಾಸಗಿ-ಧನಸಹಾಯ ಪಡೆಯದ	ರೂ. ೧,೫೮೫.೮೫	೧.೦೩

ತಖ್ತೆ ೧೧ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಕ್ರಿಡಾಕೂಟಗಳ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	ರೂ. ೧೯೦.೦೦	೦.೦೫
೨	ಸರಕಾರಿ	—	—
೩	ಖಾಸಗಿ-ಧನಸಹಾಯ ಪಡೆದ	ರೂ. ೬೬೭.೬೨	೦.೨೬
೪	ಖಾಸಗಿ-ಧನಸಹಾಯ ಪಡೆಯದ	ರೂ. ೧,೦೧೦.೦೦	೦.೬೬

ತಖ್ತೆ ೧೨ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಶಿಷ್ಯವೇತನ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	ರೂ. ೭೭೮.೬೦	೦.೧೯
೨	ಸರಕಾರಿ	ರೂ. ೨೯,೮೨೧.೬೦	೮.೧೦
೩	ಖಾಸಗಿ-ಧನಸಹಾಯ ಪಡೆದ	—	—
೪	ಖಾಸಗಿ ಧನಸಹಾಯ ಪಡೆಯದ	ರೂ. ೧೬,೫೧೮.೩೦	೧೦.೭೫

ತಖ್ತೆ ೧೩ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	—	—
೨	ಸರಕಾರಿ	—	—
೩	ಖಾಸಗಿ-ಧನಸಹಾಯ ಪಡೆದ	ರೂ. ೨೯೭.೦೦	೦.೧೨
೪	ಖಾಸಗಿ-ಧನ ಸಹಾಯ ಪಡೆಯದ	ರೂ. ೨೩೮.೦೦	೦.೧೫

ತಖ್ತೆ ೧೪ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘದ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	—	—
೨	ಸರಕಾರಿ	—	—
೩	ಖಾಸಗಿ-ಧನಸಹಾಯ ಪಡೆದ	ರೂ. ೧,೮೪೮.೦೦	೦.೬೯
೪	ಖಾಸಗಿ-ಧನಸಹಾಯ ಪಡೆಯದ	ರೂ. ೧,೧೨೬.೧೫	೦ ೬೩

ತಖ್ತೆ ೧೫ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಪರೀಕ್ಷೆಗಳ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	—	—
೨	ಸರಕಾರಿ	—	—
೩	ಖಾಸಗಿ-ಧನಸಹಾಯ ಪಡೆದ	ರೂ. ೧೦೮೬.೧೫	೦.೪೧
೪	ಖಾಸಗಿ-ಧನ ಸಹಾಯ ಪಡೆಯದ	,೩೯೭.೫೦	೦.೯೧

ತಖ್ತೆ ೧೬ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ವಾಚನಾ ಕೊಠಡಿಯ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ. ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	—	—
೨	ಸರಕಾರಿ	—	—
೩	ಖಾಸಗಿ-ಧನಸಹಾಯ ಪಡೆದ	ರೂ, ೧,೩೭೬.೯೦	೦.೫೨
೪	ಖಾಸಗಿ-ಧನಸಹಾಯ ಪಡೆಯದ	ರೂ, ೧,೨೬೩.೫೦	೦.೮೨

ತಖ್ತೆ ೧೭ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಮಾಡಿದ ಆಡಳಿತ ವೆಚ್ಚವನ್ನು ತೋರಿಸುತ್ತದೆ.

ಕ್ರ. ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	—	—
೨	ಸರಕಾರಿ	—	—
೩	ಖಾಸಗಿ-ಧನಸಹಾಯ ಪಡೆದ	ರೂ. ೧,೧೧೮.೮೨	೦.೪೩
೪	ಖಾಸಗಿ-ಧನಸಹಾಯ ಪಡೆಯದ	ರೂ. ೧,೫೮೫.೮೫	೧.೦೩

ತಖ್ತೆ ೧೮ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಜಾಹೀರಾತಿನ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ. ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿಶತ
೧	ವಿಶ್ವವಿದ್ಯಾಲಯ	—	—
೨	ಸರಕಾರಿ	—	—
೩	ಖಾಸಗಿ-ಧನಸಹಾಯ ಪಡೆದ	ರೂ. ೮೫೧.೦೦	೦.೩೩
೪	ಖಾಸಗಿ-ಧನಸಹಾಯ ಪಡೆಯದ	ರೂ. ೩೦೦.೦೦	೦.೧೯

ತಖ್ತೆ ೧೯ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಮಾನ್ಯತಾ ಪಡೆಯಲು ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿ ಶತ
೧	ವಿಶ್ವವಿದ್ಯಾಲಯ	—	—
೨	ಸರಕಾರಿ	—	—
೩	ಖಾಸಗಿ–ಧನ ಸಹಾಯ ಪಡೆದ	ರೂ. ೧.೦೦೦.೦೦	೦.೩೭
೪	ಖಾಸಗಿ–ಧನ ಸಹಾಯ ಪಡೆಯದ	ರೂ. ೧.೦೦೦.೦೦	೧.೩೦

ತಖ್ತೆ ೨೦ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಕಟ್ಟಡ ದುರಸ್ತಿಗೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿ ಶತ
೧	ವಿಶ್ವವಿದ್ಯಾಲಯ	—	—
೨	ಸರಕಾರಿ	—	—
೩	ಖಾಸಗಿ–ಧನ ಸಹಾಯ ಪಡೆದ	ರೂ.೧,೧೯೫,೨೫	೦.೪೫
೪	ಖಾಸಗಿ–ಧನ ಸಹಾಯ ಪಡೆಯದ	ರೂ, ೨೨೨,೨೮	೦.೧೪

ತಖ್ತೆ ೨೧ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಲ್ಲಿ ಸಾರಿಗೆ ಮತ್ತು ಊಟದ ಭತ್ತೆಗೆ ವಿನಿಯೋಗಿಸಿದ ಹಣವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿ ಶತ
೧	ವಿಶ್ವವಿದ್ಯಾಲಯ	—	—
೨	ಸರಕಾರಿ	—	—
೩	ಖಾಸಗಿ–ಧನ ಸಹಾಯ ಪಡೆದ	ರೂ. ೧.೫೯೨.೩೦	೦.೫೯
೪	ಖಾಸಗಿ–ಧನ ಸಹಾಯ ಪಡೆಯದ	ರೂ. ೧.೦೫೭.೨೦	೦.೬೯

ತಖ್ತೆ ೨೨ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಅರ್ಹತೆಯ ವಿದ್ಯಾಶುಲ್ಕದ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ವೆಚ್ಚ	ಪ್ರತಿ ಶತ
೧	ವಿಶ್ವವಿದ್ಯಾಲಯ	—	—
೨	ಸರಕಾರಿ	—	—
೩	ಖಾಸಗಿ–ಧನ ಸಹಾಯ ಪಡೆದ	ರೂ. ೨೪೦.೦೦	೦.೦೯
೪	ಖಾಸಗಿ–ಧನಸಹಾಯ ಪಡೆಯದ	ರೂ. ೮೭೦.೦೦	೦.೫೭

ಶಿಕ್ಷಣದ ಮಹಾವಿದ್ಯಾಲಯಗಳ ವೆಚ್ಚದ ಹಂಚಿಕೆಯ ತುಲನಾತ್ಮಕ ಅಭ್ಯಾಸವು ಈ ಕೆಳಗಿನಂತಿದೆ :

ತಖ್ತೆ ೨೩ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿ ಬೋಧನಾತ್ಮಕ ಸೇವೆಗಳ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ಪ್ರತಿ ಶತ
೧	ವಿಶ್ವವಿದ್ಯಾಲಯ	೪೭.೪೬
೨	ಸರಕಾರಿ	೪೯.೮೬
೩	ಖಾಸಗಿ–ಧನ ಸಹಾಯ ಪಡೆದ	೬೮.೪೨
೪	ಖಾಸಗಿ–ಧನ ಸಹಾಯ ಪಡೆಯದ	೫೭.೪೬

ತಖ್ತೆ ೨೪ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿಯ ಆಡಳಿತಾತ್ಮಕ ಸೇವೆಗಳ ಮೇಲೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ಪ್ರತಿಶತ
೧	ವಿಶ್ವವಿದ್ಯಾಲಯ	೪೭.೦೦
೨	ಸರಕಾರಿ	೪೧.೭೪
೩	ಖಾಸಗಿ–ಧನಸಹಾಯ ಪಡೆದ	೩೦.೩೩
೪	ಖಾಸಗಿ–ಧನಸಹಾಯ ಪಡೆಯದ	೨೨.೭೬

ತಖ್ತೆ ೨೫ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿಯ ಕಲ್ಯಾಣಾ-
ತ್ಮಕ ಸೇವೆಗಳಿಗೆ ಮಾಡಿದ ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸ್ಥೆ	ಪ್ರತಿಶತ
೧	ವಿಶ್ವವಿದ್ಯಾಲಯ	೫.೫೪
೨	ಸರಕಾರಿ	೮.೪೦
೩	ಖಾಸಗಿ–ಧನಸಹಾಯ ಪಡೆದ	೧.೨೫
೪	ಖಾಸಗಿ–ಧನಸಹಾಯ ಪಡೆಯದ	೧೩.೨೯

ವಿವಿಧ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ತಗಲುವ ಸರಾಸರಿ ವೆಚ್ಚದ ತುಲನಾತ್ಮಕ ಅಧ್ಯಯನ ಈ ಕೆಳಗಿನಂತಿದೆ:

ತಖ್ತೆ ೨೬ : ಕೆಳಗಿನ ತಖ್ತೆಯು ವಿವಿಧ ಮಹಾವಿದ್ಯಾಲಯಗಳಲ್ಲಿರುವ ವಿದ್ಯಾರ್ಥಿ
ಗಳ ತಲಾ* ವೆಚ್ಚವನ್ನು ತೋರಿಸುತ್ತದೆ.

ಕ್ರ.ಸಂ.	ಆಡಳಿತ ವ್ಯವಸೆ	ವೆಚ್ಚ
೧	ವಿಶ್ವವಿದ್ಯಾಲಯ	ರೂ. ೩೬೮೯.೩೧
೨	ಸರಕಾರಿ	ರೂ. ೩೪೭೦-೨೪
೩	ಖಾಸಗಿ–ಧನಸಹಾಯ ಪಡೆದ	ರೂ. ೨೨೩೮-೭೮
೪	ಖಾಸಗಿ–ಧನಸಹಾಯ ಪಡೆಯದ	ರೂ. ೭೬೯-೩೯

* ಕೊಠಾರಿ ಶಿಕ್ಷಣ ಆಯೋಗ (೧೯೬೪-೬೬)ದಲ್ಲಿ ಬಳಸಿದ ಶೈಕ್ಷಣಿಕ ವೆಚ್ಚವನ್ನು ತೆಗೆಯುವ ಪ್ರಮೇಯವನ್ನು ಆಧರಿಸಿ ಪ್ರತಿ ವಿದ್ಯಾರ್ಥಿಯ ಶಿಕ್ಷಣ ತರಬೇತಿಯ ವೆಚ್ಚವನ್ನು ತೆಗೆಯಲಾಗಿದೆ.

$$\text{ಒಬ್ಬ ವಿದ್ಯಾರ್ಥಿಯ ವೆಚ್ಚ} = \frac{\text{ಎ} (೧ + \text{ಆರ್})}{\text{ಟಿ}}$$

"ಎ" = ಸರಾಸರಿ ವಾರ್ಷಿಕ ಶಿಕ್ಷಕರ ಸಂಬಳ

"ಆರ್" = ಶಿಕ್ಷಕರ ಸಂಬಳಕ್ಕೆ ಶಿಕ್ಷಕೇತರ ವೆಚ್ಚದ ಪ್ರಮಾಣ

"ಟಿ" = ಶಿಕ್ಷಕ: ವಿದ್ಯಾರ್ಥಿಗಳ ಪ್ರಮಾಣ

ನಿರ್ಣಯ

ಅಧ್ಯಯನದಿಂದ ಈ ಕೆಳಗಿನ ಮಹತ್ವದ ನಿರ್ಣಯಗಳು ದೊರೆತಿವೆ:

೧. ಎಲ್ಲಾ ಶಿಕ್ಷಣ ಮಹಾವಿದ್ಯಾಲಯಗಳು ತಮ್ಮ ಬೋಧನಾ ಕಾರ್ಯದ ಸಿಬ್ಬಂದಿಗೆ ವೆಚ್ಚದಲ್ಲಿ ಸಮನಾದ ಪ್ರಾಧಾನ್ಯತೆಯನ್ನು ಕೊಟ್ಟಿರುತ್ತವೆ.

೨. ಖಾಸಗಿ (ಧನ ಸಹಾಯ ಪಡೆದ ಮತ್ತು ಪಡೆಯದ) ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಬೋಧನೇತರರ ಸಿಬ್ಬಂದಿಯ ಮೇಲಿನ ವೆಚ್ಚ ಕಡಿಮೆಯಾಗಿರುತ್ತದೆ.

೩. ಆಡಳಿತ ವೆಚ್ಚಗಳಿಗೆ ಸಂಬಂಧಿಸಿದ ವೆಚ್ಚವು ಖಾಸಗಿ (ಧನ ಸಹಾಯ ಪಡೆದ ಮತ್ತು ಪಡೆಯದ) ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಹೆಚ್ಚಾಗಿರುತ್ತದೆ.

೪. ಖಾಸಗಿ ಧನ ಸಹಾಯ ಪಡೆಯದ ಮತ್ತು ಸರಕಾರಿ ಶಿಕ್ಷಣ ಮಹಾವಿದ್ಯಾಲಯಗಳು ಶಿಷ್ಯವೇತನ ರೂಪದಲ್ಲಿ ಹೇರಳ ಹಣವನ್ನು ವಿನಿಯೋಗಿಸಿರುತ್ತವೆ.

೫. ಬೋಧನಾತ್ಮಕ ಸೇವೆಗಳನ್ನು ವಿಶ್ವವಿದ್ಯಾಲಯ, ಧನಸಹಾಯ ಪಡೆಯದ ಮತ್ತು ಸರಕಾರಿ ಶಿಕ್ಷಣ ಮಹಾವಿದ್ಯಾಲಯಗಳು ನಿರ್ಲಕ್ಷ್ಯ ಮಾಡಿರುತ್ತವೆ.

೬. ಎಲ್ಲಾ ಶಿಕ್ಷಣ ಮಹಾವಿದ್ಯಾಲಯಗಳು ಆಡಳಿತಾತ್ಮಕ ಸೇವೆಗಳಿಗೆ ಪ್ರಾಧಾನ್ಯತೆ ಕೊಟ್ಟಿರುತ್ತವೆ.

೭. ವಿದ್ಯಾರ್ಥಿಗಳ ದೈಹಿಕ ಬೆಳವಣಿಗೆಗೆ ಪೂರಕವಾಗಿರುವ ಆಟಗಳನ್ನು ಎಲ್ಲಾ ಶಿಕ್ಷಣ ಮಹಾವಿದ್ಯಾಲಯಗಳು ನಿರ್ಲಕ್ಷ್ಯಮಾಡಿರುತ್ತವೆ.

೮. ವಿಶ್ವವಿದ್ಯಾಲಯಗಳು ಮತ್ತು ಸರಕಾರದಿಂದ ನಡೆಸಲ್ಪಡುತ್ತಿರುವ ಶಿಕ್ಷಣ ಮಹಾವಿದ್ಯಾಲಯಗಳು ವಿದ್ಯಾರ್ಥಿ ತಲಾ ವೆಚ್ಚದ ಮೇಲೆ ಹೆಚ್ಚು ಹಣವನ್ನು ವಿನಿಯೋಗಿಸಿರುತ್ತವೆ.

೯. ಖಾಸಗಿ (ಧನ ಸಹಾಯ ಪಡೆದ ಮತ್ತು ಪಡೆಯದ) ಶಿಕ್ಷಣ ಮಹಾವಿದ್ಯಾಲಯಗಳು ವಿದ್ಯಾರ್ಥಿ ತಲಾ ವೆಚ್ಚವನ್ನು ಕಡಿಮೆ ವಿನಿಯೋಗಿಸಿರುತ್ತವೆ.

ಒಂದು ಸಿಸು ಪ್ರಾಸದ ಸಮೀಕ್ಷೆ
ಅತ್ತೆತ್ತಿ ಬಿದ್ದೆ !!

ಕಂಚ್ಯಾಣಿ ಶರಣಪ್ಪ

[ಸೊಸೆ ಬಿದ್ದದ್ದು ಸುಳ್ಳು, ಅತ್ತೆಯ ಹಂಚಿಕೆಯಿಂದಾಗಿ ಅವಳ ಮೈಗಳ್ಳತನ ಬಯಲಾಗುತ್ತದೆ. ಮೈಗಳ್ಳ ಸೊಸೆ, ಅವತಾರದ ಅತ್ತೆ, ದರ್ಪದ ಗಂಡ ಮಾವಂದಿರ ಸ್ವಭಾವ ಚಿತ್ರಣ ಈ ಪುಟ್ಟ ಸಿಸು ಪ್ರಾಸದಲ್ಲಿ ಚನ್ನಾಗಿ ಮೂಡಿ ಬಂದಿದೆ.]

ಸಾಹಿತ್ಯವು ಜೀವನದ ಪಡಿನೆಳಲೆಂದು "ಸಾಹಿತ್ಯ ಮಿಮಾಂಸಕರ ಸ್ಪಷ್ಟ ಅಭಿಪ್ರಾಯವಾಗಿರುತ್ತದೆ. ಸಾಹಿತ್ಯ ಕೃತಿಗೆ ಆಕರಗಳೇನೆ ಇರಲಿ, ಕವಿಯು ತಾನು ಕಂಡುಂಡ ಅನುಭವಗಳನ್ನು ಕೃತಿಯುದ್ದಕ್ಕೂ ಹಾಸು ಹೊಕ್ಕಾಗಿ-ಕಲಾತ್ಮಕವಾಗಿ ಹೆಣೆದು ಬಿಡುತ್ತಾನೆ. ಅಂತೆಯೇ ಹಳ್ಳಿಗರ ಹಾಡು-ಕಥೆಗಳಲ್ಲಿ ಜೀವನದ ಕಷ್ಟ-ನಿಷ್ಠುರ, ನೋವು-ನಲಿವುಗಳನ್ನು ಹೆಜ್ಜೆ ಹೆಜ್ಜೆಗೆ ಕಾಣಬಹುದಾಗಿದೆ. ಬಾಳುವೆಯ ಸಿಹಿ-ಕಹಿ ಅನುಭವಗಳೇ ಅವರ ಅಭಿವ್ಯಕ್ತಿಗೆ ಆಕರಗಳಾಗಿ ಬಿಡುತ್ತವೆ.

ಉತ್ತರ ಕರ್ನಾಟಕದಲ್ಲಿ ಅನೇಕ ಮಕ್ಕಳ ಆಟಗಳು ಇನ್ನೂ ಜೀವಂತವಾಗಿ ಉಳಿದುಬಂದಿವೆ. ಅಂಥ ಆಟಗಳಿಗೆ ಹೊಂದಿಕೆಯಾಗಿ ಹಲವಾರು ಸಿಸು ಪ್ರಾಸಗಳು ಮಕ್ಕಳ ಬಾಯಿಂದ ಸಹಜವಾಗಿ, ಅಷ್ಟೆ ಸರಸವಾಗಿ ಹೊರಹೊಮ್ಮುತ್ತವೆ. ಹೆಣ್ಣು ಮಕ್ಕಳ ಆಟಗಳಂತೂ ಸಿಸು ಪ್ರಾಸಗಳಿಲ್ಲದೇ ಇರುವುದು ಅಪರೂಪವೆಂದೇ ಹೇಳಬೇಕು.

" ಮೂರು ಕಾಲಿನ ಅಡ್ಡಣಿಗೆ" ಎಂಬ ಒಂದು ಚಿಕ್ಕ ಮಕ್ಕಳ ಆಟ. ಇದನ್ನು ಆರೇಳು ವರ್ಷದ ಹುಡುಗೆಯರು ಬಲು ಅಕ್ಕರೆಯಿಂದ ಆಡುತ್ತಾರೆ ಈ ಆಟವಲ್ಲಿ ಮೂವರು ಹುಡುಗೆಯರು ಪಾಲುಗೊಳ್ಳುತ್ತಾರೆ. ಒಬ್ಬರಿಗೊಬ್ಬರು ಬೆನ್ನಿಗೆ ಬೆನ್ನು ತಾಗಿಸಿ ಒಂಟಿಗಾಲ ಮೇಲೆ ನಿಲ್ಲುತ್ತಾರೆ. ತಮ್ಮ ತಮ್ಮ ಎಡಗಾಲನ್ನು ಹಿಂದೆ ತೊಡಗಿಸಿಕೊಳ್ಳುತ್ತಾರೆ. ಕೈ ಕೈ ಹಿಡಿದು ಕುಂಟತ್ತಾ ಸುತ್ತುವರಿಯುತ್ತಾರೆ, ಜೋಲಿ ತಪ್ಪಿಯಾರಾದರೂ ಬಿದ್ದಾಗ

ಬಿದ್ದವಳು – ಅತ್ತೆತ್ತಿ ಬಿದ್ದೆ॥
ನಿಂತವರು – ಹೆಂಗ್ಹೆಂಗ ಬಿದ್ದಿ?
ಬಿದ್ದವಳು – ಕಾಲು ಜಾರಿ ಬಿದ್ದೆ!
ನಿಂತವರು – ಏನೇನು ಕಳೆದಿ?
ಬಿದ್ದವಳು – ಹವಳ ಮುತ್ತು ಕಳೆದೆ!
ನಿಂತವರು – ಗಂಡನ್ನ ಕರಿಲೋ? ಮಾವನ್ನ ಕರಿಲೋ?

ಬಿದ್ದವಳು–ಅಯ್ಯಯ್ಯ! ಸಿಕ್ಕಿತು!! ಎಂದು ನಗುತ್ತಾ ಮೇಲೇಳುತ್ತಾಳೆ. ಮತ್ತೆ ಮೊದಲಿನಂತೆ ಆಟ ಸಾಗುತ್ತದೆ. ಮತ್ತೆ ಯಾರಾದರೂ ಬಿದ್ದಾಗ ಅದೇ ಹಾಡಿನ ಪುನರಾವರ್ತನೆಯಾಗುತ್ತದೆ. ಹೀಗೆ ಬೇಸರವಿಲ್ಲದೆ ಆಡಿ ಹಾಡಿ ತಣಿಯುತ್ತಾರೆ. ಇನ್ನು ಈ ಸಿಸು ಪ್ರಾಸದ ಬಗ್ಗೆ ವಿಚಾರಿಸೋಣ.

ಇದೊಂದು ಜಾನಪದ ಹಾಡು.ಹಳ್ಳಿಯ ಮುಗ್ಧ ಬಾಲಕಿಯರು ತಮ್ಮಷ್ಟಕ್ಕೆ ತಾವು ಹಾಡಿಕೊಂಡ ಸಿಸು ಪ್ರಾಸ, ಅದರಲ್ಲಿ ಗಹನವಾದ ವಿಚಾರ, ಸುಂದರವಾದ ಅಲಂಕಾರ, ಶಬ್ದ ಚಮತ್ಕೃತಿ ಇವಾವವೂ ನಮಗೆ ಗೋಚರಿಸಲಾರವು. ಅದರ ಮಹತ್ವ ಅಷ್ಟೊಂದಾಗಿ ಕಾಣಲಿಕ್ಕಿಲ್ಲ. ಆದರೆ ಅದರ ಒಳಪದರನ್ನು ಒಂದೊಂದಾಗಿ ಬಿಡಿಸಿದಂತೆ ಆಹ್ಲಾದಕರವಾದ ಚಿತ್ರಮಾಲಿಕೆಯನ್ನೆ ಕಾಣಬಹುದು. ಕೌಟುಂಬಿಕ ಜೀವನದ ಏರು ಪೇರುಗಳ ಸರಸ ವಿಡಂಬನೆಯ ಸ್ವಾರಸ್ಯವನ್ನು ಸವಿಯಬಹುದು.

ಸಹ ಬಾಳುವೆಯ ಸಾಕಾರ ರೂಪವೇ ಕುಟುಂಬ. ತಂದೆ, ತಾಯಿ, ಅತ್ತೆ, ಸೊಸೆ, ಅಣ್ಣ–ತಮ್ಮ ಹೀಗೆ ಕುಟುಂಬದ ಅವಿಭಾಜ್ಯ ಸದಸ್ಯರು. ಕುಟುಂಬ ನಿರ್ವಹಣೆಯಲ್ಲಿ ಅವರವರ ಪಾಲಿನ ಕರ್ತವ್ಯ–ಹೊಣೆಗಾರಿಕೆ ಅವರವರಿಗುಂಟು, ಇದೆಲ್ಲ ಪರಸ್ಪರ ಕಳಕಳಿಯ ಏಕಸೂತ್ರದಲ್ಲಿ ನಿರಾಂತಕವಾಗಿ ನಡೆದು ಬರುತ್ತದೆ. ಸಹಕಾರದ ಹೊಂದಾಣಿಕೆ ತಪ್ಪಿದಾಗ ಕರ್ತವ್ಯದ ಚ್ಯುತಿ ತಲೆದೋರಿದಾಗ ಏರು ಪೇರುಗಳಾಗಿ ವಿರಸಕ್ಕೆ ಕಾರಣವಾಗುತ್ತದೆ. ಆ ವಿರಸದ ಸರಸ ವಿಡಂಬನೆಯಲ್ಲ ಆಹ್ಲಾದಕರವಾಗಿ ಮೂಡಿಬಂದಿದೆ.

"ಅತ್ತೆತ್ತಿ ಬಿದ್ದೆ"! ಎಂದು ಸೊಸೆ ಗೋಳಿಟ್ಟಾಗ ಹೆಂಗ್ಹೆಂಗ ಬಿದ್ದಿ? ಎಂದು ಅತ್ತೆ ದರ್ಪದಿಂದ ಕೇಳುತ್ತಾಳೆ. ಅಲ್ಲಿ ಕಳಕಳಿಯ ಅಂಶವನ್ನೂ ಕಾಣಲಾರೆವು. ಬಿದ್ದು ಪೆಟ್ಟು ತಿಂದ ಸೊಸೆಯ ಬಗ್ಗೆ ಅತ್ತೆ ಕನಿಕರದ ಯಾವ ಮಾತನ್ನು ಆಡುವದಿಲ್ಲ. ಬದಲಾಗಿ ಏನೇನು ಕಳೆದೆ? ಎಂಬ ಮಾತಿನಲ್ಲಿ ಯಜಮಾನಿಕೆಯ ದರ್ಪ ನಿರ್ದಯ, ನಿಷ್ಠುರ ಸ್ವಭಾವವನ್ನು ತೋರಿಸುತ್ತದೆ. ಸೊಸೆಯ ಜೀವಕ್ಕಿಂತ ಅವಳಿಗಾದ ನೋವಿಗಿಂತ ವಸ್ತುಒಡವೆಗಳೇ ಅತ್ತೆಗೆ ಅಧಿಕವಾಗಿ ಬೆಟ್ಟವೆ. ಅವುಗಳ ಮೇಲೆಯೇ ಅವಳ ಕಣ್ಣು, ಕಳಕಳಿ.

ಇಲ್ಲಿ ಗಂಡ ಮಾವಂದಿರನ್ನು ನಾವು ಪ್ರತ್ಯಕ್ಷವಾಗಿ ಕಾಣುತ್ತಿಲ್ಲ. ಆದರೆ ಅತ್ತೆಯ ಮಾತಿನಿಂದ ಅವರು ದರ್ಪದ ನಿರ್ದಾಕ್ಷಿಣ್ಯ, ಶಿಕ್ಷಾಧಿಕಾರಿಗಳಾಗಿ ಗೋಚರಿಸುತ್ತಾರೆ. ಮಕ್ಕಳನ್ನು ಹೆದರಿಸಲು ದೆವ್ವ ಪಿಶಾಚಿಗಳ ಹೆಸರನ್ನೆತ್ತುವಂತೆ ಗಂಡನ್ನ ಕರಿಲೊ? ಮಾವನ್ನ ಕರಿಲೊ? ಎಂದು ಹೇಳಿದಾಗ ಗಾಬರಿಗೊಂಡ ಸೊಸೆ ಅಯ್ಯಯ್ಯ! ಸಿಕ್ಕಿತು ಎಂದು ತಟ್ಟನೆ ನುಡಿಯುತ್ತಾಳೆ. ಇಲ್ಲಿ ಗಂಡ ಮಾವಂದಿರ ಚಿತ್ರಣ ಭಯಾನಕವಾಗಿ ಮೂಡಿಬಂದಿದೆ.

ಕೊನೆಯದಾಗಿ ಸೊಸೆ ಬಿದ್ದದ್ದು ಸುಳ್ಳು, ಹೂಡಿದ್ದು ನೆಪ, ಅತ್ತೆಯ ಹಂಚಿಕೆಯಿಂದಾಗಿ ಅವಳ ನೈಗಳ್ಳತನ ಬಟ್ಟ ಬಯಲಾಗುತ್ತದೆ. ಹೊತ್ತುವ ಹೊಗೆ ನಗೆಯ ಹೊನಲಾಗುತ್ತದೆ.

ಒಟ್ಟಾರೆ ನೈಗಳ್ಳ ಸೊಸೆ ಅವತಾರದ ಅತ್ತೆ ದರ್ಪದ ಗಂಡ ಮಾವಂದಿರ ಚಿತ್ರ ಈ ಪುಟ್ಟ ಸಿಸುಪ್ರಾಸದಲ್ಲಿ ಚನ್ನಾಗಿ ಮೂಡಿಬಂದಿದೆ. ಈ ಜಾನಪದ ಹಾಡಿನಲ್ಲಿ ಜೀವನದ ಪ್ರತಿಬಿಂಬ ಸಜೀವವಾಗಿ ಸಿಹಿ ಕಹಿ ಅನುಭವಗಳನ್ನು ಸರಸವಾಗಿ ಮಿಡಿದಿದೆ.

ಇಂಥ ಮಕ್ಕಳ ಆಟಗಳು ಸಿಸುಪ್ರಾಸಗಳು ಇತ್ತೀಚೆಗೆ ತ್ವರಿತವಾಗಿ ಮಾಯವಾಗು-ತ್ತಿರುವುದು ಕಳವಳಕಾರಕವಾಗಿದೆ.

ಮಹಾದೇವಿ ಅಕ್ಕನಿಗೆ ಮದುವೆಯಾಗಿತ್ತೆ ?
—ಒಂದು ವಿವಾದ

ಸಿ. ಎಂ. ವೀರಭದ್ರಯ್ಯ

ಮಹಾದೇವಿ ಅಕ್ಕನಂಥ ಶಿವಶರಣೆ ಹಾಗೂ ಮಹಾನುಭಾವಿಗಳನ್ನು ನಾವು ಆಧ್ಯಾತ್ಮಿಕ ದೃಷ್ಟಿಯಿಂದ ನೋಡಬೇಕು. ಲೌಕಿಕ ದೃಷ್ಟಿಯಿಂದ ನೋಡಿದರೆ ಕೆಲವೊಂದು ವಿವಾದಗಳು ಹುಟ್ಟುವುದು ಸಹಜ.

ಕೆಲವರಿಗೆ "ಅಕ್ಕನಿಗೆ ಲಗ್ನವಾಗಿತ್ತು," ಕೌಶಿಕನೆಂಬ ಗಂಡನನ್ನು ಬಿಟ್ಟು ಗೃಹಿಣಿಯ ಧರ್ಮಕ್ಕೆ ಕಲಂಕ ತಂದಳೆಂಬ ಭ್ರಾಂತಿ. ಮತ್ತೆ ಕೆಲವರು "ಅಕ್ಕನಿಗೆ ಅಂಥ ಮದುವೆಯಾಗುವ ಪ್ರಸಂಗಗಳು ಬಂದರೂ ಅವುಗಳನ್ನು ಬಹು ಜಾಣ್ಮೆಯಿಂದ ದೂರಮಾಡಿ ಚನ್ನಮಲ್ಲಿಕಾರ್ಜುನನೆಂಬ ಮಹಾಬೆಳಗಿನಲ್ಲಿ ಬೆಳಗಿ ಹೋದಳು – ಎಂದು ಭಾವಿಸುತ್ತಾರೆ. ಹೀಗಾಗಿ ನಾನು ಕೆಲವು ಗ್ರಂಥಗಳನ್ನು ಪರಾಮರ್ಶಿಸಿದಾಗ, ಕೆಲವು ವಿಚಾರಗಳು ಬೆಳಕಿಗೆ ಬಂದವು:

ಮಹಾದೇವಿ ಅಕ್ಕನ ವಚನಗಳನ್ನು ನಾವು ಉದಾಹರಣೆಗೆ ತೆಗೆದುಕೊಂಡರೆ, ಅಕ್ಕನಿಗೆ ಕೌಶಿಕನೆಂಬುವನೊಂದಿಗೆ ಮದುವೆಯಾಗಿತ್ತೆಂದು ತೋರುತ್ತದೆ. ಉದಾಹರಣೆಗೆ;

ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯಮಾಡಿ
ತನ್ನ ನೂಲು ತನ್ನ ಸುತ್ತಿ ಸಾವ ತೆರನಂತೆ
ಮನಬಂದುದ ಬಯಸಿ ಬೇವುತಿದ್ದೇನೆ, ಅಯ್ಯ
ಎನ್ನ ಮನದ ಸಿರಾಶೆಯ ನಿವಾರಿಸಿ ನಿಮ್ಮತ್ತ ತೋರಾ
ಚನ್ನಮಲ್ಲಿಕಾರ್ಜುನಾ ||

ಈ ವಚನವನ್ನು ಪರಿಶೀಲಿಸಿದರೆ ಅಕ್ಕನಿಗೆ ಯಾವುದೋ ಲೌಕಿಕ ಲಗ್ನದ ಬಂಧನ ಬಂದಿರಲಿಕ್ಕೇಬೇಕು. ಆ ಲಗ್ನವಾಗುವ ವರ ಕೌಶಿಕನೇ ಎಂದು ಎಲ್ಲಾ ವಿದ್ವಾಂಸರೂ ಒಪ್ಪಿಕೊಂಡಿದ್ದಾರೆ. ಅಂಥ ಭವಿಯನ್ನು ವೀರಶೈವಳಾದ ಅಕ್ಕ

ವರಿಸುವುದೂ ಒಂದು ಸಂದಿಗ್ಧ ಸಮಯ. "ಮದುವೆಯ ಸಂಧಾನಕ್ಕೆಂದು ಬಂದಿದ್ದ ಅರಸು ಮಂತ್ರಿಗಳೊಡನೆ ಅಕ್ಕನು ನಡೆಸಿದ ಮಾತು ಕಥೆಗಳಲ್ಲಿ ತೋರಿಬರುವ ಅವಳ ಜಾಣ್ಮೆ ಬಹುಹಿರಿದು. ತನ್ನ 'ನಿಬಂಧನೆ'ಗಳನ್ನು ಕೇಳಿ ಕೌಶಿಕ ತನ್ನನ್ನು ಮದುವೆಯಾಗುವ ಪ್ರಸಂಗವನ್ನೇ ದೂರಮಾಡುವನೆಂದು ಅಕ್ಕ ಭಾವಿಸಿರಬಹುದು. ಹೇಗಾದರೂ ಈಗ ಬಂದೊದಗಿದ ಕುತ್ತಿನಿಂದ ತಾನೂ ತನ್ನ ತಂದೆ ತಾಯಿಗಳೂ ಪಾರಾಗಬೇಕೆಂದೂ, "ಅತಿವಿಷಯಿಯೂ, ಅತಿಕೋಪಿಯೂ, ನಿಸ್ಸ್ಮರನೂ ಆದ ಕೌಶಿಕ ಸುಪ್ರಸನ್ನನಾಗಬೇಕೆಂದೂ ಅಕ್ಕ ಈ ಹಂಚಿಕೆಯನ್ನು ಹೂಡಿರಬೇಕು."

ಅಂದಲ್ಲಿ ಅಕ್ಕ ಲೌಕಿಕ ಬಂಧನಕ್ಕೊಳಗಾಗಿ ಕೌಶಿಕನನ್ನು ಲಗ್ನವಾಗಿ, ಮುಂದೆ ವೀರವಿರಾಗಿಣಿಯಾದಳೆಂದೇ ಹರಿಹರಾದಿ ಕವಿಗಳ ಅಭಿಪ್ರಾಯವಿದೆ. ಏಕೆಂದರೆ ಮಹಾದೇವಿ ಅಕ್ಕ ಈಗಾಗಲೇ ವಿದ್ವಾಂಸರ ಅಭಿಪ್ರಾಯದಂತೆ ಪಾರ್ವತಿಯ ಚಿತ್ಕಳೆ. ಅಂದು ಪಾರ್ವತಿಯ ತಾಮಸ ಕಳೆಯ 'ಮಾಯೆ' ಶಿವಾನುಭವವಿಲ್ಲದೆ ಅಲ್ಲಮನ ಗೆಲ್ಲಲಾಗದೆ ಕೈಲಾಸಕ್ಕೆ ಹಿಂದಿರುಗಿದ್ದಳು. ಇಂದು ಸಾತ್ವಿಕ ಸ್ವಭಾವದ ಮಹಾದೇವಿ ಜಗತ್ತಿನ ಮಾಯೆಯನ್ನು ಶಿವಾನುಭವ ಬೆಳಗಿನಿಂದ ಗೆದ್ದು ಆ ಮಹಾ ಬೆಳಗಿನಲ್ಲೇ ಬೆಳಗಿಹೋಗುತ್ತಾಳೆ.

ಅಂದ ಹಾಗೆ ಅಕ್ಕಮಹಾದೇವಿ ಪೂರ್ವದಿಂದಲೂ ಚೆನ್ನಮಲ್ಲಿಕಾರ್ಜುನನ ಹಂಬಲದಿಂದ ಜನಿಸಿದವಳೆಂದೂ, ಎಂದೆಂದಿಗೂ ಚನ್ನಮಲ್ಲಿಕಾರ್ಜುನನೇಗಂಡನೆಂದು ದೃಢ ನಿರ್ಧಾರದಿಂದ ಮುನ್ನಡೆದ ಧೀರ ವೀರಶೈವ ಮಹಿಳೆ. ಅಂತಹ ಶಿವಸುಂದರಿಯನ್ನು ಕೌಶಿಕನಂಥ ಕಾಮುಕನು ವರಿಸಲು ಮುಂದೆ ಬಂದಿರಬೇಕು ? ! ಅವಳನ್ನು ಪಡೆಯುವಲ್ಲಿ ರಾಜನಾದ ಕೌಶಿಕ ಏನೆಲ್ಲಾ ಉಪಟಳವನ್ನು ಕೊಟ್ಟಿರಲಿಕ್ಕೇಸಾಕು. ಅಂತೆಯೇ ಅಕ್ಕ ತನ್ನೊಂದು ವಚನದಲ್ಲಿ ಹೀಗೆ ಹೇಳಿಕೊಂಡಿದ್ದಾಳೆ.

"ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ
ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ
ಜಗದ ಜಂಗುಳಿಗಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ
ಚನ್ನಮಲ್ಲಿಕಾರ್ಜುನ ನೀನೊಡ್ಡಿದ ಮಾಯೆಯನಾರೂ ಗೆಲಲಾರರು"

ಎಂದು ಅಂದು ತನಗುಂಟಾದ ಸಂಕಟ ಸ್ಥಿತಿಯನ್ನು ವಚನ ರೂಪದಲ್ಲಿ ಹಾಡಿದ್ದಳೆನ್ನಬಹುದಾಗಿದೆ. ಮಾನ್ಯ ವಿಮರ್ಶಕರೂ, ಪ್ರಕಾಂಡ ಪಂಡಿತರೂ ಆದ ಎಸ್. ವಿ. ಪರಮೇಶ್ವರ ಭಟ್ಟರ ಅಭಿಪ್ರಾಯದಲ್ಲಿ; "ಈ ಭವಿಯಾದ ಕೌಶಿಕನ

ಸಹವಾಸದಿಂದಲೇ ಅಕ್ಕನು ಈ ಲೋಕದಲ್ಲಿ ಸಂಸಾರದ ಕೆಸರು ತುಳಿದಳು ಎಂದೂ, ತುಳಿದರೂ ಮಿಕ್ಕವರಂತೆ ಅಲ್ಲಿಯೇ ಇರದೆ ಕಾಲು ತೊಳೆದು ಹೊರಗೆ ಬಂದಳೆಂದೂ, ಅದೇ ವೈರಾಗ್ಯಕ್ಕೆ ಕಾರಣವಾಗಿ ಮೊದಲಿನ ಶಿವಭಕ್ತಿ ಕುಡಿವರಿದು ದಾಂಗುಡಿ ಯಿಟ್ಟು ಹಬ್ಬಿತೆಂದೂ-ಹೇಳುತ್ತಾರೆ.

ಅಕ್ಕನನ್ನು ವಲಿಸಲೋಸುಗ ಕೌಸಿಕ ರಸಿಕ ಸಖಿಯರನೇಕರನ್ನು ನಿಯೋಗಿಸಿ ನೋಡುತ್ತಾನೆ. ಅವರೆಲ್ಲಾ ಮಹಾದೇವಿ ಮುಂದೆ ಕೌಸಿಕನ ಗುಣಗಾನ ಮಾಡುತ್ತಾರೆ. ಆಗಲೂ ಆಕೆ ಕೌಶಿಕನನ್ನು ತಿರಸ್ಕರಿಸಿ ಚನ್ನಮಲ್ಲಿಕಾರ್ಜುನನ ಮೇಲೆ ತನಗಿದ್ದ ಅವಿರಳ ಪ್ರೇಮವನ್ನು ಕುರಿತು ಹೀಗೆ ಹಾಡಿವಳು."

"ಗಿರಿಯಲ್ಲದೆ ಹುಲು ಮೊರಡಿಯಲ್ಲಾಡುವುದೇ ನವಿಲು?
ಕೊಳನಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸೆ?
ಮಾಮರ ತಳಿತಲ್ಲದೆ ಸ್ವರ ಗೈಯುವದೆ ಕೋಗಿಲೆ?
ಪರಿಮಳವಿಲ್ಲದ ಪುಷ್ಪಕ್ಕೆಳಸವುದೆ ಭ್ರಮರ?
ಎನ್ನ ದೇವ ಚನ್ನಮಲ್ಲಿಕಾರ್ಜುನನಲ್ಲದೆ ಅನ್ಯಕ್ಕೆಳಸುವುದೇ
ಎನ್ನ ಮನ ಕೇಳಿರೆ **ಕೆಳದಿಯರಿರಾ.?"**

ಹೀಗೆ ಕೌಸಿಕನ ರಾಣೀವಾಸದಲ್ಲಿ ಅಕ್ಕನು ಅದೆಷ್ಟೋ ದಂದುಗದ ದಿನಗಳನ್ನೂ ನೂಕಿರಬೇಕಲ್ಲವೆ? ಅಂತೂ ಕೊನೆಗೊಂದು ದಿನ ಆಕೆಗೆ ಗುರುಲಿಂಗ ಕಾರುಣ್ಯ ದೊರೆಯಿತು. "ಗುರು ಕರುಣೋದಯವಾಗದ ಮೊದಲು ದೇಹಾತ್ಮರು ಜಡವಾಗಿರುತ್ತಾರಂತೆ, ಮುಬ್ಬುಮಿಂಚುಗಳ ಅಂಚಿನಲ್ಲಿ ತುಯ್ದಾಡುತ್ತಿರುತ್ತಾರಂತೆ. ಅದೇ ಗೌರವ ವೈವಾಹಿಕದ ಕಿರಣೋದಯವಾದರೆ ಜಡಾಜಡಗಳ ಕಣಕಣವೂ ಚೇತನಗೊಳ್ಳುತ್ತದೆಯಂತೆ. ಚೇತನ ಮಿಲನಕ್ಕೆ ಸಲ್ಲುವ ಸಾಹಿತ್ಯವಾಗಿ ಸಂಭ್ರಮಗೊಳ್ಳುತ್ತದೆಯಂತೆ, ಆಗ ಬುದ್ಧಿ ಭಾವಗಳು ಕ್ರಿಯೆ ಜ್ಞಾನಗಳು ಜಾಗ್ರತಗೊಳ್ಳುತ್ತವೆಯಂತೆ. ಪಿಂಡಾಂಡವೇ ಮದುವೆ ಮಂಟಪವಾಗಿ ಮದುವೆಯಾಗುತ್ತದೆ."

ಲೋಗರ ಕಣ್ಣಿಗೆ ಮಹಾದೇವಿ ಕೌಶಿಕನ ವಧುವಾಗಿ ಕಂಡರೂ ಅವಳ ಅಂತರಂಗದ ಜೆವಹಾರ ಬೇರೆಯಾಗಿತ್ತು; ಹೇಗೆಂದರೆ;

"ಶ್ರೀ ಗುರುಪಾದ ತೀರ್ಥವೇ ಮಂಗಳ ಮಜ್ಜನವೆನಗೆ
ವಿಭೂತಿಯೆ ಒಳಗುಂದದರಿಷಿಣವೆನಗೆ
ದಿಗಂಬರವೇ ದಿವ್ಯಾಂಬರವೆನಗೆ
ಶಿವಭಕ್ತರ ಪಾದರೇಣುವೆ ಅನುಲೇಪವೆನಗೆ

ರುದ್ರಾಕ್ಷಿಯೇ ಮೈದೊಡಿಗೆ ಎನಗೆ
ಶರಣರ ಪಾದಗಳೇ ತೊಂಡಿಲ ಬಾಸಿಗವೆನಗೆ
ಆನು ಚನ್ನಮಲ್ಲಿಕಾರ್ಜುನಂಗೆ ಮದುವಳಿಗೆ
ಎನಗೆ ಬೇರೆ ಶೃಂಗಾರವೇಕೆ ಹೇಳಿರವ್ವಾ?

ಅವಳ ದೃಷ್ಟಿಯಲ್ಲಿ;

"ಗುರುವೆ ತೆತ್ತಿಗನಾದ ಲಿಂಗವೆ ಮದುವಣಿಗನಾದ
ಆನು ಮದುವಳಿಗೆಯಾದೆನು
ವಸುಧೆಯ ಭಕ್ತರೆಲ್ಲರೂ ನಿಬ್ಬಣಿಗರಾದರು
ಕೊಟ್ಟರು ಸಾದೃಶ್ಯವಪ್ಪ ವರನ ನೋಡಿ
ಇದು ಕಾರಣ ಚನ್ನಮಲ್ಲಿಕಾರ್ಜುನನೆ ಗಂಡನೆನಗೆ

ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು"-ಎಂದು ಲೌಕಿಕದ ಗಂಡನ ಸಂಗವನ್ನು ಹಳಿದಿದ್ದಾಳೆ. ಈ ಪ್ರಸಂಗವನ್ನು ಕುರಿತು ಬಹಳಷ್ಟು ವಿದ್ವಾಂಸರು ಕೌಸಿಕನೊಂದಿಗೆ ಲಗ್ನದ ಕರಾರು ಆಗಿತ್ತೇ ವಿನಾ ಲಗ್ನವಾಗಿರಲಿಲ್ಲವೆಂದೂ ಬಹಳ ಜಾಣ್ಮೆಯಿಂದ ಹೇಳಿರುತ್ತಾರೆ. ಉದಾಹರಣೆಗೆ ಶ್ರೀ ಮಾತೆ ಮಹಾದೇವಿಯವರು ತಮ್ಮ 'ತರಂಗಿಣಿ' ಉದ್ಗ್ರಂಥದಲ್ಲಿ, ಅಕ್ಕ ಕೌಶಿಕನ ದೌರ್ಜನ್ಯಯುತ ವರ್ತನೆಗಾಗಿ ಲಗ್ನಕ್ಕೆ ಒಪ್ಪಿದ್ದರೂ ಜಾಣ್ಮೆಯಿಂದ ಅವನನ್ನು ಲಗ್ನವಾಗದೆ ಅವನ ಬಂಧನದಿಂದ ಬಿಡುಗಡೆಯಾದಳೆಂಬ ಪ್ರಸಂಗವನ್ನೇ ನಾವು ಗಮನಿಸಬಹುದು. ೫ ವಾರಗಳ ವ್ರತ ಮುಗಿಯುವವರೆಗೂ ಕೌಶಿಕ ಅಕ್ಕನನ್ನು ಲಗ್ನವಾಗುವದಿಲ್ಲ. ಅದರೊಳಗಾಗಿ ಅವನೇನಾದರೂ ಮೂರು ಷರತ್ತುಗಳನ್ನು ಮುರಿದನೆಂದರೆ ಅವನಿಗೂ ಅವಳಿಗೂ ಲಗ್ನದ ಮಾತೇಯಿಲ್ಲ! ಅಂತೆಯೇ ಆ ಐದು ವಾರಗಳ ವ್ರತದಲ್ಲಿ ಒಂದು ದಿವಸ ಅಕ್ಕ ಲಿಂಗ ಪೂಜೆಯಲ್ಲಿದ್ದಾಗ ಕೌಶಿಕ ಮುಟ್ಟಿಬಿಟ್ಟ. ಗುರುಲಿಂಗರ ಸೇವೆಗೆ ಅಡ್ಡಿ ಮಾಡಿದ. ಜಂಗಮರ ಗುಂಪನ್ನು ಬೈದು ಚದುರಿಸಿದ ಈ ತಪ್ಪುಗಳಿಂದ ಅಕ್ಕ ಮೊದಲಿನ ಷರತ್ತಿನಂತೆ ಕೌಶಿಕನ ಬಂಧನದಿಂದ ಬಿಡುಗಡೆ ಹೊಂದಿದಳು. ಅಲ್ಲಿಂದ ಕಲ್ಯಾಣಕ್ಕೆ ಬಂದಳು. "ಬಸವಣ್ಣನಿಂದ ಭಕ್ತಿಯ ಸಂಪ್ರದಾಯವನ್ನು ಅರಿತುಕೊಂಡು, ಅಲ್ಲಮ ಪ್ರಭುವಿನಿಂದ ಜ್ಞಾನ ಮಾರ್ಗವನ್ನು ಕಂಡುಕೊಂಡಳು. ಶಿವಾನುಭವ ಮಂಟಪದ ಶರಣ ಸಂದೋಹದಲ್ಲಿ ಅಕ್ಕನಿಗೂ ಅಲ್ಲಮನಿಗೂ ಭಕ್ತಿ-ಜ್ಞಾನ, ವೈರಾಗ್ಯಗಳ ವಿಷಯದಲ್ಲಿ ವಾದ ನಡೆದ ಪ್ರಸಂಗ 'ಶೂನ್ಯ ಸಂಪಾದನೆ' ಗ್ರಂಥದಿಂದ ತಿಳಿದು ಬರುತ್ತದೆ. ಕಲ್ಯಾಣಕ್ಕೆ ಬರುವ ಹೊತ್ತಿಗೆ ಅಕ್ಕಮಹಾದೇವಿ ಹೇಗಿದ್ದಳೆಂಬುದನ್ನು ಶ್ರೀ. ಜ.ಚ.ನಿ.ಯವರ ಮಾತುಗಳಲ್ಲಿ ಕೇಳಬೇಕು.

" ಅಕ್ಕ ಲೋಕದಲ್ಲಿದ್ದರೂ ಇಲ್ಲದಂತಿದ್ದಳು, ಲೋಕದ ಆಗು ಹೋಗುಗಳಿಗೆ ಅವಳು ಅಂಟಿಕೊಂಡಿರಲಿಲ್ಲ. ತುಪ್ಪವನ್ನು ತಿಂದ ನಾಲಿಗೆಯಂತಿದ್ದಳು. ಸಾಕಾರ ನಿರಾಕಾರ ಸಹಿತಳಾಗಿದ್ದಳು. ಸಾಕಾರದ ವಿಕಾರಕ್ಕೆ ಒಳಗಾಗದಂತಿದ್ದಳು. ಹೊರಗೆ ಬಳಸಿದ್ದರೂ ಒಳಗೆ ಬಳಸದಂತಿದ್ದಳು. ಹತ್ತರೊಳಗಿದ್ದರೂ ಹನ್ನೊಂದನೆಯವಳಾಗಿ ತನ್ನದೇ ಆದ ವ್ಯಕ್ತಿತ್ವವನ್ನು ವಿಶುದ್ಧವಾಗಿ ಉಳಿಸಿಕೊಂಡಿದ್ದಳು. ಹತ್ತರ ಸ್ವರೂಪ ಕೇವಲಾದ್ವೈತ. ಹನ್ನೊಂದರ ಸ್ವರೂಪ ಶಿವಾದ್ವೈತ. ಹನ್ನೊಂದಾದ ಆ ಮಹಾದೇವಿ ಶಿವಾದ್ವೈತ ಸ್ವರೂಪಳಾಗಿದ್ದಳು. ಅಂತೆಯೇ ಅಲ್ಲಮ ಪ್ರಭುಗಳು ಅಕ್ಕ ಮಹಾದೇವಿಯನ್ನು ಕುರಿತು ಈ ರೀತಿ ಪ್ರಶ್ನಿಸುತ್ತಾರೆ.

" ಸತಿ ನೀನು ಇತ್ತಲೇತಕ್ಕೆ ಬಂದೆಯವ್ವಾ, ಸತಿಯೆಂದರೆ ಮುನಿವರು ಎಮ್ಮ ಶರಣರು. ನಿನ್ನ ಪತಿಯ ಕುರುಹ ಹೇಳಿದರೆ ಬಂದು ಕುಳ್ಳಿರು, ಇಲ್ಲದಿದ್ದರೆ ತೊಲಗು ತಾಯೆ." ಈ ರೀತಿ ಪ್ರಶ್ನೆ ಕೇಳಿದ್ದೇಕೆಂದರೆ ಅನುಭವ ಮಂಟಪಕ್ಕೆ ಸೇರಬಯಸುವರು ಮೊದಲು ಸಂಸಾರದ ಕಾಳಿಕೆಯನ್ನು ಕಿತ್ತೊಗೆಯಬೇಕೆಂಬ ನಿಯಮವಿತ್ತು. ಇಂಥಾ ಪ್ರಶ್ನೆಗೆ ಸಿಗುವ ಉತ್ತರದಿಂದ ವ್ಯಕ್ತಿಯ ಮನೋ ಇಂಗಿತವನ್ನು ಅರಿಯಬಹುದಾಗಿತ್ತು. ಅಂಥ ಪ್ರಶ್ನೆಗೆ ಅಕ್ಕನ ಉತ್ತರ ಹೀಗಿದೆ. "ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ. ಚೆನ್ನಮಲ್ಲಿಕಾರ್ಜುನ ಗಂಡನೆನಗೆ ಮಿಕ್ಕಿದ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯಾ ಪ್ರಭುವೇ." ಅಲ್ಲಿ ಅಲ್ಲಮನ ಅಗ್ನಿಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಸಿದ್ಧಿಸಾಧಕಳಾಗಿ ಶ್ರೀಶೈಲದ ಕದಳಿಬನಕ್ಕೆ ಹೋಗುತ್ತಾಳೆ. ಅಲ್ಲಿಯೇ ಅವಳ ಆತ್ಮ ಹಂಸ ಪರಮಾತ್ಮ ಪರಂಜ್ಯೋತಿ ಸರಸಿಯಲ್ಲಿ ಚೆನ್ನಮಲ್ಲಿಕಾರ್ಜುನ ಹೃದಯಕಮಲದಲ್ಲಿ ಅಡಗಿದ್ದು.

ಅಕ್ಕನ ಪುರಾಣಗಳನ್ನು ಬರೆದ ಕವಿಗಳಲ್ಲಿ ಕೆಲವರು ಆಕೆಗೆ ಮದುವೆಯಾಗಿತ್ತೆಂದೂ, ಕೆಲವರು ಆಗಿರಲಿಲ್ಲವೆಂದೂ ಹೇಳುತ್ತಾರೆ. ಮಹಾದೇವಿ ಅಕ್ಕನ ಜೀವನ ಚರಿತ್ರೆ ಬಗ್ಗೆ ಹೆಚ್ಚು ಮಾಹಿತಿ ಸಿಗುವುದು 'ಶೂನ್ಯ ಸಂಪಾದನೆಯಲ್ಲಿ' ಇವುಗಳಲ್ಲಿ ಐದು ಪರಿಷ್ಕರಣ ಹೊಂದಿದ ಗ್ರಂಥಗಳು. ಅವುಗಳಲ್ಲೆಲ್ಲಾ ಅಕ್ಕನ ಚರಿತ್ರೆಯನ್ನು ಕುರಿತ ಭಾಗ ಹೆಚ್ಚು ವಿಸ್ತಾರವಾಗಿರುವ ಗ್ರಂಥವೆಂದರೆ ಹಲಗೆಯ ದೇವರ "ಶೂನ್ಯ ಸಂಪಾದನೆ." ಅಕ್ಕನಿಗೆ ಮದುವೆಯಾಗಿತ್ತೆ? ಇಲ್ಲವೆ? ಎಂಬ ಸಮಸ್ಯೆಗೆ ಸ್ಪಷ್ಟವಾದ ಉತ್ತರ ಈ ಶೂನ್ಯಸಂಪಾದನೆಯಿಂದಲೇ ದೊರೆಯುವದೆಂದು ವಿದ್ವಾಂಸರ ಅಭಿಪ್ರಾಯವಿದೆ.

ಉದಾಹರಣೆಗೆ "ಅಕ್ಕ" ದೇವಿಯರಿತ್ತ ಅವಧಿ ಬರೆ ಕೌಶಿಕನೆಂಬ ರಾಯಂಗೆ ವಧುವಾಗಿ ನೀರು ತಾವರೆಯಂತೆ ಕಣ್ಣು ಕಾಡಿಗೆಯಂತೆ, ನೆಯಿನಾಲಗೆಯಂತೆ ಗಾಳಿಧೂಳಿನಂತೆ ಆ ಸಂಸಾರದೊಳಗಿದ್ದೂ ಇಲ್ಲದೆ ತನುವನೇ ಸಂಸಾರಕ್ಕೆ ಎರವಾಗಿ

ಕೊಟ್ಟು ಮನಸೆಚ್ಚಿ ಲಿಂಗದಲ್ಲಿದ್ದು ಗುರುಚರಲಿಂಗದಲ್ಲಿ ಪರಮ ದಾಸೋಹದಲ್ಲಿ ಭಕ್ತಿಯ ಮಾಡುವಲ್ಲಿ ಆತ ಕೊಟ್ಟ ಭಾಷೆಗೆ ಉತ್ತರವಂ ಮಾಡಿ ಹೋಗುತ್ತಿರೆ ಸೀರೆಯಂ ಹಿಡಿದೆಳೆಯ ಬಿಟ್ಟು ದಿಗಂಬರೆಯಾಗಿ ದಿಗಂಬರನ ನೆನವುತ್ತ "ಹೊರಹೊರ ಟಳೆಂದು ಹೇಳಿದೆ. ಮಿಕ್ಕ ಪರಿಷ್ಕರಣಗಳಲ್ಲಿ "ಭವಿಯ ಸಂಗಮಂ ತೊರೆದು" ಅಂಗ ಸಂಗಮಂ ತೊರೆದು" ಲಿಂಗ ಧಾರಣವಾಗಲೊಲ್ಲೆನೆಂದ ಭವಿಯ ಸೋಂಕದೆ ಅಂಗ ಸಂಗಮಂ ತೊರೆದು" ಎಂದಿಷ್ಟೇ ಹೇಳಿ ಮದುವೆ ವಿಚಾರವನ್ನು ತೇಲಿಸಿಯೋ ನಿಷೇಧಿಸಿಯೋ ಮುಗಿಸಿಬಿಟ್ಟಿದ್ದಾರೆ.

ಅಕ್ಕನವರು ಉಡುತಡಿಯಲ್ಲಿ ಮನ್ನೆಯನಾಗಿದ್ದ ಕೌಶಿಕನನ್ನು ಮದುವೆಯಾಗಿದ್ದಳೆಂದು ಹರೀಶ್ವರನೂ ಹೇಳುತ್ತಾನೆ. ಆದರೆ ಅವೆಲ್ಲಾ ಸತ್ಯವೆಂದು ವಿದ್ವಾಂಸರು ನಂಬುತ್ತಿಲ್ಲ. ಕೌಶಿಕನ ಅರಮನೆಯಲ್ಲಿ ಲಿಂಗಪೂಜಾ ನಿರತಳಾಗಿದ್ದಾಗ ಭಕ್ತಿ ಪೂರಿತ ಸ್ತೋತ್ರಪದಗಳನ್ನು ಹಾಡುತ್ತಲಿದ್ದಳೆಂದು ಹರಿಹರನು ಹೇಳಿದ್ದಾನೆ.

"ಗೀತದೊಳಗೆ ನೂತ್ನಭಕ್ತಿ ಜಾತವಾಗಲೋತುಪಾಡಿ
ಗೀತದೊಳಗೆ ಶರ್ವನರಿವು ತಿರಹು ಗುಡದೆ ತೀವಿ ಪಾಡಿ"

ಎಂಬ ಪ್ರಾರ್ಥನೆಯಲ್ಲಿ ಆಕೆ "ಭವಿಯ ಸಂಗವಣ್ಬುದೆಂದು" ಹಾಡಿದ್ದರಿಂದ, "ಭವಿಯ ಸಂಗವನ್ನು ನೀಗಿಸು" "ಎನ್ನುವುದಕ್ಕೆ ಅಕ್ಕನ ಒಂದು ವಚನ ಇದ್ದಿರಬೇಕೆಂದೂ, ಆ ವಚನ ಸಿಕ್ಕಿದಂದು ಅಕ್ಕನ ಮದುವೆಯ ಪ್ರಶ್ನೆ ಇತ್ಯರ್ಥವಾಗುತ್ತದೆ. ಅಕ್ಕನು ಬರೆದ ವಚನಗಳು ಸಮಗ್ರವಾಗಿ ಸಂಕಲಿತವಾದ ಓಡಿ ಹೊತ್ತಿಗೆಯೊಂದು ಈವರೆಗೆ ಎಲ್ಲಿಯೂ ದೊರೆತಿಲ್ಲವಾದ್ದರಿಂದ, ಈಗ ಸಿಕ್ಕಿದಷ್ಟ ವಚನಗಳಿಂದ ಏನನ್ನೂ ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲದಾಗಿದೆ. ಆದರೂ ಈಗ ದೊರೆಯುವಷ್ಟೇ ವಚನಗಳನ್ನು ನೋಡಿದರೆ ಕೌಶಿಕ ಎಂಬ ನಲ್ಲನ ಹೆಸರನ್ನು ಆಗ ಹೇಳದಿದ್ದರೂ ಸಾವ ಕೆಡುವ ಯಾವುದೋ ಒಂದು ಈ ಪ್ರಪಂಚದ ಪುತ್ಥಳಿಯೊಡನೆ ಕೂಡುವ ದುರ್ವಿಧಿ ಆಕೆಗೆ ಒದಗಿರಬೇಕು ಎನಿಸುತ್ತದೆ. ಆ ಪುತ್ಥಳಿಯೊಡನೆ ಕೆಲಕಾಲ ಬಾಳಿ, ಆ ಕಷ್ಟದ ಮೂಸೆಯಲ್ಲಿ ಅವಳ ಆತ್ಮ ಕುದಿದು ಕರಗಿ ಕಾಳಿಕೆ ಕಳೆದು ಚಿನ್ನವಾಯಿತು. "ಆ ಚಿನ್ನ ಮುಂದೆ ಚೆನ್ನಮಲ್ಲಿಕಾರ್ಜುನನ ಕೊರಳ ಕಂಠಿಕೆಯಾಯ್ತು" ಎಂಬ ಎಸ್.ವ್ಹಿ. ಪರಮೇಶ್ವರಭಟ್ಟರ ಅಭಿಪ್ರಾಯವನ್ನೇ ನಾವು "ಮದುವೆ ವಿವಾದದಲ್ಲಿ" ಸ್ವೀಕರಿಸಬಹುದು.

ಅಕ್ಕನ ಕೊರಳ ತಾಳಿಯ ಬಗ್ಗೆ ಇಲ್ಲದ ಸಲ್ಲದ ತಕರಾರು, ವಾದವಿವಾದಗಳನ್ನು ಮಾಡುವುದಕ್ಕಿಂತ, ಪ್ರಮಾಣಗ್ರಂಥಗಳನ್ನು ಈ ಸಣ್ಣ ವಿಚಾರಕ್ಕಾಗಿ ಹಳಿಯುವುದಕ್ಕಿಂತ, ಮಾದೇವಿಯ ಸೀಮಾತೀತ ನಿಜಶಕ್ತಿಯನ್ನು, ಸನ್ಮಾರ್ಗಗಾಮಿ

ತ್ವವನ್ನು, ವೀರ ವಿರಾಗಿಣಿಯ ಹೊಸವಿಕ್ರಮವನ್ನು, ಭಕ್ತಿ, ಜ್ಞಾನ, ವಿರಕ್ತಿಗಳು ಮುಪ್ಪುರಿಗೊಂಡ ಭವ್ಯಶಕ್ತಿಯನ್ನು, ಕಾಯ ಕರಣೇಂದ್ರಿಯಗಳನ್ನು ಕರೆದೊಯ್ದು ಬೆಳ್ಳಂ ಬೆಳಗಿಸಿದ ಮಹಾಬೆಳಗನ್ನು, ಅವಳ ನಿತ್ಯ ಸತ್ಯತೆಯನ್ನು, ಹರತ್ವವನ್ನು, ಭಕ್ತತ್ವವನ್ನು, ಲಿಂಗಸಂಗದ ನಿರಂತರತೆಯನ್ನು, ಓಂಕಾರ ಸ್ವರೂಪವನ್ನು; ಶ್ರದ್ಧೆಯ ಸಾತತ್ಯವನ್ನು ತ್ಯಾಗಯೋಗವನ್ನು, ನಾವು ಗಮನಿಸೋಣ. ಶೂನ್ಯ ಸಂಪಾದನೆಯಂಥವುಗಳಲ್ಲಿಯ ವಿಚಾರವನ್ನು ನಾವು 'ಹಂಸಕ್ಷೀರ ನ್ಯಾಯ' ದಂತೆ ಪಾಲಿಸೋಣ.

ಪ್ರಮಾಣ ಗ್ರಂಥಗಳು

೧ ಮಾದೇವಿ-ಸೂರ್ಯ ಸಿಂಹಾಸನಾಧೀಶ್ವರ ಶ್ರೀ. ಜ. ಚ. ನಿ.

೨ ಮಹಾದೇವಿ ಅಕ್ಕನ ರಗಳೆ- ಹರಿಹರ, (ಸದ್ಧರ್ಮದೀಪಿಕೆ ಗ್ರಂಥಮಾಲೆ)

೩ ಅಕ್ಕಮಹಾದೇವಿ- ಶ್ರೀ. ಎಸ್. ವ್ಹಿ. ಪರಮೇಶ್ವರಭಟ್ಟರು, ಎಂ. ಎ.

೪ ಹರಿಹರ- ಡೊ. ಲ. ನರಸಿಂಹಾಚಾರ್ಯ, ಎಂ. ಎ.

೫ ಹರಿಹರ ಕವಿಯ ಮಹೋನ್ನತ ವಿಚಾರಗಳು- ಬಿ. ಸಿ. ಜವಳಿ.

೬ ತರಂಗಿಣಿ- ಶ್ರೀ ಮಾತೆ ಮಹಾದೇವಿ.

೭ Lingayatism- —ಡಿ—

೮ ಕನ್ನಡ ಸಾಹಿತ್ಯ ಚರಿತ್ರೆ- ರಂ. ಶ್ರೀ. ಮುಗಳಿ, ಎಂ. ಎ., ಬಿ. ಟಿ., ಡಿ.ಲಿಟ್.

೯ ಪ್ರಭುಲಿಂಗಲೀಲೆ- ಚಾಮರಸ. ಸಂ. ಪ್ರೊ. ಶಿ. ಶಿ. ಬಸವನಾಳ, ಎಂ. ಎ.

೧೦ ಮಹಾದೆವಿಯಕ್ಕನ ವಚನಗಳು- ಸಂ. ಡಾ. ಫ. ಗು. ಹಳಕಟ್ಟಿ.

೧೧ ಶೂನ್ಯಸಂಪಾದನೆ- ಗೂಳೂರು ಸಿದ್ಧವೀರಣ್ಣೊಡೆಯರು.

ಸಾಹಿತ್ಯದಲ್ಲಿ ನಿರೂಪಿತ ಕನ್ನಡಿಗರ ಶೋಷಣೆಯ ಸ್ವರೂಪ

ಡಾ॥ ಸರೋಜಿನಿ ಪಾ. ಚವಲಾರ

ಪ್ರಾಚೀನ ಕಾಲದಲ್ಲಿ ಕನ್ನಡಿಗರ ಶೋಷಣೆಯನ್ನು ಪ್ರಕಟಿತ ಸಾಹಿತ್ಯದ ಹಿನ್ನಲೆಯಲ್ಲಿ ಗುರುತಿಸಲು ಸಾಧ್ಯವಿದೆ. ಸಾಹಿತ್ಯವು ಯುಗದ ಧ್ವನಿ, ಅದರ ಗಿರಣಿಗೆ ಕಚ್ಚಾ ಸರಕು ಪೂರೈಸುವ ಗಣಿ ಮಾನವ ಜೀವನ ಮತ್ತು ಪ್ರಕೃತಿ: ಪ್ರತಿಯೊಂದು ಯುಗದ ಸಮಾಜ ವ್ಯವಸ್ಥೆ ವರ್ಣ ಪದ್ಧತಿ, ಆರ್ಥಿಕ ಪರಿಸ್ಥಿತಿ, ರಾಜಕೀಯ ಸಂಘಟನೆಗಳಲ್ಲಿ ಮಾನವ ಜೀವನವನ್ನು ಪ್ರಭಾವಿಸಿ ಸಾಹಿತ್ಯದಲ್ಲಿ ಪ್ರತಿಫಲಿಸುತ್ತವೆ.

ಅಸ್ಪೃಶ್ಯ ದೀನದಲಿತರ ಶೋಷಣೆ ಅಸಾಹಯಕರ ಅಸಾಹಯಕತೆಯ ದುರುಪಯೋಗ ಪಡೆದು ಸಮಾಜದಲ್ಲಿ ಉಚ್ಚ ವರ್ಗದವರು ಎಂದಿನಿಂದಲೂ ಶ್ರೇಷ್ಠರೆಂದು ಮೆರೆಯುತ್ತಾರೆ. ಕನ್ನಡ ಸಾಹಿತ್ಯದ ಆರಂಭ ಕಾಲದಲ್ಲಿ ತ್ರಿಪದಿ, ಏಳೆ, ಚಿತ್ತಾಣ, ಬೆದಂಡೆಗಬ್ಬಗಳನ್ನು ಅನಾಗರಿಕರ ಗೋಷ್ಠಿಯೆಂದು ಕರೆಯಲಾಗಿದೆ. ದೇವ ಭಾಷೆಯೆನಿಸಿದ ಸಂಸ್ಕೃತವನ್ನು ಅನುಸರಿಸುವದು ಗೌರವದ ವಿಷಯವಾಗಿತ್ತು. ಇಂದು ನಮ್ಮ ದೇಶದಲ್ಲಿ ಇಂಗ್ಲೀಷ ಭಾಷೆಗಿರುವ ಸ್ಥಾನ ಆಗ ಸಂಸ್ಕೃತಕ್ಕಿದ್ದ ಕಾರಣ ದೇಶ ಭಾಷೆಗಳೆಲ್ಲ ಅದರಿಂದ ಪ್ರಭಾವಿತವಾಗಿದ್ದ ಕಾಲದಲ್ಲಿ ಕನ್ನಡ ಕವಿಗಳು ಸಂಸ್ಕೃತ ಭೂಯಿಷ್ಠ ಶೈಲಿಯನ್ನು ಅಳವಡಿಸಿಕೊಂಡದ್ದು ಸೋಜಿಗವಲ್ಲ. ಕನ್ನಡಿಗರು ಗುಪ್ತರ ಮಾಂಡಲಿಕರಾಗಿದ್ದಾಗ ಆಳರಸರ ಒಲವಿಗೆ ತಕ್ಕಂತೆ ತಾಳಹಾಕಲು ಪ್ರಾಕೃತವನ್ನು, ಸಂತ ಜ್ಞಾನೇಶ್ವರ ಮತ್ತು ಶಿವಾಜಿಯ ಪ್ರಭಾವದಿಂದ ಮರಾಠಿಯನ್ನು, ಮೊಗಲರ ದಬ್ಬಾಳಿಕೆಯಿಂದ ಉರ್ದು ಭಾಷೆಯನ್ನು ಅನುಸರಿಸ ತೊಡಗಿದುದು ಅವರ ಶೋಷಣೆಯ ದ್ಯೋತಕವಾಗಿದೆ.

ಸಾಹಿತಿಗಳು ಸಂಪತ್ತು ಕೀರ್ತಿಗಾಗಿ ಅರಸರ ಪ್ರಭುತ್ವನ್ನೊಪ್ಪಿ ನಡೆಯುವದು ಸಂಪ್ರದಾಯವೆಂಬಷ್ಟು ನಮ್ಮಲ್ಲಿ ಮುಂದುವರಿಯಿತು. ಇತರ ಭಾಷೆಗಳನ್ನು

---

*ರಕ್ಷಕ್ಯಸ್ಮಾತ್ ರಕ್ಷಪಾಲನೆ (ಭ್ವಾ. ಪ. ಸೆ.) ರಕ್ಷತಿ ಅಸ್ಮಾತ್ ಇತಿ ರಾಕ್ಷಸಃ

*"ನಾಮಲಿಂಗಾನುಶಾಸನಂ" (ಅಮರಕೋಶ) ಪು ೬೫ ಸಂ. ಪಂಡಿತ ಶಿವದತ್ತ

ಮೆಚ್ಚಿಕೊಂಡಂತೆ ಕಾವ್ಯ ವಸ್ತುಗಳನ್ನು ಕಥಾನಾಯಕರನ್ನು ತಮ್ಮ ಧರ್ಮ-ತತ್ವ ''ಒಲವು-ನಿಲವುಗಳಿಗೆ ಹೊಂದಿಸಿಕೊಂಡಿದ್ದರೂ ಇದು ಶೋಷಣೆಯ ಮತ್ತೊಂದು ಮುಖವೇ ಸರಿ.

ರಾಮಾಯಣ ಮಹಾಭಾರತಗಳು ಆರ್ಯರು ದ್ರಾವಿಡ ಜನಾಂಗವನ್ನು ಶೋಷಿಸಿದ ಕಥೆಗಳೆ ಆಗಿವೆ. ಯಜ್ಞವನ್ನು ಆದಕ್ಕೆ ಬಲಿಕೊಡುವ ಆರ್ಯರಸದ್ಧತಿ ಯನ್ನು ಪ್ರತಿಭಟಿಸಿ ಜನತೆಯನ್ನು ರಕ್ಷಿಸಲು ಹವಣಿಸಿದ ದ್ರಾವಿಡರನ್ನು ರಾಕ್ಷಸ ರೆಂದು ಕರೆದವರು ಆರ್ಯರು. ಆರ್ಯರಿಗಿಂತ ದೇಹ ದಾರ್ಢ್ಯದಲ್ಲಿ ಬಲಿಷ್ಠರಾದ ದ್ರಾವಿಡರನ್ನು ಮಾನವರಂತೆ ಕಾಣಲು ಆರ್ಯರು ಒಪ್ಪಲಿಲ್ಲ. ತಮ್ಮ ದೌರ್ಬಲ್ಯ. ವನ್ನು ಧರ್ಮದ ಹೆಸರಿನ ಮರೆಯಲ್ಲಿಟ್ಟು ಗೆಲುವನ್ನು ಮೆರೆಯಲು ಹೊರಟಿದ್ದರು. ವಾಲಿ ವಧೆಯಂತಹ ಪ್ರಸಂಗವು ಅವರ ಕುಟಿಲ ಗುಣವನ್ನು ಅಡಗಿಸದೇ ಹೋಯಿತು. ಯುದ್ಧ ನೀತಿಗೆ ವಿರೋಧವಾಗಿ ಬೆನ್ನಲ್ಲಿ ಇರಿದರೂ ಪಾಪ ತಟ್ಟದ ರಾಮನು ಸೀತೆಯಲ್ಲಿ ಮೋಹ ಪರವಶನಾಗಿ ಅವಳನ್ನು ಅಪಹರಿಸಿದ ಮಾತ್ರಕ್ಕೆ ಸಾವಿಗೀಡಾದ ರಾವಣನ ಕಥೆ ಒಂದು ಜನಾಂಗದ ಶೋಷಣೆಯ ಪ್ರತೀಕ.

ಸ್ತ್ರೀಯರ ಶೋಷಣೆ :

ಜನಾಂಗದ ಅರ್ಧಭಾಗವಾಗಿರುವ ಸ್ತ್ರೀಯರ ಮೇಲೆ ಶೋಷಣೆ ನಿರಂತರ-ವಾಗಿ ನಡೆದು ಬಂದಿದೆ. ಮನು ಮಹರ್ಷಿಯ ನುಡಿಯಂತೆ ಸ್ತ್ರೀಗೆ ಜೀವನದಲ್ಲಿ ರಕ್ಷಕನಾಗಬೇಕಾದ ಪತಿ ಆರ್ಯ ಶ್ರೇಷ್ಠ ರಾಮನು, ಅಗ್ನಿಪರೀಕ್ಷೆ ಮಾಡಿ ಸ್ವೀಕರಿಸಿ ನಂತರ ತುಂಬಿದ ಬಸುರಿಯಾದ ಸೀತೆಯನ್ನು ಏಕಾಂಗಿಯಾಗಿ ದಟ್ಟ ಡವಿಯಲ್ಲಿ ಬಿಟ್ಟಿದ್ದು ಸ್ತ್ರೀ ಸಮಾಜದ ಶೋಷಣೆಯ ದ್ಯೋತಕ.

ಮಹಾಭಾರತದ ಕಥೆಯನ್ನು ಪಂಪನಿಂದ ಕುವೆಂಪುವರೆಗೆ ಕನ್ನಡ ಕವಿಗಳು ಬಳಸಿಕೊಂಡಿದ್ದಾರೆ. ಸ್ತ್ರೀ ಶೋಷಣೆಯ ಚಿತ್ರಗಳನ್ನು ಎತ್ತಿ ಹಾಕಲು ಆಗದಿರಲ ಕಾರಣವೆಂದರೆ ಅಂದಿನ ಮೌಲ್ಯಗಳನ್ನು ಎಲ್ಲರೂ ಒಪ್ಪಿಕೊಂಡು ಬಂದದ್ದೆ ಇರಬೇಕು. ಎರಡು ಸಾವಿರ ವರ್ಷಗಳಿಗಿಂತ ಹೆಚ್ಚು ಕಾಲ ಪುರುಷ ಸಮಾಜವು ಸ್ತ್ರೀಯರ ಮೇಲೆ ತನ್ನ ದಬ್ಬಾಳಿಕೆಯನ್ನು ನಡೆಸುತ್ತಾ ಬಂದಿದೆ. ಎನ್ನಲು ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಕುಂತಿದೇವಿ ಕನ್ಯೆಯಾಗಿದ್ದಾಗ ಪಡೆದ ಕರ್ಣನನ್ನು ಹೀನಕುಲಜನೆಂದು ಜರೆಯುವಾಗ ಅರ್ಜುನ ದ್ರೋಣರಿಗೆ ಕುಂತಿ ಏನೂ ಹೇಳದೆ ಎಲ್ಲರಂತೆ ಕೈಕಟ್ಟಿ ಕುಳಿತುಕೊಳ್ಳುತ್ತಾಳೆ. ತನ್ನ ಕರುಳಿನ ಕುಡಿಗಿಂತ ಅವಳಿಗೆ ಸಮಾಜದ ಭೀತಿ ಹೆಚ್ಚಾಗಿರಬೇಕಾದರೆ ಅಂದು ಸಮಾಜದ ಕಟ್ಟಳೆಗಳು ಎಷ್ಟು ಕಠೋರವಾಗಿರಬೇಕೆಂಬುದು ಸ್ಪಷ್ಟವಾಗಿದೆ ಗಂಡರೈವರು ಸೇರಿ ತನ್ನ ಸಂಪತ್ತಿಯನ್ನೆಲ್ಲ ಸೋತಂತೆ ದ್ರೌಪದಿಯನ್ನು ಸೋತಾಗ

ಕೌರವರ ದೌರ್ಜನ್ಯವನ್ನು ಕಂಡೂ ಕೇಂಡೂ ಸುಮ್ಮನುಳಿದ ಪ್ರಸಂಗದಿಂದ ಅಂದು ಗಂಡಸಿಗೆ ಹೆಂಡತಿ ಒಂದು ವಸ್ತುವೆಂದು ಒಪ್ಪಿದಂತಾಯಿತು. ಹರಿಶ್ಚಂದ್ರನು ಹೆಂಡತಿಯನ್ನು ಮಾರಿ ಸಾಲ ತೀರಿಸಿದ ಪ್ರಸಂಗವು ಹೆಣ್ಣಿನ ಶೋಷಣೆಯನ್ನು ನಮ್ಮ ಸಮಾಜ ಪದ್ಧತಿಯು ಪ್ರೋತ್ಸಾಹಿಸುತ್ತ ಬಂದಿದೆಯೆಂಬುದಕ್ಕೆ ಪೂರಕವಾಗಿದೆ.

ಸಂಸ್ಕೃತ, ಕನ್ನಡ ಕವಿಗಳಂತೆ ಜಗತ್ತಿನ ಎಲ್ಲ ಭಾಷೆಗಳ ಸಾಹಿತ್ಯವು ಮಹಿಳೆಯನ್ನು ಅಡಿಯಿಂದ ಮುಡಿಯವರೆಗೆ ಬಣ್ಣಿಸುವದರಲ್ಲಿ ಸಾರ್ಥಕತೆಯನ್ನು ಪಡೆದಿವೆ. ಮಹಿಳೆಯ ಪ್ರಕೃತಿದತ್ತ ಸೌಂದರ್ಯವನ್ನು ಹೊರನೋಟದಲ್ಲಿ ಬಯಸಿ ಬಣ್ಣಿಸುವ ಪುರುಷ ವರ್ಗವು ಅವಳ ಅಂತರಂಗದ ಚೆಲುವಿನ ಕಡೆಗೆ ದೃಷ್ಟಿಸುವದು ವಿರಳ. ಮಾನಸಿಕ-ದೈಹಿಕವಾಗಿ ಹೆಚ್ಚು ದುರ್ಬಲವಾಗಿರುವ ಪುರುಷನು ಮಹಿಳೆಯನ್ನು ಅಬಲೆಯೆಂದು ಕರೆದು ತನ್ನ ದೋಷವನ್ನು ಅವಳ ಮೇಲೆ ಆರೋಪಿಸುತ್ತಾ ಬಂದಿದ್ದಾನೆ. ದ್ರೌಪದಿಯನ್ನು ದ್ಯೂತದಲ್ಲಿ ಸೋತಂತೆ ಹೆಣ್ಣನ್ನು ಸಂಪತ್ತಿಯಂತೆ ಸೋಲುವ, ನಿರ್ಜೀವ ವಸ್ತುವಿನಂತೆ ಕೊಳ್ಳುವ, ಕಾಣಿಕೆಯಾಗಿ ಪಡೆಯುವ ಪರಂಪರೆಯನ್ನು ಸಾಹಿತ್ಯದಲ್ಲಿ ಓತಪ್ರೋತವಾಗಿ ಕಾಣಬಹುದು. ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಹೆಣ್ಣಿನ ಮೇಲೆ ಪ್ರಭುತ್ವ ಸಾಧಿಸುವದನ್ನೇ ತನ್ನ ಗುರಿಯಾಗಿಸಿಕೊಂಡಿರುವ ಪುರುಷನು ಸಮಾಜಿಕ ಜೀವನದಲ್ಲಿ ಅವಳನ್ನು ಕನಿಷ್ಠ ರೀತಿಯಲ್ಲಿ ಕಂಡು, ಹಲವು ವಿಧದಲ್ಲಿ ಶೋಷಿಸಲು ಕಾರಣನಾಗುವದನ್ನು ಸಾಹಿತ್ಯವು ಪ್ರತಿಫಲಿಸುತ್ತದೆ.

ಶಿವಶರಣರ ಕ್ರಾಂತಿ

ಕನ್ನಡ ನಾಡಿನ ಹನ್ನೆರಡನೆಯ ಶತಮಾನದ ಸಾಹಿತ್ಯವು ಅಂದಿನ ಜನತೆಗೆ ಶೋಷಣೆಯ ವಿಶಿಷ್ಟ ಮುಖವನ್ನು ಹೊರಗೆಡಹುತ್ತದೆ. ಶರಣರು ಕ್ರಾಂತಿಕಾರಿ ತತ್ವಗಳನ್ನು ಬಿತ್ತಿ ಸಮಾಜದಲ್ಲಿ ತುಂಬಿದ ಹಲವು ಜಾಡ್ಯಗಳನ್ನು ಹೊಡೆದೋಡಿಸಲು, ಜನಸಾಮಾನ್ಯರನ್ನು ಮೇಲಕ್ಕೆತ್ತಲು ಕಂಕಣಬದ್ಧರಾಗಿ, ಸಂಸ್ಕೃತವನ್ನೇ ಜೀವರಸದಂತೆ ಉಸಿರಾಡಿದ ಪುರೋಹಿತ ಪಂಡಿತವರ್ಗವನ್ನು ವಿರೋಧಿಸಿ, ಮಾತೃಭಾಷೆಯೆ ಪ್ರಾಣವಾಗಿರುವ ಪಾಮರ ವರ್ಗದ ಪರವಾಗಿ ಜನನುಡಿಯಲ್ಲಿ ಸಾಹಿತ್ಯವನ್ನು ರಚಿಸಿ ಕನ್ನಡಿಗರ ಜಂಗು ಜೀವನಕ್ಕೆ ವಜ್ರಸಾಣೆ ಹಿಡಿದು ಜಾಜ್ವಲ್ಯಮಾನಗೊಳಿಸಿದ ಶರಣರ ಹೋರಾಟವು ಅಂದಿನ ಎಲ್ಲ ವಿಧದ ಶೋಷಣೆಯನ್ನು ಎತ್ತಿ ತೋರುತ್ತದೆ.

ಸಮಾಜದ ಸರ್ವತೋಮುಖ ಏಳಿಗೆಯನ್ನು ಬಯಸಿ, ಶರಣರ ಸಂಘಟನೆಯ ಕೇಂದ್ರಶಕ್ತಿಯಾಗಿ ಕಾರ್ಯಗೈದ ಬಸವಣ್ಣನನ್ನು ಸಾವಿರಾರು ವರ್ಷ

ಗಳಿಂದ ಶೋಷಣೆಗೊಳಗಾದ ದಲಿತ ವರ್ಗವು ಇಂದಿಗೂ ಮರೆಯುವಂತಿಲ್ಲ. ಇವರ ಸಾಹಿತ್ಯದಲ್ಲಿ ಒಡೆದು ಕಾಣುವ ಗುಣಗಳಲ್ಲಿ ಜಾತಿ–ವರ್ಗಗಳ ಭೇದವಿಲ್ಲ. ಉತ್ಥಿತರು–ಪತಿತರೆಂಬ ತಾರತಮ್ಯವಿಲ್ಲ. ಹೆಣ್ಣುಗಂಡೆಂಬ ಆಕ್ಷೇಪಣೆಯಿಲ್ಲ, ಸನ್ಯಾಸಿ–ಸಂಸಾರಿಗಳೆಂಬ ಅಂತರ ಮೊದಲೇ ಇಲ್ಲ. ಪತಿತೋದ್ಧಾರ ಕಾಯಕವೇ ಕೈಲಾಸ, ಸ್ತ್ರೀ ಸಮಾನತೆ, ಪ್ರವೃತ್ತಿ ಮಾರ್ಗಗಳೆಂಬ, ಚತುರ್ಭುಜಗಳನ್ನು ಸೃಜಿಸಿ, ಸಮಾಜವನ್ನು ಶೋಷಕರಿಂದ ಮುಕ್ತಗೊಳಿಸಲು ಹೋರಾಟದ ಕಣಕ್ಕಿಳಿದವರು ಬಸವಣ್ಣ ಮೊದಲಾದ ಶರಣರು.

"ಕೊಲುವನೇ ಮಾದಿಗ, ಹೊಲಸು ತಿಂಬುವನೆ ಹೊಲೆಯ,....ಸಕಲ ಜೀವಾತ್ಮರಿಗೂ ಲೇಸನೇ ಬಯಸುವವ...ಕುಲಜ"[೧] ನೆಂದು ಜಾತಿಗೆ ಹೊಸ ವ್ಯಾಖ್ಯಾನ ಬರೆದವನು ಬಸವಣ್ಣ ಎಂದಿನಿಂದಲೂ ಬಲಹೀನರ, ದಲಿತರ, ತೇಜೋವಧೆ ಮಾಡುತ್ತ ಬಂದಿರುವ ಶ್ರೀಮಂತ ವರ್ಗ, ಲಂಚದ ರೂಪದಲ್ಲಿ ಹೆಣ್ಣು, ಹೊನ್ನು, ಮಣ್ಣು ಬಯಸುವ ಅಧಿಕಾರಿವರ್ಗಗಳನ್ನು ಇಲ್ಲಿ ಮಾದಿಗ, ಹೊಲೆಯನೆಂದುದು ಎಷ್ಟು ಮಾರ್ಮಿಕ? ಕಲ್ಲು, ಮಣ್ಣು, ಗಿಡ–ಕಂಟಿಗಳು ದೇವರೆಂಬ ಮೂಢನಂಬಿಕೆಯಿಂದ ಶೋಷಿತರಾದವರ ಮೌಢ್ಯವನ್ನು "ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ ರಂಜನೆಯಲ್ಲದೆ ಗಂಜಳ ಬಿಟ್ಟಿತೇ[೨] ನೀರಕಂಡಲ್ಲಿ ಮುಳುಗುವದು ಮರನ ಕಂಡಲ್ಲಿ ಸುತ್ತುವದು ದೈವ ಭಕ್ತಿಯಾದಿತೇ[೩] ಎಂದು ಕೇಳಿ ಜನತೆಯಲ್ಲಿ ದೇವ ಒಬ್ಬ ನಾಮ ಹಲವು ಎಂಬ ತಿಳಿವು ಮೂಡಿಸಿದನು.

"ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿಯದವಂಗೆ"[೪]

ಎನ್ನುವ ಬಸವನ ತಿಳುವಿನ ಆಳವು ಆಳವಾಗುತ್ತಾ ಹೋಗಿರುವದು ಸ್ಪಷ್ಟ. ಅಸ್ಪೃಶ್ಯರನ್ನು ದಲಿತರನ್ನು ಬಾಯಿಮಾತಿನಿಂದ ಎತ್ತಿಕಟ್ಟಿ ಕೈ ಬಿಡಲಿಲ್ಲ ಅವರವರ ಕಾಯಕಗಳಲ್ಲಿ ನಿರತರಾದ ಶರಣರನ್ನು ಅವರವರ ಯೋಗ್ಯತೆಗೆ ತಕ್ಕಂತೆ ಅಪ್ಪ, ಚಿಕ್ಕಪ್ಪ, ಸೋದರ; ಗುರು ಎಂದು ಹೇಳಿಕೊಳ್ಳುತ್ತಾನೆ. ಇವನಿಂದ ಶೋಷಿತ ಸಮಾಜವು ಮೇಲ್ಮಟ್ಟಕ್ಕೆ ಬಂದು ಮಾನಿವೀಯತೆಗೂ ಅನುಭವದ ಅಭಿವ್ಯಕ್ತಿಗೂ ಅವಕಾಶ ಕಲ್ಪಿಸಿ, ಸಹಪಂಕ್ತಿ ಭೋಜನಕ್ಕೂ ಹೆದರುತ್ತಿದವರಿಗೆ ರಕ್ತಸಂಬಂಧ

---

೧ ಶ್ರೀ ಬಸವಣ್ಣನವರ ಸಂಗ್ರಹ ವಚನ ಸಂಖ್ಯೆ ೧೯೬ ಸಂ. ಸ. ಸ. ಮಾಳವಾಡ.
೨ ,, ,, ,, ,, ,, ೨೫೮ ,, ,,
೩ ,, ,, ,, ,, ,, ೨೦೪ ,, ,,
೪ ,, ,, ,, ,, ,, ೪೨೫ ,, ,,

ಬೆಳಸಿ ಬಂಧುತ್ವವನ್ನು ಸ್ಥಿರಗೊಳಿಸಿ ಶೋಷಣೆಯು ಇತಿಶ್ರೀ ಮಾಡಲು ಪ್ರಯತ್ನಿಸಿದವನು ಬಸವಣ್ಣ.

ಆಚಾರವರಿಯದೆ ವಿಭವವಳಿಯದೆ ಕೋಪವಡಗದೆ ತಾಪಮುರಿಯದೆ ಬರಿದೆ ಭಕ್ತರಾದೆನೆಂದು ಬೆಬ್ಬನೆ ಬೆರೆವವರ ಕೇಡಿಗೆ ಅಲ್ಲಮನು ಮನದಲ್ಲಿ ಮರುಗಿದ್ದಾನೆ. ಒಳಗೆ ತೊಳೆಯಲರಿಯದೆ ಹೊರೆಗೆ ತೊಳೆದು ಕುಡಿವ ಮೃತ್ಯರ್ಲೋಕದ ಮಾನವರು ದೇಗುಲದೊಳಗೊಂದು ದೇವರ ಮಾಡಿದರೆ ದೇವರ ಹೆಸರಿನಲ್ಲಿ ನಿಚ್ಚಕ್ಕೆ ಸಿಚ್ಚ ಅರ್ಚನೆಯ ಮಾಡಿಸಿ ಭೋಗವ ಮಾಡುವವರನ್ನು ಕಂಡು ಅವನು ಬೆರಗಾಗಿದ್ದಾನೆ. ಬದಲಾವಣೆಗಾಗಿ, ಸುಧಾರಣೆಗಾಗಿ ಸಾಂಸ್ಕೃತಿಕ ಕ್ರಾಂತಿಗೆ ತೊಡಗಿದ ಶರಣರು ತಮ್ಮ ಜೀವನವನ್ನೇ ಮುಡಿಪಾಗಿಟ್ಟರೂ ಕೂಡ ಇಂದಿಗೂ ದೇವರು ಧರ್ಮಗಳ ಹೆಸರಿನಲ್ಲಿ ಧರ್ಮಗುರುಗಳು ನಡೆಸುತ್ತಿರುವ ಶೋಷಣೆಯನ್ನು ಕಂಡಿದ್ದರೆ ಏನು ಹೇಳುತ್ತಿದ್ದರೋ !

ದಯದಿಂದ ಬಿಟ್ಟು ಧರ್ಮವಿಲ್ಲವೆಂಬ ಸಕಲೇಶ ಮಾದರಸನ ಮತವನ್ನು ಮಾನವ ಧರ್ಮ ಒಪ್ಪಲೇಬೇಕು. ಸಂಪ್ರದಾಯಬದ್ಧ ಸಮಾಜದ ಸಂಕೋಲೆಗಳನ್ನು ಕಿತ್ತೊಗೆದು ಹೆಣ್ಣಾಗಿಯೂ ಮನುವಿನ ಮಾತನ್ನು ಸುಳ್ಳು ಮಾಡಿದ, ಮದುವೆಯ ಹಂಗುದೊರೆದು ಮಹಾದೇವಿಯಕ್ಕನಾಗಿ ಲೋಕಾತೀತವನೆಲ್ಲಾಲಿದು ಒಂದಾಗಲು ಮಾಡಿದ ಉಗ್ರಸಾಧನೆ-ಸಾಹಸ ಸಿದ್ಧಿಯು ಅದ್ಭುತ ರಮ್ಯವಾದದ್ದು.

"ಜಾಲಗಾರನೊಬ್ಬ ಜಲವಹೊಕ್ಕು ಶೋಧಿಸಿ
ಹಲವು ಪ್ರಾಣಿಗಳನ್ನು ಕೊಂದು ನಲಿನಲಿದಾಡುವ
ತನ್ನ ಮನೆಯಲೊಂದು ಶಿಶು ಸತ್ತರೆ
ಅದಕ್ಕೆ ಮರಗುವಂತೆ ಅವಕೇಕ ಮರುಗ ?
ಜಾಲಗಾರನ ದುಃಖ ಜಗಕೆಲ್ಲ ನಗೆಗೆಡೆ[೧]

ಯೆಂಬ ಅಕ್ಕ ಜೀವ ಹಿಂಸೆ ಮಾಡುವವರೆಲ್ಲ ಹೀನರೆಂದು ಸಾರಿದ್ದಾಳೆ.

ಆಯ್ದಕ್ಕಿ ಮಾರಯ್ಯನು ಚಿತ್ತಮುಟ್ಟಿ ಸೇವೆಯ ಮಾಡಿದ ಭಕ್ತಸಿಗೆ ಮೃತ್ಯರ್ ಕೈಲಾಸಗಳು ಬೇರಿಲ್ಲವೆಂದು ಕಾಯಕಯೋಗಿಗಳಾದ ನುಲಿಯ ಚೆಂದಯ್ಯ ಆಯ್ದಕ್ಕಿ ಮಾರಯ್ಯ, ಮಡಿವಾಳ ಮಾಚಯ್ಯ ಕಿನ್ನರ ಬೊಮ್ಮಯ್ಯರಂಥವರು, ತಮ್ಮ ಕಾಯಕದಿಂದಲೇ ಕೈಲಾಸವನ್ನು ಸೃಷ್ಟಿಸಿಕೊಂಡಿದ್ದರು. ಉಚ್ಚವರ್ಗದವರು ತಾವು ನಂಬಿ ಇತರರನ್ನು ನಂಬಿಸಿದ ಕೈಲಾಸವನ್ನು ಧಿಃಕ್ಕರಿಸಿ ಶರಣರು ಆಚಾರವೇ ಸ್ವರ್ಗ

---

೧ ಮಹಾದೇವಿಯಕ್ಕನ ವಚನಗಳು ಸಂ. ಡಾ ಆರ್. ಸಿ ಹಿರೇಮಠ
ವಚನ ಸಂಖ್ಯೆ ೧೬೪.

ಅನಾಚಾರವೇ ನರಕವೆಂದು ತೋರಿದರು. ದೇವಲೋಕ ಮೃತ್ಯರ್ಲೋಕಗಳು ಬೇರೆ ಬೇರೆ ಇಲ್ಲ. ಸದಾಚಾರದ ತವರಾಗಿ ಕರ್ತಾರನ ಕಮ್ಮಟವು ಶೋಭಿಸಿದಾಗ ಕೈಲಾಸ ವಾಗುತ್ತಿದೆ. ಶ್ರೀಮಂತ ಅಧಿಕಾರ ವರ್ಗ ಧರ್ಮಗುರುಗಳು ಜನತೆಯನ್ನು ಶೋಷಿಸಲು ಅನಾಚಾರಿಗಳಾದರೆ ಪ್ರತ್ಯಕ್ಷ ನರಕವನ್ನೇ ಸೃಷ್ಟಿಸುವರೆಂಬುದಕ್ಕೆ ಸದ್ಯದ ಪರಿಸ್ಥಿತಿಯಲ್ಲಿ ಹಲವಾರು ನಿದರ್ಶನಗಳನ್ನು ನೋಡಬಹುದು.

ಶರಣರ ಕಾಲಕ್ಕೆ ಮೇಲ್ವರ್ಗದವರ ಕೈಕೆಳಗಾಗಿದ್ದರೂ ಅವರ ಅಸ್ತಿತ್ವವಿದ್ದೆ ಇತ್ತು. ಅವರು ನಿರಂತರವೂ ವಿರೋಧಿಸುವವರ ಬಲ ಕಡಿಮೆಯಾದಾಗ ಮತ್ತೆ ಮತ್ತೆ ತಮ್ಮ ದೌರ್ಜನ್ಯವನ್ನು ದುರ್ಬಲರ ಮೇಲೆ ಹೇರುತ್ತಲೇ ಬಂದಿರುವರು. ಕವಿಗಳ ಉಳವಿಗೆ ರಾಜಾಶ್ರವೂ ಅನಿವಾರ್ಯವಿದ್ದುದರಿಂದ ಯಾರೂ ತೊರೆಯುವ ಗೋಜಿಗೆ ಹೋದಂತಿಲ್ಲ. ಆದರೂ ಹರಿಹರನಂತಹ ಕವಿ.

"ನರರಂ ಸೇವಿಪ........ಇರವಂ ಸುಟ್ಟು ಬಿಸುಟ್ಟ್" ೧

"ಪೋಗೆನೆ ಪೋಪ........ಸೇವೆಯ ಕಷ್ಟವೃತ್ತಿಯಂ ನೀಗದೆ" ೨

ಎಂದು ಶಿವ ಮತ್ತು ಶಿವೈಕ್ಯರನ್ನು ಮಾತ್ರ ನುತಿಸಲು ವಚನಬದ್ಧನಾಗಿ ಕವಿಗಳಿಗಾಗಿರುವ ಶೋಷಣೆಯನ್ನು ವಿರೋಧಿಸಿದ್ದಾನೆ. ಹರಿಹರನ ಶಿಷ್ಯ ರಾಘವಾಂಕನು ಹರಿಶ್ಚಂದ್ರ ಕಾವ್ಯದಲ್ಲಿ ಪ್ರಾಸಂಗಿಕವಾಗಿ ತಂದ ಹೊಲತಿಯರ ಚಿತ್ರವು ಅಂದಿನ ದಲಿತರ ಶೋಷಣೆಯ ಸುಂದರ ಚಿತ್ರವಾಗಿದೆ.

ದಾಸರ ದೃಷ್ಟಿಯಲ್ಲಿ

ಶರಣರಂತೆ ದಲಿತರನ್ನು ಎತ್ತಿ ಹಿಡಿದು ಅಸ್ಪೃಶ್ಯತೆಯ ಕುಷ್ಠರೋಗಕ್ಕೆ ವೈದ್ಯರಾಗಿ, ಶೋಷಣೆಯನ್ನು ವಿರೋಧಿಸಿದವರು ದಾಸರು. "ಹೊಲೆಯ ಹೊರಗಿಹನೇ ಊರೊಳಗಿಲ್ಲವೆ" ೩ ಎಂದು ಊರೊಳಗಿನ ಹೊಲೆತನವನ್ನು ಎತ್ತಿ ತೋರಿಸಿದವರು ಪುರಂದರದಾಸರು.

"ಮಡಿ ಮಡಿ ಎಂದು ಮೂರ್ಮಾರು ಹಾರುತಿ

ಮಡಿಯು ಮೈಲಿಗೆಯು ನೀನೆ"೪ "ಮಲವ ತೊಳಿಯಬಲ್ಲಿರಲ್ಲದೇ ಮನವ ತೊಳೆಯ ಬಲ್ಲಿರೇ" ೫ "ಚರ್ಮವ ತೊಳೆದರೆ ಕರ್ಮವು ಹೋಹುದೇ ಮರ್ಮವ ತಿಳಿಯದೇ ಬಿಕನಾಸಿ"೬ ಎಂದು ಸ್ಪಷ್ಟಪಡಿಸಿದ್ದಾರೆ. ತಂದೆ ಬದುಕಿದ್ದಾಗ ಮಾಸಿಸದ

೧	ಶತಕದ್ವಯ	ಪಂಪಾಶತಕ	ಪದ್ಯ	೮೭
೨	,,	,,	,,	೮೮
೩	ಪುರಂದರದಾಸರ	ಹಾಡುಗಳು	ಪುಟ	೧೪೩
೪	,,	,,	,,	೧೩೪, ೧೩೫
೫	,,	,,	,,	೧೬೫
೬	,,	,,	,,	೧೩೫

ಮಗನು ಸತ್ತಮೇಲೆ ಸಾವಿರಜನರಿಗೆ ಊಟಬಡಿಸಿ ತೃಪ್ತಿಪಡಿಸಿದರೇನು ಫಲ ಅಂತಹ ಮಗನೇ ನಿಜವಾದ ಹೊಲೆಯ. ಇಂತಹ ದುರಾಚಾರಿಗಳೇ ಜಾತಿಹೀನರೆಂದುದು ಸಾರ್ಥಕವಾಗಿದೆ.

ಮೇಲು ಕೀಳೆಂಬ ಭಾವನೆಯು ಸಂಘರ್ಷವನ್ನು ಹಿಂಗಿಸಲು.

“ಕುಲಕುಲವೆಂದು ಬಡಿದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ”೧

ಎಂದು ಕನಕದಾಸರು ಹೇಳುತ್ತಾರೆ.

ಧರ್ಮದ ಹೆಸರಿನಲ್ಲಿ ಭ್ರಷ್ಟಾಚಾರವೆಸಗುವ ಧರ್ಮಗುರುಗಳು ಕೇವಲ ಬೆಳ್ಳಿ ಬಂಗಾರದ ಪ್ರತಿಮೆಗಳನ್ನು ದೇವರೆಂದು ನಂಬಿಸಿ ಪೂಜಿಸುವ ಡಾಂಭಿಕರು, ಮಡಿ ಹೆಸರಿನಲ್ಲಿ ಪ್ರತಿಷ್ಠೆಯನ್ನು ಸ್ಥಾಪಿಸಿಕೊಂಡು ಆಚಾರವಂತರೆನಿಸಿಕೊಂಡ ಇವರು ಉದರ ವೈರಾಗಿಗಳು.

ಜನಜೀವನದ ಬೆಂಗಾಡಿನಲ್ಲಿ ರಸಚಿಲುಮೆಯಾದ ಸಾಹಿತ್ಯದ ಸತ್ವವು ಜನ ಸಾಮಾನ್ಯನಿಗೆ ಅರ್ಥವಾಗದಂತಿದ್ದರೆ ಬಂದ ಭಾಗ್ಯವೇನು ? ಯಾವ ಜನಾಂಗದ ಶೋಷಣೆಯ ವಿರುದ್ಧ ತಮ್ಮ ಸಾಹಿತ್ಯವನ್ನು ಸೃಜಿಸುವರೊ ಅವರಿಗೆ ಅರ್ಥವಾಗ ದಂತಿರುವದು ಅಪಹಾಸ್ಯವಾಗದೇ ಸಂಸ್ಕೃತದ ವೈಭವಕ್ಕೆ ಬೆರಗಾದ ಕನ್ನಡ ಕವಿಗಳು ಕನ್ನಡವನ್ನೇ ಕಡೆಗಣಿಸಿ ನಡೆದಾದ ಅದರ ಕೆಚ್ಚನ್ನು ಕೆಂಡರಿಸಿ ತೋರಿ ದವರು ಶರಣರು, ದಾಸರು ಮತ್ತು ಸರ್ವಜ್ಞನು.

ಸರ್ವಜ್ಞನು ಕಂಡಂತೆ

ಸರ್ವಜ್ಞನು ತನ್ನ ತೆರೆದ ಹೃದಯದ ತುಂಬ ತುಂಬಿಕೊಂಡಿರುವದು, ದಲಿತರನ್ನು, ಶೋಷಿಸುವ ಶ್ರೇಷ್ಠವರ್ಗದ ಪ್ರತಿ ತೀವ್ರ ವಿರೋಧವನ್ನು. “ಸತ್ತ ಕತ್ತೆಯ ಹೊತ್ತವನೇಕೆ ಹೊಲೆಯ....ಹೆರರೊಡೆವೆ ಹೊರುವವನ ನಿತ್ಯ ಹೊಲೆಯ”೨ “ಪ್ರಾಣಿಗಳನ್ನು ಕೊಂದು ತಿನ್ನುವವನೇಕೆ ಹೊಲೆಯನಾದಾನು ನೊಂದ ಮಾನವರನ್ನು ಹರಿದು ತಿನ್ನುವ ಹಾರುವನೇಕೆ ಹೊಲೆಯನಲ್ಲ”೩ ವೆಂದು ಕೇಳುವ ಸರ್ವಜ್ಞನು ನೇರವಾಗಿ ಅವರವರ ಆಚಾರಗಳನ್ನು ಪ್ರಶ್ನಿಸಿ ಜಾತಿಯ ನೆಲೆ ಹುಡುಕಿ ಕೆಣಕಿದ್ದಾನೆ. ಸರ್ವಜ್ಞನು ಹೆಜ್ಜೆಹೆಜ್ಜೆಗೂ ಮಡಿಮಡಿಯೆನ್ನುವ “ಮುಟ್ಟಾದ ಹೊಲೆಯೊಳಗೆ ಹುಟ್ಟಿದುದು೪ ಜಗವೆಲ್ಲ ಮುಟ್ಟಬೇಡವೆಂದು ತೊಲಗುವ ಹಾರುವನು ಹುಟ್ಟಿದ್ದೆಲ್ಲಿ ? ಎಂದು ಕೇಳಿ ಹಾರುವನ ಹುಟ್ಟಿನ ಗುಟ್ಟನ್ನು ರಟ್ಟು ಮಾಡಿದ್ದಾನೆ.

---

೧ ಶ್ರೀ ಕನಕದಾಸರ ಹಾಡುಗಳು ಪುಟ ೧೪೬

೨ ಸರ್ವಜ್ಞನ ವಚನಗಳ ಸಂಗ್ರಹ ಸಂ. ಎಂ. ಮರಿಯಪ್ಪಭಟ್ಟ ವ. ೮೫೧ ಪು ೧೮೬

೩ ಸರ್ವಜ್ಞನ ವಚನ ಸಂಗ್ರಹ. ಸಂ. ಎಂ. ಮರಿಯಪ್ಪಭಟ ವ. ೮೫೦ ಪು ೧೮೬

೪ ,, ,, ,, ,, ವ. ೮೬೦ ಪು ೧೮೭

"ಹಸಿವು, ತೃಷೆ, ನಿದ್ದೆ, ವಿಷಯ ಮೈಥುನ ಬಯಕೆ
ಪಶು ಪಕ್ಷಿವರೆಗೆ ಸಮನಿರಲು ಕುಲವೆಂಬ
ಘಸಣಿ ಎತ್ತಣದು ಸರ್ವಜ್ಞ"[೧]

"ಮೂರಳೆನುಟ್ಟಾತ ಹಾರುವಡೆ ಸ್ವರ್ಗಕ್ಕೆ
ನೂರೆಂಟು ಎಳೆಯ ಕೌದಿಯನು ಹೊದ್ದಾತ
ಹಾರನೇಕಯ್ಯ ಸರ್ವಜ್ಞ."[೨]

ಹೀಗೆ ಸಮಾಜದ ಕುಲವಂತರಿಗೆ ಕೇಳಿ ಅರ್ಥವಿಲ್ಲದ ಆಚರದಿಂದಾಗುವ ಅನರ್ಥಗಳಿಗೆ ಒಳ್ಳೆಯ ನಿದರ್ಶನಗಳನ್ನು ಕೊಟ್ಟಿದ್ದಾನೆ.

ಕತ್ತೆ ಬೂದಿಯಲಿ ಹೊರಳಾಡಿದಂತೆ "ತತ್ವವರಿಯದೆ ಮೈ ತುಂಬ ಬೂದಿಯ ಬಳಿದುಕೊಂಡರೆ ಯತಿಯಾಗದೆ ಕತ್ತೆಗಿಂತ ಕನಿಷ್ಠ"[೩] ನಾಗುತ್ತಾನೆ. "ಕಾವಿ ಉಡುವ ಜಟೆ ಬಿಡುವ ರುದ್ರಾಕ್ಷಿ ಹೋರುವ ಯತಿಗಳ ನಾಲಿಗೆ, ಕೌಪೀನ ಶುದ್ಧವಿಲ್ಲದೆ ಮತ್ತೆ ಮತ್ತೆ ವಿಷಯ ಲೋಲುಪರಾಗಿ ತೊಳಲಾಡುವವ ಹೊಲೆ ಮಾದಿಗ"[೪] ನೆಂಬ ಸರ್ವಜ್ಞನ ನಿರ್ಣಯ ಸರ್ವಸಮ್ಮತ. ದೇಹ ದಂಡಿಸಿ ಮುಕ್ತಿ ಪಡೆಯುವರ ರೀತಿಯನ್ನು ಹಾವು ಕೊಲ್ಲಲು ಹುತ್ತ ಬಡಿದಂತೆ ಎನ್ನುವನು.

ಆಸೆ ಆಮಿಷಗಳಿಗೆ ಬಲಿಯಾಗಿ ಹೊನ್ನು ಹೆಣ್ಣಿಗಾಗಿ ಹಲವರ ಜೀವನವನ್ನು ಹಾಳು ಮಾಡುವ ಯತಿವರ್ಯನು

"ಕೊಲುವ ಕೈಯೊಳು ಪೂಜೆ ಮೆಲುವ ಬಾಯೊಳು ಮಂತ್ರ
ಸತಿ ಪಾಪವೆರೆದ ಮನದೊಳಗೆ ಪೂಜಿಪನು
ಹೊಲೆಯ ಕಾಣಯ್ಯ ಸರ್ವಜ್ಞ,"[೫]

ಎಂಬ ಜಾತಿಯ ಹೊಸ ಅಳತೆಗೋಲನ್ನು ಅರಿತವರು ಅಲ್ಲಗಳೆಯರು.

ಸರ್ವಜ್ಞನ ದೃಷ್ಟಿಯಲ್ಲಿ ಒಟ್ಟಾರೆ ಎಲ್ಲ ವಿವಿಧ ಅನಾಚಾರಿಗಳು ದಲಿತರು, ಅಸ್ಪೃಶ್ಯರು, ಡಂಭಕರು, ಕತ್ತೆ ಕಪ್ಪೆಗಳಿಗಿಂತಲೂ ಕನಿಷ್ಠರೆಂದು ಜರೆಯುವನು. ಕೊನೆಗೆ ಅವನ ನಿರ್ಣಯವೆಂದರೆ

---

೧ ಸರ್ವಜ್ಞ ವಚನ ಸಂಗ್ರಹ. ಸಂ. ಎಂ. ಮರಿಯಪ್ಪಭಟ್ಟ. ವ. ೪೬೫ ಪು ೧೪೪
೨ „ „ „ „ „ ೯೦೭. ಪು ೧೯೫
೩ „ „ „ „ „ ೯೧೬ „ ೧೯೭
೪ „ „ „ „ „ ೯೧೭, ೯೧೪, ೯೧೯ „ ೧೯೭
೫ „ „ „ „ „ ೪೪೭ „ ೧೯೨

''ಯಾತರದ ಹೂವೇನು ನಾತರದು ಸಾಲದೆ
ಜಾತಿ ವಿಜಾತಿ ಎನಬೇಡ ದೇವ ನೊಲಿ
ದಾತನೇ ಜಾತ ಸರ್ವಜ್ಞ.''೧

ನೆಂದು ಶೋಷಿತ ಜನಾಂಗದ ಬೆನ್ನು ಕಟ್ಟಿ ನಿಂತಿದ್ದಾನೆ. ಜಾತಿಯ ವಿಷಯದಲ್ಲಿ ಡಾಂಭಿಕತೆಯನ್ನು ಎಳ್ಳಷ್ಟು ಸಹಿಸದೇ ಸಿಡಿದು ನಿಂತವರಲ್ಲಿ ಸರ್ವಜ್ಞ, ಶರಣರು, ದಾಸರು, ಪ್ರಮುಖರು. ಭಕ್ತರಾದವರನ್ನೆಲ್ಲ ಒಂದೇ ಕುಲವೆಂದು ಸಾರಿ ದೇವರು ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ಪ್ರತಿಭಟಿಸಿದ್ದಾರೆ.

ಕನ್ನಡ ಸಾಹಿತ್ಯವನ್ನು ಸಿಂಹಾವಲೋಕನ ಕ್ರಮದಿಂದ ನೋಡಲಾಗಿ ಅಂದಿನಿಂದ ಇಂದಿನವರೆಗೂ ಅಂತ್ಯಜರ ಬಗೆಗೆ ಸಮಾಜದಲ್ಲಿ ಶೋಷಣೆ ನಡೆಯುತ್ತಲಿದೆ. ನಮ್ಮಲ್ಲಿ ಮಾತ್ರವಲ್ಲ ಜಗತ್ತಿನ ಎಲ್ಲ ಜನಾಂಗ, ಎಲ್ಲ ದೇಶ ಭಾಷೆಗಳಲ್ಲಿ ಸಾಹಿತಿಗಳ ಶೋಷಣೆಯ ವಿರುದ್ಧ ಬಂಡೆದ್ದಿರುವದು ವ್ಯಕ್ತವಾಗಿದೆ. ಆಯಾ ಕಾಲಕ್ಕೆ ಅದು ನಿಂತಂತೆ ಕಂಡಿದೆಯಾದರೂ ಇಂದಿಗೂ ಬೂದಿಮುಚ್ಚಿದ ಕೆಂಡವೆ ಸರಿ.

ಜೀವನದಲ್ಲಿ ಇರುವಂತೆ ಸಾಹಿತ್ಯದಲ್ಲಿಯೂ ಶೋಷಣೆಯ ಹಲವಾರು ಮುಖಗಳನ್ನು ನಾವು ಕಾಣಬಹುದು. ಅಧಿಕಾರದ ಆಶ್ರಯ ಪಡೆದ ಧರ್ಮ ಮತ್ತು ಭಾಷೆಗಳು ಇತರ ಮೇಲೆ ಒತ್ತಾಯವನ್ನು ಹೇರಿ ತಮ್ಮ ಹೆಗ್ಗಳಿಕೆಯನ್ನು ಹೆಚ್ಚಿಸಿಕೊಂಡ ನಿದರ್ಶನಗಳನ್ನು ನಮ್ಮ ಸಾಹಿತ್ಯವು ಎತ್ತಿ ತೋರುತ್ತದೆ. ಸಾಹಿತ್ಯವು ಪ್ರಭುತ್ವದ ಅಡಿಯಾಳಾಗಿ ನಿಂತಾಗ ಸಾಹಿತಿಯು ತನ್ನ ಮನೋಧರ್ಮದ ವಿರೋಧವಾಗಿಯಾದರೂ ತಲೆಬಾಗಿದ್ದಾನೆ. ಪ್ರಭುತ್ವದ ಹಿಡಿತದಲ್ಲಿರುವ ಸಂಪತ್ತಿಯು ಕನಿಷ್ಠರನ್ನು ಅಧಿಕವಾಗಿ ಹಿಂದುಳಿದವರನ್ನು ಶೋಷಿಸುವದು ಪರಂಪರೆಯಿಂದ ಬಂದು ಸಾಹಿತ್ಯದ ಮುಖಾಂತರ ಚಿರಸ್ಥಾಯಿಯಾಗಿ ನಿಂತಿದೆ.

೧ ಸರ್ವಜ್ಞನ ವಚನ ಸಂಗ್ರಹ. ಸಂ, ಎಂ, ಮರಿಯಪ್ಪಭಟ್ಟ ವ. ೮೭೫ ಪು. ೧೯೦

ಅಗ್ರಹಾರ ತುಂಬಗಿ ಹಾಗೂ ಅಲ್ಲಿನ ಮೂರು ಸ್ತಂಭಶಾಸನಗಳು

ಎಸ್. ಕೆ. ಕೊಪ್ಪಾ
ಎಚ್. ಎಸ್. ಬಿರಾದಾರ

ಇಂದು ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸಣ್ಣ ಹಳ್ಳಿಯಾಗಿರುವ ತುಂಬಗಿ ವ್ಯಾಪಾರಿಕೇಂದ್ರ ತಾಳಿಕೋಟೆಯಿಂದ ಉತ್ತರಕ್ಕೆ ೧೪ ಕಿ. ಮಿ. ಅಂತರದಲ್ಲಿದ್ದು, ಅಕ್ಷಾಂಶ ೧೬°, ೩೪' ರೇಖಾಂಶ ೭೬°, ೨೦'ನ್ನು ಹೊಂದಿದೆ. ಕ್ರಿ. ಶ. ೧೧–೧೨ ನೆಯ ಶತಮಾನದ ಐತಿಹಾಸಿಕತೆಯನ್ನು ಪಡೆದು ಕೊತ್ತಳಗಳಿಂದ ಆವೃತವಾದ ಈ ಊರು ಹಿಂದೊಮ್ಮೆ ಅಗ್ರಹಾರವಾಗಿತ್ತು. ಪ್ರಾಚೀನ ಕರ್ನಾಟಕದ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಜನಜೀವನದಲ್ಲಿ ಅಗ್ರಹಾರಗಳು ಪ್ರಮುಖ ಪಾತ್ರವಹಿಸಿವೆ. ಈಗ ದೊರೆತಿರುವ ಆಧಾರಗಳ ಮೇಲೆ ತುಂಬಗಿಯ ಪ್ರಾಚೀನತೆಯನ್ನು ೧೧ ನೆಯ ಶತಮಾನದವರೆಗೆ ಗುರುತಿಸಬಹುದು. ಅಲ್ಲಿ ದೊರೆತ ಕ್ರಿ. ಶ. ೧೦೦೪ ರ ಕಲ್ಯಾಣ ಚಾಲುಕ್ಯ ಇರುವಬೆಡಂಗನ ಕಾಲದ ಶಾಸನ[೧] ಆ ಊರಿನ ಪ್ರಥಮ ದಾಖಲೆ. ನಂತರ ನಾಲ್ಕನೆಯ ವಿಕ್ರಮಾದಿತ್ಯ (ಕ್ರಿ. ಶ. ೧೦೧೪) ಹಾಗೂ ಆರನೆಯ ವಿಕ್ರಮಾದಿತ್ಯ (ಕ್ರಿ. ಶ. ೧೦೮೬) ರ ಕಾಲದ ಶಾಸನ[೨] ದೊರಕಿವೆ. ತದನಂತರ ಯಾದವ ರಾಮಚಂದ್ರನ ಕಾಲದ (ಕ್ರಿ. ಶ. ೧೨೭೭) ನಿಶಿಧಿ ಶಾಸನ[೩] ಇಲ್ಲಿನ ಕೊನೆಯ ಶಾಸನ. ಈಚೆಗೆ ತುಂಬಗಿಯ ಹೂಡೆ(ಕೊತ್ತಳ) ಆಗೆತದಲ್ಲಿ ಶಿಲಾಲಿಪಿಗಳು ದೊರೆತುದಾಗಿ ತಿಳಿದುಬಂತು. ನಾವು ಅಲ್ಲಿಹೋಗಿ ಪರಿಶೀಲಿಸಿದಾಗ ಅವು ಒಡೆದುಹೋದ ಮೂರು ಸ್ತಂಭಶಾಸನಗಳಾಗಿದ್ದವು. ಅವು ಕ್ರಮವಾಗಿ ನಾಲ್ಕನೆಯ ವಿಕ್ರಮಾದಿತ್ಯ (ಕ್ರಿ. ಶ. ೧೦೧೪) ಮೊದಲನೆಯ ಜಯಸಿಂಹ (ಕ್ರಿ. ಶ. ೧೦೨೧) ಮೊದಲನೆಯ ಸೋಮೇಶ್ವರ (ಕ್ರಿ. ಶ. ೧೦೪೪)ನ ಕಾಲಕ್ಕೆ ಸೇರಿದ್ದು, ಈ ಊರಿನ ಇತಿಹಾಸಕ್ಕೆ ಹೆಚ್ಚಿನ ವಿವರಗಳನ್ನು ಒದಗಿಸಿವೆ. ಶಾಸನಗಳ ಪರಂಪರೆಯ ದೃಷ್ಟಿಯಿಂದ ಈ ಅಪ್ರಕಟಿತ ಶಾಸನಗಳನ್ನು ತುಂಬಗಿಯ ಹಿನ್ನೆಲೆಯೊಂದಿಗೆ ಪ್ರಕಟಿಸುವುದು ಅವಶ್ಯವೆನಿಸಿತು. ಅದರ ಫಲ ಈ ಲೇಖನ.

೧ EI. xvii. P.7
೨ SII. xv, No. 524 ಹಾಗೂ SII. xi, P. II, No. 132.
೩ SII. xv, No. 198.

ಸದ್ಯ ಇಲ್ಲಿ ದೊರೆತ ಏಳುಶಾಸನಗಳಲ್ಲಿ ಆರುಶಾಸನಗಳು ಕಲ್ಯಾಣಚಾಲುಕ್ಯರ ಆಳ್ವಿಕೆಗೆ ಸೇರಿದವುಗಳಾದುದರಿಂದ ಆ ಕಾಲಕ್ಕೆ ಇದು ಬಹಳ ಪ್ರಸಿದ್ಧಿಯನ್ನು ಪಡೆದಿತ್ತೆಂದು ಹೇಳಬಹುದು. ಶಾಸನಗಳಲ್ಲೆಲ್ಲಾ ಈ ಊರು "ಪಗಲಟ್ಟಿ(ಹಗರಟಗಿ) ೩೦೦ ಱಱ ಬಳಿಯ ಅಗ್ರಹಾರ ತುಂಬಿಗೆ" ಎಂದು ಬರುವುದರಿಂದ ಈಗಿನ ಹೆಸರು ಆಗಲೂ ಪ್ರಚಲಿತವಿತ್ತೆಂದೂ ೩೦೦ ಹಳ್ಳಿಗಳನ್ನೊಳಗೊಂಡ ಪಗಲಟ್ಟಿ ಆಡಳಿತ ವಿಭಾಗದಲ್ಲಿ ಸಮಾವೇಶವಾಗಿತ್ತೆಂದೂ ಸ್ಪಷ್ಟವಾಗುತ್ತದೆ. ಆರನೆಯ ವಿಕ್ರಮಾದಿತ್ಯನ ಶಾಸನ೪ ಈ ಭಾಗದ ದಂಡನಾಯಕ ನಿಂಬಣಯ್ಯನನ್ನು "ಸಮಧಿಗತಪಂಚಮಹಾಶಬ್ದ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ವಿಪ್ರವರದಾಯಕ ಗೋತ್ರಪವಿತ್ರ ಸುಜನೈಕಮಿತ್ರ ಅಭಿನವ ಮಂದಾರ ವಿಭವಪುರಂದರ ವಾಜಿಕುಳಾಂಬರದ್ಯುಮಣಿ" ಮೊದಲಾದ ಪ್ರಶಸ್ತಿಗಳೊಡನೆ "ಮಹಾಪ್ರಧಾನ ಹೇರಿಸಂಧಿವಿಗ್ರಹಿ ಮನೆವೆರ್ಗ್ಗಡೆ ದಂಡನಾಯಕ ನಿಂಬಣಯ್ಯಂಗಳು" ಎಂದು ಹೊಗಳಿದೆ. ಈ ನಿಂಬಣಯ್ಯ ಕೊಂಡಗೂಳಿ ಶಾಸನದಿಂದ೫ ಶಿವಶರಣರಿಂದ ಶಿವಕವಿಗಳಿಂದ ಸ್ತುತ್ಯನಾಗಿ ತಂದೆಯ ವೃತ್ತಿಯಲ್ಲಿ ಮುನ್ನಡೆದ ಬಸವಪೂರ್ವದ ಶರಣ ಕೊಂಡಗೂಳಿ ಕೇಶರಾಜನ ತಂದೆಯೆಂಬುದು ಗಮನಾರ್ಹವಾದ ಅಂಶ.

ಅಗ್ರಹಾರ ತುಂಬಿಗೆಯಲ್ಲಿ ಒಂದು ಶಾಲೆಯಿದ್ದು, ಅದಕ್ಕೆ ಹೊಂದಿಕೊಂಡು ದೇವಾಲಯವಿತ್ತು. ಆ ಶಾಲೆಯ ದೇವಾಲಯವನ್ನು ಶಾಲೆಯ ತ್ರೈಪುರುಷ ದೇವಾಲಯವೆಂದು ಕರೆಯುತ್ತಿದ್ದುದಾಗಿಯೂ ತ್ರೈಪುರುಷದೇವರ ಪ್ರತಿಮೆಯನ್ನು ರೂವಾರಿ (ದಾ) ಸೋಜ ಮಾಡಿದುದಾಗಿಯೂ ಒಂದು ಶಾಸನದಿಂದ೬ ತಿಳಿದುಬರುತ್ತದೆ. ಈ ಶಾಲೆಯ ಬಗ್ಗೆ೭ ಅಲ್ಲಿನ ವಿದ್ಯಾಭ್ಯಾಸದ ಬಗೆಗೆ ಹೆಚ್ಚಿನ ವಿವರಗಳೇನೂ ತಿಳಿಯುವದಿಲ್ಲ. ಇನ್ನೊಂದು ಶಾಸನ "ರೇವಣಯ್ಯಂ ಬರೆದಂ" ಅನ್ನುವುದರಿಂದ ಆತ ಕವಿ ಲಿಪಿಕಾರ ಎರಡೂ ಆಗಿರುವ ಸಾಧ್ಯತೆಯಿದೆ. ಅಗ್ರಹಾರದ ವಿವಿಧ ಸಂಸ್ಥೆಗಳಿಗೆ ಕೊಟ್ಟ ದಾನಧರ್ಮಗಳನ್ನು ಅಲ್ಲಿಯ ನೂರ್ವ್ವರು ಮಹಾಜನರು ನೋಡಿಕೊಳ್ಳುತ್ತಿದ್ದರು. ಅಗ್ರಹಾರವನ್ನು ದಾನವಾಗಿ ಪಡೆದ ಬ್ರಾಹ್ಮಣರೇ ಮಹಾಜನಗಳು, ಆ ಊರಿನ ಪ್ರಭುಗಳು . ದಾನಬಿಡುವಾಗ ಇಂತಿಂಥದ್ದಕ್ಕೆ ಇಷ್ಟು ಎಂದು ನಿಗದಿ ಮಾಡಲಾಗುತ್ತಿತ್ತು. ಇರುವಬೆಡಂಗ ಸತ್ಯಾಶ್ರಯನ ಪಾದಪದ್ಮೋಪಜೀವಿ ಸೆಟ್ಟಿ ಬ್ರಹ್ಮಯ್ಯ ಬ್ರಹ್ಮೇಶ್ವರ ದೇವರಿಗೆ ೨೦೦ ಮತ್ತರು ಪಱಿಕಾರ ಸೂಳೆಯರಿಗೆ ೩೦ ಮತ್ತರು ಮಠಕ್ಕೆ ೫೦ ಮತ್ತರು ದೇವಾಲಯಕ್ಕೆ ೫೦ ಮತ್ತರು ದಾನಬಿಟ್ಟದ್ದನ್ನು

೪ SII. xi, P. II, No. 132.
೫ SII. xx, No. 69
೬ SII. xi, P. I. No. 132.
೭ SII. xv, No. 524

ತಿಳಿಸುತ್ತ ಮಠದ ಆದಾಯದಲ್ಲಿ ಅಲ್ಲಿನ ಐವರು ಬ್ರಹ್ಮಚಾರಿ ತಪಸ್ವಿಗಳು ಅಶನ ಆಚ್ಛಾದನ ಮಾಡಿಕೊಳ್ಳಬೇಕು. ಒಂದು ವೇಳೆ ಅವರ ಬ್ರಹ್ಮಚರ್ಯಕ್ಕೆ ಲೋಪವಾದರೆ ಊರ ಪ್ರಧಾನರು ವಧಿಸಬೇಕು ಎಂದು ಶಾಸನ[೮] ವಿಧಿಸುತ್ತದೆ. ಊರಾಡಳಿತೆಗೆ ಸಂಬಂಧಿಸಿದಂತೆ ಅಗ್ರಹಾರ ತುಂಬಿಗೆಯ ಊರೊಡೆಯ ನಾಗದೇವಯ್ಯ, ತುಂಬಿಗೆಯ ಪ್ರಭು ಬೊಂಮರಸರ ಉಲ್ಲೇಖ ಶಾಸನಗಳಲ್ಲಿ ಬಂದಿದೆ. ಅದರಲ್ಲಿ ನಾಗದೇವಯ್ಯ ಬಾಣರಾಶಿಯ ಮಠಕ್ಕೆ ೩೦ ಕೆಯ್ಮತ್ತರು ಭೂಮಿಯನ್ನು ಬೊಮ್ಮರಸ ಹಗರಟಿಗೆನಾಡ ವಿರಂಣಯ ಗಣಪತಿದೇವನೊಂದಿಗೆ ಬೋಚುವೆನಾಯಕನ ನಿಶಿಧಿಕಲ್ಲು ನಿರ್ಮಿಸಿ ಪಾರಿಶ್ವರ (ಪಾರ್ಶ್ವನಾಥ) ದೇವರಿಗೆ ಭೂಮಿ ಹಾಗೂ ನಿವೇಶನ ದಾನಬಿಟ್ಟದ್ದನ್ನು ಹೇಳಲಾಗಿದೆ. ಊರವರಲ್ಲದೆ ಹೊರಗಿನವರೂ ಅಲ್ಲಿನ ಮಠ ದೇವಾಲಯಗಳಿಗೆ ದಾನಬಿಟ್ಟ ಪ್ರಸ್ತಾಪ ಶಾಸನಗಳಲ್ಲಿದೆ. ಕಲ್ಕೆರೆಯ ಗೆಣ್ಣಯ್ಯನ ಮಗಳು ಆಯ್ಚಕಬ್ಬೆ ತಮ್ಮ ಮಾನ್ಯದೊಳಗಿರುವ ಮಠಕ್ಕೆ ೫೦ ಮತ್ತರು ಮತ್ತೊಂದು ಮಠಕ್ಕೆ ೧೦೦ ಮತ್ತರು ದಾನಬಿಟ್ಟಿರುವುದು ತಿಳಿದು ಬರುತ್ತದೆ.[೧೦] ದಾನಧರ್ಮಗಳಲ್ಲಿ ಪುರುಷರಷ್ಟೇ ಸ್ತ್ರೀಯರೂ ಉತ್ಸಾಹಿಗಳಾಗಿದ್ದರೆಂಬುದು ಇದರಿಂದ ಖಚಿತವಾಗುತ್ತದೆ. ಅಗ್ರಹಾರ ತುಂಬುಗೆಯ ಶಾಲೆಯ ತ್ರೈಪುರುಷ ದೇವರಿಗೆ ಕೊಂಡಗೂಳಿಯೂರೊಡೆಯ ಶ್ರೀಧರಭಟ್ಟ ನಾರಾಯಣಭಟ್ಟರು ಕೂಡಿ ಭೂದತ್ತಿಬಿಟ್ಟ ಉಲ್ಲೇಖ ಮತ್ತೊಂದು ಶಾಸನದಲ್ಲಿ[೧೧] ಬಂದಿದೆ.

ತುಂಬಿಗೆ ಅಗ್ರಹಾರ ವೈಷ್ಣವಧರ್ಮದ ಜೊತೆಗೆ ಶೈವ ಹಾಗೂ ಜೈನಧರ್ಮದ ಕೇಂದ್ರವಾಗಿ ಹಲವಾರು ದೇವಾಲಯ ಮಠ ಬಸದಿಗಳಿಂದ ಕೂಡಿತ್ತು. ಇಲ್ಲಿನ ಶಾಸನಗಳಲ್ಲಿ ಉಲ್ಲೇಖಗೊಂಡ ಬ್ರಹ್ಮೇಶ್ವರ, ಕಾರ್ತಿಕೆಯ, ಶಾಲೆಯತ್ರೈಪುರುಷದೇವ, ಪಾರೀಶ್ವರ ದೇವಸ್ಥಾನಗಳೂ ಬಾಣರಾಶಿ ಹಾಗೂ ಪೋಲಯ್ಯನ ಮಠಗಳೂ ಇಂದು ಉಳಿದುಬಂದಿಲ್ಲ. ಈ ಊರಿನ ದಕ್ಷಿಣಕ್ಕಿರುವ ಹಾಳುಹೊಲದಲ್ಲಿ ಮಡಕೆಯ ಅವಶೇಷಗಳು ಕಬ್ಬಿಣದ ಸಲಕರಣೆಗಳು ಮತ್ತು ವಿಗ್ರಹಗಳು ದೊರೆಯುತ್ತಿದ್ದು; ಮೊದಲು ಅಲ್ಲಿಯೇ ಊರು ಇತ್ತೆಂದು ಜನರು ಹೇಳುತ್ತಾರೆ. ಈ ಹೊಲದ ಉತ್ತರಕ್ಕೆ ಊರಿಗೆ ಹೊಂದಿಕೊಂಡು ಜೀರ್ಣಗೊಂಡ ಕೊತ್ತಳವಿದೆ. ಅದರ ಹಿಂದೆಯೇ ನೆಲದಲ್ಲಿ ಮುಚ್ಚಿಹೋದ ದೇವಾಲಯವೊಂದರಭಾಗ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಶಾಸನೋಕ್ತ ದೇವಾಲಯಗಳಲ್ಲಿ ಕೆಲವಾದರೂ ಹೀಗೆ ಮುಚ್ಚಿಹೋಗಿರುವ ಸಾಧ್ಯತೆಯಿದೆ. ಈಗ ಅಲ್ಲಿರುವ ಕೆಲವು ಅವಶೇಷಗಳಲ್ಲಿ ಜೀರ್ಣಗೊಂಡ ಕೋಟೆ ಯಾವ ಕಾಲಕ್ಕೆ ಕಟ್ಟ

---

೮ SII. xi, P. I. No. 49.

೯ SII. xv, No. 524 ಮತ್ತು SII. xv, No. 198.

೧೦ EI. xvii, P. 7

೧೧ SII. P. II, No.132.

ಲಾಯಿತೆಂಬುದು ತಿಳಿದುಬರುವುದಿಲ್ಲ. ಊರಿನ ಉತ್ತರಕ್ಕೆ ಕೋಟೆದ್ವಾರದ ಹೊರಗಡೆ ದೊಡ್ಡದಾದ ಬಾವಿಯೊಂದಿತ್ತು. ಸದ್ಯ ಅದನ್ನು ಮುಚ್ಚಲಾಗಿದೆ. ಅದರ ಪಕ್ಕದಲ್ಲಿಯೇ ಜೀರ್ಣಗೊಂಡ ಶ್ರೀರಾಮಲಿಂಗೇಶ್ವರ ದೇವಸ್ಥಾನವಿದೆ. ಸುಮಾರು ೧೧-೧೨ ನೆಯ ಶತಮಾನದ ದೇವಾಲಯ ಲಕ್ಷಣವನ್ನೊಳಗೊಂಡ ಈ ಕರಿಯ ಕಲ್ಲಿನ ದೇವಸ್ಥಾನ ಗರ್ಭಗೃಹ, ಅರ್ಧಮಂಟಪ, ನವರಂಗಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ಲಿಂಗವಿದೆ ಅರ್ಧಮಂಟಪದಲ್ಲಿ ಗರ್ಭಗೃಹಕ್ಕೆ ಎದುರಾಗಿ ಬಸವಣ್ಣನ ಸುಂದರ ವಿಗ್ರಹವಿದೆ. ದುಂಡಗಾದ ಮತ್ತು ಚತುರ್ಭುಜ ಕಂಬಗಳು ಬೋಧಿಗೆಗಳಿಂದ ಕಂಗೊಳಿಸುತ್ತವೆ. ಪ್ರವೇಶ ದ್ವಾರವನ್ನು ಸುಂದರವಾಗಿ ಕೆತ್ತಲಾಗಿದ್ದು; ಮೇಲೆ ಗಜಲಕ್ಷ್ಮೀಯ ಚಿತ್ರವಿದೆ. ಈ ದೇವಸ್ಥಾನಕ್ಕೆ ಗೋಪುರವಿಲ್ಲದ್ದೊಂದು ವೈಶಿಷ್ಟ್ಯ. ಜೋಚುವೆನಾಯಕನ ನಿಶಿಧಿಕಲ್ಲನ್ನು ಸದ್ಯ ಗುಡಿಯ ಮುಂದಿಡಲಾಗಿದೆ. ಊರಲ್ಲಿ ಶ್ರೀ ಸೋಮಪ್ಪಗೌಡ, ಚಂದಪ್ಪಗೌಡ, ಪಾಟೀಲರ ಮನೆಯ ಸಮೀಪದ ಬಾವಿಯ ಹತ್ತಿರ ಜಗದೇವಪ್ಪನ ಗುಡಿಯಿದೆ. ಇದರ ಕೆಳಭಾಗದಲ್ಲಿ ೧೦×೫ ವಿಸ್ತೀರ್ಣದ ಗವಿಯಿದೆ. ಬಾವಿಯ ದಂಡೆಯ ಮೇಲೆ ಗಜಲಕ್ಷ್ಮೀ ವಿಗ್ರಹದ ಬಂಡೆಯಿದ್ದು; ಜನ ಅದನ್ನು ಬಾಣಂತಿಕಲ್ಲು ಎಂದು ಪೂಜಿಸುತ್ತಾರೆ. ಈ ಊರಲ್ಲಿ ಪಡದಪ್ಪನಮಠ, ಕರೆಬಾವಿಮಠ,ಹಿರೇಮಠ ಎಂದು ಮೂರು ಮಠಗಳಿದ್ದು ಪಡದಪ್ಪನ ಮಠ ಪ್ರಾಚೀನ ಗುರುಪರಂಪರೆಯನ್ನು ಪಡೆದ ಬ್ರಹ್ಮಚಾರಿ ಮಠವಾಗಿದೆ. ಈ ಮಠದ ಕೆಳಗೆ ಸಾಸನೂರಲ್ಲಿ (ತುಂಬಗಿಯಿಂದ ಪಶ್ಚಿಮಕ್ಕೆ ೪ ಕಿ. ಮಿ.) ಮತ್ತೊಂದು ಮಠ ನಡೆಯುತ್ತದೆ. ಪಡದಪ್ಪನ ಮಠದ ಕಟ್ಟಡ ಹಳೆಯದಾಗಿದ್ದು, ನಾಲ್ಕೂ ಮೂಲೆಗೆ ಲಿಂಗಮುದ್ರೆ ಕಲ್ಲನ್ನು ನೆಡಲಾಗಿದೆ. ಸುಮಾರು ೫೦ಕ್ಕೂ ಮಿಕ್ಕ ತಾಡೋಲೆ ಮತ್ತು ಕೋರೆಕಾಗದಗಳಲ್ಲಿ ಲಿಖಿತಗೊಂಡ ಗ್ರಂಥಕಟ್ಟನ್ನು ಹೊಂದಿರುವುದು ಈ ಮಠದ ವೈಶಿಷ್ಟ್ಯ. ಈ ಮಠದ ಮುಂದೆ ಸುಂದರವಾದ ಮಾಸ್ತಿಕಲ್ಲೊಂದಿದೆ ವೀರಮರಣವನ್ನು ಪಡೆದ ವೀರ ಖಡ್ಗವನ್ನು ಹಿಡಿದಿದ್ದಾನೆ. ಎಡಭಾಗಕ್ಕೆ ಅವನ ಸತಿ ಬಲಗೈಯನ್ನು ಮೇಲೆತ್ತಿ ಎಡಗೈಯನ್ನು ಸೊಂಟದ ಮೇಲಿಟ್ಟು ನಿಂತಿದ್ದಾಳೆ. ಆ ಇಬ್ಬರ ಚಿತ್ರ ಕಣ್ಕಟ್ಟುವಂತಿದೆ.

ಈಚೆಗೆ ದೊರೆತ ಮೂರು ಒಡೆದುಹೋದ ಸ್ತಂಭಶಾಸನಗಳಲ್ಲಿ ಮೊದಲನೆಯದು ಶಕವರ್ಷ ೯೩೬ (ಕ್ರಿ.ಶ.೧೦೧೪) ರಲ್ಲಿ ರಚನೆಗೊಂಡಿದ್ದು; ಸದ್ಯ ಅದು ರಾಮಚಂದ್ರಪ್ಪ ಪಾಟೀಲರ ಮನೆಯ ಮುಂದೆ ಬಿದ್ದಿದೆ. ಮೇಲ್ಭಾಗ ಒಡೆದುಹೋದ ಈ ಶಾಸನ ೧೪" ಉದ್ದ ೯.೫" ಅಗಲ ೯" ದಪ್ಪವಿದ್ದು, ಕರಿಯಕಲ್ಲಿನ ನಾಲ್ಕು ಮುಖಗಳನ್ನು ನುಣುಪಾಗಿ ಮಾಡಿಕೊಂಡು ೧" ದಪ್ಪ ಅಕ್ಷರಗಳಲ್ಲಿ ಕೊರೆಯಲಾಗಿದೆ. ಹೊಡೆ ಅಗೆತದಲ್ಲಿ ದೊರೆತು ಈಗ ನೀಲಕಂಠ ಪತ್ತಾರ ಅವರ ಮನೆಯಲ್ಲಿರುವ ಎರಡನೆಯ ಸ್ತಂಭಶಾಸನ ಶಕವರ್ಷ ೯೬೬(ಕ್ರಿ.ಶ.೧೦೪೧) ರಲ್ಲಿ ರಚನೆ

ಗೊಂಡು "ಪ್ರಚಂಡ ಬಯ್ಸರೊಳ್ಗಂಡ ಕೊಂತಳರೆಬ್ಬಯ್ಯ" ತುಂಬಿಗೆಯ ಕಾರ್ತಿಕೆಯ ದೇವರಿಗೆ ಭೂಮಿ ಲಂಜುಂಡ(ನಂಜುಂಡ) ಪಾಣಿಯರ್ಗೆ ಗದ್ಯಾಣ ದಾನ ಕೊಟ್ಟದ್ದನ್ನು ಹೇಳುತ್ತದೆ. ಈ ರೆಬ್ಬಯ್ಯನನ್ನು ಕ್ರಿ.ಶ ೧೦೨೭ರ ಗೋಲಗೇರಿ ಶಾಸನ ೧೨ "ಮಹಾಸಾಮಂತ ಪ್ರಚಂಡ ದಂಡನಾಥ ಶ್ರೀಮತು ಬಯ್ಸರೊಳ್ಗಂಡ ರೆಬ್ಬರಸರ್" ಎಂದು ಕರೆದಿದೆ. ಮೇಲ್ಭಾಗ ಒಡೆದು ಹೋಗಿರುವ ಈ ಶಾಸನವನ್ನು ನಾಲ್ಕೂ ನಿಟ್ಟಿನಲ್ಲಿ ೧"ದಪ್ಪ ಅಕ್ಷರಗಳಿಂದ ಕೊರೆಯಲಾಗಿದೆ. ಅದರ ಒಂದು ಮತ್ತು ಎರಡನೆಯ ಮುಖದ ಉದ್ದ ೨೩" ಮೂರನೆಯ ಮುಖದ ಉದ್ದ ೧೯" ನಾಲ್ಕನೆಯ ಮುಖದ ಉದ್ದ ೧೫.೫" ಒಂದು ಮತ್ತು ಮೂರನೆಯ ಮುಖದ ಅಗಲ ೧೩.೫" ಎರಡು ಮತ್ತು ನಾಲ್ಕನೆಯ ಮುಖದ ಅಗಲ ೬" ಇವೆ.

ಊರ ಚಾವಡಿಯ ಎಡಭಾಗದಲ್ಲಿಯ ಕೊತ್ತಳ ಅಗೆತದಲ್ಲಿ ದೊರೆತ ಮೂರನೆಯ ಸ್ತಂಭಶಾಸನ ಶಕವರ್ಷ ೯೬೬ (ಕಿ.ಶ. ೧೦೪೪)ರಲ್ಲಿ ಹುಟ್ಟಿಕೊಂಡಿದೆ. ಶಾಸನದಲ್ಲಿ ಮೈಲಬ್ಬರಿಸಿ ಮಗಂಬಯ್ಸ —ನುಂ ಎಂಬ ಉಲ್ಲೇಖ ಬಂದಿದ್ದು; ಇಲ್ಲಿಯ ಮೈಲಬ್ಬರಸಿ ಸಮಕಾಲೀನ ಕಲ್ಯಾಣ ಚಾಲುಕ್ಯ ಮೊದಲನೆಯ ಸೋಮೇಶ್ವರನ ಹಿರಿಯರಸಿ ಮೈಳಲದೇವಿಯಾಗಿರಬೇಕು. ಈ ವರೆಗೆ ಸೋಮೇಶ್ವರನ ಅಗ್ರಮಹಿಷಿ ಬಾಚಲದೇವಿಗೆ ಮಾತ್ರ ಮಕ್ಕಳಿದ್ದುದಾಗಿ ತಿಳಿದಿದೆ. ಆದರೆ ಈ ಶಾಸನ ಮೈಳಲದೇವಿಗೂ ಮಗನಿದ್ದನೆಂಬ ವಿಷಯವನ್ನು ಪ್ರಥಮಬಾರಿಗೆ ತಿಳಿಸುತ್ತದೆ. ದುರ್ದೈವದಿಂದ ಅವನ ಹೆಸರು ಕಳೆದುಹೋಗಿದೆ. ಕೇತಗಾವುಂಡನ ಗಾವುಂಡಿ ಮಲಿಯಬ್ಬೆ ಮಗ ಬಾಚಿಗಾವುಂಡ ಶಾಲೆಯ ಪಿಡಳಿಗೆ ದಾನ ಬಿಟ್ಟ ಉಲ್ಲೇಖ ಈ ಶಾಸನದ ಮತ್ತೊಂದೆಡೆ ಬಂದಿದೆ. ಈ ಶಾಸನ ಕಾಲಕ್ಕೆ ಬಾಚಿಗಾವುಂಡನ ತಂದೆ ಇರಲಿಕ್ಕಿಲ್ಲ ಅಂತೆಯೇ ತಾಯಿಯ ಹೆಸರನ್ನು ಹೇಳಲಾಗಿದೆ. ನಾಲ್ಕೂ ಮುಖಗಳಲ್ಲಿ ೧" ದಪ್ಪ ಅಕ್ಷರಗಳನ್ನು ಆಳವಾಗಿ ಕೊರೆಯಲಾದ ಈ ಶಾಸನಭಾಗ ೧೦.೫" ಉದ್ದ, ೧೦.೫" ದಪ್ಪಗಿದೆ. ಈ ಮೂರೂ ಶಾಸನಗಳ ಪಾಠವನ್ನು ಕೆಳಗೆ ಕೊಡಲಾಗಿದೆ.

ಸ್ತಂಭ ಶಾಸನ ೧

I ಒಂದನೆಯ ಮುಖ

೧) ಸಂವತ್ಸರ ಸತಂಗ [ಳ್]
೨) ೯೩೬ ನೆಯ ಆ[ನ]
೩) [ನ್ದ] ಸಂವತ್ಸರದ ತದ್ವ
೪) ರಿಷಾಭ್ಯಂತರದ ಮಾ
೫) ರ್ಗ್ಗಶಿರ ಬಹುಳ ಅ
೬) ಮವಾಸ್ಯ ಮಂಗಳವಾ
೭) ರಂ ವೃಶ್ಚಿಕ ಸಂಕ್ರಾಂತಿ
೮) ಯನ್ದು ಪಗಲಟ್ಟ ೩೦೦
೯) [ಋಙಬಳ]ಯ ....

II ಎರಡನೆಯ ಮುಖ

ಪೂರ್ಣ ಅಳಿಸಿ ಹೋಗಿದೆ.

III ಮೂರನೆಯ ಮುಖ

೧) ....ಈ....
೨) ....ಪ್ರತಿಪಾಳಿಸು [ವ]
೩) [ರಿ]ಂತಪ್ಪ ಸಶ್ರವನ
೪) ಳಿದಾತಂ ಬಾಣರಾಸಿ
೫) ಯೊಳ್ ಪನ್ನಿರ್ವ್ವರ್ಬ್ರ
೬) ಹ್ಮಣರುವಂ ಪನ್ನೆ
೭) ರಡುಭಯಮು
೮) ಖಿಯುಮನಳಿ
೯) ದ ಪಾತಕವೆಯ್ದು
೧೦) ....ಸ ಸಾಮಾನ್ಯೋ
೧೧) [ಯ]ಂ ಧರ್ಮಸೇತುಂ ನೃ
೧೨) ...ಣಾ..........

IV ನಾಲ್ಕನೆಯ ಮುಖ

೧) ....ತ............

12) S II. xx, No. 22.

೨) ತ್ತಾಂ ಪರದತ್ತಾಂ ವಾ
೩) ಯೋ ಹರೇತ ವ
೪) ಸುಂದರಾಂ ಷಷ್ಠಿಂ
೫) ವಂಷ ಸಹಸ್ರಾ
೬) ಣಿವಿಷ್ಠಾಯಾಂ ಜಾ
೭) ಯತೇ ಕ್ರಿಮಿಃ ||
೮) ಮಂಗಳ ಮಹಾಶ್ರೀ ||

ಸ್ತಂಭ ಶಾಸನ ೨

I ಒಂದನೆಯ ಮುಖ

೧) ...ತ್ರಂವಿಸಿ - - - -
೨) ...ಜತ್ತಲಟ್ಟಂ ನಿಜ [ಬ]
೩) [ಳ] ಪ್ರತಣ್ಡಂ ಬಯ್ಸರೊಳ್ಗಣ್ಡ [ಂ]
೪) [ಶ್ರೀ] ಮತ ಕೊಂತಳ ರೆಬ್ಬಯ್ಯಂ
೫) ಸ್ವಸ್ತಿ ಸಿಕನೃಪ ಕಾಳಾತಿತ ನಾಮ
೬) ದೇಯ ಸಂವತ್ಸರ ಶತಂಗ ೯೪೩ನೆ
೭) ಯ ದುರ್ಮುಖಿ ಸಂವತ್ಸರಂ ಪ್ರವರ್ತ್ತಿ
೮) ಸುತ್ತಮಿರೆ ತದ್ವರಿಷಾಭ್ಯಂತರದ
೯) ವೈಶಾಖ ಸುದ್ಧ ಅಕ್ಷಯ ತದಿಯ ಸೋ
೧೦) ಮವಾರದಂದು ತುಂಬಿಗೆಯ ಸ್ವಾಮಿ
೧೧) ಕಾರ್ತಿಕೇಯ ದೇವರ್ಗ್ಗೆ ತನ್ನ ಮಾನ್ಯ
೧೨) ದೊಳಗೆ ಧರ್ಮಾಭಿವೃದ್ಧಿ ಪ್ರವರ್ದ್ಧಮಾ
೧೩) ನಮಾಚಂದ್ರಸ್ತಾಯಿಯಾಗಿ ಕೊಟ್ಟ ಕೆ[ಯ್]
೧೪) ಮತ್ತರಯ್ವತ್ತು ಇನ್ತಾ ಫಲ........

II ಎರಡನೆಯ ಮುಖ

೧) .... ರದೊ [ಳ್]......
೨) ಸಗರಾಭ್ಯದೊಳ್
೩) ...ಂಕಱಸಮು
೪) [ಹಾಮು] ಣ್ಣಳೇಶ್ವರ
೫) ಮುಂದಿನ ಭಾಗ ಸಂಪೂರ್ಣ ಅಳಸಿ ಹೋಗಿದೆ.

III ಮೂರನೆಯ ಮುಖ

೧) ... ಖ ದಿವೂ ....
೨) [ನ] ಕೆ ಪಣ ೧೫ ಲನ್ನುಣ್ಡ ಮಾ
೩) [ಣಿ] ಯರಿಗೆ ಕ-ದ ಗದ್ಯಾಣ
೪) ಮತ್ತಾ ಮಹಾಪಕ್ಷದ ವೃತ...
೫) ...ನ್ದನಾ ಪಂಚಮಿಯ [ಭಾ] ಜನಕೆ ಪ
೬) ಣ ೧೫ ಕ [ಪ್ಪುರ] ...... ಮತ್ತಾ
೭) ಕಾರ್ತ್ತಿಕದ ವೃತಿಪಾತ ಹುಣ್ಣಿ [ಮೆ]
೮) ...[ಜ] ನಕೆ ಪಣ ೧೫ ಲನ್ಬುಂಡ ಮಾ
೯) ಣಿಯರಿಗೆ ಕ...ದದ ಗದ್ಯಾಣ ೧೩
೧೦) ಇದನ್ನಾವಂ ಪಾಲಿಸಿದಾತಂಗೆ ಬಾ
೧೧) ಣರಾಸಿಯ ಪನ್ನಿರ್ಛ್ವರುಮ [ಂ]
೧೨) ಬ್ರಾಹ್ಮಣರನಳಿದ ದೋಷಂ...

IV ನಾಲ್ಕನೆಯ ಮುಖ

೧) ... ಸ್ಯತ... ... ...
೨) ಸ್ವದತ್ತಾ ಪರ [ದತ್ತಾ]
೩) ವಾಯೋಹರೇತ
೪) ವಸುಂಧರಾ ಷಷ್ಟಿ
೫) ರ್ಬ್ಬರಿಷ ಸಹಸ್ರಾ
೬) ಣಿ ವಿಷ್ಠಾಯಾಂ ಜಾ
೭) ಯತೇಕ್ರಿಮಿಃ ಈಥ
೮) ಮ್ಮರ್ಕಾವನಾನುಂ ತ
೯) ಪ್ಪಿದಾತಂ ಬಾಣರಾ
೧೦) ಸಿಯಲ್ಲಾಶಿರ್ವ್ವಬ್ರಾರ್
೧೧) ಹ್ಮಣರುಮಂ ಪನ್ನೆ
೧೨) ರಡುಭಯಮುಖಿ
೧೩) ಯಾನಳಿದ ಪಾತಕನೆ
೧೪) ಯ್ದುಗುಂ............

ಸ್ತಂಭಶಾಸನ ೩

I ಒಂದನೆಯ ಮುಖ

೧) ರ ಶ್ರೀಕಾನ್ತಸುವ
೨) ರ್ಣ್ಣಪುರೋದ್ಭವಕುಳ
೩) ತಿಳಕಂ ರಣರಂ
೪) ಗರಾಮಂ ಪರಬಳ
೫) ಭೀಮನತಿಸಯ

II ಎರಡನೆಯ ಮುಖ

೧) ರಯುರಪ್ಪ ಶ್ರೀ—
೨) ವೈಲಸಬ್ಬರಸಿ
೩) ಮಗಂ ಬಾಯ್ಸ
೪) ನುಂ ಸಕನೃಪಕಾ [ಳಾತೀತ]
೫) ಸಂವತ್ಸರ ಸ [ತಂಗಳ್]
೬) ೯೬೬ ನೆಯ ತಾರ [ಕ]

III ಮೂರನೆಯ ಮುಖ

೧) ......ರನಯುಳಿದ
೨) [ಸಾಸಿ] ಬ್ರಾಹ್ಮಣರು
೩) [ಮು]ಂ ಪನ್ನೆರಡುಭಯ
೪) ಮುಖಿಯುಮ [ನ]
೫) ಳಿದ ಪಾತಕ ಎಯ್ದುಗು

IV ನಾಲ್ಕನೆಯ ಮುಖ

೧) ಯಾಂ ಜಾಯತೇ
೨) ಕ್ರಿಮಿಃ ॥ ಸ್ವಸ್ತಿ
೩) ಶಾಲೆಯ ಪಡಳಿಗೆ ಕೇತಗಾವುಣ್ಡನ ಗಾವು
೪) ಣ್ಡಿ ಮಲ್ಲಿಯಬ್ಬೆ ಮಗ ಜಾಚಿಗಾವುಣ್ಡ
೫) ಮುಂದಿನ ಭಾಗ ಸವೆದು ಹೋಗಿದೆ.

ಮಾಳ : ಒಂದು ವಿವೇಚನೆ

ಸದಾನಂದ ಪಾಟೀಲ

ಕವಿರಾಜ ಮಾರ್ಗದ ಪುಟ ತಿರುವಿದಾಗ ಗೌರವ ದೋಷಕ್ಕೆ ಉದಾಹರಣೆಯಾಗಿ ಬಂದ ಲಕ್ಷ್ಯ ಪದ್ಯ 'ಅಳಿಮಾನಿಸನಾಗದೆ ಮಾಳದೊಳ್ ಮೋದದಿಂ ನುಡುವ ಸೀರೆಗಂ' ಎಂಬಲ್ಲಿನ 'ಮಾಳ' ಕಣ್ ಸೆಳೆಯುತ್ತದೆ. ಕನ್ನಡದ ಮೊದಲ ಕೃತಿಯಲ್ಲಿದು ಬಂದಿರುವುದರಿಂದ ಅದರ ಸುತ್ತ ಒಂದಿಷ್ಟು ಸುತ್ತಬೇಕೆನಿಸುತ್ತದೆ.

ರೆವರೆಂಡ್ ರೀವ್ ಅವರ ಕೋಶದಲ್ಲಿ ಮಾಳಕ್ಕೆ ಮಾಹಾಳ, ಮಾಳದಮವಾಸ್ಯೆ ಮಹಾಲಯವೆಂದೂ A general ceremony of presenting offerings to the manes of deceased ancestores in the dark fort-night prior to the Dasara ಎಂದಿದೆ. ಕಾರಂತರ ಹಾಗೂ ಸಂಸ್ಕೃತ ಕೋಶವಲ್ಲಿ ಮಾಳಕ್ಕೆ ಮಹಾಲಯವೆಂತಲೂ ಸಂಪೂರ್ಣವಾಗಿ ಲೋಕವು ನಾಶವಾಗುವ ಕಾಲ ಭಾದ್ರಪದ ಮಾಸದ ಕೃಷ್ಣಪಕ್ಷ, ಸರ್ವಪಿತೃಗಳಿಗೆ ಪಿಂಡದಾನ ಮಾಡುವ ಒಂದು 'ಶ್ರಾದ್ಧ' ಎಂದಿದೆ.

ಮಹಾಲಯದ ಸ್ವರ ಪಲ್ಲಟ ಕ್ರಿಯೆಯಿಂದಾಗಿ ಮಹಲ, ಮಹಳ, ಮಾಳ ಎಂದು ಬೇರೆ ಬೇರೆ ಅರ್ಥ ವ್ಯತ್ಯಾಸಗಳಿಂದ ಈ ಶಬ್ದಗಳು ಜನತೆಯ ಬದುಕಿನಲ್ಲಿ ವ್ಯವಹರಿಸಿವೆ. 'ಮರುಸ್ಥಳದ ಮಾಳದೊಳೆ' ಏಳುಂ ಮಾಳನುಮಂ'ಇ 'ಸಂತಿಮಾಳ, ಸಡುಮಾಳ, ಗೋಮಾಳ, ಮಾಳಮರಡಿ—ಇವು ಪರ್ವತ ದೇಶ, ಬಯಲು ಜಾಗ, ಅಂಗಳ, ಹುಲ್ಲ ಬಯಲು ಎಂಬರ್ಥದಲ್ಲಿ, ಮಹಳ-ಮಾಳ, ಮಾಳಪ್ಪ, ಮಹಳವ್ವ ಕುಂಬಾರ ಮಾಳ, ಅಗಸರ ಮಾಳಿ—ಹೆಸರಿನರ್ಥದಲ್ಲಿ ಮಹಲ-ಮಹಲು, ಮಾಲಗಂಬ ಕಟ್ಟದ ಸ್ವರೂಪದರ್ಥದಲ್ಲಿ—ಹೀಗೆ ಸ್ಥಳವಾಚಿಯಾಗಿ, ದೇಶವಾಚಿಯಾಗಿ, ವ್ಯಕ್ತಿವಾಚಿಯಾಗಿ, ವಸ್ತುವಾಚಿಯಾಗಿ 'ಮಾಳ'ವನ್ನು ಗಮನಿಸಬಹುದಾಗಿದೆ. ಆದರೆ ಇವುಗಳಿಂದ ಭಿನ್ನವಾಗಿ 'ಮಾಳ' ಶ್ರಾದ್ಧದ ಆಚರಣೆಯಾಗಿದೆ ಪಕ್ಷವಾಗಿದೆ, ಹಬ್ಬವಾಗಿದೆ, ದೇವರಾಗಿದೆ.

ಗತ ಇತಿಹಾಸದಲ್ಲಿ ಪ್ರಕೃತಿಗೊಂದು ತಿರುವುಕೊಟ್ಟ ಸನ್ನಿವೇಶಕ್ಕೆ ವೇದಕಾಲೀನರು ಅಥವಾ ಅದಕ್ಕೂ ಪೂರ್ವಜರು 'ಮಹಾಲಯ'ವೆಂದು ಕರೆದಿರಬೇಕು.

ತಮ್ಮ ಹಿರಿಯರ ಸಾವು ತಮತಮಗೆ ಮಹಾಪ್ರಳಯದಂತೆ ಭಾಸವಾಗಿದ್ದರಿಂದ ಮಹಾಲಯಕ್ಕೆ ಆರಾಧಿಸಿದ್ದನ್ನೇ ಶ್ರಾದ್ಧದ ಹೆಸರಿನಲ್ಲಿ ತಮ್ಮ ಹಿರಿಯರ ಸಾವಿಗೆ ಶಾಂತಿಯನ್ನು ಬಯಸಿ ಆಚರಿಸುತ್ತ ಬಂದಿರಬೇಕು. ಬ್ರಾಹ್ಮಣರ ಆಚರಣೆಯು ಹಿಂದೂ ಧರ್ಮದ ತುಂಬ ಮಡಿ ಮೈಲಿಗೆ, ಹುಟ್ಟು-ಸಾವು, ಹೊಲೆ-ಸೂತಕ ಮುಟ್ಟು-ಮುಡಚಟ್ಟುಗಳ ಗದ್ದಲವೇ ತುಂಬಿಕೊಂಡಿದ್ದನ್ನು ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ.[೪] ಅಂತಹ ಮಡಿ ಮೈಲಿಗೆಯ ಬದುಕಿಗೆ ಸಂಬಂಧಿಸಿ ಸಾವು ಹಾಗೂ ಪುನರ್ಜನ್ಮದ ಸುತ್ತಲೂ ಹಬ್ಬಿರುವ ಆಚರಣೆ "ಶ್ರಾದ್ಧ'ವಾಗಿದೆ. ಇದೇ, ಕೆಳವರ್ಗದವರ ಅಥವಾ ಜಾನಪದರ ಬಾಯಲ್ಲಿ 'ಸತ್ತವರಿಗೆ ಶಾಂತಿ' ಕೋರಿ ಹೋದವರ ಪುಣ್ಯಸ್ಮರಣೆ" "ಹಿರೇರ ಹಬ್ಬ"ವಾಗಿದೆ. ಈ ಬಾಯನಿಸಿಕೆಗೆ ಕಾರಣವಿಷ್ಟೇ, ಮಡಿ ಮೈಲಿಗೆಯ ವಿಚಿತ್ರ ಆಚರಣೆಯು ಮೇಲ್‌ವರ್ಗದವರಿಗಿಂತ ಇತರೆಯವರಲ್ಲಿ ಆಚರಣೆಯ ವಿಧಿಕ್ರಿಯೆ, ಅವುಗಳ ಸುತ್ತಲಿರುವ ಮಾನಸಿಕ-ಆವರಣ ಬೇರೆಯಿದ್ದುದು.

ಶ್ರಾದ್ಧ, ಪುಣ್ಯತಿಥಿ, ಹಿರೇರ ಹಬ್ಬ, ಮಾಳ-ಇವೆಲ್ಲ ಹಿರಿಯರ ದಿನಾಚರಣೆಗಳಾಗಿದ್ದರೂ "ಶ್ರಾದ್ಧ"ಕ್ಕಿರುವ ಆವರಣ ಧರ್ಮಕ್ಕಂಟಿಕೊಂಡೇ ಬರುತ್ತದೆ. ಉದಾ:—ಬ್ರಾಹ್ಮಣರ ಶ್ರಾದ್ಧವು ಅಮಂಗಲ ಅಶುಚಿತ್ವದ ಮೈಲಿಗೆಯನ್ನು ತೊಳೆಯುವುದಾಗಿದೆ. ‹ಮಣ್ಣಿನ ಕಾಯ 'ಮಣ್ಣಾಯಿತು'. ಎಂಬ ನಿಸರ್ಗ ಸಹಜದ ಹುಟ್ಟುಸಾವಿಗೆ ಲಿಂಗದಾವರಣ ಹಾಕುವ ಲಿಂಗಾಯತರ ಆಚರಣೆಗೂ, ಶ್ರಾದ್ಧಕ್ಕೂ ಬಹುದಂತರವಿದೆ. ಸತ್ತವರ ಚಿರಂತನ ನೆನಪನ್ನು ಮರುಕೊಳಿಸುವದಕ್ಕಾಗಿ ಮಾಡುವ ಆಚರಣೆ ಪುಣ್ಯತಿಥಿ, ಹಿರೇರಹಬ್ಬ, ಮಾಳವಾದರೆ, ಸತ್ತವರ ಸೂತಕ ಕಳೆಯುವ, ಮೈಲಿಗೆ ಮಡಿ ಮಾಡುವದು ಶ್ರಾದ್ಧವಾಗಿದೆ.

ಅಭಿಪ್ರಾಯಗಳು ಆಚರಣೆಗಳು: ಪುರಾತನ ಕಾಲದಿಂದ ವ್ಯಾಪಕವಾಗಿ ಪ್ರಭಾವ ಬೀರಿದ ಹಿಂದೂ ಧರ್ಮವು ನಡುನಡುವೆ ನಡೆದ ಅನೇಕ ಸಂಘರ್ಷಗಳಲ್ಲೂ ಕಲಬೆರಕೆಯಾಗಿ ತನ್ನ ಪ್ರಭಾವವನ್ನು ಕಡಿಮೆ ಮಾಡಿಸಿಕೊಂಡಿಲ್ಲ. ಹೀಗಾಗಿ ಶ್ರಾದ್ಧದ ಆಚರಣೆಯ ವಿಧವು ಒಂದೇ ರೀತಿಯಲ್ಲಿದೆ. ಬೇರೆ ಬೇರೆ ಜಾತಿಯರಲ್ಲಿ 'ಶ್ರಾದ್ಧ' ಬೇರೆ ಬೇರೆ ಹೆಸರಿನಲ್ಲಿ ಪ್ರಚಲಿತವಿದೆ. ವೈದಿಕ, ತದ್ದಿನ, ಕಾಲಶ್ರಾದ್ಧ, ಪಿಂಡಶ್ರಾದ್ಧ, ಇತ್ಯಾದಿ ಇತರ ಹೆಸರುಗಳು ಜಾನಪದರಲ್ಲಿ "ಮೂರ್ಕೊಳು" ಎಂಬ ಆಚರಣೆ ಇದೆ. ವ್ಯಕ್ತಿ ಸತ್ತ ಮೂರನೆಯ ದಿನಕ್ಕೆ 'ದಿನ' ಮಾಡುತ್ತಾರೆ. ಸತ್ತ ವ್ಯಕ್ತಿ ಆಶೆಪಡುತ್ತಿದ್ದ, ಉಪಯೋಗಿಸಿದ ಎಲ್ಲ ದಿನಿಸುಗಳನ್ನು ದೊಡ್ಡ ಪರಾತದಲ್ಲಿಟ್ಟುಕೊಂಡು ಹೋಗಿ ಸತ್ತ ವ್ಯಕ್ತಿಯ 'ಕುಣಿ'ಯ ಮೇಲೆ ಇಟ್ಟು ಕಾಯ್ದುಕೂಡ್ರುವರು. ಕೆಲ ಹೊತ್ತಿನಲ್ಲಿಯೇ ಕಾಗೆಗಳು ಬಂದು ಅದನ್ನು ತಿನ್ನಬೇಕು. ಹಾಗೊಂದ ವೇಳೆ ಅವು ಬರಲು ತಡ ಮಾಡಿದರೆ ಸತ್ತ ವ್ಯಕ್ತಿಯ ಆಶೆಗಳಿನ್ನೂ ತೀರಿಲ್ಲವೆಂದರ್ಥ.

ಈ ಆಚರಣೆಗೆ ಬ್ರಾಹ್ಮಣ ಶ್ರಾದ್ಧ, ಕರ್ಮದ ಪ್ರಭಾವವಿದೆ.

ಬ್ರಾಹ್ಮಣ ವರ್ಗದಲ್ಲಿ ಸತ್ತ ವ್ಯಕ್ತಿಯ ಹನ್ನೊಂದನೆಯ ದಿನಕ್ಕೋ, ಹದಿನಾರನೆಯ ದಿನಕ್ಕೋ ಶ್ರಾದ್ಧ ಮಾಡುತ್ತಾರೆ. ಪಿತೃ ಕರ್ಮಗಳು ಮುಗಿದ ನಂತರ ಸತ್ತ ವ್ಯಕ್ತಿಯ ಆಸೆಯ ಎಲ್ಲ ದಿನಿಸುಗಳನ್ನು ಸತ್ತಾತನ ಆತ್ಮ ಶಾಂತಿಗೆ ಒಯ್ಯುತ್ತಾರೆ. ಕಾಗೆಗಳು ಬರಬೇಕು ಬರದೇ ಹೋದರೆ ಸತ್ತವನ ಆತ್ಮ ಶಾಂತಿ ಸಿಕ್ಕಿಲ್ಲವೆಂದರ್ಥ. ಇದು ನಿಜವೆನ್ನುವ ಹಾಗೆ ಕೆಲಸಾರೆ ಕಾಗೆಗಳು ಆ ಎಡೆಗಳ ಮೇಲೆ ಹಾರುತ್ತಿರುತ್ತವೆ. ಕಚ್ಚುವದಿಲ್ಲ. ಇದು ಸತ್ತಾತನ ಪೀಡೆ ತೊಲಗಿಲ್ಲವೆಂಬ ನಂಬಿಕೆಗೆ ಸಾಕ್ಷಿಯಾಗಿ ಶ್ರಾದ್ಧ ಮಾಡಿದವರು ರೋಸಿ ಹೋಗುವುದುಂಟು. ಮರಣಾ ನಂತರದಲ್ಲಿ ಈ ಶ್ರಾದ್ಧವು ಪ್ರತಿ ವರುಷ ಸತ್ತ ತಿಥಿಯೆಂದು ಆಚರಿಸಲ್ಪಡುತ್ತದೆ. ಹಿರಿಯ ಮಗನು ನಡೆಯಿಸುತ್ತಾನೆ. ಒಂದು ವೇಳೆ ಆತನ ಮದುವೆಯಾಗಿರದಿದ್ದರೆ 'ಕಳ್ಳ ಜನಿವಾರ' ಧರಿಸಿಕೊಂಡು ಹಿರಿಯರ ಶ್ರಾದ್ಧ ಮಾಡುತ್ತಾನೆ. ಪುರೋಹಿತರು ಪೂಜೆಮಾಡುತ್ತಾರೆ. ಸತ್ತವರ ಎಡೆಗೆಂದು ಪ್ರತ್ಯೇಕ ಅಡಿಗೆ ಮಾಡಿಸಿರುತ್ತಾರೆ. ಅದನ್ನು ಮರೆತೂ ಕೂಡ ಇತರರು ಮುಟ್ಟುವ ಹಾಗಿಲ್ಲ. ಪೂಜೆಯ ನಂತರ ಎಡೆಯನ್ನು ಮಾಳಿಗೆಯ ಮೇಲಿಟ್ಟು ಕಾಗೆಯನ್ನು ಕರೆಯುತ್ತಾರೆ.

ಇತರ ವರ್ಗಗಳಲ್ಲಿ ಪ್ರತಿ ವರುಷವೂ ಇದನ್ನೇ 'ಹಿರೇರ ಹಬ್ಬ'ವೆಂದು ಆಚರಿಸುತ್ತಾರೆ. ಅಲ್ಲಿಯೂ ಬ್ರಾಹ್ಮಣ ಬಳುವಳಿಯಾಗಿ ಕಾಗೆಗಳ ಬರುವನ್ನು ಹಾರೈಸುವ ಕ್ರಿಯೆ ಇದೆ.

ಬ್ರಾಹ್ಮಣರು, ಇತರ ಕೆಲವರು ಮಹಾಲಯ ಅಮವಾಸ್ಯೆಯ ಹಿಂದೆ ಬರುವ ಕೃಷ್ಣಪಕ್ಷವನ್ನು ಮಾಳಪಕ್ಷವೆಂದು ಶ್ರಾದ್ಧಕ್ಕೆ ಉಪಯೋಗಿಸಿದರೆ 'ಮನಸ್ಸಿಗೆ ಬಂದಂತೆ' ಉಪಯೋಗಿಸುವವರೂ ಕೆಲವರುಂಟು. ದೀಪಾವಳಿ, ದಸರೆ, ಯುಗಾದಿಯಲ್ಲಿ, ಹೊಸ ಅರಿವೆ ಕೊಂಡ ದಿನಗಳಲ್ಲಿ ಹಿರಿಯರ ಹಬ್ಬ ಜಾನಪದದಲ್ಲಿ ನಡೆದುಹೋಗುತ್ತದೆ. ನೀಟಾದ ಮಡಿಕೆ ಮಾಡಿ, ಹೊಸ ಧೋತರ ಸೀರೆಯನ್ನು ಅಜ್ಜ, ಅಪ್ಪ, ಅವ್ವ ಅಮ್ಮಾನಿಗೆಂದು ಏರಿಸಿ, ಪೂಜಿಸಿ, ಎಡೆ ಮಾಡಿ ಊಟ ಮಾಡುವದುಂಟು.

ಎಡೆಗಳನ್ನಿಟ್ಟು ಕಾಗೆ ಕರೆಯುತ್ತ ಮಾಡುವ ಶ್ರಾದ್ಧವನ್ನು 'ಮಾಳ'ದ ಹೆಸರಿನಲ್ಲಿ ಆರೇರು, ಹಟಗರು, ಮಾದಿಗರು, ಹರಿಜನರು, ಗೊಲ್ಲೆಯರು— ಕೆಳ ವರ್ಗದವರು ಮಾಡುತ್ತಾರೆ. ಸತ್ತವರ ಬಯಕೆಯ ವಸ್ತುಗಳನ್ನೆಲ್ಲಾ ಸಂಗ್ರಹಿಸಿ ವಿಶೇಷ ಅಡಿಗೆ ಮಾಡಿ ಕುಂಬಳ ಎಲೆಯಲ್ಲಿ ಎಡೆ ಹಾಕಿ ಕುಂಬಿಯ ಮೇಲಿಟ್ಟು ಬರುವುದು. ಅವುಗಳನ್ನು ಕಾಗೆ ತಿನ್ನುವದು. ಆ ಸಂದರ್ಭದಲ್ಲಿ ಮಾಡಿದ ಎಡೆಗಳಲ್ಲಿ ಗಂಡಸರ...ಹೆಂಗಸರ ಎಂದು ಭಾಗ ಮಾಡಿ, ಮಡಿಕೆ ಮಾಡಿಟ್ಟ

ಸೀರೆ-ಧೋತರಗಳೆಮರು ಇಟ್ಟಿರುತ್ತಾರೆ. ಎಣ್ಣೆ ಕುಂಕುಮ ಕೊಟ್ಟು ಮುತ್ತೈದೆಯರನ್ನು ಕರೆದಿರುತ್ತಾರೆ. ಊಟಕ್ಕಾಗಿ ಗಂಡಸರನ್ನೂ ಆಹ್ವಾನಿಸಿರುತ್ತಾರೆ. ಹೆಂಗಸರು ತೀರಿ ಹೋದ ಹೆಂಗಸರ ಎಡೆಯನ್ನುಂಡರೆ ಗಂಡಸರು ತೀರಿ ಹೋದ ಗಂಡಸರ ಎಡೆಯನ್ನು ಸೇವಿಸುತ್ತಾರೆ.

ಕಾಗೆ :– ಕಾಗೆಗೆ ಇನ್ನೊಂದು ಅರ್ಥ ಮಹಾಲೋಭಿ. ಪ್ರಕೃತಿಯನ್ನು ಅರ್ಥೈಸಿಕೊಂಡ ಆದಿಮಾನವ ತನ್ನಾಚರಣೆಗೆ ಉಪಯೋಗಿಸಿಕೊಂಡ ಒಂದು ಆಸೆಬುರುಕು ಪಕ್ಷಿ ಇದು. ಉಪದೇಶಕ್ ಹೇಗಿರಬೇಕು ಎಂಬುದಕ್ಕೆ 'ವಾಯಸದಂತೆ ನೋಡು' ಎಂದು ಕಾಗೆಯನ್ನು ಉದಾಹರಿಸಿದ ಪದ್ಯವೊಂದಿದೆ.[೫] ಅದೆಷ್ಟು ಚಂಚಲ ಎಷ್ಟೆಡೆ ನೋಡಬಹುದೆಂಬುದಕ್ಕೆ ಈ ಹೋಲಿಕೆ ಸಾಕು. ಇಂತಹ ಕಾಗೆಗಳ ಬರವನ್ನು ಹಾರೈಸಿ ನಿಲ್ಲುವ ಶ್ರಾದ್ಧಕಾರ–ಅವುಗಳ ಆಗಮನವನ್ನು ತನ್ನ ಹುಸಿ ಧರ್ಮಾಚರಣೆಯಾಗಿ ಬಳಸಿಕೊಂಡಿನುದು ವಿಷಾದನೀಯ. ಜನ್ಮಾಂ-ತರದ ಬಂಧು, ಪುನರ್ಜನ್ಮದ ಪ್ರತ್ಯಕ್ಷ ಹಿರಿಯ, ಹತ್ತಿರದ ನೆಂಟನಾಗುವ ಈ ಕಾಗೆ ಸಾಂಪ್ರದಾಯಕ್ಕೂ ಮೂಢನಂಬಿಕೆಗೂ ಸಾಕ್ಷಿಯಾಗಿದೆ. ಕಾಗೆ ಬರದೇ ಹದ್ದು ಬಂದರೆ ಹಿರಿಯರ ಆತ್ಮಕ್ಕೆ ಶಾಂತಿ ಇಲ್ಲ, ಶಾಂತಿ ಮಾಡಿಸುವವರ ಮನೆಗೆ ಪೀಡೆ ತಪ್ಪಿದ್ದಲ್ಲ.

ಮೂರ್ಖಳಿನ ಶ್ರಾದ್ಧವಾಗಲಿ, ಬ್ರಾಹ್ಮಣರ ಮರಣ ಶ್ರಾದ್ಧವಾಗಲಿ, ಪ್ರತಿ ವರ್ಷ ಆಚರಿಸುವ ತದ್ದಿನದಲ್ಲಾಗಲಿ ಹಾಗೆ ಎಡೆ ತಿಂದ ಕಾಗೆ ಯಾರ ಮೇಲೂ ಹಾಯಬಾರದು. ಹಾಯ್ದರೆ ಅದು ಅರಿಷ್ಟ ಅಷ್ಟೇ ಅಲ್ಲ ವಾಯು ಜೇನೆಯಂತಹ ರೋಗಕ್ಕೆ ಈ ಕಾಗೆ ಮೇಲೆ ಹಾರಿದ್ದೇ ಕಾರಣವೆನ್ನುತ್ತಾರೆ. ಏನಿದ್ದರೂ ಬ್ರಾಹ್ಮಣರ ಸಂಸ್ಕೃತಿಯಲ್ಲಿ, ಅದರ ಪ್ರಭಾವ ವಲಯದಲ್ಲಿ ಬಂದ ಇತರರಲ್ಲಿಯೂ ಸತ್ತ ಹಿರಿಯರೆಂದರೆ ಕಾಗೆಗಳು. ಬ್ರಾಹ್ಮಣರ ಕಾಗೆಗಳ ಎಡೆಯು ಪ್ರತ್ಯೇಕ ತಯಾರಾದರೆ ಇತರರಲ್ಲಿ ಅದು ಪ್ರತ್ಯೇಕವಾಗುವುದಿಲ್ಲ. ಬ್ರಾಹ್ಮಣ ಸಂಸ್ಕೃತಿಯ ಕಾಗೆ ಅಮಂಗಲವೂ ಹಾಗೂ ಸಾವಿನ ಓಲೆಕಾರನೂ ಆಗಿದ್ದರೆ ವೀರಶೈವರಲ್ಲಿ ಅದು ಸಮತಾವಾದದ ಹರಿಕಾರನೆಂದು ಚಿತ್ರಿತವಾಗಿದೆ.[೬] ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವ ಎಂಬ ಬಸವಣ್ಣನ ವಚನವೇ ಈ ಹುಸಿ ಮತ್ತು ಸಹಜ ಸಂಸ್ಕೃತಿಗೆ ಸಾಕ್ಷಿ. ಹಿರಿಯರ ಪುಣ್ಯತಿಥಿ ಆಚರಿಸುವ ಲಿಂಗಾಯತರಲ್ಲಿ ಶಿವಾರ್ಪಿತವೆಂದು ಗದ್ದುಗೆ ಮೇಲೆ ಕುಳಿತ ಜಂಗಮ ಮೂರ್ತಿಗೆ ಎಡೆ ಅರ್ಪಿಸುವ ಕ್ರಿಯೆಯಲ್ಲಿ ಕಾಗೆಗಳ ಬರವಿಲ್ಲ. ಹುಸಿ ಬಯಕೆಯ ತಳಮಳವಿಲ್ಲ. ಒಣ ಕಿರಿಕಿರಿಯಿಲ್ಲ.

ಎಡೆ :– ಸತ್ತವರು ಉಪಯೋಗಿಸುವ ಎಲ್ಲ ವಸ್ತುಗಳನ್ನು ಅಡುಗೆಯ ದಿನಿಸುಗಳನ್ನು ಪೂಜೆಗೆಂದು ಇಟ್ಟಿರುತ್ತಾರೆ. ಬ್ರಾಹ್ಮಣರು ಮೂರು ಅನ್ನದ ಉಂಡೆ

ಗಳನ್ನು ಮಾಡಿರುತ್ತಾರೆ. ಲಿಂಗಾಯತರು ತಮಗೆ ಬೇಕಾದ್ದನ್ನು ಮಾತ್ರ ಮಾಡಿರುತ್ತಾರೆ. ಕೆಳವರ್ಗಗಳಲ್ಲಿ ಸತ್ತವರು ಭೋಗಿಸಿದ, ಉಪಯೋಗಿಸಿದ ನಾನಾ ನಮೂನೆಯ ವಸ್ತುಗಳು ಅಡುಗೆಯ ಎಡೆಯೊಂದಿಗೆ ಪೂಜೆಗೊಳ್ಳುತ್ತವೆ. ಚುಟ್ಟಾ, ನಾಶೀಪುಡಿ, ಗಾಂಜ, ಸೆರೆ, ಎಲೆ, ಅಡಿಕೆ, ಸುಣ್ಣ ಮೊದಲ್ಗೊಂಡು ತಿನ್ನುವ ತಿಂಡಿಗಳು ಇರುತ್ತವೆ.

ಹಿರಿಯರ ಬಯಕೆ ಸಾರ್ಥಕವಾಗುವಂತೆ ಮಾಡುವುದೇ ಇದರ ಮುಖ್ಯ ಗುರಿ. ದೆವ್ವ ಭೂತಗಳಾಗಿ ಅವರು ತಮ್ಮನ್ನು ಕಾಡಿಸಬಾರದೆಂಬುದೇ ಒಳ ಉದ್ದೇಶ. ಈ ಕೆಳವರ್ಗಗಳಲ್ಲಿ 'ಮಾಳ' ವೆಂದೇ ಪ್ರಚಲಿತವಿದ್ದ ಇದು ಶ್ರಾದ್ಧವೇ ಆಗಿದೆ; ಹಿರಿಯರ ಹಬ್ಬವೆನಿಸಿದೆ.

ಎಡೆಗಳು ಶಾಖಾಹಾರದವು ಹಾಗೂ ಮಾಂಸಾಹಾರದವೂ ಇರುತ್ತವೆ. ಸತ್ತವರ ಬಯಕೆಗೆ ಅನುಸರಿಸಿ ಇದ್ದರೂ ಶಾಖಾಹಾರದಲ್ಲಿ ಸಿಹಿ ಅಡುಗೆ ಪ್ರಮುಖವಾಗಿರುತ್ತದೆ. ಅದರಲ್ಲಿಯೇ ವಿಶೇಷವಾಗಿ ಕಡಬು, ಹೋಳಿಗೆ, ವಡೆ ಮುಂತಾಗಿ. ಇವರ ಮಾಳದಲ್ಲಿ ಗುರುವಾರದ ಮಾಳ, ಸೋಮವಾರದ ಮಾಳ ದೆವ್ವದ ಮಾಳ ಎಂದು ಮೂರು ಬಗೆಯಲ್ಲುಂಟು. ತಿಥಿ ಕಾಲ ತಪ್ಪಿಸಿ ಆಚರಿಸುವ ಮಾಳಕ್ಕೆ ದೆವ್ವದ ಮಾಳ ಎನ್ನುತ್ತಾರೆ. ಮಾಂಸಾಹಾರ ಎಡೆ ಮಾಡಿ ಮಾಡುವ ಮಾಳ ಗುರುವಾರದ ಮಾಳ ಅಥವಾ ಬ್ಯಾಸ್ತಾರದ ಮಾಳ. ಶಾಖಾಹಾರದ ಸಿಹಿ ಅಡುಗೆಯ ಎಡೆಮಾಡಿ ಆಚರಿಸುವ ಮಾಳ ಸೋಮವಾರದ ಮಾಳ. ಇದು ಚೊಕ್ಕಾಳ ಚೋಕ್ಬಾನದ ಮಾಳ ಎಂದೂ ಕರೆಯಲ್ಪಡುತ್ತದೆ.[೬] ಇವರಲ್ಲಿ ಕೂಡ ಬ್ರಾಹ್ಮಣರ ಆಚರಣೆ ಪ್ರವೇಶಿಸಿದ್ದರೂ ಅವರಂತೆ ಪ್ರತ್ಯೇಕವಾಗಿ ಹಿರಿಯರ ಎಡೆಯ ಅಡುಗೆಯಾಗುವುದಿಲ್ಲ, ಮಾಡಿದ ಅಡುಗೆಯಲ್ಲಿಯೇ ಎಡೆ ಮಾಡಿ ಮಾಳಿಗೆ ಮೇಲಿಟ್ಟು ಉಳಿದುದನ್ನು ಎಲ್ಲರೂ ಹಂಚಿಕೊಂಡು ಸೇವಿಸುವರು. ಇದಕ್ಕೆ ಕಾರಣವೆಂದರೆ ಮೃತರನ್ನು ಕುರಿತು ಅಮಂಗಲ ಅಥವಾ ಮೈಲಿಗೆಯ ಕಲ್ಪನೆ ಇವರಿಗಿಲ್ಲದ್ದು.

ಹೀಗೆ ಮಾಳ ಶ್ರಾದ್ಧವಾಗಿದೆ, ಪಕ್ಷವಾಗಿದೆ. ಜಾನಪದದಲ್ಲಿ ಹಿರೇರ ಹಬ್ಬವಾಗಿದೆ. ಇದರಲ್ಲಿ ಗತಿಸಿದ ಕಾಲದ ಲೆಕ್ಕವಿಲ್ಲ. ಸಂಸ್ಕೃತಿಯ ಕೊಡುಕೊಳುವಿಕೆಯ ಸಮಗ್ರ ಪರಿಚಯವಾಗಿಲ್ಲ.

ನಾಳೆ ಮಾಳಹಬ್ಬ ಹೋಳಿಗೆ ಬೇಕಾದಷ್ಟು :- ಈ ನಾಣ್ಣುಡಿ ಮಾತು[೮] ಮಾಳಕ್ಕೆ ಬೇರೊಂದು ತಿರುವನ್ನು ತರಬಹುದೆನೋ ? ಮಾಳವೆಂದರೆ ಇಲ್ಲಿಯವರೆಗೆ ಶ್ರಾದ್ಧವಾಗಿತ್ತು. ಹಿರಿಯರ ಹಬ್ಬವಾಗಿತ್ತು. ಕ್ಷಣಿಕ ಜೀಗರಾದ ಕಾಗೆಗಳ ಕೂಳಿನ ಕಾಳಗವಾಗಿತ್ತು. ಅಲ್ಲಿ ಸತ್ತ ಹಿರಿಯರ ಬಯಕೆಯ ಎಲ್ಲಾ ದಿನಿಸುಗಳು ಎಡೆಯಾಗಿದ್ದುವೇ ಹೊರತು ಹೋಳಿಗೆ ಬೇಕಾದಷ್ಟು ಎಂಬ ಮಾತಿಗೆ ಪುಷ್ಟಿ ದೊರೆಯುವಂತೆ ಮಾಳದಲ್ಲಿ ಹೋಳಿಗೆ ಮಾತು ಬರಲಿಲ್ಲ. ಈ ನಾಣ್ಣುಡಿ

ಯನ್ನು ಒಪ್ಪಿಕೊಂಡರೆ ಶ್ರಾದ್ಧದ ಆಚರಣೆಯ ಮಾಳದೂಟಕ್ಕಿಂತ ಮಾಳ ಹಬ್ಬದ ಹೋಳಿಗೆಯೂಟ ಬೇರೆ ಇರಬೇಕಾಯಿತು. ಹಾಗಾದರೆ ಕಾಗೆಗಳ ಕೂಳನ್ನು ಹೊರತು ಪಡಿಸಿದ ಮನುಷ್ಯರ ಹೋಳಿಗೆಯೂಟದ ಮಾಳಹಬ್ಬ ಯಾವುದು ? ಈ ಲೋಕೋಕ್ತಿಯ ಗಟ್ಟಿ ಎಳೆಯ ಸುತ್ತ ನೇಯುವದಾದರೆ ಜನಾಂಗದ ಅಭ್ಯಸನಕ್ಕೆ ಇತರ ಸಂಸ್ಕೃತಿಗಳ ಪರಿಚಯಕ್ಕೆ ಹಾದಿ ಮಾಡಿಕೊಳ್ಳುವುದೇ ಆಗಿದೆ. ಕವಿರಾಜ ಮಾರ್ಗಕಾರ ಉಲ್ಲೇಖಿಸಿದ 'ಮಾಳ' ಕ್ಕೆ ಸಮವಾಗಿ ಈ ಪಡೆಮಾತು ಇರಬಹುದೆನಿಸಿದೆ. ಹಾಗೊಂದು ವೇಳೆ ಇದ್ದರೆ ಸುಮಾರು ೧೨೦೦ ವರ್ಷಗಳ ಹಿಂದೆ 'ಮಾಳಹಬ್ಬ' ವೊಂದು ಕೇವಲ ಹೋಳಿಗೆಯೂಟದ ಹೊಸಬಟ್ಟೆಯುಡುವ ಸಂಭ್ರಮದ ಹಬ್ಬವಾಗಿತ್ತೆಂಬುದು ಗೊತ್ತಾಗುತ್ತದೆ.

ಕವಿರಾಜ ಮಾರ್ಗಕಾರನ ನಂತರ ಇತರ ಸಾಹಿತ್ಯ ಕೃತಿಗಳಲ್ಲಿಯ ಒಂದೆರಡ ಉದಾಹರಣೆ ತೆಗೆದುಕೊಂಡರೆ ಅಲ್ಲಿ ಶ್ರಾದ್ಧದ ಅರ್ಥ ಬರುವಂತಿದೆ.

'ಸೂಳೆಯ ಮಗ ಮಾಳವ ಪಾಳ್ಯದೊಳಗೆಲ್ಲ
ತಮ್ಮಪ್ಪನ ಕಾಣದೆ ಅರಸುತೈದಾನೆ' [೯]
'ಸೂಳೆಯ ಮಗ ಮಾಳವ ಮಾಡಿದೊಡೆ
ತಾಯ ಹೆಸರಾಯಿತಲ್ಲದೆ
ತಂದೆಯ ಹೆಸರಿಲ್ಲ ಕೂಡಲ ಸಂಗಮದೇವ" [೧೦]

ಶ್ರಾದ್ಧದ ಆಚರಣೆಯ ಹಿನ್ನೆಲೆಯಲ್ಲಿ ಅಳಿಯ ಮಾವರ ಈ ವಚನೋಲ್ಲೇಖದ ಮಾಳ ವ್ಯಕ್ತವಾಗಿದೆ. ತಂದೆ ಗೊತ್ತಿಲ್ಲದ ಸೂಳೆಯ ಮಗನ ಪಾಡು ನಗೆಗೇಡು. ಸೂಳೆಯ ಮಗ ಮಾಳವ ಮಾಡುವ ಆ ಪಾಳ್ಯದಲ್ಲೆಲ್ಲ ಅಪ್ಪನನ್ನು ಹುಡುಕುತ್ತಿದ್ದರೆ ಸಿಕ್ಕಾನೆಯೆ? ಚನ್ನಬಸವಣ್ಣನ ಆ ವಚನದ 'ಮಾಳವ ಪಾಳ್ಯ' ಏನನ್ನು ಸೂಚಿಸಬಹುದು? ಮಹಾನವಮಿ ದಿಬ್ಬದ ಹಾಗೆ ಮಾಳದಾಚರಣೆಯ ನಿಗದಿತ ಜಾಗ ಸಮೂಹವನ್ನೇನಾದರೂ ಸೂಚಿಸುತ್ತದೆಯೆ? ಸೂಳೆಯ ಮಗನನ್ನು ಕುರಿತು ಮಾತಾಡುವ ಬಸವಣ್ಣ ತಂದೆಯ ಸ್ಥಾನವನ್ನು ತಾಯಿಗೆ ಕೊಟ್ಟುದನ್ನು ಗಮನಿಸಬೇಕು. ಅಪಾತ್ರನೊಬ್ಬನ ಚಿತ್ರಣದ ಜೊತೆಗೆ ಅಸಾರ್ಥಕತೆಯನ್ನು ವ್ಯಕ್ತಗೊಳಿಸುವ ಬಸವಣ್ಣನ ವಚನದ 'ಮಾಳವ' ಅನ್ನದಾನದ ಅಂಗಳವನ್ನು ಅರ್ಥೈಸುವುದೆ?

ಒಟ್ಟಾರೆಯಾಗಿ ಮಾಳಕ್ಕೂ ಸೂಳೆಯ ಮಗನಿಗಿರುವ ನಂಟನ್ನು, ತಂದೆಯ ಶ್ರಾದ್ಧಕ್ಕೂ ಆತನ ಮಗನಿಗಿರುವ ಸಂಬಂಧಕ್ಕೂ ಹೋಲಿಕೆ ಕೊಟ್ಟು ನೀತಿ ಹಾಗೂ ಸ್ತ್ರೀ ಪ್ರಾಧಾನ್ಯತೆಯನ್ನು ಎತ್ತಿ ಹಿಡಿದ ವಚನೋಲ್ಲೇಖವಿದು. ಅದರ ಜೊತೆಗೆ "ಮಾಳ" ಕುರಿತು ಸೂಕ್ಷ್ಮವಾದ ಟೀಕೆಯೂ ವ್ಯಕ್ತವಾಗುತ್ತದೆ. ಇಲ್ಲಿ ಮಾಳ ಹಬ್ಬದ ಹೋಳಿಗೆಯೂಟದ ಪ್ರಸ್ತಾಪವಾಗಲಿ, ಕಂಡುಬರುವುದಾಗಲೀ

ಇಲ್ಲ. ಅಥವಾ "ನಾಳೆ ಮಾಳಹಬ್ಬ ಹೋಳಿಗೆ ಬೇಕಾದಷ್ಟು" ಎಂಬ ಜಾನಪದ ಮಾತು ಶ್ರಾದ್ಧವನ್ನು ಕುರಿತು ಇರುವಂತಹುದೆ?

ಶ್ರಾದ್ಧದ ಆಚರಣೆಯಲ್ಲಿ ಸೋಮಾರದ ಮಾಳದ ಪ್ರಸ್ತಾಪ ಮಾಡಿದ್ದೇನೆ. ಕೆಳವರ್ಗದ ಜನರು ಸೋಮಾರದ ಮಾಳದಲ್ಲಿ ಎರಡು ಮೂರು ತರಹದ ಹೋಳಿಗೆಯ ಪ್ರಕಾರಗಳನ್ನು ಮಾಡಿರುತ್ತಾರೆಂದು ಕೇಳಿ ಬಂದಿದೆ. ಆದರೆ ಅದು ಕೇವಲ ಹಿರಿಯರ ಹಬ್ಬವೇ ಹೊರತು ಹೋಳಿಗೆಯ ಮಾಳ ಹಬ್ಬವಲ್ಲ. ಶ್ರಾದ್ಧದ ಹಿರಿಯರ ಹಬ್ಬವೇ ಬೇರೆ, ಹೋಳಿಗೆಯೂಟದ ಮಾಳಹಬ್ಬವೇ ಬೇರೆ.

ಮುಸ್ಲೀಮರಲ್ಲಿ :- ಸರ್ವಧರ್ಮ ಸಮನ್ವಯತೆಗೆ ಹೆಸರಾದ ಭಾರತವು ಕೇವಲ ಸನಾತನಿಗಳಿಂದ ಮಾತ್ರ ಮೆರೆಯಲಿಲ್ಲ, ಬೇರೆ ಧರ್ಮಗಳ ಪ್ರಭಾವಗಳೂ ಉಂಟಾದವು. ಇತರ ಸಂಸ್ಕೃತಿಯ ಕೊಡು-ಕೊಳುಕೆ ನಡೆಯಿತು; ಆರ್ಯ ದ್ರಾವಿಡ ಸಂಮಿಲನದಂತೆ. ಒಂದು ಉದಾಹರಣೆಯಾಗಿ ಮುಸ್ಲಿಂ ಸಂಸ್ಕೃತಿಯನ್ನು ತೆಗೆದುಕೊಂಡರೆ ಭಾರತೀಯ ಮಣ್ಣಿನೊಂದಿಗೆ ಮಣ್ಣಾಗಿ ಬೆರೆಯುವ ಅಂಶವನ್ನು ಕಂಡುಕೊಳ್ಳುತ್ತೇವೆ. ಮಣ್ಣಿಗೆ ಸಂಬಂಧಿಸಿದ ಹಬ್ಬಗಳು, ನೃತ್ಯಕ್ಕೆ ಸಂಬಂಧಿಸಿದ ಹಬ್ಬಗಳು, ದೇವರಿಗೆ ಸಂಬಂಧಿಸಿದ ಹಬ್ಬಗಳು ಪರಸ್ಪರ ಎದು ತೋರುವ ಹೋಲಿಕೆ ಪಡೆದಿವೆ. ಮುಸ್ಲೀಮರ 'ಹತೀ ಪಾವುಟ್ಯಾ' ಹಿಂದುಗಳ ಗೌರಿ ಹಬ್ಬ ಅಥವಾ ಗಣೇಶನ ಹಬ್ಬ, ನಾಗಪಂಚಮಿ, ಮುಸ್ಲೀಮರ ಉರುಸ್, ಹಿಂದುಗಳ ಜಾತ್ರೆ, ಅವರ 'ಕವ್ವಾಲಿ' ಕಾರ್ಯಕ್ರಮ ಜಾನಪದರ ಗೀಗಿ ಮ್ಯಾಳ ಅಥವಾ ಕರ್ಬಲ ಹಾಡುಗಳ ಸ್ಪರ್ಧೆ ಇವೆಲ್ಲ ಮೇಲು ನೋಟಕ್ಕೆ ಧರ್ಮವಷ್ಟೇ ಪರಕೀಯರನ್ನಾಗಿಸುತ್ತವೆ; ದಿನ ನಿತ್ಯದ ಬದುಕಿನಲ್ಲಿ ತಾವೆಲ್ಲ ಒಂದೇ ಎಂಬುದನ್ನು ತೋರಿಸಿ ಕೊಡುತ್ತವೆ. ಈ ತುಲನೆ ಮುಸ್ಸೀಮರ ಹಿರಿಯರ ಹಬ್ಬಕ್ಕೂ ಅನ್ವಯಿಸುತ್ತದೆ.

ಶ್ರಾದ್ಧದ ಮಾದರಿಯಲ್ಲಿಯೇ ಮುಸ್ಸಿಮರಲ್ಲಿ ಹಿರಿಯರ ಹಬ್ಬವೆಂದು ಆಚರಿಸಲ್ಪಡುತ್ತದೆ. ಹಳ್ಳಿಗಳಲ್ಲಿ ಈ ಕುರಿತು ಬೇರೆ ಬೇರೆ ಅಭಿಪ್ರಾಯಗಳೇ ಹೊರಡುತ್ತವೆ. ಹಿರಿಯರಿಗಾಗಿ ಮಾಡಿದ ಅಡುಗೆಯನ್ನು ಹೊರಗೆ ಚಲ್ಲುವಂತಿಲ್ಲ; ಹೊರ ಬೀಳಿಸುವಂತಿಲ್ಲ. ಅದು ಉಳಿದದ್ದಾದರೆ ಅದಕ್ಕಾಗಿ ಒಂದು ಕುಣಿ ತೋಡಿ ಆಹಾರವನ್ನು ಅದರಲ್ಲಿ ಮುಚ್ಚುತ್ತಾರಂತೆ. ಇದು ಇತರರಲ್ಲಿಯೂ ಜಾರಿಯಲ್ಲಿದೆಯಂತೆ. ಮುಸ್ಲೀಮರಲ್ಲಿ ಶಾಬಾನ್ ತಿಂಗಳಿನಲ್ಲಿ ಮೂರು ಬಗೆಯಾಗಿ ಹಿರಿಯರ ಹಬ್ಬದಾಚರಣೆ ನಡೆಸುವರು. ಫಾತೆಹಾ, ಉಪವಾಸ, ಫಲಹಾರ, ಲೋಬಾನ ಧೂಪ ಹಾಕುವದರಿಂದ ಮೂರು, ಎರಡು, ಒಂದು ದಿನ-ಹೀಗೆ ಬೇರೆ ಬೇರೆಯಾಗಿ ಆಚರಿಸುತ್ತಾರೆ.[೧೧] 'ಸತ್ತ ಸ್ತ್ರೀಯರಿಗೆ ಶಾಖಾಹಾರದ ಎಡೆಯನ್ನು ಗಂಡಸರಿಗೆ ಮಾಂಸದೆಡೆಯನ್ನು ಮಾಡಿರುತ್ತೇವೆ. ಮನೆಯ ಗಂಡಸರು ಮಾಂಸವನ್ನು ಹೆಂಗಸರು ಶಾಖಾಹಾರವನ್ನು ಸೇವಿಸುತ್ತಾರೆ' ಎಂದು ಹಳ್ಳಿಯ ಮುಸ್ಲಿಂ ವೃದ್ಧೆಯೊಬ್ಬಳು ಹೇಳಿದು

ದುಂಟು. ಆದರೆ ಈ ಬಗೆ ಎಲ್ಲಾ ಕಡೆ ಕಾಣಿಸುವದಿಲ್ಲ. ಈ ಕೊಡು-ಕೊಳ್ಳುವಿಕೆಯಲ್ಲೂ ಮಾಳಹಬ್ಬದ ಪ್ರಸ್ತಾಪ ಬರದ್ದರಿಂದ ಹೋಳಿಗೆ ಹಬ್ಬವೇನಾದರೂ ನಿಮ್ಮಲ್ಲಿದೆಯೆ? ಎಂದು ಮುಸ್ಲಿಂ ಬಾಂಧವರನ್ನು ಕೇಳಿದಾಗ 'ಶಬ್ಬುಖ ಅಥವಾ 'ಶಬೆ ಖದರ' ಎಂಬ ಹೋಳಿಗೆ ಹಬ್ಬವನ್ನು ಆಚರಿಸುತ್ತಾರೆಂದು ತಿಳಿದು ಬಂತು. ಅಲ್ಲಾನ ಹಬ್ಬದ ನಂತರ ಚಂದ ಕಂಡಾಗ ಹೋಳಿಗೆ ಹಬ್ಬದ ಆಚರಣೆ ನಡೆಸುತ್ತಾರೆ. ಭಾರತೀಯ ಹಬ್ಬಗಳಾದ ಶೀಗೆ, ಹೋಳಿಹುಣ್ಣಿವಿಯಲ್ಲಿ ಹುರಕ್ಕಿ ಹೋಳಿಗೆ, ಹೂರಣ ಹೋಳಿಗೆಯನ್ನು ಮಾಡುವ ವಿಶೇಷವುಂಟು. 'ಹೋಯ್ಕೊಂಡ ಬಾಯಿಗೆ ಹೋಳಿಗೆ ಮಾಡಿ: ಬಾಳಿ ಎಲಿಯಾಗ ಎಡಿ ಮಾಡಿ ನಮು ಕಾಮ್ಗ ಹೋಳಬಾಯಿಡಿದ ಉಣಸೇನ' ಎಂಬ ತ್ರಿಪದಿ[೧೨] ಹೋಳಿಗೆಯೂಟದ ವಿಶೇಷವನ್ನು ತಿಳಿಯಪಡಿಸುತ್ತದೆ. ಆದರೆ ಈ ವಿಶೇಷಗಳು ಹೋಳಿಗೆಯದೇ ಹಬ್ಬವಾದ ಮಾಳಕ್ಕೆ ಸಮನೆನಿಸಲಾರವು. ಆದ್ದರಿಂದ ಮುಸ್ಲೀಮರಲ್ಲಿಯಂತೆ ಹೋಳಿಗೆಯೂಟದ ಹಬ್ಬವೊಂದು ನಮ್ಮಲ್ಲಿರಬೇಕು. ಕಾಲಸವೆದಂತೆ ಬೇರೆ ಜಾತಿಗಳಿಗೋ ಜನಾಂಗಗಳಿಗೋ ಅದು ಹೋಗಿರಬೇಕು. ಅಥವಾ ಕವಿರಾಜ ಮಾರ್ಗಕಾರ ಉಲ್ಲೇಖಿಸಿದ 'ಸಂತೋಷದಿಂದ ಬಟ್ಟಿ ತೊಡುವ ಮಾಳ' ಸಾರ್ವತ್ರಿಕವಾಗಿ ಆಚರಿಸುವ ಹೋಳಿಗೆ ಹಬ್ಬವಾಗಿರಲೂ ಸಾಕು.

ಮಾಳ ದೇವರು, ಮಾಳ ಹಬ್ಬ:- ಜಾನಪದ ಜೀವನ ಮಾರ್ಗದ ಕವಲು ದಾರಿಯಲ್ಲಿ ಪ್ರವೇಶಿಸುತ್ತ ಮುಖಾಮುಖಿ ಸಂದರ್ಶಿಸುತ್ತ ನಡೆದಾಗ ಕೆಳವರ್ಗದವರ 'ಮಾಳ' ಕ್ಕಿಂತ ಕುರುಬ ಜನಾಂಗದಲ್ಲಿ ಆಚರಣೆಯಲ್ಲಿರುವ 'ಮಾಳ' ನಿಜವಾದ ಮಾಳ ಹಬ್ಬವೆಂದು ಗುರುತಿಸಬಹುದಾಗಿದೆ. ಹಾಲು ಮತದವರು ಕಂಕಣ ಕುರುಬರು, ಉಣ್ಣೆ ಕುರುಬರು, ಜೆಂಡೆ ಕುರುಬರು-ಇತ್ಯಾದಿಯಾಗಿರುವ ಕುರುಬ ಜನಾಂಗ ಎರಡು ಬಗೆಯಲ್ಲಿ ಬದುಕು ಸಾಗಿಸುತ್ತಾರೆ. ಊರಿನಲ್ಲಿ ಮನೆಮಾರುಗಳೊಂದಿಗೆ ಒಕ್ಕಲು ಮಕ್ಕಳಂತೆ ಇರುವದೊಂದು ಬಗೆ ಊರು ಬಿಟ್ಟು ದೊಡ್ಡ ದೊಡ್ಡ ಕುರಿ ಹಿಂಡುಗಳೊಡನೆ ಪ್ರಕೃತಿಯ ಮಡಿಲಲ್ಲಿ ಬದುಕುವ ನಿಸರ್ಗದ ಜೀವಿಗಳಾಗಿ ಇನ್ನೊಂದು ಬಗೆ.

ಮನೆಮಾರುಳ್ಳವರಿಗಿಂತ ಈ ಕುರುಬರು ನಿಸರ್ಗದ ಕೋಪಗಳಿಗೆ ನಿಸರ್ಗವನ್ನು ಆರಾಧಿಸುತ್ತ ನಿಸರ್ಗ ತೃಪ್ತಿ ಮಾಡುವವರಾಗಿದ್ದಾರೆ. ದೇವರ ಹುಟ್ಟಿಗೆ ಕಾರಣವಾಗಿರುವ ಪ್ರಕೃತಿಯ ವಿಕೋಪ, ಗುಡುಗು, ಸಿಡಿಲು, ಮಿಂಚುಗಳನ್ನು ಅವರು ತಮ್ಮ ಮಾನವ ಸಹಜ ಭಯದಿಂದ ನೇರವಾಗಿ ಆರಾಧಿಸುವಂತೆ ಮಾಡಿದೆ. ಮಹಾಲಯದ 'ಮಾಳ' ಕುರುಬರ ಮಾಳಪ್ಪ ದೇವರಾಗಿದೆ. ತಮ್ಮ ಆರಾಧ್ಯ ದೈವತ ಬೀರಪ್ಪನಿಗೆ ಮಾಳಪ್ಪನೆಂದು ಕರೆಯುತ್ತಾರೆ. ಈ ಮಾಳಪ್ಪನಿಗೆ ಹೆಂಡತಿ ಹೋಳಿ ಮಾಳವ್ವ ಎನ್ನುತ್ತಾರೆ. ಸಿಡಿಲು-ಶಿಡ್ಲೇಶ್ವರನಾಗಿದೆ. ಆದಕ್ಕಾಗಿ

ಕುರುಬರು ಹೋಳಿಗಂಗಮ್ಮನ ಮಾಳ, ಶಿಡ್ಲ ಮಾಳ, ಮಿಂಚಿ ಮಾಳವೆಂದು ಆಚರಿಸುತ್ತಾರೆ. ''ಅವರಿಗೆ ಸಿಡಿಲು ಬಡಿದ, ಹೋಳಿ ತೇಲಿಸಿದ ಸುದ್ದಿಯನ್ನು ನಾವೆಲ್ಲೂ ಕೇಳಿಲ್ಲ'' ಎಂದು ಜನರು ಸದಾಕಾಲ ಊರು ಬಿಟ್ಟು ಪ್ರಕೃತಿಯಲ್ಲಿರುವ ಇವರನ್ನು ಕುರಿತು ಅಚ್ಚರಿ ವ್ಯಕ್ತಪಡಿಸುತ್ತಾರೆ.

ಜೋಳ ಬಿತ್ತುವ ಮಳೆಯ ಸುಮಾರಿಗೆ ಅಥವಾ ಮಣ್ಣೆತ್ತಿನ ಅಮವಾಸ್ಯೆ ಸುಮಾರಿಗೆ ಇಲ್ಲವೆ ತಮ್ಮ ಆರ್ಥಿಕ ಸ್ಥಿತಿಗತಿ ನೋಡಿಕೊಂಡು ಕುರುಬರು ಮಾಳ ಹಬ್ಬಕ್ಕೆ ತೊಡಗುತ್ತಾರೆ. ಖರ್ಚಿನ ಬಾಬತ್ತನ್ನು ಲೆಕ್ಕ ಹಾಕುವವರೊಂದಿಗೆ ಡೊಳ್ಳು ಬಾರಿಸುವ ಹಾಡು ಕಲಿಯುವ ರೂಢಿಯನ್ನು ಚಿಕ್ಕ ದೊಡ್ಡವರೆನ್ನದೆ ಆರಂಭಿಸುತ್ತಾರೆ. ಹಬ್ಬದ ಹಿಂದಿನ ದಿನ ರಾತ್ರಿಯೆಲ್ಲಾ 'ಚೀಲ ಗಟ್ಟಲೆ ಬ್ಯಾಳಿಗೆ ಹಾಕಿ' ಹೂರಣ ತಿರುವಿ 'ಹೂಣಗ' ತಯಾರಿಸಿ ಹೋಳಿಗೆ ಮಾಡುತ್ತಾರೆ. ಅದೇ ಪ್ರಮಾಣದಲ್ಲಿ 'ಬಾನಾ' ಬಸಿದಿರುತ್ತಾರೆ. ಪ್ರತಿ ಊಟಕ್ಕೆ ಬಟ್ಟಲು ತುಂಬ ತುಪ್ಪ ಬಂದಿರುವಷ್ಟು ತುಪ್ಪದ ಸಂಗ್ರಹಣೆ ಮಾಡಿರುತ್ತಾರೆ. ಇಲ್ಲಿ ಜಿಪುಣತನಕ್ಕೆ ಸ್ವಲ್ಪವೂ ಅವಕಾಶವಿರುವದಿಲ್ಲಿ. ಇರುಳೆಲ್ಲಾ ಡೊಳ್ಳು, ಕುಣಿತ, ಹಾಡುಗಳ ಸಂಭ್ರಮವೇ ಸಂಭ್ರಮವು. ಕುರಿಗಳು ಬೀಡುಬಿಟ್ಟ ಮಗ್ಗುಲಿನ ಹಳ್ಳಿಯವರು 'ನಾಳೆ ಮಾಳ ಹಬ್ಬ ಹೋಳಿಗೆ ಬೇಕಾದಷ್ಟು' ಎಂದೆನ್ನುವ ಹಾಗೆ ಕುರುಬರೂ ಸುತ್ತಮುತ್ತಲಿನ ಊರವರನ್ನೆಲ್ಲಾ ಊಟಕ್ಕೆ ಕರೆದಿರುತ್ತಾರೆ. ಕಾಯ್ದುಕೊಂಡು ಕೂತವರಂತೆ ಅವರೂ ಹೋಗಿರುತ್ತಾರೆ.

ಸಿಗದಿ ಪಡಿಸಿದ ದಿನ ಪಾಂಡವರ ಐದು ಕಲ್ಲನ್ನಿಟ್ಟು ಇಲ್ಲವೇ ಬೀರ ದೇವರ ಹೆಸರಿನ ಕಲ್ಲನ್ನಿಟ್ಟು, ಮಾಡಿಟ್ಟ ಎಡೆಗೆ ಪೂಜೆ ಸಲ್ಲಿಸಿ, ಶುದ್ಧೀಕರಿಸಿ ಅದನ್ನು ಹೊಳೆಯ ದಡಕ್ಕೆ ತರುತ್ತಾರೆ. ದಂಟಿನ ತೊಟ್ಟಿಲ ಮಾಡಿ ಅದರಲ್ಲಿ ಎಲೆಹಾಸಿ, ಎಡೆಇಟ್ಟು ಆ ತೊಟ್ಟಿಲನ್ನು ಹೊಳೆಯ ಮಗ್ಗಲು ಇರಿಸಿ ಉಸುಕಿನ ಐದು ಗುಂಪೆಗಳನ್ನು ಮಾಡಿ ಹೊಳೆಯ, ಸಿಡಿಲಿನ, ಮಿಂಚಿನ ಪೂಜೆ ನಡೆಸುತ್ತಾರೆ. ನಂತರ ಆರಳೆಗುಳ್ಳಿಗಳ ದೀಪಗಳನ್ನು ತೊಟ್ಟಿಲಲ್ಲಿಟ್ಟು ನಿಧಾನವಾಗಿ ಹೊಳೆಯ ನೀರಿನ ಮೇಲೆ ತೊಟ್ಟಿಲನ್ನು ತೇಲು ಬಿಡುತ್ತಾರೆ. ಹೊಳೆ ದೊಡ್ಡದಿರದಿದ್ದರೆ ಚಿಕ್ಕ ಹಳ್ಳವಾದರೂ ನಡೆದೀತು. ಪ್ರಕೃತಿಯ ಅಖಂಡತೆಯ ಸೆರಗಿನಲ್ಲಿ ಛಿದ್ರಗಳನ್ನು ಕಾಣದ ಕುರುಬರು ತಮ್ಮ ಮಕ್ಕಳು, ಮರಿ, ಕುರಿಗಳ ರಕ್ಷಣೆಗಾಗಿ ಈ ರೀತಿ ಆರಾಧಿಸಿ ಬೇಡಿಕೊಳ್ಳುವರು. ನಂತರ ಹೋಳಿಗೆಯೂಟದ ಸಂಭ್ರಮ ಆರಂಭವಾಗುವುದು.

ಭಯದ ಆರಾಧನೆಯ ಪ್ರಾಯೋಗಿಕ ನೆಲೆಯಲ್ಲಿ ನಿಂತೇ ಪ್ರಕೃತಿಯನ್ನು ತೃಪ್ತಿಗೊಳಿಸುವ ಕುರುಬರ ಹೋಳಿಗೆ ದಾಸೋಹಕ್ಕೆ, ಅನ್ನ ತುಪ್ಪಕ್ಕೆ ಅನಂತ ರುಚಿಯುಂಟು. ಈ ರುಚಿಯಿಂದಾಗಿಯೇ ಪ್ರಕೃತಿ ಕುರುಬರನ್ನು ಮುದ್ದಾಗಿ

ಜೋಪಾನಿಸುತ್ತಿರಬೇಕು ಅಲ್ಲವೇ ?

* * * *

ಈ ರೀತಿ ಕವಿರಾಜಮಾರ್ಗಕಾರನ 'ಮಾಳ' ಶ್ರಾದ್ಧವಾಗಿ, ಈ ಹಿರಿಯರ ಹಬ್ಬವಾಗಿ ಕೊನೆಗೆ ಹೋಳಿಗೆಯಿಂದಾಗಿ 'ಮಾಳ ಹಬ್ಬ' ವಾದ ಚಿಕ್ಕ ವಿವೇಚನೆ ಇದು. ಅದೇನಿದ್ದರೂ 'ಮಾಳ' ಜಾನಪದರ ನಗರ ಜನದರ ಶಿಷ್ಟಪದ ಜಾನಪದ ಸಾಹಿತ್ಯದ ಒಳಗಿನ ಬಾಳಪುಟಗಳಲ್ಲಿ ಕಣ್ಣಾಡಿಸಿದ ಶಬ್ದವಾಗಿದೆ. ಕುತೂಹಲಿಗಳು ಇನ್ನಷ್ಟು ಪ್ರಯತ್ನಿಸುವದು ಒಳ್ಳೆಯದು.

ಅಡಿ ಟಿಪ್ಪಣಿಗಳು

೧ ಕವಿರಾಜ ಮಾರ್ಗ ೧ — ೧೨೯

೨ ಆದಿಪುರಾಣ ೧೩ — ೮೬

೩ ವಿಕ್ರಮಾರ್ಜುನ ವಿಜಯ ೧ — ೩೫

೪ ಲಿಂಗಾಯತ ಧರ್ಮ, ಸಂಸ್ಕೃತಿ ಮತ್ತು ಸಮಾಜ: ಲೇ. ಹಿರೇಮಲ್ಲೂರ ಈಶ್ವರನ್

೫ ಕಾವ್ಯಾವಲೋಕನಂ
ಮೈಸೂರು ವಿಶ್ವವಿದ್ಯಾನಿಲಯ, ಪುಟ ೮೬, ಪ್ರಯೋಗ ಸಂಖ್ಯೆ ೪೦೨

೬ ಲಿಂಗಾಯತ ಧರ್ಮ ಸಂಸ್ಕೃತಿ ಮತ್ತು ಸಮಾಜ
ಲೇ. : ಹಿರೇಮಲ್ಲೂರ ಈಶ್ವರನ್

೭ ಇನಾಂ ವೀರಾಪುರದ ಹಾಗೂ ಸುತ್ತಲಿನ ಹಳ್ಳಿಗರೊಡನೆ ಸಂದರ್ಶಿಸಿದಾಗ.

೮ ಕನ್ನಡ-ಇಂಗ್ಲೀಷ ಕಿಟ್ಟೆಲ್ ಕೋಶ ಪುಟ ೧೨೮೬.

೯ ಚೆನ್ನಬಸವಣ್ಣನ ವಚನಗಳು, ಸಂ. ಡಾ. ಆರ್. ಸಿ. ಹಿರೇಮಠ. ವ. ಸಂ. ೩೮೫

೧೦ ಬಸವಣ್ಣನವರ ಷಟಸ್ಥಲದ ವಚನಗಳು.

೧೧ ಸಾಹಿದಾಬಾನು, ಬಿ. ಕಾಂ. ವಿದ್ಯಾರ್ಥಿನಿ (ಗವಿಸಿದ್ಧೇಶ್ವರ ಕಾಲೇಜ) ಹೇಳಿದ್ದು.

೧೨ ಅಪ್ರಕಟಿತ ಹೋಳಿ ತ್ರಿಪದಿ ಸ್ವಂತ ಸಂಗ್ರಹ [ಇದೇ ಇನ್ನೊಂದು ಬಗೆಯಲ್ಲಿ ಹಾಡಲ್ಪಡುವುದು. ಹೋಳಿ ಹುಣ್ಣಿವಿ ಬಂತ। ಬಾಳ ಹೋಳಿಗಿ ಮಾಡಿ। ಬಾಳಿ ಎಲಿಯಾಗ ಎಡಿ ಮಾಡಿ। ನಮ್ಮ ಕಾಮ್ನ ಹೋಳ ಬಾಹ್ಹಿಡಿದ ಉಣಿಸೇನ॥]

"ಕಪ್ಪು ಅಧ್ಯಾಯದ ಕೆಂಪು ಅಕ್ಷರಗಳಿಗೆ"

ಬಸವಲಿಂಗ ಸೊಪ್ಪಿನಮಠ

ಉರುಳುವ ಚಕ್ರದೊಂದಿಗೆ ನರಳುತ್ತ
ಅಚ್ಚಿನಡಿ ವಿಲಿವಿಲಿ ಹೊರಳುತ್ತ
ಮುನ್ನಡೆ-ಮನ್ನಣೆಯು
ಅದೇ, ಹೆಜ್ಜೆ ಕುಂತ ಈ ನಾಡಿನಲ್ಲಿ
ಸದಾ ನಿಮ್ಮಡಿ ನೆತ್ತರು ಪುಳಕ ಹಾಡಿಸ
ಶೂದ್ರ ಯೋಧನಿಂದ ಕಪ್ಪು ಕಾರ್ಮಿಕನ ವರೆಗಿನ ಬಿಕನೇಸಿ
ಚರಿತ್ರೆಯ ಒರಟು ಹೆಜ್ಜೆಗಳ ನಮ್ಮ ಗುರುತು ಸಿಗುತ್ತದೆಯೆ ಒಡೆಯಾ?

ಹೆಣ್ಣು-ಹೆಂಡದ ನಿಮ್ಮ ತೆವಲಿಗೆ
ರಾಜ್ಯ-ಸಾಮ್ರಾಜ್ಯಗಳ ಮಹತ್ವಾಕಾಂಕ್ಷೆಗೆ
ಮಹಲು-ಮಹಲಿನೆತ್ತರ ಬೆಳೆದ ಅಧಿಕಾರ ಸುಖದ ನಿಮ್ಮ ದಾಹಗಳಿಗೆ
ತಲೆಮಾರಿನಿಂದ ತಲೆ, ಸಾಲದ್ದಕ್ಕೆ ತೊಗಲು ಹಾಸಿದ
ನಮ್ಮ ಜೀತಗಲ್ಲುಗಳ ರೋದನ
ನಿಮ್ಮ ಚರಿತ್ರೆಯಲ್ಲಿ ಮೌನವೇಕೆ ಪ್ರಿಯ ರಕ್ಕಸ ?

ನಿಮ್ಮನ್ನು ಸವಾರಿ ಮಾಡಿದ ನಮ್ಮ ಬೆನ್ನುಗಳು
ಹೇಗೆ ಬಾಗಿವೆ ನೋಡಿ
ನಿಮಗೆ ಮಧು ಬಗ್ಗಿಸುತ್ತಿರುವ ಬಡನಡುವಿನ
ನಮ್ಮ ವಂಶದ ಕೋಮಲೆಯರಂತೆ.

ನಮ್ಮ ಧ್ವನಿಪೆಟ್ಟಿಗೆಯ ಸ್ವರತಂತಿ ಕಿತ್ತಿ
ಸೂರ್ಯನ ಕಿಂಡಿಗೆ ಭದ್ರ ಬಂಡೆಯೊತ್ತಿ
ನೀವು ಕೆತ್ತಿಸಿದ 'ಕರ್ಮಶಾಸನ' ನಮ್ಮ ನೆತ್ತಿಯಲ್ಲಿನ್ನೂ
ಸದ್ದಿಲ್ಲದೆ ಅಲ್ಲಿಂದಿಲ್ಲಿಗೆ ಹಾಗೇ ಉರಿಯುತ್ತಿದೆ.
"ಜಿತೇನ ಲಭ್ಯತೆ ಲಕ್ಷ್ಮೀ ಮೃತೇನಾಪಿ ಸುರಾಂಗನಾ"
ಆಹಾ! ಏನು ಆಕರ್ಷಕ ನಮ್ಮ ಸಾವು.

ಎಂದೋ ಹಾಸಿದ ಅಜ್ಜನ ಕೌದಿಯೊಳಗೆ
ಬಿಡುಗಣ್ಣ ನಡುಕದ ನಿದ್ದಿ ಸಾಕೆಲೊ ನನ್ನ ಜನವೆ
ಅದೋ ಮೂಡಣದ ಬಾಗಿಲು ಒಡೆಯುವ ಹೊತ್ತು;
ಮಾರಿದ ಕೈಗಳ ನಮ್ಮ ಮುಷ್ಟಿ ಬಿಗಿದು
ದೈನ್ಯ ಕಣ್ಣಲ್ಲಿ ಕೆಂಡ ಚಾಚಿ
ಉಡುಗಿದ ದನಿಗೆ ಸೈರನ್ ಮಡಗಿ
ಬಿಳುಚಿದ ಪಾದಗಳ ಲಕ್ಷಿಸದೆ ಸಾಗೋಣ ಬನ್ನಿ-ಲೆಫ್ಟ್ ರೈಟ್ ಲೆಫ್ಟ್

ಕೋಟೆ-ಕಂದಕಗಳು ಮಹಲು-ಗುಡಿಸಲುಗಳು
ಸಮನಿಸುವನಕ ನಮ್ಮ ನಡೆ ನಿಲ್ಲದಿರಲಿ
ಕಪ್ಪು ತೋಳುಗಳ ದುಡಿತ, ಐಕ್ಯತೆಯು ನಮ್ಮ ನಾಡಿನಲ್ಲಿ
ಮುಂದೊಮ್ಮೆ ಇತಿಹಾಸ ಬರೆದೀತು
ತಾನು ಸೇರಿಸಲು ಮರೆತ
ರಕ್ತಾಕ್ಷರಗಳ ಕಪ್ಪು ಅಧ್ಯಾಯಗಳನ್ನು !

ಕೋಗಿಲೆ

ಎಚ್. ಎಂ. ಪಟೇಲ ರಂಗೇನಹಳ್ಳಿ

ಸಂಜೆಯು ಹಿತಕರ ಗಾಳಿಯಲಿ,
ಹಿತಕರ ವಾಣಿಯೊಂದು ತೇಲಿ ತೇಲಿ ಬರುತ್ತಲಿತ್ತು,
ಪಕ್ಕದಲಿ ಹೂವೊಂದು ಅರಳಿ ಆಲಿಸುತಿತ್ತು.
ಗೊಬೆ ಕೇಳುತ್ತಾ ತೂಕಡಿಸುತ್ತಲಿತ್ತು
ಹೇಗಿತ್ತೆಂದು ಈ ಕಾಜಾಣವ ಕೇಳಿ
ಹೇಗಿತ್ತೆಂದು ಈ ಗುಲ್ಲನ ಕೇಳಿ

ತಂಗಾಳಿಯಲ್ಲಿ ತೇಲಿ ತೇಲಿ ಬರುತ್ತಲಿತ್ತು
ಜೋಗುಳವ ಹಾಡಿದಂತಿತ್ತು
ತಲೆಯು ತೂಗುವಂತಿತ್ತು
ಕಿವಿ ನಿಮಿರಿ ಆಲಿಸುತಲಿತ್ತು.

ನವಿಲೊಂದು ಕುಣಿಯುತಲಿತ್ತು,
ಇದನಾಲಿಸಿ ಕುಣಿಯದೆ ಗರಿ ಚದರಿ ನಿಂತಿತ್ತು.
ತಂಗಾಳಿಯಲಿ ವಾಣಿ ತೇಲಿ ತೇಲಿ ಬರುತಲಿತ್ತು
ಸುಂದರ ವನದಲ್ಲಿ, ವಸಂತ ಕಾಲದಲಿ,
ಹಾಡುತಲಿತ್ತು, ಹಾಡುತಲಿತ್ತು ಶ್ರೀ ಕಂಠದಿ ಕೋಗಿಲೆ.

ಸಖೀ ಗೀತ

ಜಯಪ್ರಕಾಶ ಮಾವಿನಕುಳಿ

ನಾಳಿನರಿವು ಯಾಕೆ ಸಖೀ,
ಇಂದು ನಾನು ತುಂಬಾ ಸುಖೀ.

ಸಖ್ಯವಾದ ನಲಿವು ಬೇಕು
ಮತ್ತೆ ಬೇಕು, ಮತ್ತಿಷ್ಟು ಬೇಕು
ಉರಿವ ಮೈಗೆ ಹಚ್ಚಬೇಕು ಲೇಪ
ಬಿಚ್ಚಿ ನಿನ್ನ ಸೀರೆ ಗಂಟ ತೋರೆ ರೂಪ

ಕಟ್ಟಬೇಕು ಕಿಚ್ಚಿಗೆದುರು ದೊಡ್ಡ ಆಣೇಕಟ್ಟು
ಹರಿವ ನೀರ ಮುಂದೆ ಎಲ್ಲೀ ನೀರೇ ನಿನ್ನ ಮೈಕಟ್ಟು
ಒಸಗೆ ತಂದು ಬೆಸುಗೆ ಹಾಕಿ ಬಯಲಲಿ
ಹೇಳೇ ನನ್ನೆದೆ ಹೇಗೆ ಬಿಚ್ಚಿ ತೋರಲಿ ?

ಮುಸುಕುತೆಗೆದು ಬಾರೇ ನನ್ನ ಕಡೆಗೆ,
ತೋರ ಬೇಡ ಬಿಂಕು ಬಿನ್ನಾಣ ಸುಮ್ಮಗೆ.

ನಿದ್ದೆಗಳನು ಒದ್ದು ಆಚೆ ಬರಲಿ ಬರಲಿ,
ಬುದ್ಧಿಗಳನು ಸಿದ್ಧಿಗಳನು ತರಲಿ ತರಲಿ,

ಗೆಲ್ಲವೆಂಬ ಛಲವನ್ನು ಹೊದ್ದು ಕೋಡುಬಾ
ರಣಹೇಡಿಗಳ ಭೂತವಾಗಿ ಎದ್ದು ನಿಂತುಬಾ

ಪಕ್ಷ ಇಲ್ಲ, ಭೇದಇಲ್ಲ–ಎಲ್ಲಕಡೆಯೂ ಬೆಳಕಿನೆಡೆಗೆ.
ಬರಲಿ ಮತ್ತೆ ಹೊಸ ಚಿಗುರು ಮತ್ತೆ ಮತ್ತೆ ಎಲ್ಲ ಕಡೆಗೆ.

ನಾಳಿನರಿವು ಯಾಕೆ ಸಖೀ
ಇಂದು ನಾನು ತುಂಬಾ ಸುಖೀ

ಬಾದುಬ್ಬೆ

ಎಂ. ಎಂ. ಕಲಬುರ್ಗಿ

ಪ್ರಾಚೀನ ಕನ್ನಡಕಾವ್ಯ ಮತ್ತು ಶಾಸನಗಳಲ್ಲಿ ಬಾದುಬ್ಬೆ(ಬಾಡುಬ್ಬೆ)ಹೆಸರಿನ ದೇವತೆಯ ಉಲ್ಲೇಖ ಅನೇಕ ಸಲ ಬರುತ್ತದೆ. ಈ ದೇವತೆಯ ಬಗ್ಗೆ ಡಾ. ಪಿ.ಬಿ. ದೇಸಾಯಿ, ಡಾ. ಬೆಟಗೇರಿ ಕೃಷ್ಣಶರ್ಮ, ಡಾ. ಡಿ. ಎಲ್. ನರಸಿಂಹಾಚಾರ್, ಡಾ. ಎಂ. ಚಿದಾನಂದಮೂರ್ತಿ, ಡಾ. ಆರ್. ಎನ್. ಗುರವ ವಿವರವಾಗಿ ಚರ್ಚಿಸಿದ್ದರೂ[೧] ಇಲ್ಲಿ ಇನ್ನೂ ಚರ್ಚೆಗೆ ಅವಕಾಶವಿರುವಂತೆ ತೋರುತ್ತದೆ.

ಬಾದುಬ್ಬೆ-ಬನದಬ್ಬೆ:

ಪ್ರಾಚೀನ ಕಾಲದಲ್ಲಿ ಒಬ್ಬ ಸ್ತ್ರೀದೇವತೆಯ ವಿಷಯವಾಗಿ ಬಾದುಬ್ಬೆ, ಬನದಬ್ಬೆ ಎಂಬ ಎರಡು ಹೆಸರುಗಳು ಕೇಳಿಬರುತ್ತವೆ. ಇವೆರಡೂ ಒಂದೇ ಅಂದರೆ ಈಗಿನ ಬನಶಂಕರಿ; ಬನದಬ್ಬೆ ಪದದ ಗ್ರಾಮ್ಯರೂಪ ಬಾದುಬ್ಬೆ ಎನ್ನುತ್ತಾರೆ —ಡಾ. ಚಿದಾನಂದಮೂರ್ತಿ. ನನಗೆ ಮಾತ್ರ ಈ ಎರಡೂ ಪ್ರತ್ಯೇಕ ದೇವತೆಗಳೆನಿಸುತ್ತದೆ. ಈ ಅಭಿಪ್ರಾಯವನ್ನು ಇಲ್ಲಿ ಚರ್ಚಿಸಬಹುದು.

(೧) "ಭಾಷಾಶಾಸ್ತ್ರೀಯವಾಗಿ ಬನದಬ್ಬೆ>ಬಾದುಬ್ಬೆಯೆಂಬುದನ್ನು ಸಮರ್ಪಕವಾಗಿ ತೋರಿಸುವುದು ಅಸಾಧ್ಯವಲ್ಲ" ಎಂದು ಡಾ. ಮೂರ್ತಿಯವರು ಹೇಳಿದುದು ಸರಿಯೆನಿಸುವದಿಲ್ಲ. ಏಕೆಂದರೆ ಬನದಬ್ಬೆಯೆಂಬುದು ಬಂದಬ್ಬೆಯಾಗಬಹುದೇ ಹೊರತು ಬಾದುಬ್ಬೆ ಆಗಲಾರದು. ಇಲ್ಲಿ ಬ>ಬಾ ಆಗುವದಕ್ಕೆ, ಅದಕ್ಕಿಂತ ದ>ದು

೧ ಪಿ. ಬಿ. ದೇಸಾಯಿ:ದವನದ ಹುಣ್ಣಿವೆ (ಪ್ರಬುದ್ಧ ಕರ್ನಾಟಕ ೩೨-೪)
ಪಿ. ಬಿ. ದೇಸಾಯಿ:ಭಾಷಾವಿಹಾರ (ಕನ್ನಡ ನುಡಿ, ಮಾರ್ಚ-ಎಪ್ರಿಲ್ ೧೯೫೨)
ಬೆಟಗೇರಿ ಕೃಷ್ಣಶರ್ಮ; ಬಾದುಮೆ (,, ,, ,,)
ಡಿ. ಎಲ್ ನರಸಿಂಹಾಚಾರ್ : ಶಬ್ದವಿಹಾರ ಪು ೪೮-೫೩
ಚಿದಾನಂದಮೂರ್ತಿ: ಅಮ್ಮ, ಅಬ್ಬೆ, ಅಲ್ಲಮ, ಬಾದುಬ್ಬೆ (ವಾಗರ್ಥ-೨೨೫)
ಆರ್. ಎನ್. ಗುರವ: ಬಾದುಬ್ಬೆ (ಕರ್ನಾಟಕಭಾರತಿ ೬-೨)

ಆಗುವುದಕ್ಕೆ ಭಾಷಾಶಾಸ್ತ್ರೀಯ ಆಧಾರವಿಲ್ಲ (೨) ಡಾ. ಮೂರ್ತಿ ಹೇಳುವಂತೆ ೧೩ನೆಯ ಶತಮಾನದ ಕನ್ನಡಟೀಕೆ ಇವೆರಡೂ ಪ್ರತ್ಯೇಕವೆಂಬಂತೆ ಬನದಬ್ಬೆ, ಬಾದುಬ್ಬೆ ಹೆಸರುಗಳನ್ನು ಸ್ವತಂತ್ರವಾಗಿ ಹೇಳಿದೆ. (೩)ಬಾದಾಮಿಯ ಶಾಸನಗಳು ಸುಪ್ರಸಿದ್ಧ ಬನಶಂಕರಿಯನ್ನು ಬನದದೇವಿ, ಬನದ ಮಹಾಮಾಯೆಯೆಂದು ಕರೆದಿವೆಯೇ ಹೊರತು ಬಾದುಬ್ಬೆ ಎಂದು ತಪ್ಪಿಯೂ ಹೆಸರಿಸಿಲ್ಲ. (೪) ಹುನಗುಂದ ತಾಲೂಕಿನ ಆರಸೀಬೀದಿಯ ಸ್ವಯಂಭೂನಗರೇಶ್ವರ ದೇವಾಲಯಕ್ಕೆ ಕಿಸುಕಾಡು ೭೦ರಲ್ಲಿಯ ಬಾದುಬ್ಬೆಪಾಳು ಗ್ರಾಮವನ್ನು ದಾನವಾಗಿ ನೀಡಿದ ವಿಷಯ ೧೦೭೫ರ ಒಂದು ಶಾಸನದಲ್ಲಿ ಬರುತ್ತದೆ. ಈ ಬಾದುಬ್ಬೆಪಾಳು ಬಾದಾಮಿಯಾಗಿರಲಿಕ್ಕಿಲ್ಲ; ಏಕೆಂದರೆ ಬಾದಮಿಗೆ ಎಲ್ಲಿಯೂ ಬಾದುಬ್ಬೆಪಾಳು ಎಂದು ಕರೆದಿಲ್ಲ. ಬನಶಂಕರಿಯು ಅಂದರೆ ಒಂದು ದೇವತೆಯ ಪ್ರದೇಶವನ್ನು ಬೇರೊಂದು ದೇವತೆಗೆ ದತ್ತಿಕೊಡುವುದೂ ಅಸಂಭವ. (೫) ಬಾದಮಿ ಅಮಾವಾಸ್ಯೆಯ ಸಂದರ್ಭದಲ್ಲಿ ಬಾದುಬ್ಬೆಯ ಉತ್ಸವ ಜರುಗಿದುದನ್ನು ೧೦೫೪ರ ಶಾಸನ ಹೇಳುತ್ತದೆ. ಆದರೆ ಇಂದಿಗೂ ಬನದಬ್ಬೆಯ (ಬನಶಂಕರಿಯ) ಉತ್ಸವ ಅನೇಕ ಗ್ರಾಮಗಳಲ್ಲಿ ಬನದಹುಣ್ಣಿವೆಗೆ ಜರುಗುತ್ತದೆ. (೬) ಬಾದುಬ್ಬೆ-ಬಾದಾಮಿ(ಅಮವಾಸ್ಯೆ)ಗಳಲ್ಲಿ ಒಂದು ಬಗೆಯ, ಬನದಬ್ಬೆ-ಬನದ (ಹುಣ್ಣಿವೆ)ಗಳಲ್ಲಿ ಇನ್ನೊಂದು ಬಗೆಯ ಧ್ವನಿ ಹೋಲಿಕೆಯಿದ್ದು, ಇದು ಇವೆರಡರ ಪ್ರತ್ಯೇಕತೆಯನ್ನು ಸೂಚಿಸುತ್ತದೆ ಹೀಗೆ ಮೇಲಿನ ಆರು ಕಾರಣಗಳಿಂದಾಗಿ ವಡ್ಡಾರಾಧನೆ ಹೇಳುವ 'ಬಾದುಬ್ಬೆ ಪರ್ವ'ದ ಬಾದುಬ್ಬೆಯೇ ಬೇರೆ, ಈಗಿನ ಬನದ ಹುಣ್ಣಿವೆ ಸಂದರ್ಭದ ಬನದಬ್ಬೆ ಅಥವಾ ಬನಶಂಕರಿಯೇ ಬೇರೆಯೆನಿಸಿ, ಡಾ. ಮೂರ್ತಿ ಅವರ ಬನದಬ್ಬೆ, ಬಾದುಬ್ಬೆಗಳ ಸಮೀಕರಣದ ಬಗ್ಗೆ ಸಂದೇಹ ಹುಟ್ಟುತ್ತದೆ.

ಬಾದುಬ್ಬೆ-ಬಾಡುಂಬೆ:

ಕಾವ್ಯ-ಶಾಸನಗಳಲ್ಲಿ ಬಾದುಬ್ಬೆ. ಬಾಡುಬ್ಬೆ, ಬಾದುಬೆ, ಬಾಳುಬೆ, ಬಾಡುಂಬೆ, ಬಾದುಮೆ- ಇಷ್ಟು ರೂಪಗಳಲ್ಲಿ ಸಿಗುವ ಈ ಪದ ವ್ಯಕ್ತಿನಾಮವಾಗಿ(ಸ್ತ್ರೀ, ಪುರುಷ), ಪರ್ವನಾಮವಾಗಿ (ಬಾದಮಿ ಅಮಾವಾಸ್ಯೆ) ಕಾಣಿಸಿಕೊಂಡುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಬಾದುಬ್ಬೆಪಾಳು ಹೆಸರಿನ ಗ್ರಾಮದ ಉಲ್ಲೇಖ ಕೊಪ್ಪ ಊರಿನ ಶಾಸನದಲ್ಲಿರುವುದು[೨] ಇತ್ತೀಚೆಗೆ ನನ್ನ ಗಮನಕ್ಕೆ ಬಂದಿರುವುದರಿಂದ ಇದು ಸ್ಥಳ ನಾಮವಾಚಿಯಾಗಿಯೂ ಬಳಕೆಯಾಗಿದೆಯೆಂದು ತಿಳಿದುಬರುತ್ತದೆ. ಬಾಳೂರಿಗೆ ಸಂಬಂಧಿಸಿದ ಈ ದೇವತೆಯ ವಿಗ್ರಹವನ್ನು ಡಾ. ಗುರವ ಪ್ರಕಟಿಸಿ, ಕಂದಲಿಯಲ್ಲಿಯೂ ಇಂಥ ವಿಗ್ರಹವಿರುವುದಾಗಿ ಸೂಚಿಸಿದ್ದಾರೆ.

ಮೇಲಿನ ಉದಾಹರಣೆಗಳಲ್ಲಿ ಉತ್ತರಸ್ಥಾನದಲ್ಲಿ ಬಂದಿರುವ -ಬೆ,-ಬ್ಬೆ,-ಂಬೆ

---

೨ SII XI - I. ಷ 161 (ಕ್ರಿ. ಶ. ೧೦೭೫)

ಮತ್ತು -ವೆ ಎಂಬ ರೂಪಗಳು ತಾಯಿ ಅರ್ಥದ ಅಬ್ಬೆ, ಅಂಬೆ, ಅಮ್ಮ ಪದಗಳ ಸವೆದ ರೂಪಗಳೆಂದು ಮೇಲುನೋಟಕ್ಕೇ ಗೊತ್ತಾಗುತ್ತದೆ. ಇಲ್ಲಿ ನಿಜವಾದ ಸಮಸ್ಯೆ ಇರುವುದು ಪೂರ್ವಪದದಲ್ಲಿ.

ಪೂರ್ವಪದವಾಗಿ 'ಬಾದು' ಹೆಚ್ಚು ಸಲ; ಬಾಡು, ಬಾಳು ಕಡಿಮೆ ಸಲ ಕಂಡು ಬರುತ್ತವೆ. ಡಾ. ಗುರವ ಅವರು ಬಾಡುಬ್ಬೆ ಎಂಬುದೇ ಸರಿಯಾದ ರೂಪವಾಗಿರಬಹುದೆಂದು ಗ್ರಹಿಸಿ 'ಬಾಡ' ಎಂಬುದಕ್ಕೆ ಗ್ರಾಮ ಎಂಬ ಅರ್ಥವಿರುವುದರಿಂದ ಈಕೆ ಗ್ರಾಮದೇವತೆಯೆಂದು ವ್ಯಾಖ್ಯಾನಿಸಿದ್ದಾರೆ. ಮುಂದುವರಿದು ಬಾಳೂರಿನ ವಿಗ್ರಹ ಗಜಲಕ್ಷ್ಮಿಯದಾಗಿರುವುದರಿಂದ ಈ ದೇವತೆ ಸೀಮೆಯ ಲಕ್ಕವ್ವ(=ಸೀಮೆಯ ಲಕ್ಷ್ಮಿ) ಆಗಿರಬಹುದೆಂದು ತರ್ಕಿಸಿದ್ದಾರೆ.[೩] ಇಷ್ಟೆಲ್ಲ ಹೇಳಿ ಕೊನೆಗೆ "ಬಾಡ+ಅಬ್ಬೆ =ಬಾಡಬ್ಬೆ ಆಗಬೇಕೇ ಹೊರತು ಬಾಡುಬ್ಬೆಯಾಗಲು ಕಾರಣವೇನು?" ಎಂಬ ತಮ್ಮ ಸಂದೇಹವನ್ನು ವಿದ್ವಾಂಸರ ಮುಂದಿಟ್ಟಿದ್ದಾರೆ. ಇದಕ್ಕೆ ಹೀಗೆ ಸಮಾಧಾನ ಹೇಳಬಹುದು.

ಬಾಡುಬ್ಬೆ ಸಸ್ಯಸಂಬಂಧಿ ದೇವತೆಯೆಂಬುದರಲ್ಲಿ ಸಂದೇಹವೇ ಇಲ್ಲ. ಬಾಡು ಪದಕ್ಕೆ ಕಾಯಿಪಲ್ಲೆ ಎಂದು ಅರ್ಥ. (ಶಾಸನಗಳಲ್ಲಿ ಕಾಯಿಪಲ್ಲೆ ಮಾರುವವರ ಸಂಘಕ್ಕೆ ಬಾಡಸರೊಕ್ಕಲು ಎಂದು ಕರೆದುದನ್ನು ಇಲ್ಲಿ ಗಮನಿಸಬೇಕು). ವಿಜಾಪುರ ಜಿಲ್ಲೆಯ ಉತ್ತರಭಾಗದಲ್ಲಿ ಕಾಯಿಪಲ್ಲೆಗೆ 'ಬಾಡು' ಎಂಬ ಶಬ್ದವನ್ನೇ ದಿನನಿತ್ಯ ಬಳುಸುತ್ತಾರೆ. ಇದರಿಂದ ಹುಟ್ಟಿದ ಬಾಡು ಮಾರುವವ, ಬಾಡುಕಟ್ಟಿ, ಬಾಡು ತರುವುದು ಎಂಬ ರೂಪಗಳು ಅಲ್ಲಿ ಪದೇ ಪದೇ ಕೇಳಿಬರುತ್ತವೆ. ಸಾಮನ್ಯವಾಗಿ ಜಾನಪದ ದೇವತೆಗಳು, ಅದರಲ್ಲಿಯೂ ಸ್ತ್ರೀದೇವತೆಗಳು ಮಾಂಸಹಾರಿಗಳು. ಆದರೆ ಈ ದೇವತೆ ಮಾತ್ರ ಶಾಕಾಹಾರಿಯಾಗಿದ್ದುದರಿಂದ ಜಾನಪದರು ಮಿಕ್ಕ ಮಾಂಸಹಾರಿ ದೇವತೆಗಳಾದ ಮಾರಿ, ಮಸಣಿಯರಿಂದ ಪ್ರತ್ಯೇಕಿಸಿ ತೋರಿಸಲು ಬಾಡು+ಉಂಬ + ಅಬ್ಬೆ=ಬಾಡುಂಬಬ್ಬೆ ಎಂದು ಈಕೆಯನ್ನು ಕರೆದಿರಬೇಕು. ಈ ರೂಪವೇ ಸವೆದು ಬಾಡುಂಬಬೆ ಬಾಡುಂಬೆ ಎಂದು ರೂಢಗೊಂಡಿರಬಹುದು. ಆಮೇಲೆ ಇಮ ಡ, ಳ ವ್ಯತ್ಯಾಸನಿಯಮದ ಪ್ರಕಾರ ಒಂದಡೆ ಬಾಳುಂಬೆ > ಬಾಳುಬೆ ಎಂದೂ (ಬಾಡುಪದದಿಂದ ನಿಷ್ಪನ್ನವಾದ ಬಾಳಕ ಪದವನ್ನು ನೆನಪಿಸಿಕೊಳ್ಳಿರಿ) ಕಡಂಬ > ಕದಂಬ ನಿಯಮದ ಪ್ರಕಾರ ಇನ್ನೊಂದೆಡೆ ಬಾಡುಂಬೆ >ಬಾದುಂಬೆ ಎಂದೂ ರೂಪ ತಾಳಿರಬಹುದು.

ಶಂಕರ ದಾಸಿಮಯ್ಯನ ರಗಳೆಯಲ್ಲಿ ಬರುವ 'ಬಾದುಮಯ್ಯ' ಎಂಬುದನ್ನು

---

೩ ಬಾಂದು ಬದು(ವು) ಎಂಬ ಪದಗಳನ್ನು 'ಸೀಮೆ' ಅರ್ಥದಲ್ಲಿ ಹಳ್ಳಿಗರು ಈಗಲೂ ಬಳಸುತ್ತಾರೆ. ಇತ್ತೀಚೆ 'ಎಲ್ಲಮ್ಮ' ಶಬ್ದಕ್ಕೆ 'ಎಲ್ಲೆ+ಅಮ್ಮ' ಅಂದರೆ ಸೀಮೆಯ ದೇವತೆಯೆಂಬ ಅರ್ಥಹೇಳುತ್ತಲಿದ್ದಾರೆ.

ಬಾಡು + ಉಂಬ + ಅಯ್ಯ=ಬಾಡುಂಬಯ್ಯ > ಬಾಡುಮ್ಮಯ್ಯ > ಬಾದುಮ್ಮಯ್ಯ > ಬಾದುಮಯ್ಯ ಎಂದೂ ಬಿಡಿಸಬಹುದಾದ ಕಾರಣ ಬಾದುಮಯ್ಯದಲ್ಲಿ 'ಉಂಬ' ಪದದ ಅಂಶ ಉಳಿದುಕೊಂಡಿದೆಯೆಂದು ಸಾಧಿಸಬಹುದಾಗಿದೆ. (ಬಾದುಮೆ (ಸ್ತ್ರೀ) ಬಾದುಮಯ್ಯ (ಪುರುಷ)–ಈ ದೇವತೆಗಳು ಒಂದೇ ಅಥವಾ ಭಿನ್ನವೆಂಬ ಬಗ್ಗೆ ಡಾ. ಚಿದಾನಂದಮೂರ್ತಿ ಅವರು ಲೇಖನ ಬರೆಯಲಿದ್ದಾರೆ.)

ಬಾಳುಂಬೆ :

ಬಾಳು=ಹೊಲ ಎಂಬ ಅರ್ಥವಿರುವಂತೆ ಕಾಣುತ್ತದೆ (ಕೆ. ವಿ. ರಮೇಶ: ತುಳುನಾಡಿನ ಶಾಸನಗಳು, ಸಂಪುಟ–೧; ಪುಟ ೯೯,೧೦೦). ಆಗ ಬಾಳು + ಉಂಬ + ಅಬ್ಬೆ=ಬಾಳುಂಬಬ್ಬೆ>ಬಾಳುಂಬೆ ಎಂದು ಬಿಡಿಸಿ, ಇದು ಮೂಲತ: ಹೊಲಕ್ಕೆ ವಿಘ್ನ ಒದಗಿಸುವ ದುಷ್ಟದೇವತೆಯೆಂದು ಭಾವಿಸಬಹುದಾಗಿದೆ.'ದುರ್ಜನಂ ಪ್ರಥಮಂ ವಂದೇ' ಎಂಬಂತೆ ಇದನ್ನು ಪೂಜಿಸುತ್ತಿರಬಹುದು. ಬಾದುಬ್ಬೆಯ ಪೂಜೆಯಿಂದ ಹೊಲ ಬೆಳೆಯುವುದೆಂದು ಬ್ರಹ್ಮಶಿವ ಹೇಳುವುದನ್ನು ಇಲ್ಲಿ ನೆನೆಯಬಹುದು. (೯–೪೨)

ಬನಶಂಕರಿ–ಶಾಕಾಂಬರಿ :

ಬಾದಾಮಿ ಮೊದಲಗೊಂಡು ಕರ್ನಾಟಕದ ಇತರೆಡೆಗಳಲ್ಲಿಯೂ ಕಂಡುಬರುವ ದೇವತೆ, ಬನಶಂಕರಿ. ಶಾಕಾಂಬರಿಯೆಂಬುದು ಬನಶಂಕರಿಗೆ ಇನ್ನೊಂದು ಹೆಸರು. ಶಾಕಾಂಬರಿಯೆಂದರೆ ಕಾಯಿಪಲ್ಲೆಯನ್ನೇ ಉಡುಗೆಯಾಗಿ ಉಳ್ಳವಳು. ಇಂದಿಗೂ ಯಾವುದೋ ಹೆಣ್ಣುದೇವತೆಯನ್ನು ವರ್ಷಕ್ಕೊಮ್ಮೆ ಕೇವಲ ಕಾಯಿಪಲ್ಲೆಯಿಂದಲೇ ಅಲಂಕರಿಸಿ ಪೂಜಿಸುವರೆಂದು ಕೇಳಿದ್ದೇನೆ. (ಎಲ್ಲಮ್ಮನ ಭಕ್ತರು ಬೇವಿನ ಎಲೆ ಉಡುವುದರ ಹಿಂದೆ ಇದಕ್ಕಿಂತ ಭಿನ್ನವಾದ ತತ್ವವಿರಬಹುದು). ಬಾದಾಮಿ ಬನಶಂಕರಿಗೆ ಕಾಯಿಪಲ್ಲೆ ಉಡಿಸುವ ಸಂಪ್ರದಾಯ ಇಲ್ಲವಾದರೂ ಬನದ ಹುಣ್ಣಿವೆ ಸಂದರ್ಭದಲ್ಲಿ ೧೦೮ ಕಾಯಿಪಲ್ಲೆಗಳ ನೈವೇದ್ಯ ಅರ್ಪಿಸುತ್ತಾರೆ. (೧೦೮ ಸಿಗುವುದು ತೊಂದರೆ. ಕಾರಣ ಆದಷ್ಟು ಹೆಚ್ಚು ಸಂಖ್ಯೆಯಲ್ಲಿ ಈ ಕಾಯಿಪಲ್ಲೆ ಸಂಗ್ರಹಿಸುತ್ತಾರೆ.) ಬಹುಶಃ ಉಡಿಸುವ ಸಂಪ್ರದಾಯ ನಿಂತುಹೋಗಿ ಅದು ನೈವೇದ್ಯವಾಗಿ ಪರಿವರ್ತನೆಗೊಂಡಿರಬಹುದು. ಹೀಗಿದ್ದೂ ಈಗ ಯಾವ ದೇವತೆಗೆ ಕಾಯಿಪಲ್ಲೆಉಡಿಸುವರೆಂಬುದನ್ನು ಶೋಧಿಸುವುದು ಅವಶ್ಯವಾಗಿದೆ.

ಬಾದುಬ್ಬೆ-ಬನಶಂಕರಿ-ಮಾಳಚಿ-ಬಳರಿ :

ದೇವೀಹೊಸೂರ ಗ್ರಾಮದ ಇಂದಿನ ಬನಶಂಕರಿದೇವಿ ಗುಡಿಯ ಮಕರ ತೋರಣದ ಮೇಲೆ "ಈ ತೋರಣವನ್ನು ಮಾಳಜದೇವಿಗೆ ಅಂಘರಕ್ಕ ಇಂದಪಯ್ಯ ನಾಯಕ ಮಾಡಿಸಿದ" ನೆಂದು ಬರೆಯಲಾಗಿದೆ (ಕ್ರಿ.ಶ. ೧೦೬೩). ಇಲ್ಲಿಯ ಇನ್ನೊಂದು ಶಾಸನವು (ಕ್ರಿ.ಶ. ೧೧೪೯) ಈ ಬನಶಂಕರಿಯನ್ನು 'ಮಾಳಚಿ' ಎಂದೇ ಕರೆದಿದೆ.[೪]

ಚಿಕ್ಕಕೆರೂರಿನ ಇಂದಿನ ಬನದವ್ವ (ಬನಶಂಕರಿ) ಗುಡಿಯ ಶಾಸನದಲ್ಲಿ ಬಳರಿದೇವಿಯನ್ನು ಪ್ರತಿಷ್ಠಾಪಿಸಿದ ವಿಷಯ ಬರುತ್ತದೆ.೫

ಹೀಗಾಗಿ ಬನಶಂಕರಿ (ಬನದವ್ವ), ಮಾಳಚಿ, ಬಳರಿ ಇವು ಒಂದೇ ದೇವತೆಯ ವಿವಿಧ ಹೆಸರುಗಳೇ? ಎಂಬ ಅನುಮಾನ ಹುಟ್ಟುತ್ತದೆ. ಈ ಸ್ಥಳಗಳ ಪರಿಶೀಲನೆಯಿಂದ ಈ ಅನುಮಾನ ಪರಿಹಾರವಾಗಬಹುದಾಗಿದೆ.

ಬಾದುಬ್ಬೆಯ ಪಗರಣ :

ವಡ್ಡಾರಾಧನೆಯ ಕಾರ್ತಿಕಋಷಿಯ ಕಥೆಯಲ್ಲಿ ಬಾದುಬ್ಬೆಯ ಪರ್ವ ಮತ್ತು ಪಗರಣಗಳಿಗೆ ಸಂಬಂಧಿಸಿದ ವಿಷಯ ಹೀಗೆ ಬರುತ್ತದೆ. ದಕ್ಷಿಣಾಪಥದ ಕೋಗಳಿಯನ್ನಾಳುತ್ತಿದ್ದ ಕೌಂಚ ಹೆಸರಿನ ಅರಸನ ರಾಣಿ ವೀರಶ್ರೀ. ಸೋದರ ಕಾರ್ತಿಕ ಋಷಿಯ ಮರಣದಿಂದ ವೀರಶ್ರೀ ದುಃಖಿತಳಾಗುತ್ತಾಳೆ. ಇವಳ ದುಃಖ ನಿವಾರಿಸುವವರಿಗೆ ಒಸಗೆ ಮಾಡುವೆನೆಂದು ಅರಸ ಡಂಗುರ ಸಾರುತ್ತಾನೆ. "ಅದಂ ಕೇಳ್ದು ಲೋಗರ್ ಪಗರಣಿಗರಾಗಿ ಎನಿತಾನುಂ ತೆಱದ ರೂಪುಗಳಂ ಕೈಕೊಂಡು ಮರ-ಮೊಗಂಗಳನಿಟ್ಟು ಬಂದು ಮುಂದೆ ಆಡಿಯುಂ ಪಾಡಿಯುಂ ನಗಿಸಿಯುಂ ಎಂತುಂ ಅಱಿಕ್ಕೆ ಮಟ್ಟುಗಿದಿರ್ದೊಡೆ, ಒರ್ವಂ ಕರಿಯ ಕಚ್ಚುಟಮನುಟ್ಟು, ಮೈಯೆಲ್ಲಂ ಮಸಿಯಂ ಪೂಸಿ, ಬೋಳದಲೆವೆರಸು ಬಾಯೊಳ್ ಕವಡಿಕೆಗಳಂ ಪಲ್ಗಳಂತೆ ಮಾಡಿ ಕುಂಚಮುಂ ಗುಂಡಿಗೆಯುಮಂ ಪಿಡಿದು ಬರ್ಪೊನಂ" ಕಂಡು ವೀರಶ್ರೀ ನಕ್ಕು ದುಃಖವನ್ನು ಮರೆಯುತ್ತಾಳೆ. "ಆಗಳ್ ಆ ನಗಿಸಿದ ಪಗರಣಿಗಂಗೆ ಪಿರಿದು ಕಸವರಮನಿತ್ತೊನ್. ಅಂದಿಗೆ ಇತ್ತ ಬಾದುಬ್ಬೆಯ ಪರ್ವಮುಂ ಹಗರಣದ ಆಟಪಾಟಮುಂ ಆದುವು" ಎಂದು ಹೇಳಲಾಗಿದೆ.

ಇಲ್ಲಿ ಮೊದಲು ಪ್ರದರ್ಶಿಸಿದ ಅನೇಕರು ಪಗರಣಗಳಿಂದ ವೀರಶ್ರೀಯ ದುಃಖ ನಿವಾರಣೆಯಾಗಲಿಲ್ಲ. ಆ ಮೇಲಿನ 'ಕರಿಯ ಕಚ್ಚುಟಮನುಟ್ಟ' ಪಗರಣದಿಂದ ಮಾತ್ರ ವೀರಶ್ರೀ ದುಃಖ ಮರೆತಳು. ಅಂದಿನಿಂದ ಬಾದುಬ್ಬೆಯ ಪರ್ವ ಹಗರಣದ ಆಟಪಾಟಗಳು ಪ್ರಾರಂಭವಾದವು—ಎಂದು ಇಲ್ಲಿ ಹೇಳಲಾಗಿದೆ. ನಿಜ ಸಂಗತಿಯೆಂದರೆ ಬಾದುಬ್ಬೆಯ ಪರ್ವ ಮೊದಲಿನಿಂದಲೂ ಇದ್ದು, ಆ ಪರ್ವದ ಕೆಲವು ಸಂಗತಿಗಳು ಈ ವೀರಶ್ರೀಯ ಘಟನೆಯಲ್ಲಿಯೂ ಕಂಡುಬರಲು ಈ ಘಟನೆಯಿಂದಲೇ ಆ ಪರ್ವರೂಢವಾಯಿತೆಂದು ಶಿವಕೋಟ್ಯಾಚಾರ್ಯ ಸಾಧಿಸಿದ್ದಾನೆ. ಇದರಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ೧. ಬಹುಶಃ ಬಾದುಬ್ಬೆಯ ಪರ್ವ 'ಕರಿಯ ಕಚ್ಚುಟದ ಪಗರಣ' ಪ್ರಧಾನವಾದ ಹಬ್ಬವಾಗಿರಬೇಕು. ೨. ವೀರಶ್ರೀ

೪ S II. XVIII 69 (ಕ್ರಿ.ಶ. 1063), 152 (ಕ್ರಿ.ಶ. 1149)
೫ E I. XXXIII p. 131-33 (ಕ್ರಿ.ಶ. 995)

ಯಂತೆ ಬಾದುಬ್ಬೆಯ ಚರಿತ್ರೆಯಲ್ಲಿಯೂ ದುಃಖಮಯ ಘಟನೆಯಿದ್ದಿರಬಹುದು. (ಇಂಥ ಒಂದು ಸಾಮ್ಯತೆಯನ್ನು ಡಾ. ಚಿದಾನಂದಮೂರ್ತಿ ಅವರು ಚಿಕ್ಕ ಮಗಳೂರು ತಾಲೂಕಿನ ಹಿರೇಗೌಜ ಗ್ರಾಮದ ಬಳಲಿಕವ್ವೆ ದೇವತೆಯ ಪಗರ ಣದಲ್ಲಿ ಗುರುತಿಸಿದ್ದಾರೆ. ಬಾದಮಿ ಅಮಾವಾಸ್ಯೆಯಂದು ಬಾದುಬ್ಬೆಯ ಪರ್ವ (ಪಗರಣ), ಕಾರಹುಣ್ಣಿವೆಯಂದು ಬಳಲಿಕವ್ವೆಯ ಪರ್ವ (ಪಗರಣ)ಗಳು ಜರು ಗುತ್ತವೆ. ಇವೆರಡರ ಅಂತರ ೧೫ ದಿನ ಮಾತ್ರ).

ಈ ಕಾರ್ತಿಕಋಷಿಯ ಕಥೆ ಕೋಗಳಿಗೆ ಸಂಬಂಧಿಸಿದೆ. ಇದು ಬಳ್ಳಾರಿ ಜಿಲ್ಲೆಯ ಕೋಗಳಿಯಾಗಿರಬಹುದೆಂದು ಡಾ. ಡಿ. ಎಲ್. ಎನ್. ಮತ್ತು ಶ್ರೀ ಎಚ್. ದೇವೀರಪ್ಪ ಊಹಿಸುತ್ತಾರೆ. ಹಾಗಿದ್ದರೆ ಈ ಬಾದುಬ್ಬೆಯ ಬಗ್ಗೆ ಕೋಗಳಿ ಸಮೀಪ ಶೋಧ ನಡೆಯುವುದು ಸೂಕ್ತವಾಗಿದೆ.

ಮೇಲಿನ ವಿವರಗಳಲ್ಲಿ ಬಹಳಷ್ಟು ಸಂಗತಿಗಳು ಇನ್ನೂ ಸಂದೇಹದ ಹಂತ ದಲ್ಲಿವೆ. ಸಂಶೋಧಕರು ಇವುಗಳಿಗೆ ಪರಿಹಾರ ಹುಡುಕಬೇಕಾಗಿದೆ.

ಈ ಸಂಚಿಕೆಯ ಲೇಖಕರು

೧. ಡಾ. ಎಂ. ಬಿ. ಕೊಟ್ರಶೆಟ್ಟಿ
ಪ್ರಾಧ್ಯಾಪಕರು,
ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨. ಡಾ. ಬಿ. ವ್ಹಿ. ಮಲ್ಲಾಪುರ
ರೀಡರ,
ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೩. ಬಸವರಾಜ ನಾಯ್ಕರ
ಅಧ್ಯಾಪಕರು,
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೪. ಡಾ. ವ್ಹಿ. ವ್ಹಿ. ಹೆಬ್ಬಳ್ಳಿ
ರೀಡರ,
ಹಿಂದೀ ವಿಭಾಗ, ಲಿಂಗರಾಜ ಕಾಲೇಜು, ಬೆಳಗಾಂವ

೫. ಶ್ರೀ ಎಚ್. ಎಸ್. ಅನಂತನಾರಾಯಣ
ಅಧ್ಯಾಪಕರು,
ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದರಾಬಾದ

೬. ಶ್ರೀ ರು. ಮ. ಷಡಕ್ಷರಯ್ಯ
ಸಂಶೋಧನ ವಿದ್ಯಾರ್ಥಿ,
ಪ್ರಾಚೀನ ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭. ಡಾ. ಶಾಂತಿನಾಥ ದಿಬ್ಬದ
ಅಧ್ಯಾಪಕರು,
ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ,
ಸ್ನಾತಕೋತ್ತರ ಆವರಣ, ಬೆಳಗಾಂವ

೮. ಡಾ. ಎಚ್. ಎಂ. ಕಾಶೀನಾಥ
ಅಧ್ಯಾಪಕರು,
ಶಿಕ್ಷಣ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೯. ಕಂಚಾಣಿ ಶರಣಪ್ಪ
(ತಾ. ಬಸವನಬಾಗೇವಾಡಿ)
ಮಲಘಾಣ,

೧೦. ಶ್ರೀ ಸಿ. ಎಂ. ವೀರಭದ್ರಯ್ಯ
ಅಧ್ಯಾಪಕರು,
ಸರಕಾರಿ ಜೂ. ಕಾಲೇಜು ಮರಿಯಮ್ಮನಹಳ್ಳಿ, (ಜಿ. ಬಳ್ಳಾರಿ)

೧೧. ಡಾ. ವಸಂತ ಪಾಟೀಲ
ಅಧ್ಯಾಪಕರು,
ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೨. ಶ್ರೀ ಎಸ್. ಕೆ. ಕೊಪ್ಪಾ
ಕನ್ನಡ ಅಧ್ಯಾಪಕರು,
ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಇಂಡಿ

೧೩. ಶ್ರೀ ಎಚ್. ಎಸ್. ಬಿರಾದಾರ
ಸಂಶೋಧನ ವಿದ್ಯಾರ್ಥಿ,
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೪. ಶ್ರೀ ಸದಾನಂದ ಪಾಟೀಲ
ಅಧ್ಯಾಪಕರು,
ಗವಿಸಿದ್ಧೇಶ್ವರ ಕಾಲೇಜು, ಕೊಪ್ಪಳ

೧೫. ಡಾ. ಸರೋಜಿನಿ ಪಾ. ಚವಲಾರ
ಪ್ರಾಧ್ಯಾಪಕರು,
ಮಹಿಳಾ ವಿದ್ಯಾಲಯ, ಹುಬ್ಬಳ್ಳಿ

೧೬. ಶ್ರೀ ಬಸವಲಿಂಗ ಸೊಪ್ಪಿಮಠ
ಅಧ್ಯಾಪಕರು,
ಜೆ. ಪಿ. ಪೋರವಾಲೆ ಕಾಲೇಜು, ಸಿಂದಗಿ (ಜಿ. ವಿಜಾಪುರ)

೧೭. ಶ್ರೀ ಎಚ್. ಎಂ. ಪಟೇಲ, ರಂಗೇನಹಳ್ಳಿ
ಸಂಖ್ಯಾಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

೧೮. ಶ್ರೀ ಜಯಪ್ರಕಾಶ ಮಾವಿನಕುಳಿ
ವಿಜಯ ಕಾಲೇಜು, ಮೂಲ್ಕಿ (ದ. ಕ.)

೧೯. ಡಾ. ಎಂ. ಎಂ. ಕಲಬುರ್ಗಿ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು,
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ: ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ರೂ. ೧೦೦ (ಒಂದುನೂರು ರೂಪಾಯಿಗಳು) ಕಳಿಸಿ ವಿಶ್ವವಿದ್ಯಾಲಯು ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿ ಪ್ರತಿ : ರೂ. ೨-೫೦ (ಅಂಚೆ ವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ರೂ. ೪-೦೦

ಹಣವನ್ನು ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩, ಇವರ ಹೆಸರಿನಲ್ಲಿ ಡಿಮಾಂಡ್ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ತೆಗೆಯಿಸಿ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ-೩ ಅವರಿಗೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ:

ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.